ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೭೨
ವಿಚಾರ ಸಾಹಿತ್ಯಮಾಲೆ – ೮೫
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಭಾರತದ ಮೂಲಭೂತ ಏಕತೆ

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಭಾರತದ ಮೂಲಭೂತ ಏಕತೆ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I ೮೯–೧

ಮೂಲ
ರಾಧಾಕುಮುದ ಮುಖರ್ಜಿ

ಅನುವಾದ
ಎಚ್. ವಿ. ನಾಗರಾಜರಾವ್

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Bharatada Moolabhuta Ekate: Kannada translation of *Fundamental Unity of India* : **Radha Kumud Mukherji;** Kannada translation by **H. V. Nagaraja Rao;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxiv + 106. Price : Rs. 10/-

ಮುದ್ರಣ : ೨೦೧೩
ಪುಟಗಳು : xxiv + ೧೦೬
ಬೆಲೆ : ರೂ. ೧೦/-

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

ಸಿದ್ದರಾಮಯ್ಯ
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು - ೫೬೦ ೦೦೧

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ-ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ-ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ-ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ-ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

‘ಕನಕದಾಸರ ಕೃತಿ’ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11

(ಬಸವರಾಜು)

ಕರ್ನಾಟಕ ಸರ್ಕಾರ

ಕೆ.ಆರ್. ರಾಮಕೃಷ್ಣ, ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಜಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು

ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ — **ಪ್ರಧಾನ್ ಗುರುದತ್ತ**

ಬೆಂಗಳೂರು – ೫೬ — ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

'ಭಾರತದ ಮೂಲಭೂತ ಏಕತೆ' ರಾಧಾಕುಮುದ್ ಮುಖರ್ಜಿ ಅವರ *Fundamental Unity of India* ಎಂಬ ಪುಸ್ತಕದ ಕನ್ನಡ ಅನುವಾದ. ಇದನ್ನು ಎಚ್. ವಿ. ನಾಗರಾಜರಾವ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

ಕೆ. ಎಂ. ಮುನ್ಷಿ

ಮೂಲ ಲೇಖಕರ ಮೊದಲ ಮಾತು

೧೯೦೯ರ ಜನವರಿಯಲ್ಲಿ *Dawn and Dawn Society's Magazine* ಪತ್ರಿಕೆಗೆ ನಾನು ಬರೆದಿದ್ದ ಲೇಖನದ ಮೇಲೆ ಈ ಹೊತ್ತಿಗೆ ಆಧಾರಿತವಾಗಿದೆ ಕಲ್ಕತ್ತಾ ವಿಶ್ವವಿದ್ಯಾನಿಲಯುದ ಸಂಸ್ಥೆ(Calcutta University Institute)ಯಲ್ಲಿ, ಆ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳಾದ ಸರ್. ಗುರುದಾಸ ಬ್ಯಾನರ್ಜಿ Kt. M.A., DL., Ph.D ಅವರ ಅಧ್ಯಕ್ಷತೆಯಲ್ಲಿ ಉಪನ್ಯಾಸ ಮಾಡಿದಾಗ ಅದು ಈ ರೂಪವನ್ನು ಪಡೆಯಿತು. ಏಪ್ರಿಲ್ ತಿಂಗಳಿನಲ್ಲಿ *The Modern Review* ಪತ್ರಿಕೆಯ ಪುಟಗಳಲ್ಲಿ ಪ್ರಕಟಗೊಂಡಿತು. ಹಲವಾರು ಸೇರ್ಪಡೆಗಳನ್ನೂ ಬದಲಾವಣೆಗಳನ್ನೂ ಮಾಡಿ ಅದನ್ನು ಈಗ ಪ್ರಕಟಿಸಲಾಗಿದೆ.

ಭಾರತದ ಮೂಲಭೂತ ಏಕತೆಯ ಬಗೆಗೆ ದೇಶದ ಸಾಮಾಜಿಕ ಮತ್ತು ಧಾರ್ಮಿಕ ಸ್ಮೃತಿಗಳು ನೀಡಿರುವ ಸಾಕ್ಷ್ಯಾಧಾರಗಳನ್ನು ಈ ಹೊತ್ತಿಗೆಯಲ್ಲಿ ನಾನು ವಿವರಿಸಿಲ್ಲ. ಅದರ ಬಗೆಗೆ ಇರುವ ಭೌಗೋಳಿಕ ಆಧಾರಗಳಿಗೇ ನನ್ನ ಗಮನವನ್ನು ನಿಯಂತ್ರಿಸಿಕೊಂಡಿದ್ದೇನೆ.

ನನಗೆ ಅನೇಕ ಅಮೂಲ್ಯಸಲಹೆಗಳನ್ನು ನೀಡಿದ, ಕಲ್ಕತ್ತಾ ವಿಶ್ವವಿದ್ಯಾನಿಲಯದ ಐದನೆಯ ಜಾರ್ಜ್ ಪ್ರಭು ತತ್ತ್ವಶಾಸ್ತ್ರ ಪ್ರಾಧ್ಯಾಪಕರಾದ ಡಾ. ಬ್ರಜೇಂದ್ರನಾಥ ಸೀಲ್ ಅವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಈ ಪುಸ್ತಕದ ಸಿದ್ಧತೆಯಲ್ಲಿ ಉದಾರವಾಗಿ ಬೆಂಬಲವನ್ನು ನೀಡಿದ ಕಾಸಿಮ್ ಬಜಾರಿನ ಗೌರವಾರ್ಹ ಮಹಾರಾಜ ವಿ. ಮಣೀಂದ್ರ ಚಂದ್ರ ನಂದಿಯವರಿಗೆ ನನ್ನ ಕೃತಜ್ಞಾತಾಪೂರ್ವಕ ಉಪಕಾರ ಸ್ಮರಣೆ ಸಲ್ಲುತ್ತದೆ.

ಬರ್ಹಾಮ್‌ಪುರ
ಆಗಸ್ಟ್, ೧೯೧೩

ರಾಧಾ ಕುಮುದ ಮುಖರ್ಜಿ

ಮುನ್ನುಡಿ

ಡಾ. ರಾಧಾಕುಮುದ ಮುಖರ್ಜಿಯವರು ತಮ್ಮ ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯಬೇಕೆಂದು ಕೇಳಿ ನನಗೆ ಗೌರವವನ್ನಿತ್ತಿದ್ದಾರೆ. ಹೆಚ್ಚು ಪ್ರೋತ್ಸಾಹ ಇಲ್ಲದಿದ್ದರೂ ಭಾರತೀಯ ಪರಂಪರೆಯಿಂದ ಸ್ಫೂರ್ತಿಯನ್ನು ಪಡೆದು, ಈ ನೆಲದ್ದೇ ಆದ ಒಂದು ವಿಚಾರ ಸ್ಥಾಪಿಸಲು ಪರಿಶ್ರಮಿಸುತ್ತಿರುವ ಭಾರತ ಇತಿಹಾಸದ ವಿದ್ಯಾರ್ಥಿಗಳ ವೃಂದದ ಕಾರ್ಯವನ್ನು ಗಮನಿಸುತ್ತಿರುವವರಿಗೆ ಮುಖರ್ಜಿಯವರ ಪುಸ್ತಕಗಳ ಪರಿಚಯವನ್ನೇನೂ ಮಾಡಿಸಬೇಕಾಗಿಲ್ಲ. ವಿಶೇಷವಾಗಿ ಹೇಳಬೇಕೆಂದರೆ ಅವರು *History of Indian Shipping* (ಭಾರತೀಯ ನೌಕಾಯಾನ ಇತಿಹಾಸ) ಎಂಬ ಗ್ರಂಥವನ್ನು ರಚಿಸಿದ ಮೇಲೆ ಅವರ ಗ್ರಂಥಗಳಿಗೆ ಮುನ್ನುಡಿಯ ಅವಶ್ಯಕತೆಯಿಲ್ಲ.

ಈ ಪುಟ್ಟ ಹೊತ್ತಿಗೆಯಲ್ಲಿ ಮುಖರ್ಜಿಯವರು ಭಾರತ ಇತಿಹಾಸ ಶಾಲೆಯು ಸ್ಥಿರವಾಗಿ ನಿಲ್ಲಲು ಬೇಕಾದ ಏಕಮಾತ್ರ ಅಡಿಪಾಯವನ್ನು ಹಾಕಲು ಪ್ರಯತ್ನ ಮಾಡಿದ್ದಾರೆ. ಭಾರತ ಅಥವಾ ಇಂಡಿಯಾ ಕೇವಲ ಭೌಗೋಳಿಕ ಅಭಿಧಾನವಾದರೆ, ಅಕ್ಕಪಕ್ಕದಲ್ಲಿದ್ದರೂ ಸಮಾನವಾದ ರಾಷ್ಟ್ರಭಾವನೆಯೇ ಇಲ್ಲದ ಬೇರೆ ಬೇರೆ ಜನರ, ಸಂಪ್ರದಾಯಗಳ ಮತ್ತು ಭಾಷೆಗಳ ಸಮೂಹ ಮಾತ್ರವೇ ಆಗಿದ್ದರೆ, ಭಾರತದ ಇತಿಹಾಸವು ಒಂದು ನಾಗರಿಕೆಯ ವಿಕಾಸದ ದಾಖಲೆ ಆಗುವುದಿಲ್ಲ, ಅದು ಕೇವಲ ಆಕ್ರಮಣಗಳ, ಸಂಘರ್ಷಗಳ, ಗೆದ್ದವರ ಮತ್ತು ಸೋತವರ ಗಣನೆಯಾಗಿಬಿಡುತ್ತದೆ. ಸಾಮಾನ್ಯ ದೃಷ್ಟಿ ಇದೇ ಆಗಿರುವುದೂ ಅತ್ಯಂತ ಸತ್ಯವೇ. ಭಾರತದ ಮೇಲುಪದರದ ನೋಟವು ಅಂಥ ದೃಷ್ಟಿಗೆ ಇಂಬು ಕೊಡುತ್ತದೆ ಎಂಬುದೂ ಕೂಡ ಅತಿ ಸ್ಪಷ್ಟವಾಗಿದೆ. ಸಿಲೋನ್(ಶ್ರೀಲಂಕಾ)ನಿಂದ ಆಫ್ಘಾನಿಸ್ಥಾನದವರೆಗೂ ಇರುವ ಇಂದಿನ ಅನೇಕ ಆಡಳಿತಗಾರರ ಭಾವನೆಯೂ ಅದೇ ಆಗಿದೆ ಎಂಬುದು ಯಾವ ಗುಟ್ಟೂ ಇಲ್ಲದೆ ಘೋಷಿತವಾಗಿದೆ.

ಆದರೆ ಈ ಪುಸ್ತಕವನ್ನು ಓದುವವರು ಮೇಲೆ ಹೇಳಿದುದಲ್ಲದೆ ಇನ್ನೊಂದು ದೃಷ್ಟಿಯೂ ಇದೆ ಎಂದು ಕಂಡುಕೊಳ್ಳುತ್ತಾರೆ. ಏನೇ ಆಗಲಿ, ಹಿಂದೂ ಆದವನು ತನ್ನ ಸಂಪ್ರದಾಯಗಳಿಂದಲೂ ಮತ್ತು ಧರ್ಮದಿಂದಲೂ ಭಾರತವನ್ನು ರಾಜಕೀಯವಾಗಿಯೂ ಮತ್ತು ಪ್ರಾಕೃತಿಕವಾಗಿಯೂ ಒಂದು ನಾಡು, ಒಂದು ಪ್ರಭುತ್ವಕ್ಕೆ ಸೇರಿದ ನಾಡು ಎಂದು ಭಾವಿಸುತ್ತಾನೆ; ಆ ಪ್ರಭುತ್ವ ಬ್ರಿಟಿಷರದೋ ಮಹಮ್ಮದೀಯರದೋ, ಹಿಂದೂಗಳದೋ– ಆಗಿರಬಹುದು. ಇಷ್ಟು ಮಾತ್ರ ಅಲ್ಲ, ಅದು ಅವನ ಆಧ್ಯಾತ್ಮಿಕ ಸಂಸ್ಕೃತಿಯ ಬಾಹ್ಯಾಭಿವ್ಯಕ್ತಿ, ದೇವಸ್ಥಾನದಂತೆ, ಅಲ್ಲದಿದ್ದರೆ ಮಾತೃಸ್ವರೂಪಳಾದ ದೇವತೆಯಂತೆ ಎಂದು ಅವನು ಭಾವಿಸಿಕೊಳ್ಳುತ್ತಾನೆ. ಇಂಡಿಯಾ ಮತ್ತು ಹಿಂದೂ ಧರ್ಮ ದೇಹ ಮತ್ತು ಆತ್ಮದಂತೆ ಅವಿಭಾಜ್ಯವಾಗಿ ಸಂಬದ್ಧವಾಗಿವೆ. ರಾಷ್ಟ್ರೀಯತೆ ಎಂಬುದು ಎಷ್ಟು ಪ್ರಯತ್ನಿಸಿದರೂ, ಲಕ್ಷಿಸಲು, ಪರೀಕ್ಷಿಸಲು ಮತ್ತು ಸಾಧಿಸಿ ತೋರಿಸಲು ಕಷ್ಟವಾದ ವಿಷಯ. ಐರ್ಲೆಂಡಿನಲ್ಲಿ ಪ್ರಾದೇಶಿಕ ಸ್ವಯಮಾಡಳಿತಕ್ಕಾಗಿ

ಇಡಲಾಗುತ್ತಿರುವ ಬೇಡಿಕೆಗಳು ಈ ವಿಷಯದಲ್ಲಿ ಸೃಷ್ಟಿಸಿರುವ ನಿಷ್ಫಲವಾದ ವೈರುಧ್ಯಗಳು ಇದನ್ನು ಸಾಧಿಸಿತೋರಿಸಿವೆ. ಆದರೆ ಆರ್ಯರು ಭಾರತದ ಮತ್ತು ತಮ್ಮ ವಿಷಯದಲ್ಲಿ ಇದನ್ನು ನಿಶ್ಚಯಾತ್ಮಕವಾಗಿ ತೀರ್ಮಾನಿಸಿಕೊಂಡಿದ್ದಾರೆ. ಆರ್ಯರು ಭಾರತವನ್ನು ತಮ್ಮ ಸಂಸ್ಕೃತಿಯ ಕುರುಹನ್ನಾಗಿ ಮಾಡಿ ಅದನ್ನು ತಮ್ಮ ಆತ್ಮದಿಂದ ತುಂಬಿದರು. ಅವರ ಚೈತನ್ಯದಲ್ಲಿ ಅದು ಅವರ ವಿಶಾಲಾತ್ಮವೇ ಆಗಿತ್ತು. ಅದನ್ನು ಅವರು ಹೇಗೆ ಸಾಧಿಸಿಕೊಂಡರೆಂಬುದನ್ನು ಡಾ. ಮುಖರ್ಜಿಯವರು ಆಸಕ್ತಿಜನಕವಾದ ಅಧ್ಯಾಯಗಳಲ್ಲಿ ತೋರಿಸುತ್ತಾರೆ.

ಡಾ. ಮುಖರ್ಜಿಯಾದರೂ ಇತಿಹಾಸದ ಬಗೆಗೆ ಬರೆಯುತ್ತಾರೆ. ಆದರೆ ನಾವು ಇತಿಹಾಸವನ್ನು ನಮ್ಮ ಮನಸ್ಸಿಲ್ಲಿ ರಾಜಕೀಯ ವಿಚಾರಗಳನ್ನುತುಂಬಿಕೊಂಡು ಓದುತ್ತೇವೆ. ಜೀವನದೊಳಕ್ಕೆ ತುರುಕಲಾಗಿರುವ ಆ ಇತಿಹಾಸವು ನಮಗೆ ಭಾರತೀಯ ರಾಜಕೀಯ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಮುಸಲ್ಮಾನರಿಗೆ ಅದರಲ್ಲಿ ಎಷ್ಟು ಪಾಲು ಇದೆ? ಪ್ರಾಯಶಃ ನಾವು ಯೋಚಿಸುವುದಕ್ಕಿಂತ ಹೆಚ್ಚು ಪಾಲು ಇದೆ. ಬ್ರಿಟಿಷ್ ಸಾಮ್ರಾಜ್ಯವು ದುರ್ಬಲರಿಗೂ ಆಶ್ರಯವನ್ನು ಕೊಡುವುದಷ್ಟೇ ಅಲ್ಲ, ಅದರ ನೆರಳಿನಲ್ಲಿ ಉದಾರ ರಾಜಕೀಯ ವಿಚಾರಗಳೂ ಬೇರನ್ನು ಬಿಟ್ಟು ಸಮೃದ್ಧವಾಗಿ ಬೆಳೆಯಬಲ್ಲವು. ರಾಷ್ಟ್ರೀಯತೆಯನ್ನು ಉದಾರ ರಾಜಕೀಯ ವಿಚಾರಗಳಿಂದ ಬೇರ್ಪಡಿಸಲು ಆಗುವುದಿಲ್ಲ. ಅದನ್ನು ವಿಸ್ತರಿಸಿ ಇಲ್ಲಿ ಚರ್ಚಿಸುವುದು ಅಪ್ರಸ್ತುತವಾದೀತು. ಮುನ್ನುಡಿಯ ಸದವಕಾಶವನ್ನು ಅತಿಯಾಗಿ ಅಗಲಿಸಿ ಅದು ಇಂದಿನ ರಾಜಕೀಯ ವಿವಾದದೊಳಕ್ಕೆ ಪ್ರವೇಶಿಸುವಂತೆ ನಾನು ಮಾಡಿದರೆ ಅದು ಡಾ. ಮುಖರ್ಜಿಯವರಿಗೆ ಇಷ್ಟವಾಗುವುದಿಲ್ಲ. ಅದು ಅವರ ಐತಿಹಾಸಿಕ ಅಧ್ಯಯನದ ವಿಷಯವಷ್ಟೆ. ಆದರೂ, ಈ ಪುಸ್ತಕವನ್ನು ಓದುವ ಪ್ರತಿಯೊಬ್ಬರ ಮನಸಸ್ಸಿನಲ್ಲೂ ಇರುವಂತೆ ನನ್ನ ಮನಸ್ಸಿನಲ್ಲೂ ಈ ವಿಚಾರಗಳು ನಿಸ್ಸಂಶಯವಾಗಿ ಇವೆ. ಅದನ್ನು ಸೂಚಿಸಲು ನಾನು ಉತ್ಸುಕನೂ ಆಗಿದ್ದೇನೆ. ನನ್ನ ಅಭಿಪ್ರಾಯವೇನೆಂದರೆ, ಭಾರತದ ಏಕತೆಯು ಕೇವಲ ಹಿಂದೂಗಳ ಪರಿಕಲ್ಪನೆಯಾಗಿ ಉಳಿಯುವುದಿಲ್ಲ. ಆ ಏಕತೆಯ ಮೂಲವು ಮಾತ್ರ ಹಿಂದೂ ಸಂಸ್ಕೃತಿಯಲ್ಲೇ ಇರಬಹುದು.

ಅದು ಭಾರತದ ಅಸ್ಥಿರತೆಯನ್ನು ತರುವ ಅಂಶವೆಂದು ಅನೇಕರು ಊಹಿಸುತ್ತಾರೆ. ಆದರೆ ಅದು ತಪ್ಪು. ರಾಷ್ಟ್ರೀಯತೆಯು ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಪ್ರಭಾವವನ್ನು ಬೀರುತ್ತದೆ. ನಿಜವಾಗಿ ಹೇಳಬೇಕೆಂದರೆ, ಕೆಲವು ರೀತಿಗಳಲ್ಲಿ, ರಾಷ್ಟ್ರೀಯತೆಯ ರಾಜಕೀಯ ಅಭಿವ್ಯಕ್ತಿಗಳು ಅದರ ಅತ್ಯಂತ ಒರಟಾದ ಮತ್ತು ತಪ್ಪು ತಿಳಿವಳಿಕೆಯ ಸ್ವರೂಪಗಳು. ರಾಷ್ಟ್ರೀಯತೆಯು ಅತ್ಯುತ್ತಮವಾಗಿ ಅಭಿವ್ಯಕ್ತಗೊಳ್ಳುವುದು ಕಲೆ ಮತ್ತು ಸಾಹಿತ್ಯದಲ್ಲಿ. ಅದು ಇನ್ನೂ ದೊಡ್ಡ ಪ್ರಮಾಣದಲ್ಲಿ ನಮಗೆ ಸಿಕ್ಕಿಲ್ಲ. ನಾವು ನಮ್ಮ ಸುಳ್ಳು ಹೆಮ್ಮೆಯಲ್ಲಿ ಹೇಳಿಕೊಳ್ಳುತ್ತೇವೆ– ಕಲೆ, ಸಾಹಿತ್ಯ ಮತ್ತು ವಿದ್ಯಾಭ್ಯಾಸಗಳಲ್ಲಿ ಭಾರತವು ಪಾಶ್ಚಾತ್ಯ ಧ್ವನಿಯನ್ನೂ, ಸ್ಪರ್ಶವನ್ನೂ ಪಡೆದುಕೊಳ್ಳಬೇಕು– ಎಂದು. ಇದರ ಪರಿಣಾಮವೇನಾಗಿದೆ ಎಂದರೆ ಭಾರತದ ಕಲೆ ಕಳಂಕಿತವಾಗುತ್ತಿದೆ ಮತ್ತು ಅದರ ವಿದ್ಯಾಭ್ಯಾಸದಲ್ಲಿ ಪ್ರತಿಯೊಂದು ಸಾಮಯಿಕ ಸ್ಫೂರ್ತಿಯ ಚಿಂತನೆಯ ಪುನರುಜ್ಜೀವನದಿಂದ ಅದಕ್ಕೆ ಮತ್ತೆ ಜೀವವು ಬಂದಿದೆ. ಒಂದು ಕಡೆ ಪಾಶ್ಚಾತ್ಯರ ಆಶ್ರಯದಲ್ಲಿ ಪಾಶ್ಚಾತ್ಯ "ಸ್ಫೂರ್ತಿ"ಯಿಂದ ಭಾರತದಲ್ಲಿ ಜನ್ಮ ತಳೆಯುವ ಕುರೂಪಿ

ಅಸಂಸ್ಕಾರಿ ಕೃತಿಗಳ ಕಲಾಪ್ರದರ್ಶನ, ಇನ್ನೊಂದು ಕಡೆ ಭಾರತೀಯ ಕಲಾ ಸಮಾಜ (Indian Art Societ) ನಿರ್ಮಿಸುವ ರೂಪ ಮತ್ತು ವರ್ಣಗಳ ಸುಂದರ ಸಮನ್ವಯ– ಇವುಗಳ ವೈಪರೀತ್ಯದಂತೆ ಬೇರೆ ಏನೂ ನನ್ನ ಮನಸ್ಸಿಗೆ ಆಘಾತವನ್ನು ಉಂಟುಮಾಡಿಲ್ಲ. ಈ ಕಲೆಯಲ್ಲಿ ಭಾರತದ ಆತ್ಮವು ಕೇವಲ ಹಿಂದೂ ಕಲೆ ಆಗಿಲ್ಲ ಎಂದು ತಿಳಿದುಬರುವುದೂ ಆಸಕ್ತಿಜನಕವಾಗಿದೆ. ಟಾಗೋರರ "ಷಹಜಹಾನನ ಮೃತ್ಯು" ಎಂಬ ಮಹಾನ್ ವರ್ಣಕಲಾಕೃತಿಯು ಎಷ್ಟು ಸಾರವತ್ತಾಗಿ ಪರ್ಶಿಯನ್ ಆಗಿದೆಯೋ ಅವರ ಭಾರತದ ಆತ್ಮ (Spirit of India) ಎಂಬ ಕಲಾಕೃತಿ. ಅಷ್ಟೇ ಹಿಂದೂ ಆಗಿದೆ. ಅಲ್ಲದೆ, ಸಾಹಿತ್ಯದಲ್ಲಿ ನಾವು ಈಗ "ಗೀತಾಂಜಲಿ"ಯ ಪೂಜೆಯಲ್ಲಿ ನಿರತರಾಗಿಲ್ಲವೇ, ಅದು ಭಾರತದ ರಾಷ್ಟ್ರೀಯತೆಯ ಸುಸಂಸ್ಕೃತ ಅಭಿವ್ಯಕ್ತಿ ಎಂಬ ಅರಿವು ನಮ್ಮಲ್ಲಿಲ್ಲವೆ? ಅಂತಿಮವಾಗಿ, ಬೌದ್ಧಿಕ ಸಂಸ್ಕೃತಿಯ ವಿದ್ಯಾರ್ಥಿಗಳಿದ್ದಾರೆ. ಅವರೊಡನೆ ಡಾ. ಮುಖರ್ಜಿಯವರೇ ಸಹಕರಿಸುತ್ತಿದ್ದಾರೆ. ಅವರೆಲ್ಲ ಭಾರತೀಯರ ಸಿದ್ಧಿ ಸಾಧನೆಗಳ ಅಲ್ಲಲ್ಲಿ ಚದುರಿ ಹೋಗಿರುವ ದಾಖಲೆಗಳನ್ನು ಈಗ ಒಟ್ಟುಗೂಡಿಸುತ್ತಿದ್ದಾರೆ. ಅಂಥ ಸಿದ್ಧಿಸಾಧನೆಗಳನ್ನು ಮಾಡಿದ ಜನರ ಕಾರ್ಯವು ಬೆಳಕಿಗೆ ಬರಲಿ, ಆ ಜನರಿಗೆ ಯೋಗ್ಯ ಗೌರವ ಸಮರ್ಪಣೆಯಾಗಲಿ. ಈ ರೀತಿಯಾಗಿ ಭಾರತವು ಸ್ವಾತಂತ್ರ್ಯದ ಮತ್ತು ಆತ್ಮಗೌರವದ ಭಾವಕ್ಕೆ ಹೊಸದಾಗಿ ಎಚ್ಚರಗೊಳ್ಳುತ್ತಿದೆ. ಅಂಥ ಜಾಗೃತಿಯಿಂದ ಮಾತ್ರ ಭಾರತ ಜಗತ್ತಿನ ಸಂಸ್ಕೃತಿಗೆ ತನ್ನ ಪಾಲಿನ ಕೊಡುಗೆಯನ್ನು ನೀಡಬಲ್ಲದು.

ರೈಟ್ ಆನರಬಲ್
ಜೆ. ರ್‍ಯಾಮ್ಸೆ ಮೆಕ್‌ಡೊನಾಲ್ಡ್

ಪರಿವಿಡಿ

Blank

ಭಾರತದ ಮೂಲಭೂತ ಏಕತೆ

೧. ಪೀಠಿಕೆ

ಈ ಪುಸ್ತಕವು ೧೯೧೪ರಷ್ಟು ಹಿಂದೆ ಲಂಡನ್ನಿನಲ್ಲಿ ಪ್ರಕಟವಾಗಿತ್ತು (ಅದಕ್ಕೂ ಸ್ವಲ್ಪ ಹಿಂದೆ ಅದನ್ನು ಬರೆದಿದ್ದೆ). ಮುಂದೆ ಏನಾಗಬಹುದು ಎಂಬ ನಿರೀಕ್ಷೆ ಅದರಲ್ಲಿತ್ತು. ಆ ಬೆಳವಣಿಗೆಗಳು ಮುಂದೆ ೧೯೪೭ರಲ್ಲಿ ಭಾರತವು ಎರಡು ರಾಷ್ಟ್ರಗಳಾಗಿ ವಿಭಜನೆಗೊಳ್ಳುವಂತೆ ಮಾಡಿದುವು. ಈ ವಿಭಜನೆಯ ಪರಿಣಾಮವಾಗಿ ಎರಡು ರಾಷ್ಟ್ರಗಳೂ ಸರ್ವತಂತ್ರ ಸ್ವತಂತ್ರರಾಷ್ಟ್ರಗಳಾಗುವ ಒಂದು ಅನುಕೂಲತೆಯೂ ಪರಿಹಾರರೂಪವಾಗಿ ಉಂಟಾಯಿತು. ಈ ಗ್ರಂಥದ ಸಿದ್ಧಾಂತವು ಆಗ ಬ್ರಿಟನ್ನಿನ ಲೇಬರ್ ಪಕ್ಷದ ನಾಯಕರಾಗಿದ್ದ ರೈಟ್ ಆನರಬಲ್ ಜೆ. ರಾಮ್ಸೆ ಮೆಕ್‌ಡೊನಾಲ್ಡ್ ಅವರು ಬರೆದ ಪಾಂಡಿತ್ಯಪೂರ್ಣ ಮುನ್ನುಡಿಯಿಂದ ಸಮರ್ಥನೆಯನ್ನು ಪಡೆದಿತ್ತು.

ದೇಶದ ವಿಭಜನೆಯನ್ನೂ ಮಾಡಿದ ಮೇಲೆ ಪ್ರತಿ ರಾಷ್ಟ್ರವೂ ಏಕರೂಪ್ಯವುಳ್ಳ ದೇಶವಾಗಿ, ಅದರಲ್ಲಿ ಇದ್ದ ಅಲ್ಪಸಂಖ್ಯಾತರ ಶಕ್ತಿಯನ್ನು ಕುಗ್ಗಿಸುತ್ತದೆ. ತನ್ಮೂಲಕವಾಗಿ ಆಂತರಿಕ ಶಾಂತಿಯನ್ನೂ ಸಾಮರಸ್ಯವನ್ನೂ ಹೆಚ್ಚುಹೆಚ್ಚಾಗಿ ದೃಢಪಡಿಸುತ್ತದೆ ಎಂಬ ಪರಿಗಣನೆಯಿಂದ ಮುಖ್ಯವಾಗಿ ಭಾರತದ ವಿಭಜನೆಯನ್ನು ಮಾಡಬೇಕಾಗಿತ್ತು. ಆದರೆ ದೇಶ ವಿಭಜನೆಯನ್ನು ಮಾಡಿದರೂ, ಒಂದು ರಾಷ್ಟ್ರವು ಒಂದೇ ಧರ್ಮದ ಅನುಯಾಯಿಗಳನ್ನು ಹೊಂದಿರುವಂತೆ ಯೋಜನೆಗಳನ್ನು ಹಾಕುವುದು ಇಂದಿನ ದಿನಗಳಲ್ಲಿ ಭೌತಿಕವಾಗಿ ಅಸಾಧ್ಯ. ವಸ್ತುತಃ ಮತೀಯ ಸಮಸ್ಯೆಗಳಿಗೆ ಆ ಮತೀಯರನ್ನು ಭೌಗೋಳಿಕವಾಗಿ ಬೇರ್ಪಡಿಸುವುದು ಪರಿಹಾರವಲ್ಲ. ಅಂಥ ಬೇರ್ಪಡಿಕೆಯಿಂದ ಹುಟ್ಟುವ ಹೊಸ ರಾಷ್ಟ್ರಗಳಲ್ಲೂ ಮತೀಯ ಸಮಸ್ಯೆಯು ಅನುವೃತ್ತವಾಗುವುದು. ಎಂದೂ ಯಾವ ರಾಷ್ಟ್ರವೂ ಕೇವಲ ಒಂದೇ ಮತದ ಅನುಯಾಯಿಗಳಿರುವ ಏಕರೂಪ ಸಾಮಾಜಿಕ ಘಟಕವಾಗಿರಲಾರದು. ಅದರಲ್ಲಿ ಬೇರೆ ಬೇರೆ ಧರ್ಮಾನುಯಾಯಿಗಳು ಇದ್ದೇ ಇರುತ್ತಾರೆ. ಹಾಗಿರುವುದು ಅನಿವಾರ್ಯ. ಆ ಧರ್ಮಗಳಲ್ಲಿ ಯಾವುದೋ ಒಂದು ಬಹುಸಂಖ್ಯಾತರ ಧರ್ಮವಾಗಿರುವುದೂ ಅನಿವಾರ್ಯವೇ. ರಾಜಕೀಯ ಅಥವಾ, ರಾಷ್ಟ್ರೀಯ ಸೀಮಾರೇಖೆಗಳು ಜನಾಂಗೀಯ, ಧಾರ್ಮಿಕ ಅಥವಾ ಸಾಮಾಜಿಕ ಸೀಮಾರೇಖೆಗಳೊಡನೆ ಹೊಂದಿಕೊಳ್ಳುವುದಿಲ್ಲ. ಇಂದಿನ ದಿನಗಳಲ್ಲಿ ಸ್ವತಂತ್ರವಾದ ಮತ್ತು ಚುರುಕಾಗಿ ನಡೆಯುವ ವಿಚಾರವಿನಿಮಯ, ರಾಷ್ಟ್ರಗಳ ಮತ್ತು ಜನಗಳ ಮಧ್ಯೆ ಆಗುವ

ಸಂಪರ್ಕ ಹಾಗೂ ವಲಸೆ ಹೋಗಲು, ವಸಾಹತುಗಳನ್ನು ಮಾಡಿಕೊಳ್ಳಲು ಮತ್ತು ನೆಲೆಸಲು ಹೆಚ್ಚಾಗುತ್ತಿರುವ ಸೌಕರ್ಯಗಳ ಕಾರಣದಿಂದ ರಾಜಕೀಯ ಮತ್ತು ಜನಾಂಗೀಯ ಸೀಮಾರೇಖೆಗಳು ಒಂದೇ ಆಗುವುದು ಕಷ್ಟತರವಾಗುತ್ತಿದೆ. ಅಲ್ಪಸಂಖ್ಯಾತರ ಸಮಸ್ಯೆಗೆ ಪರಿಹಾರವೆಂದರೆ ಅವರು ಹೆಚ್ಚಾಗಿರುವ ಪ್ರದೇಶದಲ್ಲಿ ಹೊಸ ರಾಷ್ಟ್ರಗಳನ್ನು ರಚಿಸುವುದಲ್ಲ. ಅದಕ್ಕೆ ಬದಲಾಗಿ ಅಲ್ಪಸಂಖ್ಯಾತರಿಗೆ ಸಾಂಸ್ಕೃತಿಕ ಸ್ವಾಯತ್ತತೆಯನ್ನು ನೀಡಬೇಕು. ಅದರಿಂದ ಅವರು ಬೇರೆ ಪಂಗಡವಾಗಿ ತಮ್ಮ ವಿಶಿಷ್ಟತೆಯನ್ನು ಕಾಪಾಡಿಕೊಳ್ಳಬಹುದು ಮತ್ತು ಬಹುಸಂಖ್ಯಾತರೊಡನೆ ತಮ್ಮ ಮುಖ್ಯ ವಿಭಿನ್ನತೆಯ ಅಂಶಗಳನ್ನು ಗೌರವಿಸಿಕೊಳ್ಳಬಹುದು. ಅಲ್ಪಸಂಖ್ಯಾತರಿಗೂ ಬಹುಸಂಖ್ಯಾತರಿಗೂ ಭೇದವು ಅವರ ಜನಾಂಗೀಯ, ಧಾರ್ಮಿಕ ಮತ್ತು ಭಾಷಿಕ ಆಸಕ್ತಿಗಳಲ್ಲಿ ಮಾತ್ರ ಇರಬೇಕು.

ಇವುಗಳಲ್ಲದೆ ಬೇರೆಯದಾದ ವಿಶಾಲವಿಚಾರಗಳಲ್ಲಿ ಅಲ್ಪಸಂಖ್ಯಾತರಿಗೂ ಬಹುಸಂಖ್ಯಾತರಿಗೂ ಯಾವ ಭೇದವೂ ಇರಬಾರದು. ಅವರೆಲ್ಲರೂ ಒಂದೇ ದೇಶದ ರಾಷ್ಟ್ರಕರಾಗಿರಬೇಕು ಮತ್ತು ಸಮಾನ ರಾಷ್ಟ್ರೀಯತ್ವದ ಬಂಧನಗಳಿಗೆ ಒಳಗಾಗಿರಬೇಕು. ಹೀಗೆ ವ್ಯಾಪಕವಾದ ರಾಜಕೀಯ ವ್ಯವಸ್ಥೆಯಲ್ಲಿ ಬಹುಸಂಖ್ಯಾತರ ಶಾಸನಕ್ಕೆ ಅಲ್ಪಸಂಖ್ಯಾತರನ್ನು ಹೊಂದಾಣಿಕೆಯಿಂದ ಸೇರಿಸಿಕೊಳ್ಳುವ ಯೋಜನೆಯು ಈಗ ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೂ ಅನ್ವಿತವಾಗಿದೆ. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಸ್ಟಾಲಿನ್ನನ ಸೋವಿಯೆತ್ ಗಣರಾಜ್ಯಗಳ ಒಕ್ಕೂಟ (USSR) ಬಹುರಾಷ್ಟ್ರೀಯತೆಯನ್ನೊಳಗೊಂಡ ದೇಶವಾಗಿದೆ. ನೂರೆಂಬತ್ತು ಬೇರೆ ಬೇರೆ ರಾಷ್ಟ್ರೀಯತೆಗಳನ್ನು ಒಳಗೊಂಡ ಒಕ್ಕೂಟವಾಗಿದೆ ಆ ದೇಶ. ಪ್ರತಿಯೊಂದಕ್ಕೂ ತನ್ನ ವಿಶಿಷ್ಟತೆಯನ್ನೂ ಪ್ರತ್ಯೇಕತೆಯನ್ನೂ ಸ್ವತಂತ್ರತೆಯನ್ನೂ ಉಳಿಸಿಕೊಳ್ಳಲು ಮತ್ತು ಬೆಳೆಸಿಕೊಳ್ಳಲು ಮುಕ್ತವಾದ ಮತ್ತು ಪೂರ್ಣವಾದ ಅವಕಾಶವನ್ನು ಅಲ್ಲಿ ನೀಡಲಾಗಿದೆ. ಸಮಾನವಾದ ಸೋವಿಯತ್ ನಾಗರಿಕತೆಗೆ ಅವರು ಒಳಪಟ್ಟಿರುತ್ತಾರೆ. ಸಂಕುಚಿತವಾದ ಪ್ರಾದೇಶಿಕ ಮತ್ತು ವಿಭಾಗೀಯ ನಿಷ್ಠೆಗಳಿಗೆ ಅತೀತವಾದ ನಿಷ್ಠೆಯನ್ನು ಎಲ್ಲರೂ ಒಕ್ಕೂಟಕ್ಕೆ ಹೊಂದಿರುತ್ತಾರೆ. ಇದಕ್ಕೆ ಅನುಗುಣವಾಗಿ ಜೋಸೆಫ್ ಸ್ಟಾಲಿನ್ ಹೆಮ್ಮೆಯಿಂದ ಹೀಗೆ ಘೋಷಿಸಿದ್ದನು– "ತ್ಸಾರ್ ದೊರೆಗಳ ಪ್ರಭುತ್ವವನ್ನು ಕಿತ್ತೊಗೆದ ಮೇಲೆ, ನಮ್ಮ ಜನರಲ್ಲಿ ಶೇಕಡಾ ತೊಂಬತ್ತರಷ್ಟು ಪ್ರಜೆಗಳು ಬೇರ್ಪಡಿಕೆಯನ್ನು ಇಷ್ಟಪಡುವುದಿಲ್ಲವೆಂದು ನಾನು ನಂಬುತ್ತೇನೆ."

ಇದೇ ಕಾಲದಲ್ಲಿ ಭಾರತ–ಪಾಕಿಸ್ಥಾನ ಎಂಬ ಈ ಎರಡು ರಾಷ್ಟ್ರಗಳು ತಮ್ಮಲ್ಲಿ ಪರಸ್ಪರ ಭೇದದ ಭಾವನೆಯನ್ನು ಪೋಷಿಸುವುದರ ಬದಲು ಇಬ್ಬರಲ್ಲೂ ಇರುವ ಸಮಾನಾಂಶಗಳನ್ನು ಒತ್ತಿ ಹೇಳುವುದು ಎರಡು ರಾಷ್ಟ್ರಗಳಿಗೂ ಅನುಕೂಲವಾಗುವುದು. ವಿಭಜನೆಯಿಂದ ಉಂಟಾದ ಆರ್ಥಿಕ ಹಾಗೂ ಇತರ ಹಾನಿಗಳನ್ನು ಹೀಗೆ ದೂರ ಮಾಡಿ ಉಭಯರ ಹಿತವನ್ನೂ ಇದರಿಂದ ಸಾಧಿಸಲು ಸಾಧ್ಯವಾಗುತ್ತದೆ. ಸಮಸ್ತ ಮಾನವ ಕುಲವೇ ಹೆಚ್ಚು ಹೆಚ್ಚು ರಾಜಕೀಯ ಸಂಬಂಧಗಳ ಸಹಕಾರವನ್ನು ಕುರಿತು ಯೋಚಿಸುತ್ತಿರುವಾಗ, ಒಂದೇ ಪ್ರಪಂಚ ಎಂಬ ಭಾವನೆಯನ್ನು ಮಾನವಕುಲದ ಐಕ್ಯದ ಆಧಾರದ ಮೇಲೆ ಸ್ಥಾಪಿಸಲು ಬಯಸುತ್ತಿರುವಾಗ, ವಿಶ್ವವೆಲ್ಲವೂ ಒಂದೆಂಬ ದೃಷ್ಟಿಯನ್ನು ಬೆಳೆಸಲು ಮತ್ತು ಅಂಥ ಸಂಸಿದ್ಧಿ ಮಾನಸಿಕ ಸ್ಥಿತಿಯನ್ನು ತರಲು ಯತ್ನಿಸುತ್ತಿರುವಾಗ ರಾಷ್ಟ್ರೀಯತೆಯ ಸಂಕುಚಿತ ಭಾವನೆಯಿಂದ ವಿಭಜನೆಯ ಹೊಸ ಕ್ಷೇತ್ರಗಳನ್ನು ಸೃಷ್ಟಿಸುವುದು ಮಾನವತೆಯ ಪ್ರಗತಿಗೆ ಮಾರಕವಾದೀತು.

ಅಲ್ಲದೆ, ಒಂದೇ ರಾಷ್ಟ್ರದ ಎರಡು ಭಾಗಗಳಾಗಿದ್ದ ಈ ಎರಡು ರಾಷ್ಟ್ರಗಳು ಅನೇಕ ಶತಮಾನಗಳವರೆಗೆ ಒಟ್ಟಾಗಿದ್ದುವು. ಅನಿವಾರ್ಯವಾಗಿ ಅವು ನಿರ್ದಿಷ್ಟ ಚಿಂತನಧಾರೆಯನ್ನೂ, ಲೋಕದೃಷ್ಟಿಯನ್ನೂ, ಪ್ರಕೃತಿಯಿಂದ ಸ್ಫೂರ್ತಿ ಪಡೆದ ಮತ್ತು ಇತಿಹಾಸದಿಂದ ದೃಢೀಕೃತವಾದ ಸಂಪ್ರದಾಯಗಳನ್ನೂ ಬೆಳೆಸಿಕೊಂಡಿವೆ. ಹೀಗೆ ಸಂಚಿತವಾದ ಅವುಗಳ ಅಂತಶ್ಶಕ್ತಿಯು ರಾಜಕೀಯ ಏಟಿನಿಂದ ಕುಸಿದುಬೀಳುವುದಿಲ್ಲ. ರಾಜಕೀಯ ಮತ್ತು ಆಡಳಿತಾತ್ಮಕ ವಿಭಜನೆಯು ಅದರ ಸಮಸ್ತ ಜೀವನವನ್ನೂ ಅದರ ಆಸಕ್ತಿಗಳ ಸಮಗ್ರ ಶ್ರೇಣಿಯನ್ನು ಹಾಳುಮಾಡಬಾರದು. ಅದಕ್ಕೆ ತನ್ನದೇ ಆದ ಮಿತಿಗಳಿದ್ದು, ಅವುಗಳೊಳಗೇ ಅದು ಕೆಲಸ ಮಾಡುತ್ತದೆ. ಒಂದು ಅರ್ಥದಲ್ಲಿ ನೋಡಿದರೆ, ಭಾರತವು ಎಂದೂ ಒಂದೇ ಪ್ರಭುತ್ವದ ಕೆಳಗಿದ್ದ ಸುವ್ಯವಸ್ಥಿತ ರಾಜಕೀಯ ಘಟಕವಾಗಿರಲಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತವೂ, ವಿಶಾಲಭಾರತದ ಒಂದು ಭಾಗ ಮಾತ್ರ. ಅದರೊಳಗೆ ಸಣ್ಣ, ದೊಡ್ಡ ಆರುನೂರು ರಾಜ್ಯಗಳಿದ್ದುವು. ಅವು ಪರಸ್ಪರ ಬೇರೆಯಾಗಿದ್ದ ಸ್ವಾಯತ್ತ ಸಂಸ್ಥಾನಗಳಾಗಿದ್ದುವು. ಒಂದು ಪರಮಾಧಿಕಾರದ ಕೆಳಗೆ ಅವುಗಳನ್ನೆಲ್ಲ ರಾಜಕೀಯವಾಗಿ ಒಂದುಗೂಡಿಸಿದುದು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಅತಿದೊಡ್ಡ ಕೊಡುಗೆ ಎಂಬುದರಲ್ಲಿ ಸಂಶಯವಿಲ್ಲ. ಆ ಪರಮಾಧಿಕಾರವು ರಕ್ಷಣೆ, ಪರದೇಶಗಳೊಡನೆ ಸಂಬಂಧ, ವಿದೇಶ ನೀತಿ, ಸಮಗ್ರ ಭಾರತಕ್ಕೆ ಅನ್ವಯಿಸುವ ಸಮಾನ ಆರ್ಥಿಕ ಆಸಕ್ತಿಗಳು – ಇವುಗಳಲ್ಲಿ ತನ್ನ ಪರಮೋಚ್ಚ ಪ್ರಭುತ್ವವನ್ನು ಜಾರಿಗೆ ತರಲು ಶಕ್ತವಾಗಿತ್ತು.

ಭಾರತದ ನಿರ್ದಿಷ್ಟ ರೇಖಾಂಕಿತ ಪ್ರದೇಶಗಳಲ್ಲಿ ಒಂದು ಸಂಪೂರ್ಣ ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಿ ಪಾಕಿಸ್ಥಾನವನ್ನು ರೂಪಗೊಳಿಸಿದುದರಿಂದ, ಭಾರತದ ಉಳಿದ ಭಾಗಗಳಲ್ಲಿ ರಾಷ್ಟ್ರದ ಏಕತೆ ಮತ್ತು ಸಮಗ್ರತೆಯ ಭಾವನೆಗೆ ಹೊಸ ಉಜ್ಜೀವನ ಶಕ್ತಿಯನ್ನು ತಂದುಕೊಟ್ಟು ಭಾರತದ ವಿಭಜನೆಗೆ ವಿರುದ್ಧವಾದ ಪ್ರತಿಕ್ರಿಯೆಯನ್ನು ಉಂಟುಮಾಡಿದೆ. ಆರಂಭದ ಎರಡೇ ವರ್ಷಗಳಲ್ಲಿ ಸ್ವತಂತ್ರ ಭಾರತವು ಬೇರೆಬೇರೆಯಾಗಿದ್ದ ಆರುನೂರು ರಾಜ್ಯಗಳನ್ನೆಲ್ಲ ತನ್ನೊಳಗೆ

ಸೇರಿಸಿಕೊಂಡು ಅವಿಭಾಜ್ಯವಾದ ಒಕ್ಕೂಟವಾಗಿ ರೂಪಗೊಳ್ಳಲು ಭಾರತವು ಸಮರ್ಥವಾಗಿದೆ. ಅವುಗಳನ್ನೆಲ್ಲ ಒಕ್ಕೂಟದ ಒಂದೇ ಸರ್ಕಾರದ ಕೆಳಗೆ ಒಟ್ಟು ಮಾಡಲು ಶಕ್ತವಾಗಿದೆ. ಹೀಗೆ ಐತಿಹಾಸಿಕವಾಗಿ ಪರಸ್ಪರ ಬೇರೆಯಾಗಿದ್ದ ಅಧಿಕ ಸಂಖ್ಯೆಯ ರಾಜ್ಯಗಳನ್ನು ಭಾರತದೊಳಗೆ ವಿಲೀನಗೊಳಿಸಿರುವುದಕ್ಕೆ ಫಲ ಭಾರತದ ಹೊಸ ಇತಿಹಾಸವನ್ನು ರಚಿಸುವುದಷ್ಟೇ ಅಲ್ಲ, ದೇಶದ ವಿಭಜನೆಯಿಂದ ಮತ್ತು ಪಾಕಿಸ್ಥಾನ ರಚನೆಯಿಂದ ಅದು ಕಳೆದುಕೊಂಡ ಭೂಭಾಗಗಳ ಬಗೆಗೆ ಪರಿಹಾರವನ್ನು ಒದಗಿಸುವುದು ಮತ್ತು ತನ್ಮೂಲಕ ರಾಜ್ಯಾದಾಯ ಹಾಗೂ ಸಂಪತ್ತಿನ ಮೂಲ ಸ್ರೋತಗಳನ್ನು ಕಲ್ಪಿಸುವುದೂ ಆಗಿದೆ.

ಭಾರತವನ್ನು ಎರಡು ರಾಷ್ಟ್ರಗಳನ್ನಾಗಿ ವಿಭಜಿಸಿರುವುದು ಈಗ ಮುಗಿದ ಘಟನೆ. ಈಗಾಗಲೇ ನಾವು ಹೇಳಿರುವಂತೆ ಈ ಎರಡು ರಾಷ್ಟ್ರಗಳಲ್ಲಿ ಆ ವಿಭಜನೆಯು ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಜೀವನದ ನಾನಾ ಮುಖಗಳಿಗೆ ಧಕ್ಕೆಯನ್ನುಂಟುಮಾಡಬಾರದು. ಪ್ರಕೃತಿಯೇ ಭಾರತವನ್ನು ಒಂದು ಪ್ರತ್ಯೇಕ ಭೌಗೋಳಿಕ ಘಟಕವನ್ನಾಗಿ ಗುರುತಿಸಿದೆ ಎಂಬುದನ್ನು ಯಾರೂ ನಿರಾಕರಿಸಲಾರರು. ಉತ್ತರದಲ್ಲಿ ಪರ್ವತಗಳು ಮತ್ತು ದಕ್ಷಿಣದಲ್ಲಿ ಸಮುದ್ರಗಳು ಭಾರತವನ್ನು ಏಷ್ಯಾಖಂಡದ ಇತರ ಭಾಗಗಳಿಂದ ಸ್ಪಷ್ಟವಾಗಿ ಬೇರ್ಪಡಿಸಿವೆ.

ಈ ಭೌಗೋಳಿಕ ಸಮಗ್ರತೆಯ ಜೊತೆಗೆ, ಅತ್ಯಂತ ಆಳದಲ್ಲಿ ಅನೇಕ ಯುಗಗಳ ಶಿಲೆಯ ಬುನಾದಿಯ ಮೇಲೆ ನಿಂತಿರುವ ಇನ್ನೊಂದು ಏಕತೆಯಿದೆ. ಈ ಶಿಲೆಗಳು ಭಾರತದ ಖನಿಜ ಸಂಪತ್ತಿನ ಮೂಲಗಳು. ಮೇಲ್ಪದರದಲ್ಲಿ ಕೇವಲ ರಾಜಕೀಯ ಲೆಕ್ಕಾಚಾರಗಳಿಗಾಗಿ ಮಾಡಿರುವ ಕೃತಕ ದೇಶ ವಿಭಜನೆಗಳು ಆ ಶಿಲೆಗಳಿಗೆ ಯಾವ ಧಕ್ಕೆಯನ್ನೂ ಉಂಟುಮಾಡಲಾರವು. ಮೇಲ್ಪದರದ ಕೆಳಗೆ ಆ ಶಿಲೆಗಳು, ಹಗೆಯಿಂದಲೋ ಎಂಬಂತೆ, ಒಂದು ಗಂಭೀರತರವಾದ, ಒಡೆಯಲಾರದ ಏಕತೆಯನ್ನು ರಚಿಸಿವೆ. ಮೇಲೆ ಪರಸ್ಪರ ವಿಭಜನೆಗೊಳಗಾದ ಬೇರೆ ಬೇರೆ ರಾಷ್ಟ್ರಗಳ ಕೃತಕ ಎಲ್ಲೆಗಳನ್ನು ಧಿಕ್ಕರಿಸಿ ವ್ಯಾಪಕವಾದ ಭೌಗೋಳಿಕ ಪ್ರದೇಶಗಳನ್ನು ಒಟ್ಟಿಗೆ ಆಲಿಂಗಿಸಿಕೊಂಡು ಎಲ್ಲಕ್ಕೂ ಆಧಾರವಾಗಿ ಆ ಏಕತೆಯ ತನ್ನನ್ನು ಅಭಿವ್ಯಕ್ತಿಸಿಕೊಂಡಿದೆ. ಹೀಗೆ ಭೂಗರ್ಭದ ಕಟ್ಟಡದ ಶಿಲಾಮಯ ಬುನಾದಿಗಳ ಮೇಲೆ ವಿಶಾಲವೂ ಆಳವೂ ಆಗಿ ರೂಪಗೊಂಡಿರುವ ಭಾರತದ ಏಕತೆಯು ಯಾವ ಸ್ವಾಭಾವಿಕ ಅಥವಾ ಭೌತಿಕ ಆಧಾರವಿಲ್ಲದೆ ಅದನ್ನು ವಿಭಜಿಸಲು ಮಾನವರು ಮಾಡುವ ಹಂಚಿಕೆಗಳನ್ನು ಕಂಡು ನಗುತ್ತದೆ.

ಒಂದು ಉದಾಹರಣೆಯನ್ನು ಹೇಳಬೇಕೆಂದರೆ, ದೇಶದ ಆರ್ಥಿಕ ಬೆಳವಣಿಗೆ ಮತ್ತು ಔದ್ಯಮಿಕ ಏಳಿಗೆ ಕಲ್ಲಿದ್ದಲ್ಲನ್ನು ಅವಲಂಬಿಸುತ್ತದೆ. ಭಾರತದ ಅತ್ಯುತ್ತಮ ಕಲ್ಲಿದ್ದಲು, ಅದರ ಶೇಕಡಾ ತೊಂಬತ್ತೆಂಟಕ್ಕಿಂತ ಹೆಚ್ಚು ಭಾಗ, ಬಂಗಾಳ, ಬಿಹಾರ

ಮತ್ತು ಒರಿಸ್ಸಾಗಳಲ್ಲಿ ಕೇಂದ್ರಿತವಾಗಿರುವ ಗೋಂಡವನ ಶಿಲೆಗಳಲ್ಲಿ ಸಿಗುತ್ತದೆ. ಮತ್ತೆ ಗೋದಾವರೀ ಕಣಿವೆಯ ಕಲ್ಲಿದ್ದಲ ಗಣಿಗಳು ಹೈದರಾಬಾದಿನಿಂದ ಮದ್ರಾಸಿನವರೆಗೆ, ಕೊಂಕಣದ ಸಮುದ್ರದವರೆಗೆ ಹರಡಿಕೊಂಡಿವೆ. ಪ್ರಾಯೋಗಿಕವಾಗಿ ಹೇಳಬೇಕೆಂದರೆ, ಬಂಗಾಳ, ಬಿಹಾರ ಮತ್ತು ಒರಿಸ್ಸ ಗುಣದಲ್ಲೂ ಪರಿಮಾಣದಲ್ಲೂ ಕಲ್ಲಿದ್ದಲಿನ ವಿಷಯದಲ್ಲಿ ಏಕಸ್ವಾಮ್ಯವನ್ನು ಹೊಂದಿವೆ.

ಪಾಕಿಸ್ಥಾನವನ್ನೂ ಒಳಗೊಂಡಂತೆ ಸಮಗ್ರ ಭಾರತ ದೇಶವನ್ನು ಪ್ರಕೃತಿಯು ಒಟ್ಟು ಒಂದು ದೇಶವನ್ನಾಗಿ ರೂಪಿಸಿದೆ. ಈ ಒಟ್ಟು ಪ್ರದೇಶದಲ್ಲಿ ಅಮೂಲ್ಯವಾದ ಖನಿಜಸಂಪತ್ತುಗಳು ಎಲ್ಲ ಕಡೆಯಲ್ಲಿ ಹಂಚಲ್ಪಟ್ಟಿವೆ. ಬೇರೆ ಬೇರೆ ಪ್ರದೇಶಗಳೆಲ್ಲ ಯೋಗ್ಯವಾದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಪರಸ್ಪರ ಅವಲಂಬಿತವಾಗಿರುವಂತೆ ಆ ಸಂಪತ್ತುಗಳ ಹಂಚಿಕೆಯಾಗಬೇಕು. ಆಧುನಿಕ ಪ್ರಪಂಚದಲ್ಲಿ ಕಲ್ಲಿದ್ದಲು, ಕಬ್ಬಿಣ ಮತ್ತು ತೈಲ ಎಂಬ ಮೂರು ಸಂಪನ್ಮೂಲಗಳ ಮೇಲೆ ಕೈಗಾರಿಕಾ ಶಕ್ತಿಯು ನಿಂತಿರುತ್ತದೆ. ಇಂದಿನ ಉಕ್ಕಿನ ಯುಗದಲ್ಲಿ ಕೈಗಾರಿಕೆಯು ಕಲ್ಲಿದ್ದಲು ಮತ್ತು ಕಬ್ಬಿಣಗಳು ಒಟ್ಟಿಗೆ ಸಿಗುವ ಸನ್ನಿವೇಶವನ್ನು ಅವಲಂಬಿಸಿರುತ್ತದೆ. ಉಕ್ಕಿನ ನಿರ್ಮಾಣದಲ್ಲಿ ತೈಲವು ಅಷ್ಟೇನೂ ಆವಶ್ಯಕವಲ್ಲ.

ಕಲ್ಲಿದ್ದಲು ಮತ್ತು ಕಬ್ಬಿಣಗಳಾದ ಮೇಲೆ, ಉತ್ತಮ ಉಕ್ಕನ್ನು ಮಾಡಲು ಬೇಕಾದ ಮಿಶ್ರಲೋಹಗಳ ಮೂಲವಸ್ತುಗಳಾದ ಮ್ಯಾಂಗನೀಸ್ ಮತ್ತು ಕ್ರೋಮಿಯಮ್ ಕೈಗಾರಿಕಾ ಶಕ್ತಿಗೆ ಮುಖ್ಯವಾಗುತ್ತವೆ. ಅವುಗಳ ಅದಿರುಗಳು ಹೆಚ್ಚಾಗಿ ಮಧ್ಯಪ್ರದೇಶದಲ್ಲಿ ಸಿಕ್ಕುತ್ತವೆ. ಸಣ್ಣ ಪ್ರಮಾಣದಲ್ಲಿ ಅವು ಮದ್ರಾಸ್, ಬೊಂಬಾಯಿ, ಬಿಹಾರ್, ಒರಿಸ್ಸಾ ಮತ್ತು ಮೈಸೂರು ಪ್ರಾಂತಗಳಲ್ಲಿ ಸಿಕ್ಕುತ್ತವೆ. ಭಾರತದಲ್ಲಿ ಚಿನ್ನವು ಮೈಸೂರು ಪ್ರಾಂತದಲ್ಲಿರುವ ಕೋಲಾರ ಜಿಲ್ಲೆಯಲ್ಲೂ ಮದ್ರಾಸ್ ಪ್ರಾಂತದಲ್ಲಿರುವ ಅನಂತಪುರ ಜಿಲ್ಲೆಯಲ್ಲೂ ಸಿಕ್ಕುತ್ತದೆ. ಅಲ್ಯೂಮಿನಿಯಮ್ ಲೋಹಕ್ಕೆ ಮೂಲವಾದ ಬಾಕ್ಸೈಟ್ ಎಂಬ ಅದಿರು ಹೆಚ್ಚಾಗಿ ಮಧ್ಯಪ್ರದೇಶ, ಬೊಂಬಾಯಿ ಮತ್ತು ಬಿಹಾರಗಳಲ್ಲಿ ಹುದುಗಿದೆ. ಬಿಹಾರದಲ್ಲಿರುವ ಸಿಂಗ್‌ಭೂಮ್ ತಾಮ್ರಕ್ಕೆ ಏಕಸ್ವಾಮ್ಯವನ್ನು ಹೊಂದಿದೆ. ಭಾರತಕ್ಕೆ ಬೇಕಾದ ಉಪ್ಪಿನ ಶೇಕಡಾ ಎಂಬತ್ತೈದು ಭಾಗ ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತಗಳ ಸಮುದ್ರದ ನೀರಿನಿಂದ ಮತ್ತು ರಾಜಪುಟಾಣದ ಸರೋವರಗಳ ನೀರಿನಿಂದ ಒದಗಿಬರುತ್ತದೆ. ಮ್ಯಾಗ್ನಸೈಟ್ ಎಂಬ ಅದಿರನ್ನು ಹಲವು ಬಗೆಯ ಸಿಮೆಂಟುಗಳ ಉತ್ಪಾದನೆಯಲ್ಲಿ ಆವಶ್ಯಕಾಂಶವಾಗಿ ಬಳಸುತ್ತಾರೆ. ಅದು ಮೆಗ್ನೀಶಿಯಮ್ ಲೋಹಕ್ಕೂ ಮೂಲಸ್ರೋತ. ಇದರ ಏಕಸ್ವಾಮ್ಯ ಮದ್ರಾಸ್ ಪ್ರಾಂತದ್ದು.

ವಿಭಜನಪೂರ್ವ ಭಾರತದ ಧಾತುಮೂಲಗಳು ಹೇಗೆ ವಿಭಕ್ತವಾಗಿವೆ ಮತ್ತು ಹಂಚಲ್ಪಟ್ಟಿವೆ ಎಂದರೆ ಎಷ್ಟು ಸಾಧ್ಯವೋ ಅಷ್ಟು ಅದರ ಬೇರೆ ಬೇರೆ ಭಾಗಗಳು

ಒಂದೇ ಆರ್ಥಿಕ ವ್ಯವಸ್ಥೆಯಲ್ಲಿ ಒಟ್ಟಿಗೆ ಸಂಯುಕ್ತವಾಗಿ ಇರಬೇಕಾಗುತ್ತದೆ. ಅಂಥ ಆರ್ಥಿಕ ವ್ಯವಸ್ಥೆಯೇ ಪ್ರತಿಯೊಬ್ಬರ ಅಭ್ಯುದಯವನ್ನು ಅವರ ಅಂತಸ್ಸತ್ತ್ವಕ್ಕೆ ಪೂರ್ಣವಾಗಿ ಅವಕಾಶವಿರುವಂತೆ ಸಾಧಿಸಬಲ್ಲುದು.

ಆಡಳಿತಾತ್ಮಕ ಮತ್ತು ರಾಜಕೀಯ ವಿಭಾಗಗಳ ನಡುವೆ ಹೆಚ್ಚಿನ ಸಂಖ್ಯೆಯ ಜನರ ಅತಿ ಹೆಚ್ಚಾದ ಒಳಿತನ್ನು ಸಾಧಿಸಲು ಕೊಡುವ ಕರೆ ಅವರ ಐಕ್ಯಕ್ಕೆ ಕೊಡುವ ಕರೆಯೇ ಆಗಿದೆ. ಪರದೇಶಗಳ ಬಂಡವಾಳವನ್ನೂ ಆಮದುಗಳನ್ನೂ ಅತ್ಯಂತ ಕಡಿಮೆ ಬೆಲೆಗೆ ಪಡೆದುಕೊಳ್ಳುವ ದಾರಿಯಲ್ಲಿ ಆರ್ಥಿಕ ದೃಷ್ಟಿಯಿಂದ ಏಕತೆಗೆ ಕೊಡುವ ಕರೆಯೂ ಕಡಿಮೆ ಮುಖ್ಯವಾದುದಲ್ಲ.

ರಾಜಕೀಯವಾಗಿ ಮಾಡಿದ ದೇಶವಿಭಜನೆಯು, ಸೀಮಾರೇಖೆಯ ಎರಡು ಕಡೆಗಳಲ್ಲೂ ಇರುವ ನಿರ್ದಿಷ್ಟ ರಾಷ್ಟ್ರೀಯ ಹಾಗೂ ಐತಿಹಾಸಿಕ ನೆನಪುಗಳನ್ನು ಅಳಿಸಿಹಾಕಲಾರದು. ಅನೇಕ ಶತಮಾನಗಳ ಜೀವನವನ್ನೂ ಇತಿಹಾಸವನ್ನೂ ಅದು ಒರೆಸಿಹಾಕುವುದು ಸಾಧ್ಯವಲ್ಲ.

ಪಾಕಿಸ್ಥಾನದಲ್ಲಿರುವ ಮುಸ್ಲಿಮರು ರಾಜಕೀಯವಾಗಿ ಭಾರತದ ಇತರ ಭಾಗಗಳಿಂದ ಬೇರ್ಪಟ್ಟು ತಮ್ಮದೇ ಆದ ರಾಜ್ಯದಲ್ಲಿದ್ದರೂ, ಭಾರತದ ವಿವಿಧ ಪ್ರದೇಶಗಳಲ್ಲಿ ನಿಂತಿರುವ ಅನೇಕ ಮಸೀದಿ ಮತ್ತು ಸಮಾಧಿಸ್ಥಳಗಳೊಡನೆ ಕಟ್ಟಿಕೊಂಡಿರುವ ಸಂಬಂಧಗಳನ್ನು ತೊಡೆದುಹಾಕುವುದು ಹೇಗೆ ಸಾಧ್ಯ? ದೆಹಲಿಯಲ್ಲಿರುವ ಜುಮ್ಮಾ ಮಸೀದಿ, ಆಗ್ರಾದಲ್ಲಿರುವ ತಾಜ್‌ಮಹಲ್ ಮುಂತಾದುವು, ಇಸ್ಲಾಮಿನ ವಿಶಿಷ್ಟ ಸ್ಮಾರಕ ಕಟ್ಟಡಗಳೂ, ವಿಶ್ವದಲ್ಲೇ ಅಸಮಾನವಾದ ವಾಸ್ತುಶಿಲ್ಪ ಮೇರುಕೃತಿಗಳೂ ಆಗಿವೆ. ಅವುಗಳಲ್ಲಿ ಮತ್ತು ಅಜ್ಮೀರಿನ ದರ್ಗಾದಲ್ಲಿ ರೂಢಿಯಿಂದ ಬಂದಿರುವ ಪೂಜಾರ್ಪಣೆಯನ್ನು ಪಾಕಿಸ್ಥಾನದ ಮುಸ್ಲಿಮರು ಬಿಡುವುದು ಹೇಗೆ ಸಾಧ್ಯ? ಫತೇಪುರ್ ಸಿಕ್ರಿ, ಆಗ್ರಾ, ದೆಹಲಿ ಮುಂತಾದ ಪ್ರದೇಶಗಳಲ್ಲಿರುವ ಲೌಕಿಕ ಸ್ಮಾರಕ ಕಟ್ಟಡಗಳಲ್ಲಿ ಅನುಸ್ಯೂತವಾಗಿರುವ, ಅಕ್ಬರ್ ಮತ್ತು ಶಾಹ್‌ಜಹಾನ್ ಮುಂತಾದ ಸಾಮ್ರಾಜ್ಯ ನಿರ್ಮಾಪಕರನ್ನು ಅವರು ತಮ್ಮ ನೆನಪಿನಿಂದ ಹೊರಗೆ ಹೇಗೆ ತಾನೆ ತಳ್ಳಬಲ್ಲರು?

ಇದೇ ರೀತಿಯಾಗಿ, ಹಿಂದುಗಳ ವಿಷಯದಲ್ಲೂ ಹೇಳಬೇಕೆಂದರೆ, ಭಾರತದ ಉಳಿದ ಪ್ರದೇಶಗಳಂತೆ, ಪಾಕಿಸ್ಥಾನವನ್ನೂ ಪವಿತ್ರಗೊಳಿಸಿರುವ, ಪಾಕಿಸ್ಥಾನದಲ್ಲಿ ಈಗ ಉಳಿದು ಬಂದಿರುವ ಪವಿತ್ರ ಸ್ಥಳಗಳ ಮತ್ತು ಅಸಂಖ್ಯಾತ ದೇವಾಲಯಗಳ ಸಂಬಂಧಗಳು ಅವರಿಗೆ ಅವಿಭಾಜ್ಯವಾಗಿವೆ. ಹಿಂದೂಗಳ ಪ್ರಥಮ ಧರ್ಮಗ್ರಂಥವಾದ ಋಗ್ವೇದದೊಳಗಿರುವ ಅನೇಕ ಋಕ್ಕುಗಳು ಪಾಕಿಸ್ಥಾನದಲ್ಲಿರುವ ಪವಿತ್ರವಾದ ಭೂಮಿಗೆ ಸಂಬಂಧಿಸಿರುವುವಾಗಿವೆ. ಇಂದಿಗೂ ತುಂಬಿ ಹರಿಯುತ್ತಾ ಆ ನಾಡಿಗೆ

ಸಮೃದ್ಧಿಯನ್ನುಂಟುಮಾಡುತ್ತಿರುವ ನದಿಗಳ ದಡದ ಮೇಲೆ ನಿಂತು ಋಗ್ವೇದದ ಋಷಿಗಳು ತಾವು ಕಂಡುಕೊಂಡ ಸೂಕ್ತಗಳನ್ನು ಪಠಿಸಿದರು.

ಋಗ್ವೇದದಲ್ಲಿ ಕಾಬೂಲ್ ನದಿಯನ್ನು ಕುಭಾ ಎಂದೂ ಕುರ್‍ರಮ್ ನದಿಯನ್ನು ಕ್ರಮು ಎಂದೂ, ಗೋಮಾಲ್ ನದಿಯನ್ನು ಗೋಮತೀ ಎಂದು ಕರೆದಿದ್ದಾರೆ. ಆಧುನಿಕರ ಮಾತಿನಲ್ಲಿ 'ಸ್ವಾತ್' ಎಂದು ಹೆಸರಾಗಿರುವ ಸ್ಥಾನ ಋಗ್ವೇದದಲ್ಲಿ ಸುವಸ್ತು ಎನಿಸಿಕೊಂಡಿದೆ. ಆಗ ಅದು ಅಭಿವೃದ್ಧಿಶೀಲವಾದ ನಿವಾಸಸ್ಥಾನವಾಗಿತ್ತು. ಅಫ್‌ಘಾನಿಸ್ಥಾನ ಮತ್ತು ಪಂಜಾಬುಗಳನ್ನೊಳಗೊಂಡ ಸಮಗ್ರ ಪ್ರದೇಶ ವೇದಗಳಲ್ಲಿ ಸಪ್ತಸಿಂಧುಗಳ ನಾಡು (ಏಳು ನದಿಗಳು ಹರಿಯುವ ನಾಡು) ಎಂದು ಪ್ರಸಿದ್ಧವಾಗಿದೆ. ಆ ಏಳು ನದಿಗಳು ಯಾವುವೆಂದರೆ ಕುಭಾ (ಕಾಬೂಲ್), ಸಿಂಧು, ವಿತಸ್ತಾ (ಜೀಲಮ್), ಅಸಿಕ್ನೀ (ಚೀನಾಬ್), ಪರುಷ್ಣೀ (ರಾವೀ), ವಿಪಾಶಾ (ಬಿಯಾಸ್) ಮತ್ತು ಶತದ್ರು (ಸಟ್ಲೆಜ್). ಕೆಲವರು ಇವುಗಳಲ್ಲಿ ದೂರದಲ್ಲಿರುವ ಓಕ್ಸಸ್ (ಬಕ್ಷು=ರಸ) ಅನ್ನೂ ಸೇರಿಸಿಕೊಳ್ಳುತ್ತಾರೆ. ಋಗ್ವೇದದಲ್ಲಿರುವ ಪ್ರಸಿದ್ಧವಾದ ನದೀಸೂಕ್ತವು ಹತ್ತು ಪವಿತ್ರ ನದಿಗಳನ್ನು ಉಲ್ಲೇಖಿಸುತ್ತದೆ. ಇಡೀ ರಾಷ್ಟ್ರವೇ ಅವುಗಳಿಗೆ ಕೃತಜ್ಞತೆಯನ್ನೂ ಪೂಜೆಯನ್ನೂ ಸಮರ್ಪಿಸಬೇಕು. ಏಕೆಂದರೆ ಅವುಗಳ ಫಲವತ್ತತೆಯನ್ನು ಕೊಡುವ ನೀರು ದೇಶದ ಆರ್ಥಿಕ ಪ್ರಗತಿಗೆ ಕಾರಣವಾಗುತ್ತದೆ. ಈ ನದಿಗಳು ಪೂರ್ವಪಂಜಾಬ್, ಪಶ್ಚಿಮ ಪಂಜಾಬ್, ವಾಯವ್ಯ ಸರಹದ್ದು ಪ್ರಾಂತ ಮುಂತಾದ ಹಲವು ರಾಜ್ಯಗಳಲ್ಲಿ ಹರಿದು ಸಮಗ್ರ ಭೂಭಾಗವನ್ನು ತಣಿಸುತ್ತವೆ. ಪೂರ್ವದಿಂದ ಪಶ್ಚಿಮಕ್ಕೆ ಗಣನೆ ಮಾಡುವಾಗ ಈ ನದಿಗಳು ಯಾವುವೆಂದರೆ ಗಂಗಾ, ಯಮುನಾ, ಸರಸ್ವತೀ, ಶತದ್ರು (ಸಟ್ಲೆಜ್), ಪರುಷ್ಣೀ (ರಾವೀ), ಮರುದ್‌ವೃಧಾ (ಚೀನಾಬ್ ಮತ್ತು ಜೀಲಮ್‌ಗಳ ಸಂಯುಕ್ತ ಹರಿವು), ಅಸಿಕ್ನೀ (ಚೀನಾಬ್), ವಿತಸ್ತಾ (ಜೀಲಮ್), ಅರ್ಜಿಕೀಯಾ (ವಿಪಾಶಾ=ಬೀಯಾಸ್) ಮತ್ತು ಸುಷೋಮಾ (ಸಿಂಧು). ಈಗ ಪಾಕಿಸ್ಥಾನದಲ್ಲಿ ಪ್ರಮುಖ ಪ್ರಾಂತವಾಗಿರುವ ಸಿಂಧ್ ಕೂಡಾ ಭಾರತೀಯರಿಗೆ ಪರಮ ಪವಿತ್ರವಾದ ನಾಡು.

ಏಕೆಂದರೆ ಅದು ಅವರ ನಾಗರಿಕತೆ ಮತ್ತು ಧರ್ಮಗಳ ತೊಟ್ಟಿಲು. ಸಿಂಧೂನದಿಯ ಪಶ್ಚಿಮಕ್ಕೆ ಬಲೂಚಿಸ್ಥಾನದವರೆಗೆ ಇರುವ ಪ್ರದೇಶದಲ್ಲಿ ಪುರಾತತ್ತ್ವಶಾಸ್ತ್ರದ ಉತ್ಖನನಗಳಿಂದ ಬೆಳಕಿಗೆ ಬಂದ ಹರಪ್ಪಾ ಮತ್ತು ಮೊಹೆಂಜೋದಾರೋ ಮುಂತಾದ ಪ್ರಾಚೀನ ಸ್ಥಳಗಳಲ್ಲಿ ಹುಡುಕಲಾಗಿರುವ ಪುರಾತನ ನಾಗರಿಕತೆಯ ಕುರುಹುಗಳಿಂದ ಸಿಂಧ್ ಪ್ರದೇಶವು ತುಂಬಿದೆ. ಈ ಪ್ರಾಚೀನಾವಶೇಷಗಳು ಸಿಂಧೂ ಕಣಿವೆಯ ನಾಗರಿಕತೆಯು ಪ್ರಪಂಚದಲ್ಲೇ ಪ್ರಥಮ ನಾಗರಿಕತೆಯೆಂದು ತೋರಿಸಿಕೊಡುತ್ತವೆ. ಈ ಪ್ರಾಚೀನ ನಾಗರಿಕತೆಗೆ ಆಧಾರವಾಗಿದ್ದುದು ಮನುಷ್ಯನ ಅಮೂಲ್ಯ ಆಹಾರವಾಗಿದ್ದ ಗೋಧಿ. ಮೊದಲು

ಗೋಧಿ ಬೆಳೆಯುತ್ತಿದ್ದುದು ಅಫ್‌ಘಾನಿಸ್ಥಾನ ಮತ್ತು ಪಂಜಾಬಿನ ಎತ್ತರದ ಭೂಮಿಗಳಲ್ಲಿ. ಅಲ್ಲಿಂದ ಅದು ಪಶ್ಚಿಮದ ಕಡೆಗೆ ಹರಡುತ್ತಾ ಹೋಯಿತು. ಇಂದಿಗೂ ಪಂಜಾಬಿಗೂ ಪಾಕಿಸ್ಥಾನಕ್ಕೂ ಮುಖ್ಯಾಹಾರಧಾನ್ಯವಾಗಿರುವ ಆಧುನಿಕ ಗೋಧಿಗೆ ಹಿಂದೆ ಮೊಹೆಂಜೊದಾರೋನಲ್ಲಿ ಬೆಳೆಯುತ್ತಿದ್ದ ಗೋಧಿಯೇ ಮೂಲ ಎಂದೂ ಪ್ರಾಚೀನಾವಶೇಷಗಳು ತಿಳಿಸುತ್ತವೆ. ಮೂಲತಃ ಶಿವನ ಪೂಜೆಗೂ, ಏಕಾಗ್ರತೆಯಿಂದ ದೈವದ ಧ್ಯಾನವನ್ನು ಮಾಡಲು ಮನಸ್ಸಿಗೆ ತರಬೇತಿಯನ್ನು ನೀಡುವ ಯೋಗದ ಅಭ್ಯಾಸಕ್ಕೂ ಸಂಬಂಧಿಸಿದ ಹಿಂದೂಧರ್ಮದ ಮೂಲಪ್ರದೇಶ ಸಿಂಧ್ ಎಂದು ಇತರ ಪ್ರಾಚೀನಾವಶೇಷಗಳು ತಿಳಿಸಿಕೊಡುತ್ತವೆ. ಸಿಂಧ್ ಪ್ರಾಂತವು ಶ್ರೇಷ್ಠತಮವಾದ ಐತಿಹಾಸಿಕ ಮತ್ತು ಧಾರ್ಮಿಕ ನಂಟನ್ನು ಹೊಂದಿರುವುದರಿಂದ ಅದು ಎಲ್ಲ ಭಾರತೀಯರಿಗೆ ಪವಿತ್ರಸ್ಥಳವಾಗಿ ಶಾಶ್ವತವಾಗಿ ಉಳಿಯುತ್ತದೆ. ಇದೇ ರೀತಿಯಾಗಿ, *ಮಹಾಭಾರತ*ದಲ್ಲಿ ನಮೂದಿಸಲ್ಪಟ್ಟಿರುವ ಪವಿತ್ರ ನಗರಿ ತಕ್ಷಶಿಲೆಯನ್ನು ಯಾವ ಹಿಂದುವೂ ತನ್ನ ನೆನಪಿನಿಂದ ಕಿತ್ತುಹಾಕಲಾರನು. ಈ ತಕ್ಷಶಿಲೆ ರಾಜ ಪರೀಕ್ಷಿತನ ಹೆಸರಿನೊಡನೆ ಸಂಬಂಧವನ್ನು ಹೊಂದಿದೆ. ಅಲ್ಲಿಯೇ ಜನಮೇಜಯನು ಯಜ್ಞವನ್ನು ಮಾಡಿದನು ಮತ್ತು ಋಷಿ ವೈಶಂಪಾಯನನು ಮೊದಲನೆಯ ಬಾರಿಗೆ *ಮಹಾಭಾರತ*ವನ್ನು ಹೇಳಿದ್ದೂ ತಕ್ಷಶಿಲೆಯಲ್ಲಿಯೇ.

ಹೀಗೆಯೇ, ಅನಂತರ ಕಾಲದಲ್ಲಿ ಬ್ರಾಹ್ಮಣಧರ್ಮದ ಜೊತೆಯಾಗಿ ಬೌದ್ಧ ಧರ್ಮವು ಇಂಡಿಯಾ, ಪಾಕಿಸ್ಥಾನ, ಅಫ್‌ಘಾನಿಸ್ಥಾನ ಮತ್ತು ಮಧ್ಯ ಏಷ್ಯಾಗಳಲ್ಲಿ ಸಾಂಸ್ಕೃತಿಕ ಸಂಬಂಧದ ಹೊಸ ನಂಟುಗಳನ್ನು ಬೆಸೆಯಿತು. ಅದರ ಅಸಂಖ್ಯಾತ ಸ್ಮಾರಕ ಭವನಗಳು, ಸ್ತೂಪಗಳು, ದೇವಾಲಯಗಳು ಮತ್ತು ವಿಹಾರಗಳು ಈ ಪ್ರದೇಶಗಳಲ್ಲೆಲ್ಲ ಹರಡಿವೆ. ಫಾಹಿಯಾನ್, ಯುವಾನ್ ಚಾಂಗ್ ಮುಂತಾದ ಚೀನಿ ಯಾತ್ರಿಕರು ಇವುಗಳನ್ನು ಕಂಡಿದ್ದರು. ಪುರಾತತ್ತ್ವಶಾಸ್ತ್ರಜ್ಞರು ಮಾಡಿರುವ ಉತ್ಖನನಗಳಿಂದಲೂ, ಸರ್. ಆರೆಲ್ ಸ್ಟೈನ್ ಮೊದಲಾದ ಅನ್ವೇಷಕರಿಂದಲೂ ಇವೆಲ್ಲ ಇಂದಿಗೂ ಗುರುತಿಸಲ್ಪಡುತ್ತಿವೆ.

ರಾಷ್ಟ್ರಗಳು ತಮ್ಮ ಜನರ ಜೀವನದಲ್ಲಿ ಆಳವಾಗಿ ಬೇರುಬಿಟ್ಟಿರುವ ಈ ಏಕತಾಭಾವಗಳನ್ನು ಗೌರವಿಸಿ ಕಾಪಾಡಬೇಕು ಮತ್ತು ಪ್ರೋತ್ಸಾಹಿಸಬೇಕು. ತೌಲನಿಕವಾಗಿ ಮೇಲ್ಪದರದಲ್ಲಿರುವ ಮತ್ತು ರಾಜಕೀಯಕ್ಕೆ ಸೀಮಿತವಾಗಿರುವ ಭೇದಗಳನ್ನು ರಾಷ್ಟ್ರಗಳು ಎತ್ತಿಹಿಡಿಯಬಾರದು, ಏಕೆಂದರೆ ಜೀವನದ ಎಲ್ಲ ಆಸಕ್ತಿಗಳನ್ನು ರಾಜಕೀಯವು ಪೂರೈಸಲಾರದು.

ಸಂಸ್ಕೃತಿಯ ಕ್ಷೇತ್ರ ಹೆಚ್ಚು ವಿಶಾಲವಾಗಿದ್ದು, ವ್ಯಾಪಕ ಸಂಶ್ಲೇಷಣೆಯಲ್ಲಿ ಎಲ್ಲ ಭೇದಗಳನ್ನೂ ನಿವಾರಿಸಿ ಹೊಂದಿಸುತ್ತದೆ. ಇಸ್ಲಾಂ, ಹಿಂದೂ, ಜೈನ, ಬೌದ್ಧ, ಸಿಖ್ ಮುಂತಾದ ವಿಭಿನ್ನ ಮತಗಳಿಗೆ ಸೇರಿದ ಯಾತ್ರಿಕರ ಪವಿತ್ರ ಸ್ಥಳಗಳು,

ಮಸೀದಿಗಳು, ದೇವಾಲಯಗಳು ಮತ್ತು ಗುರುದ್ವಾರಗಳು ಅಫ್‌ಘಾನಿಸ್ಥಾನದಿಂದ ಸಿಲೋನಿನವರೆಗೂ ಇರುವ ವಿಶಾಲ ಭೂಮಿಯಲ್ಲಿ ಹಂಚಿ ಹರಡಿಹೋಗಿವೆ. ಬೇರೆ ಬೇರೆ ರಾಷ್ಟ್ರಗಳ ಆಳ್ವಿಕೆಯಲ್ಲಿ ಆ ಪ್ರದೇಶಗಳಿವೆ. ಯಾತ್ರಿಕರಿಗೆ ಆ ರಾಷ್ಟ್ರಗಳು ಆ ಪವಿತ್ರ ಸ್ಥಳಗಳಿಗೆ ಭೇಟಿ ನೀಡಲು ಎಲ್ಲ ಪ್ರೋತ್ಸಾಹವನ್ನೂ ಕೊಡಬೇಕು. ಆ ಪ್ರದೇಶಗಳ ಹಿತಕಾರಿಯೂ ಐಕ್ಯದಾಯಿಯೂ ಆದ ಪ್ರಭಾವವನ್ನು, ವಿಶ್ವಭ್ರಾತೃತ್ವದ ಭಾವನೆಯನ್ನು ಉಂಟುಮಾಡಲು ಮತ್ತು ಹರಡಲು ಅನುಕೂಲತೆಯನ್ನು ಕಲ್ಪಿಸಬೇಕು.

ಭಾರತದೊಳಗೆ ಸಮಗ್ರ ಭಾರತದ ಐಕ್ಯದೃಷ್ಟಿಯನ್ನು ಬೆಳೆಸುವುದನ್ನು ಅದರ ಎಲ್ಲ ನಾಗರಿಕರೂ ಒಂದು ಧಾರ್ಮಿಕ ಕರ್ತವ್ಯವೆಂದು ಭಾವಿಸಬೇಕು. ಭಾರತ ಒಂದು ಪ್ರಬಲ ರಾಷ್ಟ್ರವಾಗಿ ಬೆಳೆಯಲು ದೊಡ್ಡ ಅಡ್ಡಿಯಾಗುವ ಸ್ಥಳೀಯ ಸಂಕುಚಿತ ಭಾವನೆಯನ್ನೂ ಪ್ರಾಂತೀಯತೆಯನ್ನೂ ಕುಗ್ಗಿಸಲು ಯತ್ನಿಸಬೇಕು.

ಇಂಥ ವಿಶಾಲ ಆಧ್ಯಾತ್ಮಿಕ ದೃಷ್ಟಿಕೋನವನ್ನು ಪೋಷಿಸಲು ಹಿಂದೂ ವ್ಯಕ್ತಿಯು ತನ್ನ ಪವಿತ್ರಗ್ರಂಥಗಳಿಂದ ಪ್ರೇರಣೆಯನ್ನು ಪಡೆಯಬಹುದೆಂಬುದು ಒಂದು ಸುದೈವ. ಅನೇಕ ವಿಧಗಳಲ್ಲಿ ಪ್ರಸ್ತುತವಾದ ಭಾರತಮಾತೆಯನ್ನು ಸಾಕಾರರೂಪದಲ್ಲಿ ಪೂಜಿಸಲು ಆ ಗ್ರಂಥಗಳು ನೆರವಾಗುತ್ತವೆ. ಎಲ್ಲ ವೈಭವ ಮತ್ತು ವೈಶಾಲ್ಯಗಳನ್ನು ಒಳಗೊಂಡಿರುವ ಅವಳ ವಿರಾಟ್–ದೇಹವನ್ನು ಈ ಪಾವನ ಪ್ರಥಮ ಮಂತ್ರದ ಉಚ್ಚಾರಣೆಯಿಂದ ಧ್ಯಾನಿಸಬಹುದು.

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।
ನರ್ಮದೇ ಸಿಂಧು ಕಾವೇರಿ ಜಲೇಽಸ್ಮಿನ್ ಸನ್ನಿಧಿಂ ಕುರು ॥

ದೇಶಮಾತೆಯ ಪೂಜೆ ಹಿಂದೂಧರ್ಮದ ಒಂದು ಭಾಗ. ಅದರ ಗ್ರಂಥಗಳೂ ಪ್ರಾರ್ಥನೆಗಳೂ ರಾಜಕೀಯಕ್ಕೆ ಒಳಪಟ್ಟಿಲ್ಲ. ಆತ್ಮವು ಜಡವಸ್ತುಗಳನ್ನು ಮೀರಿ ವಿಜಯಿಯಾಗಬೇಕು. ಚಿಂತನೆಯು ಬಹುಮುಖಿ ಮತ್ತು ವಿಶ್ವವ್ಯಾಪಿ. ವಿಶ್ವಭ್ರಾತೃತ್ವದ ಭಾವನೆಯನ್ನು ಪೋಷಿಸಲು ಎಲ್ಲ ಸಾಧನಗಳನ್ನೂ ಮಾನವಕುಲವು ಬಳಸಿಕೊಳ್ಳಬೇಕು.

* * * *

೨. ತಾರ್ಕಿಕ ನೆಲೆ

೧. ರಾಷ್ಟ್ರೀಯತೆಗೆ ಬೇಕಾದ ಮೊದಲನೆಯ ಅಂಶ ಎಲ್ಲರಿಗೂ ಸೇರಿದ ಒಂದು ದೇಶವು ಇರಬೇಕು. ಎಲ್ಲ ರಾಷ್ಟ್ರೀಯ ಅಭಿವೃದ್ಧಿಗೂ ಮೊದಲನೆಯ ಆವಶ್ಯಕತೆ ಎಂದರೆ ಎಲ್ಲರಿಗೂ ಸಮಾನವಾಗಿ ಸೇರಿದ ಮಾತೃಭೂಮಿ. ಸಮಗ್ರ ಭಾರತದ ಎಲ್ಲ ಭಾರತೀಯರೂ ಇದು ನಮ್ಮ ಮಾತೃಭೂಮಿ ಎಂಬುದನ್ನು ಅರಿತುಕೊಂಡು ಅದಕ್ಕೆ ನಿಷ್ಠೆಯನ್ನು ಹೊಂದಿ ಸೇವೆಯನ್ನು ಸಲ್ಲಿಸುವುದು ಭಾರತ ರಾಷ್ಟ್ರದ ನಿರ್ಮಾಣಕ್ಕೆ ಅತ್ಯಗತ್ಯ.

೨. ಆದರೆ ಭಾರತವು ಒಂದು ಏಕತೆಯುಳ್ಳ ದೇಶವೇ? ಈ ವಿಷಯದಲ್ಲಿ ಯೂರೋಪಿನ ಮತ್ತು ಆಂಗ್ಲೋಇಂಡಿಯನ್ ವಿದ್ವಾಂಸರ ಅಭಿಪ್ರಾಯ ಭೇದ.

೩. ಭಾರತದ ಬೃಹತ್ತು ಮತ್ತು ವೈವಿಧ್ಯದಿಂದ ಅದರ ಭೌಗೋಳಿಕ ಏಕತೆಯು ಮರೆಯಾಗುತ್ತದೆ. ಅದರ ವೈಶಾಲ್ಯ ಮತ್ತು ವಿವಿಧತೆ, ವೈವಿಧ್ಯ ಭಾರತದ ಸಂಪತ್ತಿಗೂ ಶಕ್ತಿಗೂ ಆರ್ಥಿಕ ಸ್ವಾವಲಂಬನೆಗೂ ಸಹಾಯಕವೇ ಆಗಿರುತ್ತದೆ.

೪. ಮೇಲುನೋಟದ ಅವಲೋಕನಕ್ಕೆ ಭಾಗಗಳಲ್ಲಿ ಸಮಸ್ತವು ಕಳೆದುಹೋಗಿದೆ. ಆದರೂ ಭಾರತದ ಮೂಲಭೂತ ಏಕತೆಯನ್ನು ಹಲವರು ಧೀಮಂತ ವಿದ್ವಾಂಸರು ಅಂಗೀಕರಿಸಿದ್ದಾರೆ.

೫. ಆದರೆ ಈ ಏಕತೆಗೆ ಕಾರಣವನ್ನು ಭಾರತದಲ್ಲಿ ಆಗಿಹೋದ ಬ್ರಿಟಿಷರ ಆಳ್ವಿಕೆಯಲ್ಲಿ ಗುರುತಿಸಲಾಗಿದೆ. ವಸ್ತುತಃ ಭಾರತದ ಏಕತೆ ದೀರ್ಘೇತಿಹಾಸವನ್ನು ಹೊಂದಿದೆ. ಹಿಂದೂಗಳ ಐತಿಹಾಸಿಕ ಪ್ರಜ್ಞೆಯಲ್ಲಿ ಅತಿ ಪುರಾತನ ಕಾಲದಿಂದಲೂ ಅದು ಒಂದು ಮುಖ್ಯಾಂಶವಾಗಿದೆ. ಈ ಏಕತೆಯ ಜ್ಯೇಷ್ಠತಮವಾದ ಅಭಿವ್ಯಕ್ತಿ ಭರತವರ್ಷ ಎಂಬ ಹೆಸರು. ಇದನ್ನು ಪ್ರಾಚೀನ ಹಿಂದೂಗಳು ಈ ದೇಶಕ್ಕೆ ಅನ್ವಯಿಸಿ ಬಳಸಿದ್ದರು. ಈ ಹೆಸರಿನ ಪೂರ್ಣ ಸಾಂಕೇತಿಕತೆಯು ಭಾರತದ ಆರ್ಯೀಕರಣವನ್ನು ಸೂಚಿಸುತ್ತದೆ.

೬. ಭಾರತದ ಭೌಗೋಳಿಕ ಐಕ್ಯವನ್ನು ಪ್ರಾಚೀನ ಹಿಂದೂ ಪ್ರಜ್ಞೆಯ ಮುಂದಿನ ಅಭಿವ್ಯಕ್ತಿಗಳಾದ ವೈದಿಕ ಮತ್ತು ಅನಂತರದ ಸಾಹಿತ್ಯ; ಋಗ್ವೇದದ ನದೀಸೂಕ್ತ

ಮತ್ತು ಅದರ ಭೌಗೋಳಿಕ ಕ್ಷಿತಿಜವನ್ನು ವಿಸ್ತರಿಸುವ ಇತಿಹಾಸಗಳಲ್ಲಿ ಸಪರಿವರ್ತನ ಅಳವಡಿಕೆ; ರಾಷ್ಟ್ರೀಯ ದೈನಿಕ ಪ್ರಾರ್ಥನೆಗಳಲ್ಲಿ ಸೇರಿರುವ ಇತರ ಸ್ತೋತ್ರಗಳು; ಸಮಗ್ರ ಭಾರತದ ವೈಶಿಷ್ಟ್ಯ ಮತ್ತು ಪಾವಿತ್ರ್ಯವನ್ನು ಅರ್ಥಮಾಡಿಕೊಳ್ಳಲಾಗುವ ರೀತಿಯಲ್ಲಿ ಸಾಮಾನ್ಯ ಜನರ ಪ್ರಜ್ಞೆಯನ್ನು ಪ್ರಚೋದಿಸುವಂತೆ ಮಾಡುವುದರಲ್ಲಿ ಆ ಸ್ತೋತ್ರಗಳ ಪ್ರಭಾವ.

೮. ಮಾತೃಭೂಮಿಯ ಬಗೆಗೆ ಉತ್ಕಟ ಭಾವನೆಯು ಸಂಸ್ಕೃತ ಸಾಹಿತ್ಯದಲ್ಲಿ ಮತ್ತೆ ಮತ್ತೆ ಅಭಿವ್ಯಕ್ತವಾಗಿದೆ.

೯. ಈ ದೇಶದಲ್ಲಿ ಎಲ್ಲೆಲ್ಲೂ ವ್ಯಾಪಿಸಿರುವ ದೇವಾಲಯಗಳ ಮತ್ತು ಪವಿತ್ರ ಸ್ಥಳಗಳ ಸಮವಾಯದಲ್ಲಿ ಈ ಉತ್ಕಟ ಭಾವನೆಯ ಶಾಶ್ವತ ಹಾಗೂ ವಿಶಿಷ್ಟವಾಗಿ ಭಾರತೀಯವೆನಿಸುವ ಅಭಿವ್ಯಕ್ತಿಯು ಇದೆ. ಮಾತೃಭೂಮಿಯಲ್ಲಿರುವ ಪ್ರೇಮದ ಕುರುಹಾಗಿ, ಕಲೆ ಮತ್ತು ವಾಸ್ತುಶಿಲ್ಪಗಳ ಪ್ರಶಂಸೆಯ ದ್ಯೋತಕವಾಗಿ ತೀರ್ಥಯಾತ್ರೆಯ ಪರಿಕಲ್ಪನೆ ದೃಢವಾಗಿದೆ; ಆಧುನಿಕ ಪ್ರಯಾಣ ಸೌಲಭ್ಯಗಳ ಯುಗಕ್ಕೆ ಮುಂಚೆ ಹಿಂದಿನ ಕಾಲದಿಂದ ದೇಶದ ನಿಕಟ ಜ್ಞಾನವನ್ನು ಪಡೆದುಕೊಳ್ಳುವ ಮಾರ್ಗವಾಗಿತ್ತು ತೀರ್ಥಯಾತ್ರೆ; ಸಂಸ್ಕೃತ ಸಾಹಿತ್ಯದಲ್ಲಿ ಕಂಡುಬರುವ ಪವಿತ್ರ ಸ್ಥಳಗಳ ಪಟ್ಟಿಗಳು ಭಾರತದ ಪ್ರತಿಯೊಂದು ಭಾಗದೊಡನೆ ಇದ್ದ ಸಂಪೂರ್ಣ ಪರಿಚಯವನ್ನು ತೋರಿಸುತ್ತವೆ.

೧೦. ಮಾತೃಭೂಮಿಗೆ ಹಿಂದುಗಳು ತೋರಿಸುವ ಪ್ರೀತಿಗೆ ಸರಿಸಮವಾಗಿ ಅದೇ ಭಾವನೆಯನ್ನು ಪ್ರತಿಬಿಂಬಿಸುವ ಹಲವಾರು ಬೌದ್ಧ ಸ್ಮಾರಕಗಳು ಸಮಗ್ರ ಭಾರತದೇಶವನ್ನು ಚಂದಗೊಳಿಸಿವೆ. ಈ ಸ್ಮಾರಕಗಳ ಸಂಖ್ಯೆಗಳು ಸಮಾನ ಮನೋಭಾವದಿಂದ ಒಗ್ಗೂಡಿರುವ ವಿಶಾಲ ಪ್ರದೇಶಕ್ಕೆ ಸೂಚಕವಾಗಿರುತ್ತದೆ.

೧೧. ಸಮಗ್ರ ಭಾರತ ದೇಶದ ಭೌಗೋಳಿಕ ಜ್ಞಾನ ಮತ್ತು ಅದರ ಪರಿಣಾಮದಿಂದ ಉಂಟಾದ ಏಕತೆಯ ದರ್ಶನವು ಅನೇಕ ಶತಮಾನಗಳಲ್ಲಿ ಉಂಟಾದ ಬೆಳವಣಿಗೆ.

೧೨. ಈ ಜ್ಞಾನದ ಬೆಳವಣಿಗೆಯ ಇತಿಹಾಸ; ವೇದಕಾಲದಲ್ಲಿದ್ದ ಭೌಗೋಳಿಕ ಕ್ಷಿತಿಜ; ಐತರೇಯ ಬ್ರಾಹ್ಮಣದಲ್ಲಿ ವೇದಕಾಲೀನ ಭಾರತದ ಸೀಮೆಗಳ ವಿಸ್ತರಣೆ.

೧೩. ದಕ್ಷಿಣ ಭಾರತವನ್ನು ವಸಾಹತಾಗಿ ಮಾಡಿಕೊಂಡ ಸಂಭವನೀಯ ಅವಧಿ; ಪಾಣಿನಿ ಮತ್ತು ಪ್ರಾಚೀನತಮ ಪಾಲಿಗ್ರಂಥಗಳ ಆಧಾರವಾಕ್ಯಗಳು; ವೇದಕಾಲೀನ ಅವಧಿ ಮತ್ತು ಆದಿಮ ಬೌದ್ಧ ಅವಧಿಗಳ ಮಧ್ಯಕಾಲದಲ್ಲಿ ಭೌಗೋಳಿಕ ಕ್ಷಿತಿಜ.

೧೪. ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲಾಗಲೇ ಸಮಗ್ರ ಭಾರತವು ಜನರಿಗೆ ವಿದಿತವಾಗಿತ್ತು; ಕಾತ್ಯಾಯನನ ಮತ್ತು ಗ್ರೀಕರ ಪುರಾವೆಗಳು; ಕೌಟಿಲ್ಯನ ಅರ್ಥಶಾಸ್ತ್ರವು ಒದಗಿಸುವ ಭೌಗೋಳಿಕ ಮಾಹಿತಿಗಳು; ಅಶೋಕನ ಶಾಸನಗಳಲ್ಲಿರುವ ಭೂಗೋಳಸಂಬಂಧಿ ವಿಷಯಗಳು.

೧೫. ಪತಂಜಲಿ (ಕ್ರಿ.ಪೂ. ೧೫೦), ರಾಮಾಯಣ ಮತ್ತು ಮಹಾಭಾರತಗಳು ತಿಳಿಸುವ ಭೌಗೋಳಿಕಾಂಶಗಳು.

೧೬. ಪುರಾಣಗಳಲ್ಲಿ ಭೂಗೋಳ; ಭಾರತದ ಎಲ್ಲ ಪ್ರದೇಶಗಳ ನಿಖರ ಜ್ಞಾನವನ್ನು ಸೂಚಿಸುವ ವರಾಹಮಿಹಿರನ ಬೃಹತ್‌ಸಂಹಿತೆ.

೧೭. ಕಾಳಿದಾಸನ ಕೃತಿಗಳಲ್ಲಿ ಭೌಗೋಳಿಕ ಜ್ಞಾನ; ಭಾರತೀಯ ಭೌಗೋಳಿಕ ಜ್ಞಾನದ ಬೆಳವಣಿಗೆಯ ಅಂತ.

೧೮. ಸಮಗ್ರ ದೇಶದ ಏಕತೆಯನ್ನು ಪೋಷಿಸಿದುದು ಮೇಲೆ ಸೂಚಿಸಲಾಗಿರುವಂತೆ ಧರ್ಮ ಮಾತ್ರ ಅಲ್ಲ, ರಾಜಕೀಯವೂ ಅದನ್ನು ಪೋಷಿಸಿತು; ಸಮಗ್ರ ದೇಶದ ಮೇಲೆ ಆಳ್ವಿಕೆಯನ್ನು ನಡೆಸಿದ ಮತ್ತು ಪರಿಣಾಮತಃ ಅದನ್ನು ಒಂದು ಘಟಕವೆಂದು ಭಾವಿಸಿ ಉಪಯೋಗಿಸಿದ ಸಾಮ್ರಾಟರು; ಅವರಲ್ಲಿ ಚಂದ್ರಗುಪ್ತನು ಪ್ರಥಮನೆಂದು ಸಾಮಾನ್ಯವಾಗಿ ನಂಬಲಾಗಿದೆ.

೧೯. ಆದರೂ ಸಮಗ್ರ ಭಾರತವರ್ಷದಲ್ಲಿ ಪರಮ ಪ್ರಭುತ್ವವನ್ನು ಹೊಂದಿರುವ ಸಾಮ್ರಾಟನ ಅಧಿಕಾರದ ವ್ಯವಸ್ಥೆ ಚಂದ್ರಗುಪ್ತನಿಗಿಂತ ಹೆಚ್ಚು ಪ್ರಾಚೀನ; ಪ್ರಾಚೀನ ಭಾರತೀಯರಿಗೆ ಅದು ಸುಪರಿಚಿತವಾಗಿದ್ದ ರಾಜಕೀಯ ವಿಚಾರ; ಈ ಬಗೆಗೆ ಪುರಾವೆಗಳು; ವೈದಿಕ ಸಾಹಿತ್ಯದಲ್ಲಿ ಪರಮಾಧಿಕಾರವುಳ್ಳ ಚಕ್ರವರ್ತಿಯ ಲಕ್ಷಣಗಳು.

೨೦. ರಾಜನ ಪ್ರಭುಶಕ್ತಿಯ ಬಗೆಗೆ ಐತರೇಯ ಬ್ರಾಹ್ಮಣ ಮತ್ತು ಶುಕ್ರನೀತಿಯಲ್ಲಿ ವಿವರಣೆಗಳು; ಪರಮಾಧಿಕಾರವುಳ್ಳ ಪ್ರಭುವನ್ನು ಕುರಿತು ಹೇಳುವ ವೇದಸಾಹಿತ್ಯದ ಮಾತುಗಳು.

೨೧. ಮತ್ತೆ ಕೆಲವು ವೇದಸಾಹಿತ್ಯದ ಪುರಾವೆಗಳು; ಚಕ್ರವರ್ತಿಯ ಪಟ್ಟಾಭಿಷೇಕಕ್ಕೆ ವಿಶೇಷವಾಗಿ ವಿಹಿತವಾದ ವಿಶೇಷ ವಿಧಿಗಳು; ವಾಜಪೇಯ ಯಾಗದ ಪ್ರಕ್ರಿಯೆಯ ವಿವರಗಳು ಮತ್ತು ಸಾಂಕೇತಿಕತೆ.

೨೨. ರಾಜಸೂಯಯಾಗದ ಪ್ರಕ್ರಿಯೆಯ ಸಾಂಕೇತಿಕಾರ್ಥ.

೨೩. ಐತರೇಯ ಬ್ರಾಹ್ಮಣದಲ್ಲಿ ಬಣ್ಣಿಸಲ್ಪಟ್ಟ ಚಕ್ರವರ್ತಿಯ ಆಳ್ವಿಕೆಯ ಆರಂಭದ ಸಾಂಕೇತಿಕಾರ್ಥ.

೨೪. ಹಿಂದೂ ರಾಜತ್ವದ ಆದರ್ಶ ವಿಶ್ವ ಚಕ್ರವರ್ತಿತ್ವಕ್ಕೆ ಕಡಿಮೆಯಿರಲಿಲ್ಲ. ಆಗ ಅದರ ಅರ್ಥ ಕನಿಷ್ಠಪಕ್ಷದಲ್ಲಿ ಸಮುದ್ರಗಳವರೆಗೆ ವ್ಯಾಪಿಸಿದ್ದ ಸಮಗ್ರ ಭಾರತ

ವರ್ಷವಾದರೂ ಆಗಿತ್ತು; ಪ್ರಾದೇಶೀಕ ಸಂಶ್ಲೇಷಣೆಯ ಪ್ರಜ್ಞೆಯು ರಾಜಕೀಯ ಸಂಯೋಜನೆಗೆ ಕಾರಣವಾಗುತ್ತದೆ; ಅದರಿಂದ ಪ್ರಾದೇಶಿಕ ಏಕತೆಯೂ ದೃಢವಾಗುತ್ತದೆ.

೨೫. ಸಮಗ್ರ ಭಾರತದ ಸಾಮ್ರಾಟನ ಆದರ್ಶಗಳು ಸಂಸ್ಕೃತ ಸಾಹಿತ್ಯದಲ್ಲಿ ಸಂಕ್ಷಿತವಾಗಿವೆ; ಆ ಪರಿಕಲ್ಪನೆಯ ವಾಸ್ತವಿಕ ನಿದರ್ಶನಗಳೂ ಅದರಲ್ಲಿವೆ; ಅಂಥ ಸಾಮ್ರಾಟರ ಅಥವಾ ಚಕ್ರವರ್ತಿಗಳ ಪಟ್ಟಿಗಳು ಐತರೇಯ ಬ್ರಾಹ್ಮಣ, ಶತಪಥ ಬ್ರಾಹ್ಮಣ ಮತ್ತು ಸಾಂಖ್ಯಾಯನ ಸೂತ್ರಗಳಲ್ಲಿವೆ.

೨೬. ಅಂಥ ಚಕ್ರವರ್ತಿಗಳ ಪಟ್ಟಿಗಳು ಪುರಾಣಗಳಲ್ಲೂ ಮಹಾಭಾರತದಲ್ಲೂ ಇವೆ. ಅರ್ಥಶಾಸ್ತ್ರದಲ್ಲಿ ಸಮಗ್ರ ಭಾರತದ ಪ್ರಭುವಿನ ಪರಿಕಲ್ಪನೆ ಸಿಕ್ಕುತ್ತದೆ.

೨೭. ಪಾಂಡವರು ನಡೆಸಿದ ದಿಗ್ವಿಜಯಗಳು ಯುಧಿಷ್ಠಿರನ ಕೆಳಗೆ ಅವರ ಸಾರ್ವಭೌಮತ್ವಕ್ಕೆ ಕಾರಣವಾದುವು. ಅದರ ಪರಿಣಾಮವಾಗಿ ಭಾರತದ ರಾಜಕೀಯ ಏಕತೆಯು ಸಿದ್ಧವಾಯಿತು.

೨೮. ಯುಧಿಷ್ಠಿರನ ಕಥೆಯ ಮೂಲಕ ಸಮಗ್ರ ಭಾರತದ ಸಾರ್ವಭೌಮತ್ವ ವಿಚಾರವು ಸಾರ್ವಜನಿಕರಿಗೆ ವಿದಿತವಾಯಿತು. ಚಕ್ರವರ್ತಿ ಸಾರ್ವಭೌಮನ ಬಗೆಗೆ ಪ್ರಚಲಿತವಾಗಿದ್ದ ಹಿಂದೂ ಪರಿಕಲ್ಪನೆಯು ಬುದ್ಧನ ವಾಸ್ತವ ಸ್ಥಿತಿ ಮತ್ತು ಕಾರ್ಯದ ಬಗೆಗೆ ಪ್ರಾಚೀನ ಬೌದ್ಧರ ಊಹಾಪೋಹಗಳಿಗೆ ರೂಪ ಕೊಟ್ಟಿತು. ಮಾನವರ ಹೃದಯದಲ್ಲಿರುವ ಧರ್ಮಸಾಮ್ರಾಜ್ಯದಲ್ಲಿ ಸಾರ್ವಭೌಮನೇ ಬುದ್ಧ.

೨೯. ಆದ್ದರಿಂದ ಚಂದ್ರಗುಪ್ತ ಮೌರ್ಯನ ಚಕ್ರವರ್ತಿತ್ವವು ಒಂದು ಪ್ರಾಚೀನ ಪದ್ಧತಿಯ ಬೆಳವಣಿಗೆಯಲ್ಲಿ ಒಂದು ಹಂತ ಮಾತ್ರ; ಈ ವಿಚಾರವು ಹಿಂದೂ ರಾಜಧರ್ಮದ ಗ್ರಂಥಗಳಲ್ಲಿ ಚರ್ಚೆಗೆ ವಿಷಯವಾಯಿತು. ರಾಜನು ರಾಜಾಧಿರಾಜ ಚಕ್ರವರ್ತಿಯಾಗುವುದು ಹೇಗೆ? ಎಂಬ ಪ್ರಶ್ನೆಯನ್ನು ನೀತಿಶಾಸ್ತ್ರಗಳು ವಿಚಾರವಸ್ತುವನ್ನಾಗಿ ಮಾಡಿಕೊಂಡಿವೆ; ರಾಜಕೀಯ ವಲಯದಲ್ಲಿ ಅಧಿಕಾರದ ಸಮತೋಲನದ ಪರಿಕಲ್ಪನೆಯನ್ನು ಅಲ್ಲಿ ವಿವರಿಸಲಾಗಿದೆ.

೩೦. ಸಮಗ್ರ ಭಾರತವನ್ನು ಆಳುವ ಪರಮಾಧಿಕಾರವನ್ನು ಹೊಂದಿ ಚಕ್ರವರ್ತಿಯ ಆದರ್ಶದ ಶಕ್ತಿ ಮತ್ತು ಜನಪ್ರಿಯತೆಗಳಿಗೆ ಶಿಲಾಶಾಸನಗಳಲ್ಲಿರುವ ಪುರಾವೆಗಳು.

೩೧. ಭಾರತದ ಏಕತೆಯನ್ನು ಜನಪ್ರಿಯವಾಗಿ ಮಾಡುವುದರಲ್ಲಿ ಇನ್ನೊಂದು ನಿರ್ಣಾಯಕ ಮಾಹಿತಿ ಏನೆಂದರೆ, ಭಾರತ ಸ್ಥಾಪಿಸಿದ ವಸಾಹತುಗಳು. ಇದು ಸಮುದ್ರೋತ್ತರವಾಗಿಯೂ ವಿಶಾಲತರ ಭಾರತದ ಬೆಳವಣಿಗೆಗೆ ಸಹಕಾರಿಯಾಯಿತು.

೩೨. ಐತಿಹಾಸಿಕಾಂಶಗಳೇ ಅಲ್ಲದೆ, ಭಾರತದ ಭೌಗೋಳಿಕ ಏಕತೆಯನ್ನು ಸಾಧಿಸುವ ಭೌತಿಕ ಅಂಶಗಳೂ ಸತತವಾಗಿ ಕಾರ್ಯನಿಷ್ಠವಾಗಿವೆ; ಭಾರತವನ್ನು ಬಾಹ್ಯ ದೇಶಗಳಿಂದ ಬೇರ್ಪಡಿಸುವ ಅಡ್ಡಗೋಡೆಗಳೊಡನೆ ಅದರ ಒಳಗಿನ ಭಾಗಗಳನ್ನು ಪರಸ್ಪರ ಬೇರ್ಪಡಿಸುವ ಅಡ್ಡಗೋಡೆಗಳನ್ನು ಹೋಲಿಸಿ ನೋಡುವಿಕೆ; ಸಮಾನವಾದ ಭೌತಿಕ ಸ್ಥಿತಿಗಳನ್ನು ಸೃಷ್ಟಿಸುವುದರಲ್ಲಿ ಮಾನ್ ಸೂನ್ ಮಾರುತಗಳ ಪಾತ್ರ.

೩೩. ಭಾರತದ ಭವಿಷ್ಯ ಮತ್ತು ಸಂಕೇತ.

* * * *

೩. ಭಾರತದ ಮೂಲಭೂತ ಏಕತೆ

೧

ಒಂದು ರಾಷ್ಟ್ರದ ನಿರ್ಮಾಣದಲ್ಲಿ ಹಲವಾರು ಮೂಲಾಂಶಗಳು ಆವಶ್ಯಕ; ಉದಾಹರಣೆಗೆ ಸಮಾನ ಭಾಷೆ, ಸಮಾನ ಧರ್ಮ, ಸಮಾನವಾದ ಸರ್ಕಾರ, ಸಮಾನ ಸಂಸ್ಕೃತಿ ಹಾಗೂ ಒಂದೇ ಸಾಮಾಜಿಕ ಆರ್ಥಿಕ ವ್ಯವಸ್ಥೆ. ಆದರೆ, ಪ್ರಾಯಶಃ ಅತ್ಯಂತ ಮೂಲಭೂತವಾದ ಮತ್ತು ಅನಿವಾರ್ಯವಾದ ಅಂಶವೆಂದರೆ ಒಂದು ಸಮಾನದೇಶ, ನಿಯಮಿತವೂ ನಿಶ್ಚಿತವೂ ಆದ ವಾಸಸ್ಥಳ. ರಾಷ್ಟ್ರೀಯತೆಗೂ ಭೌತಿಕವಾದ ವಾಸ್ತವ ಆಧಾರವು ಬೇಕು, ಅದಿಲ್ಲದೆ ರಾಷ್ಟ್ರೀಯತೆ ರೂಪಗೊಳ್ಳಲಾರದು, ಒಂದು ಸತ್ಯವಾದ ಅಸ್ತಿತ್ವವಾಗಿ ಒಂದು ರಾಜಕೀಯ ಪ್ರಪಂಚದ ಒಂದು ಅಂಶವಾಗಿ ಅದು ತನ್ನನ್ನು ತೋರಿಸಿಕೊಳ್ಳಲಾರದು. ಅಲೆಮಾರಿ ಜನಾಂಗಗಳು ನಿಶ್ಚಿತವಾದ ನಿವಾಸಸ್ಥಾನಕ್ಕೆ ಬದ್ಧರಾಗಿ ತಮ್ಮ ವಲಸೆ ಹೋಗುವ ವಾಡಿಕೆಗಳನ್ನೂ ರೂಢಿಗಳನ್ನೂ ಬಿಡುವವರೆಗೆ ಯಾವುದೇ ನಾಗರಿಕತೆಯನ್ನು ಹೇಳಿಕೊಳ್ಳುವ ಹಾಗೆ ಬೆಳೆಸಿಕೊಂಡಿರುವ ಬಗೆಗೆ ಇತಿಹಾಸವು ಯಾವ ದಾಖಲೆಯನ್ನೂ ತೋರಿಸಿಲ್ಲ. ಹೀಬ್ರೂ (ಭಾಷೆಯನ್ನು ಆಡುತ್ತಿದ್ದ ಯಹೂದಿ) ಜನರು ಮೋಸೆಸ್‌ನಿಂದ ರಾಜಕೀಯ ತರಬೇತಿಯನ್ನು ಪಡೆದುಕೊಂಡರೂ, ಅವರನ್ನು ಜೋಷುವಾ ಪ್ಯಾಲೆಸ್ಟೈನಿನಲ್ಲಿ ನೆಲೆಸುವಂತೆ ಮಾಡುವವರೆಗೆ ಯಾವ ಪ್ರಗತಿಯನ್ನೂ ಸಾಧಿಸಲಾಗಲಿಲ್ಲ. ಅದೇ ರೀತಿಯಾಗಿ ಯೂರೋಪಿನಲ್ಲಿ ಬರ್ಬರ ಜನಾಂಗಗಳವರು ತಮ್ಮ ಹಳೆಯ ನಿವಾಸಸ್ಥಾನಗಳನ್ನು ತ್ಯಜಿಸಿ ರೋಮ್‌ನ ಸಾಮ್ರಾಜ್ಯವನ್ನು ಆಕ್ರಮಿಸಿ ಅವ್ಯವಸ್ಥೆಗೊಳಿಸಿದರು. ಆದರೆ ಅವರು ಯಾವ ಖಚಿತ ಪ್ರದೇಶದಲ್ಲೂ ನೆಲೆಯಾಗಿರಲಿಲ್ಲ– ಈ ಕಾಲವನ್ನೇ ಇತಿಹಾಸಜ್ಞರು 'ಅಂಧಕಾರಯುಗ' (Dark Ages) ಎಂದು ಕರೆದಿದ್ದಾರೆ.

ಥೆಮಿಸ್ಟೋಕಲ್ಸ್‌ನ ನೇತೃತ್ವದಲ್ಲಿ ಅಥೀನಿಯನ್ನರು ಅಥೆನ್ಸ್ ರಾಜ್ಯವನ್ನು ತಮ್ಮ ಹಡಗುಗಳ ಮೇಲೆ ಉಳಿಸಿಕೊಂಡರು, ಏಕೆಂದರೆ ವಿಜಯವನ್ನು ಪಡೆದುಕೊಂಡ ಮೇಲೆ ಅವರು ತಮ್ಮ ನಗರವನ್ನು ವಶಪಡಿಸಿಕೊಂಡರು; ಆದರೆ ಟ್ಯೂಟನ್ನರು ಮತ್ತು ಸಿಂಬ್ರಗಳು ನಶಿಸಿಹೋದರು. ಏಕೆಂದರೆ ಅವರು ತಮ್ಮ ಹಿಂದಿನ ನಿವಾಸ ಸ್ಥಾನಗಳನ್ನು ಬಿಟ್ಟರು, ಹೊಸ ನಿವಾಸಸ್ಥಾನಗಳನ್ನು ಗೆದ್ದುಕೊಳ್ಳಲು ಶಕ್ತರಾಗಲಿಲ್ಲ.

ಹಿಂದೂ ತತ್ತ್ವಶಾಸ್ತ್ರವು ಹೇಳುವಂತೆ ಆತ್ಮವು ದೇಹಧಾರಣೆಯನ್ನು ಮಾಡಿಕೊಳ್ಳುತ್ತದೆ. ದೇಹದ ಮೂಲಕವಾಗಿ ಆತ್ಮವು ಎಲ್ಲ ಕೆಲಸವನ್ನು ಮಾಡುತ್ತದೆ. ತನ್ನನ್ನು ಅಭಿವ್ಯಕ್ತಿಸಿಕೊಳ್ಳಲು ಮತ್ತು ಬಾಹ್ಯ ಭೌತಿಕ ಪ್ರಪಂಚದಲ್ಲಿ ರೂಪದಳೆಯಲು ಆತ್ಮಕ್ಕೆ ಒಂದು ವಾಹನ ಅಥವಾ ಸಾಧನ, ಒಂದು ಭೌತಿಕ ಚೌಕಟ್ಟು ಬೇಕು. ರಾಷ್ಟ್ರೀಯತೆಯ ಭಾವನೆಯ ವಿಷಯದಲ್ಲೂ ಈ ತತ್ತ್ವವು ಅನ್ವಯಿಸುವುದೆಂದು ತೋರುತ್ತದೆ. ಒಂದು ರಾಷ್ಟ್ರ ಹುಟ್ಟಬೇಕಾದರೆ ಮತ್ತು ಬೆಳೆಯಬೇಕಾದರೆ ಪ್ರಥಮ ಆವಶ್ಯಕತೆ ಏನೆಂದರೆ ನೆಲದ ನಿಶ್ಚಿತತೆ, ಸ್ಥಿರತೆ ಮತ್ತು ಶಾಶ್ವತತೆ. ಇವಿಷ್ಟು ಖಚಿತವಾದಾಗ ರಾಷ್ಟ್ರನಿರ್ಮಾಣದ ಇತರ ಶಕ್ತಿಗಳು ತಾವಾಗಿ ಗೋಚರವಾಗಿ ಯೋಗ್ಯ ಸಮಯದಲ್ಲಿ ಉಪಲಬ್ಧವಾಗುತ್ತವೆ. ಎಲ್ಲ ರಾಷ್ಟ್ರಾಭಿವೃದ್ಧಿಗೂ ಎಲ್ಲರಿಗೂ ಸೇರಿದ ಮಾತೃಭೂಮಿ ಪ್ರಪ್ರಥಮಾವಶ್ಯಕತೆ. ಜೀವಂತವಾಗಿರುವ ಆ ಕೇಂದ್ರದ ಸುತ್ತಲೂ ಎಲ್ಲ ಭಾವನೆಗಳು, ಸಂಬಂಧಗಳು, ಸಂಪ್ರದಾಯಗಳು ಮತ್ತಿತರ ಮೂಲಾಂಶಗಳು ಬಂದು ಸೇರುತ್ತವೆ. ಇವು ಜನರ ಭಾಷೆ, ಸಾಹಿತ್ಯ, ಧರ್ಮ ಮತ್ತು ಸಂಸ್ಕೃತಿಗಳನ್ನು ರಚಿಸುತ್ತವೆ ಹಾಗೂ ತನ್ಮೂಲಕ ಆ ರಾಷ್ಟ್ರದ ಪ್ರತ್ಯೇಕ ಅಸ್ತಿತ್ವವನ್ನೂ ವೈಯಕ್ತಿಕತೆಯನ್ನೂ ರೂಪಿಸುತ್ತವೆ. ಒಂದು ಬೆಲೆಬಾಳುವ ಸಾಂಸ್ಕೃತಿಕ ಘಟಕವಾಗಿ ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಮತ್ತು ಸ್ವತಂತ್ರ ಅಭಿವೃದ್ಧಿಗಾಗಿ ಬೇಡಿಕೆಯನ್ನು ಸೃಷ್ಟಿಸುತ್ತವೆ. ಸಮಾನ ದೇಶದ ಮತ್ತು ಸಮಾನ ಪ್ರಾಕೃತಿಕ ಸನ್ನಿವೇಶಗಳ ಏಕೀಕರಣ ಪ್ರಭಾವ ನಿಜವಾಗಿಯೂ ಪ್ರತಿರೋಧರಹಿತವಾದದ್ದು. ಇತರ ವಿಭಜನಕಾರಕ ವಿಚ್ಛಿದ್ರಕಾರಕ ಶಕ್ತಿಗಳು ಮತ್ತು ಪ್ರವೃತ್ತಿಗಳಾದ ವ್ಯವಹಾರ–ಸಂಪ್ರದಾಯ–ಭಾಷಾ–ಧರ್ಮಗಳ ಭೇದಭಾವನೆಗಳಿಗೆ ವಿರುದ್ಧವಾಗಿ ಆ ಪ್ರಭಾವವು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ ಎಂದು ನಿಶ್ಶಂಕವಾಗಿ ಹೇಳಬಹುದು.

ಈಗ ಭಾರತವು ಒಂದು ಸ್ವತಂತ್ರ ಸಾರ್ವಭೌಮ ಪ್ರಭುತ್ವವುಳ್ಳ ದೇಶ. ಅದರ ಪ್ರಜೆಗಳನ್ನು ವಿಭಜಿಸುವ ಜನಾಂಗೀಯ, ಧಾರ್ಮಿಕ ಮತ್ತು ಭಾಷಾಸಂಬಂಧಿ ಭೇದಗಳು ಸೃಷ್ಟಿಸುವ ಶಕ್ತಿಗಳಿಗೆ ವಿರುದ್ಧವಾಗಿ ಆಂತರಿಕ ಸಂಲಗ್ನತೆಯನ್ನೂ ಏಕತೆಯನ್ನೂ ಬಲಪಡಿಸುವುದೇ ಭಾರತದ ಸಮಸ್ಯೆಗಳಲ್ಲಿ ಅತ್ಯಂತ ಮುಖ್ಯವಾದುದು. ನಮಗೆ ಪ್ರೀತಿಸುವುದಕ್ಕೂ ಸೇವೆಯನ್ನು ಸಲ್ಲಿಸುವುದಕ್ಕೂ ನಮ್ಮೆಲ್ಲರಿಗೂ ಸೇರಿದ ಒಂದು ದೇಶವಿದೆ, ನಾವೆಲ್ಲರೇ ಒಬ್ಬಳೇ ಭಾರತಮಾತೆಯ ಮಕ್ಕಳು, ನಾವೆಲ್ಲ ಒಂದೇ ಮಣ್ಣಿನ ಮಕ್ಕಳು ಎಂದು ಜನರೆಲ್ಲರೂ ಮೊದಲು ಅರ್ಥ ಮಾಡಿಕೊಳ್ಳದಿದ್ದರೆ ಮತ್ತು ಭಾವಿಸದಿದ್ದರೆ, ಅವರನ್ನು ಒಂದು ಜೀವಂತರಾಷ್ಟ್ರವಾಗಿ ಮತ್ತು ಬಲಿಷ್ಠ ರಾಜಕೀಯ ಘಟಕವಾಗಿ ಬೆಸೆಯುವುದು ಸಾಧ್ಯವಾಗದು. ಭಾರತದ ನಾಗರಿಕರು, ಅವರಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಭೇದಗಳಿದ್ದರೂ ಕೂಡ, ತಮ್ಮ ತಾಯಿನಾಡಿನ ಬಗೆಗೆ ಜೀವಂತವಾದ ಪರಿಕಲ್ಪನೆಯನ್ನು ಸಜೀವವಾಗಿ ಉಳಿಸಿಕೊಳ್ಳಬೇಕು.

ಭಾರತವನ್ನು ಚಿಕ್ಕಚಿಕ್ಕ ಭಾಷಾವಾರು ಪ್ರಾಂತಗಳಾಗಿ ಛಿದ್ರಗೊಳಿಸುವ ರಾಜಕೀಯ ಚಿಂತನೆಯ ಪ್ರಚಲಿತ ವಿಚಾರಗಳಿಗೆ ವಿರುದ್ಧವಾಗಿ ಆ ಪರಿಕಲ್ಪನೆಯನ್ನು ಜೀವಂತವಾಗಿ ಉಳಿಸಬೇಕು.

ರಾಷ್ಟ್ರೀಯತೆಯ ಭಾವನೆಯನ್ನು ಭಾಷಾವಾದವು ಮೆಟ್ಟಿ ನಿಲ್ಲುವ ದೊಡ್ಡ ಭಯವೂ ಇದೆ. ಅದು ಅಖಿಲ ಭಾರತವು ಒಂದೆಂಬ ಭಾವನೆಯನ್ನು ಬೆಳೆಸುವುದಕ್ಕೆ ವಿರುದ್ಧವಾಗಿ ಆ ಭಾಷಾವಾದವು ಎದ್ದು ನಿಲ್ಲಬಹುದು. ಇದನ್ನು ಭಾರತದ ಪ್ರಧಾನಮಂತ್ರಿ ಪಂಡಿತ್ ಜವಾಹರ್‌ಲಾಲ್ ನೆಹರೂ ತಮ್ಮದೇ ಆದ ಅನುಕರಿಸಲಾಗದ ಶೈಲಿಯಲ್ಲಿ ಹೀಗೆ ಅದನ್ನು ಹೇಳಿದ್ದಾರೆ: "ನಮ್ಮ ಇಂದಿನ ಆದ್ಯ ಕರ್ತವ್ಯಗಳಲ್ಲಿ ಒಂದು ಭಾರತದ ನಿಜವಾದ ಭಾವನಾತ್ಮಕ ಏಕೀಕರಣ. ಹೃದಯಗಳ ಮತ್ತು ಮನಸ್ಸುಗಳ ಈ ಏಕೀಕರಣ ಪ್ರಕ್ರಿಯೆಯನ್ನು ಹೊಸ ರಾಜ್ಯಗಳ ರಚನೆ ಮತ್ತು ಭಾರತದ ರಚನಾತ್ಮಕ ಪುನಸ್ಸಂಘಟನೆ ಯಾವ ರೀತಿಯಲ್ಲೂ ದುರ್ಬಲ ಗೊಳಿಸುವುದಿಲ್ಲ ಎಂದು ನಾನು ಆಶಿಸುತ್ತೇನೆ."

೨

ಆದರೆ ದುರ್ದೈವದಿಂದ ಭಾರತವನ್ನು ಒಂದು ಏಕೀಭೂತ ದೇಶವೆಂದು ಯೋಚಿಸುವುದು ಅಷ್ಟು ಸುಲಭವಾಗಿಲ್ಲ. ಭಾರತವನ್ನು ಒಂದು ಖಂಡದಂತೆ, ಅಥವಾ ಅನೇಕ ದೇಶಗಳ ಸಮೂಹದಂತೆ ತೋರಿಸುವ ಚಿತ್ರವೇ, ಅದು ಒಂದು ದೇಶವೆಂಬುದಕ್ಕಿಂತ ಹೆಚ್ಚಾಗಿ, ಭಾರತೀಯ ಮನಸ್ಸಿಗೆ ಪರಿಚಿತವಾಗಿಬಿಟ್ಟಿದೆ. ಏಕೆಂದರೆ ನಮ್ಮ ಶಾಲೆಗಳಲ್ಲಿ ಕಲಿಸಲ್ಪಡುವ ಭಾರತೀಯ ಭೂಗೋಳ ಶಾಸ್ತ್ರದ ಉನ್ನತ ಮಟ್ಟದ ಪುಸ್ತಕಗಳಲ್ಲೆಲ್ಲ ಅಂಥ ಚಿತ್ರವೇ ಬರೆಯಲ್ಪಟ್ಟಿದೆ. ಭಾರತೀಯ ಶಾಲೆಗಳಿಗಾಗಿ ಬರೆದ ಭೂಗೋಳಶಾಸ್ತ್ರ ಪುಸ್ತಕದ ಒಬ್ಬ ಆಂಗ್ಲ ಗ್ರಂಥಕಾರನು ಅದನ್ನು ಹೀಗೆ ಪರಿಚಯಿಸಿದ್ದಾನೆ.

"ಭಾರತವನ್ನು ಒಂದು ದೇಶವೆಂದು ಭಾವಿಸಿ ಸಾಮಾನ್ಯವಾಗಿ ಮಾತನಾಡುವುದುಂಟು. ಆದರೆ ಅದು ಸತ್ಯವಲ್ಲ... ನಿಜವಾಗಿ ಹೇಳಬೇಕಾದರೆ ಭಾರತ ಹಲವು ದೇಶಗಳ ಸಮುದಾಯ." ಆಂಗ್ಲ ಮಹಾ ವಿದ್ವಾಂಸನಾದ ಜಾನ್ ಸ್ಟ್ರಾಚೇ ಹೇಳುವಂತೆ "ಇಂಡಿಯಾದ ಬಗೆಗೆ ಅರಿಯಬೇಕಾದ ಮೊತ್ತಮೊದಲನೆಯ ಮತ್ತು ಅತ್ಯಂತ ಸಾರಭೂತವಾದ ವಿಷಯವೇನೆಂದರೆ ಎಂದೂ ಒಂದು ಇಂಡಿಯಾ ಎಂಬುದಿರಲಿಲ್ಲ, ಈಗಲೂ ಇಲ್ಲ. ಯೂರೋಪಿನವರ ವಿಚಾರಗಳಿಗೆ ಅನುಗುಣವಾಗಿ ಯಾವುದೇ ವಿಧವಾದ ಭೌತಿಕ, ರಾಜಕೀಯ ಏಕತೆಯನ್ನುಳ್ಳ ಭಾರತದ ಯಾವ ದೇಶವೂ ಇಲ್ಲ." ಆದರೆ, ಈ ವಿಷಯದಲ್ಲಿ ಆಂಗ್ಲ ವಿದ್ವಾಂಸರ ಅಭಿಪ್ರಾಯ ಒಮ್ಮತದಿಂದ ಕೂಡಿಲ್ಲ. ಪ್ರಾಚೀನ ಭಾರತೀಯೇತಿಹಾಸದಲ್ಲಿ ಪ್ರಮಾಣಭೂತನಾದ

ಪ್ರಸಿದ್ಧ ವಿದ್ವಾಂಸ ವಿನ್ಸೆಂಟ್ ಸ್ಮಿತ್ ಅತ್ಯಂತ ವಿಭಿನ್ನ ರೀತಿಯಲ್ಲಿ ತನ್ನ ಅಭಿಪ್ರಾಯವನ್ನು ಬಿತ್ತರಿಸಿದ್ದಾನೆ. "ಪರ್ವತಗಳಿಂದಲೂ ಸಮುದ್ರಗಳಿಂದಲೂ ಸುತ್ತುವರಿಯಲ್ಪಟ್ಟಿರುವ ಭಾರತವು ನಿರ್ವಿವಾದವಾಗಿ ಒಂದು ಭೌಗೋಳಿಕ ಘಟಕವಾಗಿದೆ. ಅದಕ್ಕೆ ಒಟ್ಟಿಗೆ ಒಂದು ಹೆಸರನ್ನು ಕೊಟ್ಟಿರುವುದು ಯುಕ್ತವಾಗಿದೆ." ಭೂಗೋಳದ ವಿಷಯದಲ್ಲಿ ಸುಪ್ರಸಿದ್ಧ ವಿದ್ವಾಂಸ ಚಿಶೋಲ್ಮ್ (Chisholm) ಕೂಡ ಅದರಂತೆಯೇ ಗುಣಾತ್ಮಕವೂ ಒತ್ತಿ ಹೇಳಿರುವುದೂ ಆದ ಈ ಮಾತುಗಳನ್ನು ಹೇಳಿದ್ದಾನೆ: "ಒಂದು ಪ್ರದೇಶವಾಗಿ ಪ್ರಕೃತಿಯಿಂದ ಭಾರತದಂತೆ ಗುರುತಿಸಲ್ಪಟ್ಟಿರುವ ಜಗತ್ತಿನ ಬೇರೆ ಯಾವ ಭಾಗವೂ ಇಲ್ಲ, (ಬರ್ಮಾ ಒಂದನ್ನು ಬಿಟ್ಟರೆ). ಪ್ರಾಕೃತಿಕ ಲಕ್ಷಣಗಳಲ್ಲೂ ವಾತಾವರಣದಲ್ಲೂ ಅನೇಕ ವ್ಯತ್ಯಸಗಳನ್ನು ಹೊಂದಿರುವ ಪ್ರದೇಶ ಅದು ಎಂಬುದು ಸತ್ಯ. ಆದರೆ ಆ ದೇಶವನ್ನು ಸುತ್ತುವರಿದಿರುವ ಇತರ ದೇಶಗಳಿಂದ ಅದನ್ನು ಪ್ರತ್ಯೇಕಿಸುವ ಲಕ್ಷಣಗಳನ್ನು ಮರೆಯುವಂತಿಲ್ಲ."

೨

ವಾಸ್ತವ ಸ್ಥಿತಿ ಏನೆಂದರೆ ಭಾರತದ ವಿಶಾಲತೆ ಮತ್ತು ವೈವಿಧ್ಯಗಳನ್ನು ನೋಡಿದಾಗ ಅದರ ಭೌಗೋಳಿಕ ಏಕತೆ ದೃಷ್ಟಿಯಿಂದ ಮರೆಯಾಗುವ ಸಾಧ್ಯತೆಯುಂಟು. ದಕ್ಷಿಣದಿಂದ ಉತ್ತರಕ್ಕೆ ಎರಡು ಸಾವಿರ ಮೈಲಿಗಳಿಗಿಂತಲೂ ಹೆಚ್ಚು, ಪೂರ್ವದಿಂದ ಪಶ್ಚಿಮಕ್ಕೆ ಒಂದು ಸಾವಿರದ ಒಂಬೈನೂರು ಮೈಲಿಗಳಿಗಿಂತ ಹೆಚ್ಚಾಗಿ ಹಬ್ಬಿರುವ ವಿಶಾಲಭೂಮಿಯನ್ನು ಒಂದೇ ಸತತ ಪ್ರದೇಶ ಎಂದು ಭಾವಿಸುವುದು ಕಷ್ಟ. ಭಾರತದ ಎಲ್ಲೆಗಳೊಳಗೆ ಇರುವ ವಿಸ್ತಾರವು ಯೂರೋಪ್ ಖಂಡದ ವಿಸ್ತಾರದ ಮೂರನೆಯ ಎರಡರಷ್ಟಿದೆ. ಗ್ರೇಟ್‌ಬ್ರಿಟನ್‌ಗಿಂತ ಭಾರತ ಸುಮಾರು ಹದಿನಾಲ್ಕರಷ್ಟು ಮತ್ತು ಬ್ರಿಟೀಷ್ ದ್ವೀಪಗಳೆಲ್ಲವುಗಳ ವಿಸ್ತಾರಕ್ಕಿಂತ ಹತ್ತರಷ್ಟು ದೊಡ್ಡದು. ವಿಸ್ತಾರದಲ್ಲಿ ಫ್ರಾನ್ಸ್ ಅಥವಾ ಜರ್ಮನಿಗಿಂತ ಸುಮಾರು ಆರು ಪಟ್ಟು ಹೆಚ್ಚು ವಿಶಾಲವಾಗಿದೆ ಭಾರತ.[೧] ಹೀಗಿರುವ ಭೌಗೋಳಿಕ ವಿಸ್ತರಣೆಯು ಭಾರತವನ್ನು ವೈವಿಧ್ಯಗಳ ನಾಡನ್ನಾಗಿ 'ಪ್ರಪಂಚದ ಒಂದು ಪ್ರತೀಕ'ವಾಗಿ ಮಾಡುವ ಭೌತಿಕ ಪರಿಸ್ಥಿತಿಗಳನ್ನು ಉಂಟುಮಾಡಿದೆ. ಪ್ರಪ್ರಥಮವಾಗಿ ಭಾರತ ಎಷ್ಟು ರೇಖಾಂಶಗಳನ್ನು ಹೊಂದಿದೆಯೋ ಅಷ್ಟು ಅಕ್ಷಾಂಶಗಳನ್ನೂ ಹೊಂದಿದೆ. ಅತ್ಯಂತ ಶುಷ್ಕವೂ ಪ್ರಾಣದಾಯಕವೂ ಆದ, ಶಾಶ್ವತ ಹಿಮರಾಶಿಯನ್ನು ಸೃಷ್ಟಿಸುವ ಹಿಮಾಲಯ ಪರ್ವತಗಳ ಶೀತದಿಂದ ಹಿಡಿದು ಆರ್ದ್ರತೆಯಿಂದ ಕೂಡಿದ ಕೊಂಕಣ ಮತ್ತು ಕೋರಮಂಡಲದ ಸೆಕೆಯವರೆಗೆ ಭಾರತದ ಉಷ್ಣತಾಮಾನ ಹರಡಿರುತ್ತದೆ. ಮೇಲ್ಮೈಕೂಡ ಸಮುದ್ರಮಟ್ಟದಿಂದ ಆರಂಭಿಸಿ ಸಸ್ಯಗಳಿಗೆ ಅಗಮ್ಯವಾದ ಎತ್ತರದ ವರೆಗೂ ಏರುತ್ತದೆ. ಅದು ಮೋಡ, ಮಳೆ ಮತ್ತು ಬಿರುಗಾಳಿಗೆ ನಿಲುಕದಷ್ಟು

ಮೇಲೆ ಹೋಗಿ ಸೂರ್ಯಪ್ರಕಾಶದಲ್ಲಿ ಮುಳುಗಿರುತ್ತದೆ. ಭಾರತದ ವಾತಾವರಣವಂತೂ, ಒಂದು ಕಡೆ ಅತ್ಯುಷ್ಣ ಭೂಮಧ್ಯರೇಖೆಯ ಹವಾಮಾನ, ಮತ್ತೊಂದು ಕಡೆ ಆರ್ಕ್‌ಟಿಕ್ ಸಾಗರದ, ಧ್ರುವಪ್ರದೇಶದ ಹವಾಮಾನ, ಇವುಗಳ ಮಧ್ಯೆ ಮಧ್ಯಮ ಅಥವಾ ಸಮಶೀತೋಷ್ಣ ಹವಾಮಾನದ ವಿವಿಧ ಮಜಲುಗಳು. ಮತ್ತೊಂದು ಕಡೆ ವರ್ಣನಾತೀತ ಶುಷ್ಕತೆ ಹಾಗೂ ಅತಿಹೆಚ್ಚು ಆರ್ದ್ರತೆ. ಮಳೆಯ ಬಗೆಗೆ ಹೇಳುವುದಾದರೆ ಅದು ಚಿರಾಪುಂಜಿಯಲ್ಲಿ ೪೬೦ ಅಂಗುಲಗಳಾದರೆ, ಮೇಲಿನ ಸಿಂಧ್‌ನಲ್ಲಿ ಮೂರು ಅಂಗುಲಗಳಿಗಿಂತ ಕಡಿಮೆ.[೧] ಹೀಗೆ ಅಕ್ಷಾಂಶಗಳೂ ಔನ್ನತ್ಯಗಳೂ, ಉಷ್ಣತೆಯೂ, ಆರ್ದ್ರತೆಯೂ ವಿಸ್ಮಯಕಾರಕ ವೈವಿಧ್ಯವನ್ನು ಹೊಂದಿದೆ. ಇವು ತಮಗೆ ಅನುಗುಣವಾಗಿ ಸಸ್ಯಗಳ ಹಾಗೂ ಪ್ರಾಣಿಗಳ ವೈವಿಧ್ಯವನ್ನು ಸೃಷ್ಟಿಸಿವೆ. ಹವಾಮಾನದ ವಲಯಗಳ ಶ್ರೇಣಿಯು ಸಸ್ಯಶಾಸ್ತ್ರೀಯ ಹಾಗೂ ಪ್ರಾಣಿಶಾಸ್ತ್ರೀಯ ವಲಯಗಳನ್ನು ನಿರ್ಧರಿಸುತ್ತದೆ. ಶ್ರೀ ಜೆ.ಡಿ. ಹೂಕರ್[೨] ಅವರು ಹೇಳುವಂತೆ ಭಾರತದ ಸಸ್ಯಸಂಪತ್ತು ಪೂರ್ವಗೋಳಾರ್ಧದಲ್ಲಿರುವ ಅದರಷ್ಟೇ ವಿಸ್ತಾರದ ಬೇರೆ ಯಾವುದೇ ದೇಶದ ಸಸ್ಯ ಸಂಪತ್ತಿಗಿಂತ ಅಥವಾ ಪ್ರಪಂಚದಲ್ಲೇ ಹೆಚ್ಚು ವೈವಿಧ್ಯವನ್ನು ಪಡೆದಿದೆ. ಭಾರತದ ಪ್ರಾಣಿವರ್ಗದ ಶ್ರೀಮಂತಿಕೆಯನ್ನು ಕುರಿತು ಹೇಳಬೇಕಾದರೆ, ಶ್ರೀ ಬ್ಲಾಂಡ್‌ಫರ್ಡ್[೩] ಅವರು ಕೊಟ್ಟ ಈ ಪ್ರಮಾಣಪತ್ರವೇ ಸಾಕು, "ಭಾರತದಲ್ಲಿ ಪ್ರಾಣಿವರ್ಗ ಸಮೃದ್ಧವಾಗಿರುವುದಷ್ಟೇ ಅಲ್ಲ, ಅದು ವಿಶೇಷವಾಗಿ ವೈವಿಧ್ಯಮಯವೂ ಆಗಿದೆ. ಭಾರತದಲ್ಲಿ ಮತ್ತು ಅದರ ಆಶ್ರಿತದೇಶಗಳಲ್ಲಿ ವಾಸಿಸುವ ಪ್ರಾಣಿಗಳ ವಿಧಗಳ ಸಂಖ್ಯೆ ಬಹು ದೊಡ್ಡದು. ಉದಾಹರಣೆಗೆ, ಇಡೀ ಯೂರೋಪಿನಲ್ಲಿ ಕಾಣಿಸುವ ಪ್ರಾಣಿಜಾತಿಗಳ ಸಂಖ್ಯೆಯನ್ನೂ ಅದು ಮೀರುತ್ತದೆ. ಯೂರೋಪಿನ ವಿಸ್ತಾರ ಭಾರತ ಸಾಮ್ರಾಜ್ಯದ ವಿಸ್ತಾರದ ಒಂದೂವರೆಯಷ್ಟಿದ್ದರೂ ಇದು ವಸ್ತುಸ್ಥಿತಿ." ಇಂಡಿಯಾದ ಸಸ್ಯ ಮತ್ತು ಪ್ರಾಣಿಗಳ ಅತಿಶಯವಾದ ವೈವಿಧ್ಯ ಮತ್ತು ಸಮೃದ್ಧತೆಗಳು ಅಗತ್ಯವಾಗಿ ಅವುಗಳಿಗೆ ಅನುಗುಣವಾದ ಸಸ್ಯಜನ್ಯ ಮತ್ತು ಪ್ರಾಣಿಜ್ಯ ಉತ್ಪನ್ನಗಳನ್ನು ಉಂಟುಮಾಡುತ್ತವೆ. ಅವು ಭಾರತಕ್ಕೆ, ಆರ್ಥಿಕ ಸ್ವಾವಲಂಬನೆಯನ್ನು ತಂದುಕೊಡುತ್ತವೆ. ಇಂಥ ಅದೃಷ್ಟವು ಕೆಲವೇ ಕೆಲವು ದೇಶಗಳಿಗೆ ಮಾತ್ರ ಉಂಟು. ಶ್ರೀ ಲಿಲಿಯವರು ಹೇಳುವಂತೆ ಭಾರತ ದೇಶದ ಉತ್ಪನ್ನಗಳು ಮನುಷ್ಯನ ಬದುಕಿಗೆ ಬೇಕಾದ ಪ್ರತಿಯೊಂದನ್ನೂ ಒಳಗೊಂಡಿವೆ." ತನ್ನ ಕೋಟಿಕೋಟಿ ಜನಸಂಖ್ಯೆಯಲ್ಲಿ ಭಾರತವು ಪ್ರದರ್ಶಿಸುವ ಮಾನವಕುಲವೈವಿಧ್ಯವು ಅದರ ಭೌತಿಕ ವೈವಿಧ್ಯಕ್ಕಿಂತ ಏನೂ ಕಡಿಮೆಯಾದುದಲ್ಲ. ಪ್ರಪಂಚದ ಒಟ್ಟು ಜನಸಂಖ್ಯೆಯ ಐದನೆಯ ಒಂದು ಭಾಗವನ್ನೊಳಗೊಂಡ ಭಾರತೀಯರು ಸಾಮಾಜಿಕ ವಿಕಾಸದ ಎಲ್ಲ ಹಂತಗಳನ್ನೂ ಸ್ಥಿತಿಗಳನ್ನೂ ಮುಟ್ಟಿದ ಅತ್ಯಂತ ವಿಭಿನ್ನ ರೀತಿಯ ಭಾಷೆಗಳನ್ನೂ, ರೀತಿನೀತಿಗಳನ್ನೂ ಸಂಪ್ರದಾಯಗಳನ್ನೂ ಪಂಗಡಗಳನ್ನೂ ಸಂಸ್ಕೃತಿಗಳನ್ನೂ ಹೊಂದಿದ್ದಾರೆ. ಜನರಲ್ಲಿ

ದೈಹಿಕ ವಿವಿಧತೆಯನ್ನು ಉಂಟುಮಾಡಿರುವ ಮುಖ್ಯವಾದ ಮತ್ತು ಏಳಕ್ಕೆ ಕಡಿಮೆ ಇಲ್ಲದ ಬೇರೆ ಬೇರೆ ಜನಾಂಗಗಳು ಭಾರತದಲ್ಲಿವೆ. ತಮ್ಮದೇ ಆದ ಭಾಷೆಯನ್ನೂ ಸಾಹಿತ್ಯವನ್ನೂ ಹೊಂದಿರುವ ವಿಭಿನ್ನ ಜನತೆ ಅಥವಾ ರಾಷ್ಟ್ರೀಯತೆಗಳೂ ಇಲ್ಲಿ ಹದಿನಾಲ್ಕಕ್ಕೆ ಕಡಿಮೆಯಿಲ್ಲ. ಭಾಷೆಗಳ ಗೊಂದಲ ಉಂಟುಮಾಡಬಲ್ಲ, ನೂರೈವತ್ತಕ್ಕೆ ಕಡಿಮೆಯಿಲ್ಲದ ಬೇರೆ ಬೇರೆ ಭಾಷೆಗಳೂ ಈ ದೇಶದಲ್ಲಿವೆ.[೪] ಮತ್ತು ಕೊನೆಯದಾಗಿ ಪ್ರಪಂಚದ ಎಲ್ಲ ಮತ ಧರ್ಮಗಳೂ ಇಲ್ಲಿದ್ದು ಒಂದೊಂದೂ ದಶಲಕ್ಷಗಳಿಗಿಂತ ಹೆಚ್ಚು ಅನುಯಾಯಿಗಳನ್ನು ಹೊಂದಿದೆ. ಭಾರತವು ವಸ್ತುತಃ ಪಂಗಡಗಳ ಮತ್ತು ಸಂಪ್ರದಾಯಗಳ, ನಂಬಿಕೆಗಳ ಮತ್ತು ಸಂಸ್ಕೃತಿಗಳ, ಶ್ರದ್ಧೆಗಳ ಮತ್ತು ಭಾಷೆಗಳ ಹಾಗೂ ಜನಾಂಗೀಯ ಪ್ರಕಾರಗಳ ಸಾಮಾಜಿಕ ವ್ಯವಸ್ಥೆಗಳ ಒಂದು ಸಂಗ್ರಹಾಲಯವಾಗಿದೆ.

೪

ಈ ಕಾರಣಗಳಿಂದ ಭಾರತದ ಜೀವನದಲ್ಲೂ ಭೌಗೋಳಿಕ ಸ್ಥಿತಿಯಲ್ಲೂ ಇರುವ ವೈವಿಧ್ಯಗಳಿಂದ ಮೇಲುನೋಟದ ವೀಕ್ಷಣಕಾರರು ದಿಗ್ಭ್ರಮೆಗೊಳ್ಳುವ ಸಾಧ್ಯತೆ ಇದೆ. ಬಾಹ್ಯ ದೃಶ್ಯತೆಗಳ ಒಳಗೆ ಹೊಕ್ಕು ವಸ್ತುಗಳ ಜೀವನದ ಅಂತರಂಗವನ್ನು ನೋಡಬಲ್ಲ ದೃಷ್ಟಿ ಶಕ್ತಿ ಅವರಿಗಿರುವುದಿಲ್ಲ. ಇದರಿಂದ ಅವರು ಅನೇಕತೆಯಲ್ಲಿರುವ ಏಕತೆಯನ್ನು, ಸಮೂಹದಲ್ಲಿರುವ ವ್ಯಕ್ತಿಯನ್ನು, ಸಂಕೀರ್ಣದಲ್ಲಿರುವ ಸರಳರೂಪವನ್ನು ಕಾಣಲು ವಿಫಲರಾಗುತ್ತಾರೆ. ಪ್ರಾಚೀನ ದೃಷ್ಟಾಂತ ಕಥೆಯಲ್ಲಿ ಬರುವ ಅಂಧರು ಆನೆಯನ್ನು 'ನೋಡಿದಂತೆ', ಮೇಲುನೋಟದ ವೀಕ್ಷಕರು ಭಾಗಗಳನ್ನು ನೋಡಿ ಒಟ್ಟು ವಸ್ತುವಿನ ನೋಟವನ್ನು ಕಳೆದುಕೊಳ್ಳುತ್ತಾರೆ, ಅಥವಾ ಅವರಿಗೆ ಭಾಗಗಳೇ ಒಟ್ಟು ವಸ್ತುವಿಗಿಂತ ದೊಡ್ಡವಾಗಿ ಕಾಣಿಸುತ್ತವೆ. ವಾಸ್ತವಸ್ಥಿತಿ ಏನೆಂದರೆ ಕೇವಲ ಇಂದ್ರಿಯಜನ್ಯ ಭಾವನೆಗಳ ಮೇಲೆ ಪೂರ್ಣವಾಗಿ ಅವಲಂಬನೆ, ಬಾಹ್ಯ ವಸ್ತುಗಳೊಡನೆ ಇಂದ್ರಿಯಗಳ ಸನ್ನಿಕರ್ಷದ ಅವಲಂಬನೆ ನಮ್ಮನ್ನು ಸತ್ಯದ ಬಳಿಗೆ ಒಯ್ಯಲಾರದು. ಏಕೆಂದರೆ ಇಂದ್ರಿಯಗಳು ಮೇಲುನೋಟಕ್ಕೆ ಕಾಣಿಸುವ ಗ್ರಾಹ್ಯವಸ್ತುಗಳಿಗಿಂತ ಆಚೆಗೆ ಕರೆದೊಯ್ಯುವುದಿಲ್ಲ. ನಮಗೆ ಬೇಕಾಗಿರುವುದು ಉತ್ತಮವಾಗಿ ವಸ್ತುಗಳನ್ನು ವಿವರಿಸಿ ಹೇಳುವ, ಒಂದುಗೂಡಿಸುವ ಮನಸ್ಸಿನ ಸಂಶ್ಲೇಷಣ ಶಕ್ತಿ. ವಸ್ತು ಭಿನ್ನತೆಗಳ ರಾಶಿಯಿಂದ ಸೋಲಿಸಲ್ಪಡದೆ ಅದು ಅವುಗಳನ್ನು ಹತೋಟಿಗೆ ತೆಗೆದುಕೊಂಡು, ಅವುಗಳಿಗಿಂತ ಮೇಲೆ ಏರಿ ಸಮಗ್ರತೆಯ ದರ್ಶನವನ್ನು ಮಾಡಿಸುತ್ತದೆ.

ಈ ಎಲ್ಲ ನಾನಾ ರೀತಿಯ ವೈವಿಧ್ಯದ ಕೆಳಗೆ ಒಂದು ಮೂಲಭೂತ ಏಕತೆ ಇದೆ ಎಂಬುದನ್ನು ಸೂಕ್ಷ್ಮ ತತ್ತ್ವಗ್ರಾಹಿ ದೃಷ್ಟಿಯು ನೋಡದೆ ಇರಲಾರದು. ಈ

ವೈವಿಧ್ಯವು ದೌರ್ಬಲ್ಯಕ್ಕೆ ಕಾರಣವಾಗುವ ಬದಲಾಗಿ ಶಕ್ತಿಗೂ ಸಂಪತ್ತಿಗೂ ಫಲವತ್ತಾದ ಮೂಲಸ್ರೋತವಾಗುತ್ತದೆ ಎಂಬುದನ್ನೂ ಆ ದೃಷ್ಟಿ ಕಾಣುತ್ತದೆ. ಸರ್ ಹರ್ಬರ್ಟ್ ರಿಸ್ಲೇ ಸತ್ಯವಾಗಿಯೇ ನುಡಿದಿರುವಂತೆ "ಭಾರತದಲ್ಲಿ ಯಾವನೇ ವೀಕ್ಷಕನಿಗೆ ಗೋಚರಿಸುವ ಭೌತಿಕ ಹಾಗೂ ಸಾಮಾಜಿಕ ಮಾದರಿಗಳು, ಭಾಷೆ, ಸಂಪ್ರದಾಯ ಮತ್ತು ಮತಧರ್ಮಗಳ ನಾನಾರೀತಿಯ ವೈವಿಧ್ಯದ ಕೆಳಗೆ, ಹಿಮಾಲಯ ಪರ್ವತದಿಂದ ಕನ್ಯಾಕುಮಾರಿಯವರೆಗೆ ಒಂದು ಅಂತರ್ಗಾಮಿ ಜೀವನ ಸಮಾನತೆಯನ್ನು[೫] ಯೂಸುಫ್ ಅಲಿಯವರು ತೋರಿಸಿರುವ ಹಾಗೆ ಎಲ್ಲರೂ ಕಂಡುಕೊಳ್ಳಬಹುದು." ಶ್ರೀ ಇ.ಎ. ಗೇಯ್ಟ್ ಐ.ಸಿ.ಎಸ್. ಎಂಬ ಭಾರತದ ಜನಗಣತಿ ಆಯುಕ್ತರು ಹೀಗೆ ದಾಖಲಿಸಿದ್ದಾರೆ: "ಒಟ್ಟಿನಲ್ಲಿ ಭಾರತದ ಜನರು ಯೂರೋಪಿನ ಜನರಿಗಿಂತ ಬೇರೆಯವರೆಂದು ಕೆಲವು ನಿಶ್ಚಿತ ಸ್ಥೂಲ ಲಕ್ಷಣಗಳಿಂದ ಗುರುತಿಸಲಾಗುತ್ತದೆ." ವಿನ್ಸೆಂಟ್ ಸ್ಮಿತ್ ಅವರು ಭಾರತದ ಬಗೆಗೆ ತಮ್ಮ ದೀರ್ಘ ಹಾಗೂ ನೇರ ಅನುಭವದಿಂದ ಹೀಗೆ ಹೇಳುತ್ತಾರೆ. "ಭಾರತದ ನಾಗರಿಕತೆಯು ಪ್ರಪಂಚದ ಇತರ ಎಲ್ಲ ನಾಗರಿಕತೆಗಳಿಂದ ಅದನ್ನು ಪೃಥಕ್ಕರಿಸುವ ಅನೇಕ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ಆ ಲಕ್ಷಣಗಳು ಸಮಗ್ರ ದೇಶಕ್ಕೆ ಅಥವಾ ಭೂಖಂಡಕ್ಕೆ ಎಷ್ಟು ಪ್ರಮಾಣದಲ್ಲಿ ಸಮಾನವಾಗಿವೆಯೆಂದರೆ ಮಾನವಿಕ, ಸಾಮಾಜಿಕ, ಬೌದ್ಧಿಕ ಅಭಿವೃದ್ಧಿಯ ಇತಿಹಾಸದಲ್ಲಿ ಅದನ್ನು ಒಂದು ಘಟಕವನ್ನಾಗಿ ಪರಿಗಣಿಸಲು ಅವು ಪರ್ಯಾಪ್ತವಾಗಿವೆ."

೫

ಎಲ್ಲರೂ ಸಾಮಾನ್ಯವಾಗಿ ಗುರುತಿಸುವುದು ಮತ್ತು ಒಪ್ಪಿಕೊಳ್ಳುವುದು ಏನೆಂದರೆ ಭಾರತದ ಏಕತೆ ಮುಖ್ಯವಾಗಿ ಬ್ರಿಟಿಷ್ ಆಡಳಿತದಿಂದ ಹುಟ್ಟಿದುದು; ಅದು ಬ್ರಿಟಿಷ್ ಸಾಮ್ರಾಜ್ಯದ ಒಂದು ಉಪೋತ್ಪನ್ನ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಸಮಗ್ರದೇಶವನ್ನು ಆಳುವ ಕೇಂದ್ರೀಕೃತ ಆಡಳಿತದ ಅನಿವಾರ್ಯ ಪರಿಣಾಮ – ಎಂದು. ಸಾಮಾನ್ಯವಾಗಿ ಯಾರೂ ತಿಳಿದುಕೊಳ್ಳದಿರುವ ಮತ್ತು ಗುರುತಿಸದಿರುವ ಅಂಶವೇನೆಂದರೆ ಭಾರತದ ಮೂಲಭೂತ ಏಕತೆಯ ಭಾವನೆ ಬ್ರಿಟಿಷರ ಆಡಳಿತಕ್ಕಿಂತಲೂ ಬಹಳ ಹಿಂದಿನದು, ಅದು ಈಚಿನ ಬೆಳವಣಿಗೆ ಅಥವಾ ಅನ್ವೇಷಣೆಯಲ್ಲ, ಈ ಭಾವನೆಯ ಇತಿಹಾಸ ಅತ್ಯಂತ ಪ್ರಾಚೀನ ಕಾಲದವರೆಗೂ ವ್ಯಾಪಿಸಿದೆ ಎಂಬುದು. ಭಾರತದ ಧರ್ಮ, ಸಂಸ್ಕೃತಿ ಮತ್ತು ನಾಗರಿಕತೆಗಳ ಮಹಾಸ್ಥಾಪಕರು ಅವರ ವಿಶಾಲ ಮಾತೃಭೂಮಿಯ ಭೌಗೋಳಿಕ ಏಕತೆಯನ್ನು ಸಂಪೂರ್ಣವಾಗಿ ಅರಿತುಕೊಂಡಿದ್ದರು. ಸಾಮಾನ್ಯಜನರ ಭಾವನೆಯಲ್ಲಿ ಆ ಏಕತೆಯ ಅಚ್ಚನ್ನು ಮೂಡಿಸಲು ಅನೇಕ ವಿಧಗಳಲ್ಲಿ ಅವರು ಪ್ರಯತ್ನಿಸಿದ್ದರು.

ಈ ಏಕತಾಪ್ರಜ್ಞೆಯ ಮೊದಲಿನ ಅಭಿವ್ಯಕ್ತಿಯನ್ನು ಅವರು ಮಾಡಿದುದು ಸಮಗ್ರದೇಶಕ್ಕೆ ಭಾರತವರ್ಷವೆಂಬ[೬] ಒಂದೇ ಹೆಸರನ್ನು ಕೊಡುವುದರ ಮೂಲಕವಾಗಿತ್ತು. ಇಂಡಿಯಾ ಹಿಂದೂಗಳಿಗೆ ಗೊತ್ತಿದ್ದುದು ಈ ದೇಶೀಯ ಅಭಿಜಾತ ನಾಮಧೇಯದಿಂದಲೇ. ಈ ದೇಶಕ್ಕೆ ಇಂಡಿಯಾ ಎಂಬ ಹೆಸರನ್ನು ಕೊಟ್ಟವರು ವಿದೇಶೀಯರು. ಈ ದೇಶವನ್ನು ಹೊರಗಿನ ಜನರು ತಿಳಿದುದು ಸಿಂಧೂನದಿಯ ಮೂಲಕ. ಪರ್ಷಿಯನ್ನರು ಅದನ್ನು ಹಿಂದೂ ಎಂದು ಬದಲಿಸಿದರು. ಅದರ ಮಹಾಪ್ರಾಣ ಅಕ್ಷರಾಂಶವನ್ನು ಬಿಟ್ಟು ಗ್ರೀಕರು 'ಇಂಡೋಸ್' ಮಾಡಿದರು. ಇಂಡಿಯಾ ಎಂಬ ಪದದಂತೆ ಭಾರತವರ್ಷ ಎಂಬುದು ಕೇವಲ ಭೌತಿಕ ಉಲ್ಲೇಖವನ್ನು ಹೊಂದಿರುವ ಭೌಗೋಳಿಕ ವಾಚಕವಲ್ಲ. ಮೂಲಭೂತ ಏಕತೆಯನ್ನು ಸಂಕೇತಿಸುವ ಗಂಭೀರವಾದ ಐತಿಹಾಸಿಕ ಅರ್ಥವನ್ನೂ ಅದು ಪಡೆದಿದೆ. ಆ ಪದವನ್ನು ಹುಡುಕಿದ ಜನರು ಆ ಏಕತೆಯನ್ನು ಕಂಡಿದ್ದರು ಮತ್ತು ಅರ್ಥ ಮಾಡಿಕೊಂಡಿದ್ದರು. ಭಿನ್ನತೆಗಳಿದ್ದರೂ ಬೇರೆ ಬೇರೆ ಪದಾರ್ಥಗಳನ್ನು ಒಂದುಗೂಡಿಸುವ ಏಕತೆಯ ಸೂತ್ರವಿದ್ದಾಗಲೇ ಆ ಬೇರೆ ಬೇರೆ ಪದಾರ್ಥಗಳಿಗೆಲ್ಲ ಒಂದು ಸಮಾನ ನಾಮವನ್ನು ಕೊಡಲಾಗುತ್ತದೆ ಎಂಬುದು ನ್ಯಾಯಶಾಸ್ತ್ರದ ಸುಪ್ರಸಿದ್ಧ ತತ್ತ್ವ. ನಾನಾ ಧರ್ಮಗಳ ಅನುಯಾಯಿಗಳಾದ, ನಾನಾ ಭಾಷೆಗಳನ್ನಾಡುವ, ನಾನಾ ಸಂಸ್ಕೃತಿಗಳಿಗೆ ಸೇರಿದ, ನಾನಾ ವಂಶಗಳ ಜನರು ವಾಸಿಸುವ ವಿಶಾಲ ಭೂಪ್ರದೇಶಕ್ಕೆ ಏಕಮಾತ್ರವಾದ, ವೈಯಕ್ತಿಕತೆಯನ್ನು ನೀಡುವ ಹೆಸರನ್ನು ಋಷಿಗಳು ಕೊಡಬೇಕಾದರೆ ಅದಕ್ಕೆ ಕಾರಣ ಅವರಿಗಿದ್ದ ಏಕತಾಪ್ರಜ್ಞೆ. ಹೇಗೆ ರೋಮ್ ಎಂಬ ಹೆಸರು ರೊಮುಲಸ್‌ನಿಂದ ನಿಷ್ಪನ್ನವಾಗಿದೆಯೋ ಹಾಗೆ ಭಾರತ ವರ್ಷ ಎಂಬ ಪದವು ಭರತ ಎಂಬ ಶಬ್ದದಿಂದ ಬಂದಿದೆ. ಭಾರತೀಯ ಇತಿಹಾಸದಲ್ಲೂ ಸಂಪ್ರದಾಯದಲ್ಲೂ ಭರತನು ಒಬ್ಬ ಮಹಾನ್ ವೀರ. ಭಾರತೀಯೇತಿಹಾಸದ ಮುಂಜಾವಿನಲ್ಲಿ ಆರ್ಯ ರಾಜನೀತಿಯೂ ಸಂಸ್ಕೃತಿಯೂ ಸರಿಯಾದ ರೂಪವನ್ನು ಪಡೆದುಕೊಳ್ಳಲು ಕಾರಣವಾಗಿದ್ದ ಮೂಲ ಹೋರಾಟಗಳಲ್ಲಿ ಮತ್ತು ಘರ್ಷಣೆಗಳಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದ ಒಂದು ಪ್ರಬಲ ಆರ್ಯ ಬುಡಕಟ್ಟಿನ ನಾಯಕನಾಗಿದ್ದವನು ಭರತ ಎಂದು ಋಗ್ವೇದವು[೭] ಮೊದಲು ಅವನನ್ನು ಹೆಸರಿಸುತ್ತದೆ. ಐತರೇಯ ಬ್ರಾಹ್ಮಣವು[೮] ಭರತನ ಪಟ್ಟಾಭಿಷೇಕವನ್ನೂ ಅನಂತರ ಅವನು ನಡೆಸಿದ ದಂಡಯಾತ್ರೆಗಳನ್ನೂ ಹೇಳಿ ಅದರಿಂದ ಅವನಿಗೆ ಸಿಕ್ಕಿದ ಸಾರ್ವಭೌಮತ್ವವನ್ನೂ, ಅಶ್ವಮೇಧ ಯಾಗದಿಂದ ಆ ಸಾರ್ವಭೌಮತ್ವ ಸ್ಥಿರೀಕೃತವಾದದ್ದನ್ನೂ ತಿಳಿಸುತ್ತದೆ. ಶ್ರೀಮದ್ ಭಾಗವತದಲ್ಲೂ ಈ ಕಥೆಯನ್ನು ಅನುಸರಿಸಿ ಹೇಳಲಾಗಿದೆ. ಭಾಗವತ ಭರತನಿಗೆ ಅತಿರಥ ಮತ್ತು ಸಾಮ್ರಾಟ್ ಎಂಬ ವಿಶೇಷಣಗಳನ್ನು ಕೊಟ್ಟಿದೆ. ಸಾಮ್ರಾಟ್ ಎಂದರೆ ರಾಜಾಧಿರಾಜ. ಕಿರಾತ, ಹೂಣ, ಯವನ, ಪೌಂಡ್ರ ಮುಂತಾದ

ಜನಾಂಗಗಳನ್ನೂ ರಾಜ್ಯಗಳನ್ನೂ ಭರತನು ಗೆದ್ದು ವಶಪಡಿಸಿಕೊಂಡನೆಂದೂ, ಅಂತ್ಯಕಾಲದಲ್ಲಿ ಈ ಜಗತ್ತೆಲ್ಲ ಪರಮಾರ್ಥತಃ ಮಿಥ್ಯಾ ಎಂದು ಅರಿತುಕೊಂಡು ಸಂನ್ಯಾಸವನ್ನು ಸ್ವೀಕರಿಸಿದನೆಂದೂ ಭಾಗವತವು ಹೇಳಿದೆ. ಆದ್ದರಿಂದ ಈ ದೇಶದ ನಿವಾಸಿಗಳಾಗಿದ್ದ ನಾನಾ ಮೂಲದ ಜನರ ಮುಂದೆ ಭರತನು ತನ್ನ ಹೆಸರಿನಿಂದ ಮುಂದೆ ಕರೆಯಲ್ಪಟ್ಟ ದೇಶದ ಆರ್ಯಶಕ್ತಿಯ ಮೂರ್ತಿಸ್ವರೂಪನಾಗಿ ಮತ್ತು ಪ್ರತಿನಿಧಿಯಾಗಿ ನಿಂತಿದ್ದನು. ಆ ಆರ್ಯಶಕ್ತಿಯು ಸಮಗ್ರ ದೇಶವನ್ನೂ ಆಗ ವೇಗದಿಂದ ತನ್ನ ವಸಾಹತನ್ನಾಗಿ ಮಾಡಿಕೊಳ್ಳುವ ಕಾರ್ಯವನ್ನು ನಿರ್ವಹಿಸುತ್ತಿತ್ತು. ಸಮಾನವಾದ ಸಂಸ್ಕೃತಿ ಹಾಗೂ ನಾಗರಿಕತೆಗಳ ಒಕ್ಕೂಡಿಸುವಿಕೆಯ ಶಿಸ್ತಿನ ಕೆಳಗೆ ದೇಶದ ವಿಭಿನ್ನ ಭಾಗಗಳನ್ನೆಲ್ಲ ತರುತ್ತಿತ್ತು. ಆದ್ದರಿಂದ ಭರತವರ್ಷ ಎಂಬುದು ಆರ್ಯೀಕೃತವಾದ ಇಂಡಿಯಾ ದೇಶಕ್ಕೆ ಇನ್ನೊಂದು ಹೆಸರು. ಆರ್ಯಸಂಸ್ಕೃತಿ ಬೇರುಬಿಟ್ಟು ಸಫಲತೆಯನ್ನು ಕಂಡುಕೊಂಡ ಸ್ನೇಹಾರ್ದ್ರ ಫಲವತ್ತಾದ ನಾಡು ಇದು. ಮಾನವ ನಾಗರಿಕತೆಯ ಮುಂದಾಳುಗಳು ತಮ್ಮ ಪರಿಶ್ರಮದ ಬೀಡನ್ನಾಗಿ ಮತ್ತು ವಿಶಿಷ್ಟ ಪ್ರತಿಭೆಯ ಸಮುಚಿತ ಅಭಿವ್ಯಕ್ತಿಗಾಗಿ ಆರಿಸಿಕೊಂಡ ನೆಲ. ಈ ಪ್ರಾಚೀನ ಪುನರುಜ್ಜೀವನಕ್ಕೆ ಬುದ್ಧಿಗ್ರಾಹ್ಯವಾಗುವ ಒಂದು ಸಂಕೇತದಂತೆ, ಮತ್ತು ಅನುಕೂಲವಾದ ಚಿಹ್ನೆಯಂತೆ ಭರತನನ್ನು ಎತ್ತಿ ಹಿಡಿಯಲಾಯಿತು. ಸಮರ್ಪಕವಾದ ಸಾಹಿತ್ಯ, ಜ್ಞಾನಶಾಖೆಗಳು ಮತ್ತು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಂಸ್ಥೆಗಳ ಮೂಲಕ ಅಭಿವ್ಯಕ್ತವಾಗುತ್ತಿದ್ದ ಹೊಸ ಚಿಂತನೆಯ ಮತ್ತು ಹೊಸ ಧರ್ಮದ ವಿಜಯಕ್ಕೆ ಭರತನು ಪ್ರತಿನಿಧಿ. ಈ ದೇಶದ ನಾನಾ ವೈವಿಧ್ಯಮಯ ಶ್ರೀಮಂತ ಸಂಸ್ಕೃತಿಯ ಸುತ್ತಲೂ, ಒಕ್ಕೂಟದ ವ್ಯವಸ್ಥೆಯಲ್ಲಿರುವಂತೆ, ಅನೇಕ ಪಂಗಡಗಳೂ ಶಾಖೆಗಳೂ ಉಪಸಂಸ್ಕೃತಿಗಳೂ ಹೆಣೆದುಕೊಂಡಿದ್ದು ಅವು ತಮ್ಮವೇ ಆದ ವಿಶಿಷ್ಟ ಲಕ್ಷಣಗಳನ್ನು ಶ್ರೇಷ್ಠತೆಯನ್ನೂ ರಕ್ಷಿಸಿಕೊಳ್ಳಲು ಮತ್ತು ಕೇಂದ್ರೀಯ ಮುಖ್ಯ ಸಂಸ್ಕೃತಿಗೆ ತಮ್ಮ ಕೊಡುಗೆಯನ್ನು ನೀಡಲು ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದವು. ಇಂಥ ಹೊಸ ಸಾಂಸ್ಕೃತಿಕ ಐಕ್ಯವನ್ನು ನಾಡಿನಲ್ಲಿ ಉಂಟುಮಾಡುವುದಕ್ಕೂ ಭರತನು ಒಂದು ಸಂಕೇತ.[೯]

೬

ಈ ಒಂದು ಸಮಾನ ಹೆಸರಿನ ಜೊತೆಗೆ, ಭಾರತದ ಮೂಲಭೂತ ಐಕ್ಯವನ್ನು ಪ್ರಾಚೀನ ಕಾಲದಲ್ಲೂ ಜನಸಾಮಾನ್ಯರ ಮನಸ್ಸು ಗ್ರಹಿಸಿತ್ತು ಎಂಬುದನ್ನು ತೋರಿಸುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಮಾನವ ಕುಲದ ಅತ್ಯಂತ ಪ್ರಾಚೀನ ಸಾಹಿತ್ಯ ದಾಖಲೆಗಳಲ್ಲೊಂದು ಎನಿಸುವ ಋಗ್ವೇದವೂ ಋಷಿಗಳು ಪ್ರಜ್ಞಾಪೂರ್ವಕವಾಗಿ ಮಾಡಿದ ಉತ್ಸಾಹಭರಿತ ಪ್ರಾರ್ಥನೆಗಳಲ್ಲಿ ಅವರ ತಾಯಿನಾಡಿನ

ಏಕತೆಯನ್ನು ಗೋಚರಿಸಿಕೊಳ್ಳಲು, ಅಷ್ಟೇ ಅಲ್ಲ, ಭೂಮಿಯನ್ನು ಒಬ್ಬ ಜೀವಂತ ದೇವತೆಯನ್ನಾಗಿ ಮಾಡಿ ಅವಳನ್ನು ಪೂಜಿಸುವ ವ್ಯಕ್ತಿಯ ಪ್ರೇಮಮಯ ಹೃದಯದಲ್ಲಿ ಪ್ರತಿಷ್ಠಾಪಿಸಲು ಮಾಡಿದ ಭಾವನಾತ್ಮಕ ಪ್ರಯತ್ನಗಳನ್ನು ಬಿಚ್ಚಿಡುತ್ತವೆ. ಇದು ಪ್ರಸಿದ್ಧ ಋಗ್ವೇದದ ನದೀಸೂಕ್ತದಲ್ಲಿ[೧೦] ಅತ್ಯುತ್ತಮವಾಗಿ ಚಿತ್ರಿತವಾಗಿದೆ. ಈ ಸೂಕ್ತದಲ್ಲಿ ಸಮೃದ್ಧಿಯ ಮತ್ತು ಶ್ರೇಯಸ್ಸಿನ, ಎಂದೆಂದಿಗೂ ಶಾಶ್ವತವಾಗಿ ಹರಿಯುವ ಪಂಜಾಬಿನ ನದಿಗಳು ಕೃತಜ್ಞತಾಪೂರ್ವಕವಾದ ಪ್ರತಿಭೆಯಿಂದ ದೇವತ್ವಕ್ಕೆ ಏರಿಸಲ್ಪಟ್ಟಿವೆ. ಈ ನದಿಗಳು ಏಕಕಾಲದಲ್ಲಿ ವಾಣಿಜ್ಯದ ಮತ್ತು ಸಂಸ್ಕೃತಿಗೆ ಸಮಾನವಾಗಿ ವಾಹಿನಿಗಳಾಗಿದ್ದು, ರಾಷ್ಟ್ರದ ಪೂಜೆಯನ್ನೂ ಶ್ರದ್ಧಾರ್ಪಣೆಯನ್ನೂ ಪಡೆದುಕೊಂಡುವು. ಭಕ್ತನ ಮನಸ್ಸು ಒಲವು ಮತ್ತು ಗೌರವಗಳಿಂದ, ಅನಾದಿ ಕಾಲದಿಂದ ಅವನ ದೇಶದ ರಚನೆಗಾಗಿ ಕಾಣಿಕೆಯನ್ನಿತ್ತಿರುವ ನಿಸರ್ಗದ ರೂಪಕಾರಕ ಅನುಕೂಲಕರ ಸಾಧನಗಳನ್ನು ಕುರಿತು ಯೋಚಿಸಿದಾಗ ಅದು ಅವನ ಮಾತೃಭೂಮಿಯ ಸಮಸ್ತ ಪ್ರದೇಶವನ್ನು ಸ್ವಾಭಾವಿಕವಾಗಿ ಸಂಚರಿಸಿ ಸಮಗ್ರ ದೇಶವನ್ನು ಒಂದು ದೃಶ್ಯ ಘಟಕವನ್ನಾಗಿ ಸಾಕಾರಗೊಳಿಸಿ ಗ್ರಹಿಸಿಕೊಳ್ಳುತ್ತದೆ. ಮಾತೃಭೂಮಿಯನ್ನು ಒಂದು ಅವಿಭಾಜ್ಯ ಘಟಕವಾಗಿ ಕಲ್ಪಿಸಿಕೊಳ್ಳಲು ಅದಕ್ಕಿಂತ ಅನುಕೂಲವೂ ಅರ್ಥವತ್ತಾದುದೂ ಆಗಿರುವ ಸೂತ್ರವನ್ನು ಕಂಡುಹಿಡಿಯುವುದು ಸಾಧ್ಯವಿಲ್ಲ. ಅಂಥ ಒಂದು ಪ್ರಾರ್ಥನೆ ಮೇಲೆ ಹೇಳಿದ ನದೀ ಸೂಕ್ತದಲ್ಲಿ ಕಂಡುಬರುತ್ತದೆ.

ಇಮಂ ಮೇ ಗಂಗೇ ಯಮುನೇ ಸರಸ್ವತಿ ಶತುದ್ರಿ ಸ್ತೋಮಂ ಸಚತಾ ಪರುಷ್ಣಯಾ
ಅಸಿಕ್ನ್ಯಾ ಮರುದ್‌ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ[೧೧]

ಇದು ತತ್‌ಕ್ಷಣದಲ್ಲೇ ಮನಸ್ಸಿನ ಕಣ್ಣಿನ ಮುಂದೆ ವೇದಕಾಲದ ಸಮಗ್ರ ಭಾರತದ ಚಿತ್ರವನ್ನು ತಂದಿಡುತ್ತದೆ. ಜನರ ಪ್ರಜ್ಞೆ ಅವರ ದೇಶದ ಮೂಲಭೂತ ಐಕ್ಯದ ಬಗೆಗೆ ಜಾಗೃತವಾಗುವಂತೆ ಮಾಡಬೇಕು ಎಂಬ ಕವಿಯ ಉದ್ದೇಶವನ್ನು ಈ ಮಂತ್ರವು ಈಡೇರಿಸುತ್ತದೆ. ಅಷ್ಟೇ ಅಲ್ಲ, ಅದು ಇನ್ನೂ ಹೆಚ್ಚಿನದನ್ನು ಸಾಧಿಸುತ್ತದೆ. ಅದು ದೇಶಪ್ರೇಮವನ್ನು ಉನ್ನತೀಕರಿಸಿ ಸಂಸ್ಕಾರದಿಂದ ಪರಿಷ್ಕರಿಸಿ ಧರ್ಮವನ್ನಾಗಿ ಮಾಡುತ್ತದೆ. ತಾಯಿನಾಡಿನ ಬಗೆಗೆ ಯೋಚಿಸುವುದು, ಎಲ್ಲ ಒಳಿತನ್ನೂ ಕೊಡುವ ಕಣ್ಣಿಗೆ ಗೋಚರಿಸುವ ಮಾತೃಭೂಮಿಯೆಂದು ಪೂಜಿಸುವುದು ಒಂದು ಧಾರ್ಮಿಕ ಕರ್ತವ್ಯ. ತಾಯಿನಾಡು ರಾಷ್ಟ್ರದ ಪ್ರತಿದಿನದ ಪ್ರಾರ್ಥನೆಗಳಲ್ಲಿ ಹಕ್ಕಿನ ಸ್ಥಾನವನ್ನು ಪಡೆದುಕೊಂಡಿದೆ. ಆದ್ದರಿಂದ ಋಗ್ವೇದದ ನದೀಸೂಕ್ತವು[೧೨] ಭಾರತದ ಐಕ್ಯದ ಪ್ರಥಮ ರಾಷ್ಟ್ರೀಯ ಪರಿಕಲ್ಪನೆಯನ್ನು ಕೊಡುತ್ತದೆ. ಆಗಿನ ಕಾಲದಲ್ಲಿ ಸಿದ್ಧಿಸಿದ್ದ ಭೌಗೋಳಿಕ ಕ್ಷಿತಿಜದಿಂದ ಆವಶ್ಯಕವಾಗಿ ವ್ಯವಸ್ಥಿತವಾಗಿದ್ದ ಭಾರತೀಯ ಏಕತೆಯನ್ನು ಅದು ಸೂಚಿಸುತ್ತದೆ. ಉತ್ತರ ದಿಕ್ಕಿನಲ್ಲಿ ಹಿಮಾಲಯ ಪರ್ವತಶ್ರೇಣಿ, ಪಶ್ಚಿಮದಲ್ಲಿ

ಸಿಂಧೂನದಿ ಮತ್ತು ಸುಲೈಮಾನ್ ಬೆಟ್ಟಗಳು, ದಕ್ಷಿಣದಲ್ಲಿ ಸಮುದ್ರ ಮತ್ತು ಪೂರ್ವದಲ್ಲಿ ಗಂಗಾ–ಯಮುನಾ ಕಣಿವೆ – ಇವು ಪ್ರಾಯಶಃ ದೇಶದ ಸೀಮೆಗಳಾಗಿದ್ದವು. ಈ ಎಲ್ಲೆಗಳು ವಾಸ್ತವಿಕವಾಗಿ ಸಮಸ್ತ ಉತ್ತರಭಾರತವನ್ನು ಒಳಗೊಳ್ಳುತ್ತವೆ. ಅದರ ಭೌಗೋಳಿಕ ಏಕತೆಯೂ ಗುರುತಿಸಲ್ಪಟ್ಟಿತ್ತು. ಈ ಪೂರ್ಣ ಸ್ಥಳವು ಆರ್ಯಾವರ್ತ ಎಂಬ ಹೆಸರಿನಿಂದ ವೈದಿಕ ಸಾಹಿತ್ಯದಲ್ಲಿ ವಿಶೇಷಾಭಿಧಾನವನ್ನು ಪಡೆದಿತ್ತು. ಮನು ಆರ್ಯಾವರ್ತವನ್ನು ಹೀಗೆ ಲಕ್ಷಿಸಿದ್ದಾನೆ.

ಆ ಸಮುದ್ರಾತ್ತು ವೈ ಪೂರ್ವಾದಾಸಮುದ್ರಾತ್ತು ಪಶ್ಚಿಮಾತ್।
ತಯೋರೇವಾಂತರಂ ಗಿರ್ಯೋರಾರ್ಯಾವರ್ತೈ ವಿದುರ್ಬುಧಾಃ॥

(II.೨೧)

ಈ ಶ್ಲೋಕಕ್ಕೆ ಮೇಧಾತಿಥಿ ಮಾಡಿರುವ ವ್ಯಾಖ್ಯಾನ ಇಂತಿದೆ:

ಪರ್ವತಯೋರ್ಹಿಮವದ್‌ವಿಂಧ್ಯಯೋರ್ಯದಂತರಂ ಮಧ್ಯಂ
ಸ ಆರ್ಯಾವರ್ತೋ ದೇಶೋ ಬುಧೈಃ ಶೀಷ್ಟೈರುಚ್ಯತೇ॥

(ಹಿಮಾಲಯ ಮತ್ತು ವಿಂಧ್ಯಪರ್ವತಗಳ ಮಧ್ಯದಲ್ಲಿ ಇರುವ ದೇಶವನ್ನು ಶಿಷ್ಟರು ಆರ್ಯಾವರ್ತ ಎಂದು ಹೇಳುತ್ತಾರೆ.) ಈ ವಿವರಣೆ ಅಮರಕೋಶದಲ್ಲಿರುವ ವಿವರಣೆಗೂ ಹೊಂದಿಕೊಳ್ಳುತ್ತದೆ.

ಆರ್ಯಾವರ್ತ್ತಃ ಪುಣ್ಯಭೂಮಿಃ ಮಧ್ಯೇ ವಿಂಧ್ಯಹಿಮಾಲಯೋಃ

ಆದ್ದರಿಂದ ಆರ್ಯಾವರ್ತ ಎಂದರೆ ಹಿಮಾಲಯ ಮತ್ತು ವಿಂಧ್ಯ ಪರ್ವತಗಳ ಮಧ್ಯದಲ್ಲಿರುವ ಭೂಪ್ರದೇಶ.[೧೩]

೭

ಆರ್ಯರ ವಸಾಹತುಗಳು ಕ್ರಮಶಃ ವಿಸ್ತಾರ ಹೊಂದುತ್ತಾ ಬಂದುವು. ಹಿಂದಿನ ಆರ್ಯಾವರ್ತದೊಡನೆ ಸಮಸ್ತ ದಕ್ಷಿಣಾಪಥವನ್ನು, ಎಂದರೆ ದಕ್ಷಿಣ ಭಾರತವನ್ನು ಸೇರಿಸಿಕೊಂಡಾಗ ಭಾರತದ ಏಕತೆಯ ಪರಿಕಲ್ಪನೆಗೆ ಇತರ ಯೋಗ್ಯ ಸೂತ್ರಗಳನ್ನು ಅಳವಡಿಸಿಕೊಂಡು ವಿಸ್ತಾರಗೊಳ್ಳುತ್ತಿದ್ದ ಭೌಗೋಳಿಕ ಪ್ರಜ್ಞೆಗೆ ಉಚಿತವಾದ ಅಭಿವ್ಯಕ್ತಿಯನ್ನು ನೀಡಲಾಯಿತು. ಆದ್ದರಿಂದ ಮುಂದೆ ಕೊಟ್ಟಿರುವ ಪೌರಾಣಿಕ ಪ್ರಾರ್ಥನಾ ಶ್ಲೋಕವು ಋಗ್ವೇದದ ನದೀಸೂಕ್ತವನ್ನು ವಿಸ್ತರಿಸಿದ ಭೌಗೋಳಿಕ ಸನ್ನಿವೇಶಕ್ಕೆ ಅನ್ವಯಿಸುತ್ತದೆ ಮತ್ತು ಸಮಸ್ತ ಭಾರತವನ್ನು ತನ್ನ ಪರಿಧಿಯೊಳಕ್ಕೆ ಸೇರಿಸಿಕೊಳ್ಳುತ್ತದೆ:

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ।
ನರ್ಮದೇ ಸಿಂಧು ಕಾವೇರಿ ಜಲೇऽಸ್ಮಿನ್ ಸನ್ನಿಧಿಂ ಕುರು॥[೧೪]

[ಹೇ, ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೇ, ಸಿಂಧು, ಕಾವೇರಿ, ಈ ನನ್ನ ಕಲಶದ ನೀರಿನಲ್ಲಿ ನೀವು ಬಂದು ಸೇರಿರಿ.]

ನೀರನ್ನು ಪವಿತ್ರಗೊಳಿಸಲು ಉಚ್ಚರಿಸುವ ಈ ಶ್ಲೋಕವನ್ನು ಪ್ರತಿದಿನವೂ ಕೋಟ್ಯಂತರ ಜನರು ಸ್ನಾನದ ಮತ್ತು ಪೂಜೆಯ ವೇಳೆಯಲ್ಲಿ ಪಠಿಸುತ್ತಾರೆ. ಈ ಶ್ಲೋಕವು ಅವರನ್ನು ತತ್ಕಾಲದಲ್ಲಾದರೂ ಅವರ ಸಂಕುಚಿತ ಚಿಂತೆಗಳಿಂದಲೂ ಆತಂಕಗಳಿಂದಲೂ ಮೇಲೆತ್ತಿ ಉನ್ನತ ವಿಶಾಲತರ ಚಿಂತನಾಕ್ಷೇತ್ರಕ್ಕೆ ಕರೆದೊಯ್ಯದೆ ಇರದು. ಅದರಲ್ಲಿ ಅವರು ಸಮಸ್ತ ಜಗತ್ತನ್ನು ಬಂಧುವನ್ನಾಗಿ ಮಾಡುವ ಪ್ರಕೃತಿ ಸಂಸ್ಪರ್ಶವನ್ನು ಪಡೆದು ವಿಶ್ವಬಾಂಧವ್ಯದ ಪ್ರಬಲವೂ ಮೂಲಭೂತವೂ ಆದ ಭಾವನೆಯನ್ನು ಅನುಭವಕ್ಕೆ ತಂದುಕೊಳ್ಳುತ್ತಾರೆ. ಒಂದೇ ರಾಷ್ಟ್ರಕುಟುಂಬದ ಸದಸ್ಯರಾಗಿ ಅವರು ಸಮಾನವಾದ ತಾಯಿನಾಡಿಗೆ ಸಂಬದ್ಧರಾಗುವಂತೆ ಆ ಭಾವನೆ ಮಾಡುತ್ತದೆ. ಈ ಕೆಳಗೆ ಕೊಟ್ಟಿರುವ ಪೌರಾಣಿಕ ಪದ್ಯ[೧೫] ರಾಷ್ಟ್ರೀಯ ಪ್ರಜ್ಞೆಯ ಮೇಲೆ ಇದೇ ರೀತಿಯ ಉದಾತ್ತೀಕರಣದ ಮತ್ತು ಉನ್ನತೀಕರಣದ ಪ್ರಭಾವವನ್ನು ಉತ್ಪಾದಿಸುತ್ತದೆ. ಅದರಲ್ಲಿ ಧ್ಯಾನಕ್ಕೂ ಶಾಂತಿಗೂ ವಿಶೇಷವಾಗಿ ಆರಿಸಲ್ಪಟ್ಟ ಏಳು ಬೆಟ್ಟಗಳ ನಾಡು ಎಂದು ಭಾರತ ವರ್ಷವು ನಿರೂಪಿತವಾಗಿದೆ.

ಮಹೇಂದ್ರೋ ಮಲಯಃ ಸಹ್ಯಃ ಶಕ್ತಿಮಾನ್ ಋಕ್ಷಪರ್ವತಃ।
ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತೈತೇ ಕುಲಪರ್ವತಾಃ॥[೧೬]

ಅಷ್ಟೇ ಪರಿಣಾಮಕಾರಿಯಾಗಿರುವುದು ಈ ಕೆಳಗೆ ಕೊಟ್ಟಿರುವ ಇನ್ನೊಂದು ಪೌರಾಣಿಕ ಶ್ಲೋಕ. ಸಂಕುಚಿತವೂ ಪ್ರಾದೇಶಿಕವೂ ಸ್ಥಳೀಯವೂ ಆದ ಲೋಕದೃಷ್ಟಿಯ ಸೀಮಿತಗಳಿಂದ ಮನಸ್ಸನ್ನು ಮುಕ್ತಗೊಳಿಸಿ ಸಮಗ್ರ ದೇಶದ ವಿಶಾಲದೃಷ್ಟಿಗೆ ಅದನ್ನು ತೆರೆದಿಡುವುದರಲ್ಲಿ ಈ ಶ್ಲೋಕ ಪ್ರಭಾವಶಾಲಿ. ಇದರಲ್ಲಿ ದೇಶದ ಎಲ್ಲ ಭಾಗಗಳೂ ಪವಿತ್ರ ಮತ್ತು ವಂದನೆಗೆ ಅರ್ಹ ಎಂದು ಪ್ರತಿಪಾದಿಸಲಾಗಿದೆ.

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ।
ಪುರೀ ದ್ವಾರಾವತೀ ಚೈವ ಸಪ್ತೈತೇಮೋಕ್ಷದಾಯಿಕಾಃ॥[೧೭]

ಇಲ್ಲಿ ಭಾರತವು ಏಳು ಪ್ರಧಾನ ಪವಿತ್ರ ಸ್ಥಳಗಳ ನಾಡು ಎಂದು ತೋರಿಸಲಾಗಿದೆ. ಪ್ರತಿಯೊಬ್ಬ ಭಕ್ತನೂ ಈ ಏಳು ಸ್ಥಳಗಳಿಗೆ ಭೇಟಿಯನ್ನು

ಕೊಡಬೇಕು. ಪ್ರಾಯೋಗಿಕವಾಗಿ ನೋಡಿದರೆ ಈ ಏಳು ಪಟ್ಟಣಗಳು ದೇಶದ ಸಮಸ್ತ ಭಾಗಗಳನ್ನೂ ಸ್ಪರ್ಶಿಸುತ್ತವೆ. ಶ್ರೀ ಶಂಕರಾಚಾರ್ಯ ಭಗವತ್ಪಾದರು ಅತ್ಯಂತ ಪುಣ್ಯದಾಯಕವಾದ ನಾಲ್ಕು ತೀರ್ಥಸ್ಥಳಗಳನ್ನು ದೇಶದ ನಾಲ್ಕು ತುದಿಗಳಲ್ಲಿ ಗುರುತಿಸಿದರು ಎಂಬುದನ್ನು ಇಲ್ಲಿ ಸ್ಮರಿಸಬೇಕು. ಇದರಿಂದ ಜನರಿಗೆ ಸಮಗ್ರ ದೇಶದ ಪರಿಚಯವಾಗುತ್ತದೆ ಮತ್ತು ಅವರು ಅವೆಲ್ಲವನ್ನೂ ಪವಿತ್ರವೆಂದು ಪರಿಗಣಿಸುವಂತೆ ಆಗುತ್ತದೆ.[೧೮] ಶಂಕರಾಚಾರ್ಯರು ದೇಶದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನೂ ಸ್ಥಾಪಿಸಿದರು. ಉತ್ತರದಲ್ಲಿ ಜ್ಯೋತಿರ್ಮಠ, ಪಶ್ಚಿಮದಲ್ಲಿ ದ್ವಾರಕೆಯ ಶಾರದಾಮಠ, ದಕ್ಷಿಣದಲ್ಲಿ ಶೃಂಗೇರೀ ಮಠ ಮತ್ತು ಪೂರ್ವದಲ್ಲಿ ಗೋವರ್ಧನ ಮಠ. ಇವು ಶ್ರೀ ಶಂಕರರ ದಿಗ್ವಿಜಯದ ಸ್ತಂಭಗಳಂತೆ ಇದ್ದು, ಅವರ ಆಧ್ಯಾತ್ಮಿಕ ಸಾಮ್ರಾಜ್ಯದ ರಾಜಧಾನಿಯು ಸಮಸ್ತ ಭಾರತದ ಮೇಲೆ ತನ್ನ ಪ್ರಭಾವವನ್ನು ಬೀರಿ ಅಧಿಕಾರವನ್ನು ನಡೆಸಿತು. ಪರಂಪರಾನುಸಾರವಾಗಿ ನಾಲ್ಕು ಪವಿತ್ರ ತೀರ್ಥಗಳು ಯಾವುವು ಎಂದರೆ ಪೂರ್ವದಿಕ್ಕಿನಲ್ಲಿ ಶ್ವೇತಗಂಗಾ, ದಕ್ಷಿಣದಲ್ಲಿ ಧನುಸ್ತೀರ್ಥ (ಧನುಷ್ಕೋಟಿ), ಪಶ್ಚಿಮದಲ್ಲಿ ಗೋಮತೀಕುಂಡ ಮತ್ತು ಉತ್ತರದಲ್ಲಿ ತಪ್ತಕುಂಡ. ಇದೇ ರೀತಿ, ನಾಲ್ಕು ಪವಿತ್ರ ಸರೋವರಗಳೂ ಇವೆ: ಪಂಪಾ, ವಿಂದು (ಬಿಂದು), ನಾರಾಯಣ ಮತ್ತು ಮಾನಸ ಕ್ರಮವಾಗಿ ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ. ಅದೇ ರೀತಿಯಲ್ಲಿ ಜನಪ್ರಿಯವಾಗಿರುವ ನಾಲ್ಕು ಪವಿತ್ರ ಕ್ಷೇತ್ರಗಳಿವೆ– ಮುಕ್ತಿ, ವರಾಹ, ಹರಿಹರ ಮತ್ತು ಕುರು. ಮತ್ತೆ ನೋಡಿದರೆ ಸೂರ್ಯದೇವನ ಪೂಜೆಗಾಗಿ ಮೂರು ಪ್ರಧಾನವಾದ ದೇವಸ್ಥಾನಗಳಿವೆ. ಕೋಣಾರ್ಕ (ಒರಿಸ್ಸಾ) ಪೂರ್ವದಲ್ಲಿ, ಮುಲ್ತಾನ್ (ಮೂಲಸ್ಥಾನ) ಉತ್ತರದಲ್ಲಿ [*ಬ್ರಹ್ಮಪುರಾಣ* I. ೧೪೦] ಮತ್ತು ಪಶ್ಚಿಮದಲ್ಲಿ ಸೂರ್ಯಪುರ ಅಥವಾ ಸೂರತ್ [*ಜೆ.ಎ.ಎಸ್.ಬಿ.* I. ೩೮೭]. ಇದೇ ರೀತಿ ಎಂಟು ವಿನಾಯಕ ಅಥವಾ ಗಣೇಶ ತೀರ್ಥಗಳೂ ಜಗದ್ವಿದಿತವಾಗಿವೆ. ಅವು ಮೋರೇಶ್ವರ, ಬಲ್ಲಾಳ, ಲೇನಾದ್ರಿ, ಸಿದ್ಧಟೇಕ, ಓಝುರ್, ಸ್ಥೇವರ ಅಥವಾ ಮಯೂರ, ರಂಜನಗ್ರಾಮ ಮತ್ತು ಮಹದ.

ಈ ಕೆಳಗೆ ಕೊಟ್ಟಿರುವ ಶ್ಲೋಕಸಮುಚ್ಚಯವು ಪ್ರತಿಯೊಬ್ಬ ಹಿಂದೂಮತಾಭಿಮಾನಿಗೂ ಇಷ್ಟವಾದ ಹನ್ನೆರಡು ಜ್ಯೋತಿರ್ಲಿಂಗಗಳನ್ನು ನಮೂದಿಸುತ್ತದೆ. ಇವು ಭಾರತದೇಶದ ಎಲ್ಲ ಭಾಗಗಳಲ್ಲಿ ಹರಡಿಹೋಗಿವೆ:

ಸೌರಾಷ್ಟ್ರೇ ಸೋಮಾನಾಥಂಚ ಶ್ರೀಶೈಲೇ ಮಲ್ಲಿಕಾರ್ಜುನಮ್
ಉಜ್ಜಯಿನ್ಯಾಂ ಮಹಾಕಾಲಮೋಂಕಾರಮಮರೇಶ್ವರೇ॥
ಕೇದಾರಂ ಹಿಮವತ್‌ಪೃಷ್ಠೇ ಡಾಕಿನ್ಯಾಂ ಭೀಮಶಂಕರಮ್।
ವಾರಾಣಸ್ಯಾಂಚ ವಿಶ್ವೇಶಂ ತ್ರ್ಯಂಬಕಂ ಗೌತಮೀತಟೇ॥

ವೈದ್ಯನಾಥಂ ಚಿತಾಭೂಮೌ ನಾಗೇಶಂ ದ್ವಾರಕಾವನೇ।
ಸೇತುಬಂಧೇ ಚ ರಾಮೇಶಂ ಘುಶ್ಮೇಶಂಚ ಶಿವಾಲಯೇ॥
ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ।
ಸಪ್ತಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ॥

[ಪ್ರತಿದಿನವೂ ಬೆಳಗ್ಗೆ ಮತ್ತು ಸಂಜೆ ಮನುಷ್ಯನು ಶಿವನ ಹನ್ನೆರಡು ಜ್ಯೋತಿರ್ಲಿಂಗಗಳ ಹೆಸರುಗಳನ್ನು ಪಠಿಸಬೇಕು. ಗುಜರಾತಿನ ಸೌರಾಷ್ಟ್ರದಲ್ಲಿರುವ ಸೋಮನಾಥ, ಶ್ರೀಶೈಲದಲ್ಲಿರುವ ಮಲ್ಲಿಕಾರ್ಜುನ, ಉಜ್ಜಯಿನಿಯಲ್ಲಿರುವ ಮಹಾಕಾಲ, (ಮಂಡಲೇಶ್ವರ ಮತ್ತು ಮಾಹಿಷ್ಮತಿಯ ಸಮೀಪದಲ್ಲಿರುವ) ಅಮರೇಶ್ವರದ ಓಂಕಾರ, ಹಿಮವತ್ ಪರ್ವತದ ಬಳಿಯಿರುವ ಕೇದಾರನಾಥ, ಡಾಕಿನಿಯಲ್ಲಿರುವ ಭೀಮಶಂಕರ, ವಾರಾಣಸಿಯಲ್ಲಿರುವ ವಿಶ್ವೇಶ (ವಿಶ್ವನಾಥ), ಗೌತಮೀ ನದಿಯ ತಟದಲ್ಲಿರುವ ತ್ರ್ಯಂಬಕೇಶ್ವರ, ಚಿತಾಭೂಮಿಯಲ್ಲಿರುವ ವೈದ್ಯನಾಥ, ದಾರುಕಾವನದಲ್ಲಿರುವ ನಾಗೇಶ, ಸೇತುಬಂಧದ ಬಳಿ ಇರುವ ರಾಮೇಶ್ವರ ಮತ್ತು ಶಿವಾಲಯದಲ್ಲಿರುವ ಘುಶ್ಮೇಶ. ಈ ದ್ವಾದಶ ಜ್ಯೋತಿರ್ಲಿಂಗಗಳ ಹೆಸರುಗಳನ್ನು ನಿತ್ಯವೂ ಸ್ಮರಿಸಿದರೆ ಏಳು ಜನ್ಮಗಳ ಪಾಪವೂ ನಾಶ ಹೊಂದುತ್ತದೆ.]

ಇದೇ ರೀತಿಯಾಗಿ ಇರುವ ಇನ್ನೊಂದು ಶ್ಲೋಕ ಸಮುಚ್ಚಯವು ಪವಿತ್ರ ವಿಷ್ಣುಕ್ಷೇತ್ರಗಳನ್ನು ನಿರೂಪಿಸುತ್ತದೆ. ಈ ಶ್ಲೋಕಗಳನ್ನು ಲಕ್ಷಾಂತರ ಹಿಂದೂಗಳು ಪ್ರತಿದಿನವೂ ಪಠಿಸುತ್ತಾರೆ.

ನಾರಾಯಣಂ ಬದರ್ಯಾಖ್ಯೇ ನೈಮಿಶೇ ಹರಿಮವ್ಯಯಮ್।
ಶಾಲಗ್ರಾಮಂ ಹರಿಕ್ಷೇತ್ರೇ ಅಯೋಧ್ಯಾಯಾಂ ರಘೂತ್ತಮಮ್॥
ಮಧುರಾಯಾಂ ಬಾಲಕೃಷ್ಣಂ ಮಾಯಾಯಾಂ ಮಧುಸೂದನಮ್।
ಕಾಶ್ಯಾಂ ತು ಭೋಗಶಯನಮ್ ಅವಂತ್ಯಾಮವನೀಪತಿಮ್॥
ದ್ವಾರವತ್ಯಾಂ ಯಾದವೇಂದ್ರಂ ವ್ರಜೇ ಗೋಪೀಜನಪ್ರಿಯಮ್।
ವೃಂದಾವನೇ ನಂದಸೂನುಂ ಗೋವಿಂದಂ ಕಾಲಿಯಹ್ರದೇ॥
ಗೋವರ್ಧನೇ ಗೋಪವೇಷಂ ಭವಘ್ನಂ ಭಕ್ತವತ್ಸಲಮ್।
ರೋಮಂಥಪರ್ವತೇ ಶೌರಿಂ ಹರಿದ್ವಾರೇ ಜಗತ್ಪತಿಮ್॥
ಪ್ರಯಾಗೇ ಮಾಧವಂ ಚೈವ ಗಯಾಯಾಂ ತು ಗದಾಧರಮ್।
ಗಂಗಾಸಾಗರಗೇ ವಿಷ್ಣು ಚಿತ್ರಕೂಟೇ ತು ರಾಘವಮ್॥
ನಂದಿಗ್ರಾಮೇ ರಾಕ್ಷಸಘ್ನಂ ಪ್ರಭಾಸೇ ವಿಶ್ವರೂಪಿಣಮ್।
ಶ್ರೀ ಕೂರ್ಮೇ ಕೂರ್ಮಮಚಲಂ ನೀಲಾದ್ರೌ ಪುರುಷೋತ್ತಮಮ್॥
ಸಿಂಹಾಚಲೇ ಮಹಾಸಿಂಹಂ ಗದಿನಂ ತುಲಸೀವನೇ।

ಘೃತಶೈಲೇ ಪಾಪಹರಂ ಶ್ವೇತಾದ್ರೌ ಸಿಂಹರೂಪಿಣಮ್॥
ಯೋಗಾನಂದಂ ಧರ್ಮಪುರ್ಯಾಂ ಕಾಕುಲೇ ತ್ವಂಧನಾಯಕಮ್।
ಅಹೋಬಲೇ ಗಾರುಡಾದ್ರೌ ಹಿರಣ್ಯಾಸುರಮರ್ದನಮ್॥
ವಿಟ್ಠಲಂ ಪಾಂಡುರಂಗೇ ತು ವೇಂಕಟಾದ್ರೌ ರಮಾಸಖಿಮ್।
ನಾರಾಯಣಂ ಯಾದವಾದ್ರೌ ನೃಸಿಂಹಂ ಘಟಿಕಾಚಲೇ॥
ವರದಂ ವಾರಣಗಿರೌ ಕಾಂಚ್ಯಾಂ ಕಮಲಲೋಚನಮ್।
ಯಥೋಕ್ತಕಾರಿಣಂ ಚೈವ ಪರಮೇಶಪುರಾಶ್ರಯಮ್॥
ಪಾಂಡವಾನಾಂ ತಥಾ ದೂತಂ ತ್ರಿವಿಕ್ರಮಮಥೋನ್ನತಮ್।
ಕಾಮಾಸಿಕ್ಯಾಂ ನೃಸಿಂಹಂ ಚ ತಥಾಷ್ಟಭುಜಸಂಜ್ಞಕಮ್॥
ಮೇಘಾಕಾರಂ ಶುಭಾಕಾರಂ ಶೇಷಾಕಾರಂ ತು ಶೋಭನಮ್।
ಅಂತರಾ ಶಿತಿಕಂಠಸ್ಯ ಕಾಮಕೋಟ್ಯಾಂ ಶುಭಪ್ರದಮ್॥
ಕಾಲಮೇಘಂ ಖಗಾರೂಢಂ ಕೋಟಿಸೂರ್ಯಸಮಪ್ರಭಮ್।
ದಿವ್ಯಂ ದೀಪಪ್ರಕಾಶಂ ಚ ದೇವಾನಾಮಧಿಪಂ ಮುನೇ॥
ಪ್ರವಾಲವರ್ಣಂ ದೀಪಾಭಂ ಕಾಂಚ್ಯಾಮಷ್ಟಾದಶಾಸ್ಥಿತಮ್।
ಶ್ರೀಗೃಧ್ರಸರಸಸ್ತೀರೇ ಭಾಂತಂ ವಿಜಯರಾಘವಮ್॥
ವೀಕ್ಷಾರಣ್ಯೇ ಮಹಾಪುಣ್ಯೇ ಶಯಾನಂ ವೀರರಾಘವಮ್।
ತೋತಾದ್ರೌ ತುಂಗಶಯನಂ ಗಜಾರ್ತಿಘ್ನಂ ಗಜಸ್ಥಲೇ॥
ಮಹಾಬಲಿಂ ಬಲಿಪುರೇ ಭಕ್ತಿಸಾರೇ ಜಗತ್ಪತಿಮ್।
ಮಹಾವರಾಹಂ ಶ್ರೀಮುಷ್ಣೇ ಮಹೀಂದ್ರೇಪದ್ಮಲೋಚನಮ್॥
ಶ್ರೀರಂಗೇ ತು ಜಗನ್ನಾಥಂ ಶ್ರೀಧಾಮೇ ಜಾನಕೀಪ್ರಿಯಮ್।
ಸಾರಕ್ಷೇತ್ರೇ ಸಾರನಾಥಂ ಖಂಡನೇ ಹರಚಾಪಹಮ್॥
ಶ್ರೀನಿವಾಸಸ್ಥಲೇ ಪೂರ್ಣಂ ಸುವರ್ಣಂ ಸ್ವರ್ಣಮಂದಿರೇ।
ವ್ಯಾಘ್ರಪುರ್ಯಾಂ ಮಹಾವಿಷ್ಣುಂ ಭಕ್ತಿಸ್ಥಾನೇಷು ಭಕ್ತಿದಮ್॥
ಶ್ವೇತಹ್ರದೇ ಶಾಂತಮೂರ್ತಿಂ ಅಗ್ನಿಪರ್ಯಾಂ ಸುರಪ್ರಿಯಮ್।
ಭರ್ಗಾಖ್ಯಂ ಭಾರ್ಗವ ಸ್ಥಾನೇ ವೈಕುಂಠಾಖ್ಯೇ ತು ಮಾಧವಮ್॥
ಪುರುಷೋತ್ತಮೇ ಭಕ್ತಸಖಿಂ ಚಕ್ರತೀರ್ಥೇ ಸುದರ್ಶನಮ್।
ಕುಂಭಕೋಣೇ ಚಕ್ರಪಾಣಿಂ ಭೂತಸ್ಥಾನೇ ತು ಶಾರ್ಙ್ಗಿಣಮ್॥
ಕಪಿಸ್ಥಲೇ ಗಜಾರ್ತಿಘ್ನಂ ಗೋವಿಂದಂ ಚಿತ್ರಕೂಟಕೇ।
ಅನುತ್ತಮಂ ಚೋತ್ತಮಾಯಾಂ ಶ್ವೇತಾದ್ರೌ ಪದ್ಮಲೋಚನಮ್।
ಪಾರ್ಥಸ್ಥಲೇ ಪರಬ್ರಹ್ಮ ಕೃಷ್ಣಕೋಟ್ಯಾಂ ಮಧುದ್ವಿಷಮ್॥
ನಂದಪುರ್ಯಾಂ ಮಹಾನಂದಂ ವೃದ್ಧಪುರ್ಯಾಂ ವೃಷಾಶ್ರಯಮ್।

ಅಸಂಗಂ ಸಂಗಮಗ್ರಾಮೇ ಅರಣ್ಯೇ ಶರಣಂ ಮಹತ್॥
ದಕ್ಷಿಣದ್ವಾರಕಾಯಾಂ ತು ಗೋಪಾಲಂ ಜಗತಾಂ ಪತಿಮ್॥
ಸಿಂಹಕ್ಷೇತ್ರೇ ಮಹಾಸಿಂಹಂ ಮಲ್ಲಾರಿಂ ಮಣಿಮಂಡಪೇ।
ನಿಬಿಡೇ ನಿಬಿಡಾಕಾರಂ ಧನುಷ್ಕೇ ಜಗದೀಶ್ವರಮ್॥
ಮೌಹ್ವರೇ ಕಾಲಮೇಘಂತು ಮಧುರಾಯಾಂತು ಸುಂದರಮ್।
ವೃಷಭಾದ್ರೌ ಮಹಾಪುಣ್ಯೇ ಪರಮಸ್ವಾಮಿಸಂಜ್ಞಕಮ್॥
ಶ್ರೀಮದ್ವರಗುಣೇ ನಾಥಂ ಕುರುಕಾಯಾಂ ರಮಾಸಖಿಮ್।
ಗೋಷ್ಠೀಪುರೇ ಗೋಷ್ಠೀಪತಿಂ ಶಯಾನಂ ದರ್ಭಸಂ ಸ್ತರೇ॥
ಧನ್ವಿ ಮಂಗಲಕೇ ಶೌರಿಂ ಬಲಾಢ್ಯಂ ಭ್ರಮರಸ್ಥಲೇ।
ಕುರಂಗೇ ತು ತಥಾ ಪೂರ್ಣಂ ಕೃಷ್ಣಮೇಕಂ ವಟಸ್ಥಲೇ।
ಅಚ್ಯುತಂ ಕ್ಷುದ್ರನದ್ಯಾಂ ತು ಪದ್ಮನಾಭಮನಂತಕೇ।
ಏತಾನಿ ವಿಷ್ಣೋಃ ಸ್ಥಾನಾನಿ ಪೂಜಿತಾನಿ ಮಹಾತ್ಮಭಿಃ॥

[ವಿಷ್ಣುವನ್ನು ಅವನ ನಾನಾರೂಪಗಳಲ್ಲಿ ಮತ್ತು ನಾನಾ ನಾಮಗಳಿಂದ ಈ ಪವಿತ್ರ ಕ್ಷೇತ್ರಗಳಲ್ಲಿ ಪೂಜಿಸಬೇಕು. ಬದರಿಯಲ್ಲಿ ನಾರಾಯಣನನ್ನು, ನೈಮಿಶಾರಣ್ಯದಲ್ಲಿ ಶಾಶ್ವತನಾದ ಹರಿಯನ್ನು, ಹರಿಕ್ಷೇತ್ರದಲ್ಲಿ ಶಾಲಗ್ರಾಮವನ್ನು, ರಘೂತ್ತಮನನ್ನು (ರಾಮನನ್ನು) ಅಯೋಧ್ಯೆಯಲ್ಲಿ, ಮಧುರೆಯಲ್ಲಿ ಬಾಲಕೃಷ್ಣನನ್ನು, ಮಾಯಾನಗರಿಯಲ್ಲಿ ಮಧುಸೂದನನನ್ನು, (ಆದಿಶೇಷನ ಮೇಲೆ ಮಲಗಿರುವ) ಭೋಗಶಯನ(ವಿಷ್ಣು)ವನ್ನು ಕಾಶಿಯಲ್ಲಿ, ಅವನೀಪತಿಯನ್ನು ಅವಂತಿಯಲ್ಲಿ, ಯಾದವೇಂದ್ರನನ್ನು ದ್ವಾರಾವತಿಯಲ್ಲಿ, ಗೋಪೀಜನಪ್ರಿಯನನ್ನು ವ್ರಜದಲ್ಲಿ, ವೃಂದಾವನದಲ್ಲಿ ನಂದಸೂನುವನ್ನು (ನಂದನ ಮಗನನ್ನು), ಕಾಲಿಯಸರಸ್ಸಿನಲ್ಲಿ ಗೋವಿಂದನನ್ನು, ಗೋವರ್ಧನದಲ್ಲಿ ಗೋಪವೇಷವನ್ನು ಧರಿಸಿದ ಭಕ್ತವತ್ಸಲನನ್ನು, ರೋಮಂಥ ಪರ್ವತದಲ್ಲಿ ಶೌರಿಯನ್ನು, ಹರಿದ್ವಾರದಲ್ಲಿ ಜಗತ್ಪತಿಯನ್ನು, ಪ್ರಯಾಗದಲ್ಲಿ ಮಾಧವನನ್ನು, ಗಯೆಯಲ್ಲಿ ಗದಾಧರನನ್ನು, ಗಂಗಾಸಾಗರ ಸಂಗಮದಲ್ಲಿ ವಿಷ್ಣುವನ್ನು, ಚಿತ್ರಕೂಟದಲ್ಲಿ ರಾಘವ (ರಘುವಿನ ವಂಶದಲ್ಲಿ ಹುಟ್ಟಿದ ರಾಮ)ನನ್ನು ನಂದಿಗ್ರಾಮದಲ್ಲಿ (ರಾಕ್ಷಸರನ್ನು ಕೊಂದ) ರಾಕ್ಷಸಘ್ನನನ್ನು, ಪ್ರಭಾಸದಲ್ಲಿ ವಿಶ್ವರೂಪಿಯನ್ನು, ಶ್ರೀಕೂರ್ಮ ಎಂಬಲ್ಲಿ ಕೂರ್ಮರೂಪದ ಹರಿಯನ್ನು ನೀಲಾದ್ರಿಯಲ್ಲಿ ಪುರುಷೋತ್ತಮನನ್ನು, ಸಿಂಹಾಚಲದಲ್ಲಿ ಮಹಾಸಿಂಹನನ್ನು ತುಲಸೀವನದಲ್ಲಿ ಗದೆಯನ್ನು ಧರಿಸಿದವನನ್ನು, ಘೃತಶೈಲದಲ್ಲಿ ಪಾಪಹರನನ್ನು, ಶ್ವೇತಾದ್ರಿಯಲ್ಲಿ ಸಿಂಹರೂಪಿಯನ್ನು, ಧರ್ಮಪುರಿಯಲ್ಲಿ ಯೋಗಾನಂದನನ್ನು, ಕಾಕುಳ ಕ್ಷೇತ್ರದಲ್ಲಿ ಅಂಧನಾಯಕನನ್ನು, ಗರುಡಾದ್ರಿಯಲ್ಲಿ ಹಿರಣ್ಯಕಶಿಪುವನ್ನು ಸಂಹರಿಸಿದ

ಅಹೋಬಲ ನರಸಿಂಹನನ್ನು, ಪಾಂಡುರಂಗದಲ್ಲಿ ವಿಠ್ಠಲನನ್ನು, ವೇಂಕಟಾದ್ರಿಯಲ್ಲಿ ರಮಾಸಖನಾದ ಶ್ರೀನಿವಾಸನನ್ನು, ಯಾದವಾದ್ರಿ(ಮೇಲುಕೋಟೆ)ಯಲ್ಲಿ ತಿರು ನಾರಾಯಣನನ್ನು, ಘಟಿಕಾಚಲದಲ್ಲಿ ನೃಸಿಂಹನನ್ನು, ವಾರಣಗಿರಿಯಲ್ಲಿ ವರದನನ್ನು, ಕಾಂಚಿಯಲ್ಲಿ ಕಮಲಲೋಚನನನ್ನು, ಪರಮೇಶಪುರದಲ್ಲಿ ಯಥೋಕ್ತಕಾರಿಯನ್ನು (ಪಾಂಡವರ ದೂತನಾಗಿ ತಾನು ಹೇಳಿದಂತೆ ಮಾಡಿದುದರಿಂದ ಕೃಷ್ಣನಿಗೆ ಯಥೋಕ್ತಕಾರಿ ಎಂದು ಹೆಸರು), ಕಾಮಾಸಿಕೀ ಕ್ಷೇತ್ರದಲ್ಲಿ ಅಷ್ಟಭುಜ ನೃಸಿಂಹನನ್ನು, ನೀಲಕಂಠಶಿವನ ಸಮೀಪದಲ್ಲಿ ಕಾಮಕೋಟಿಯಲ್ಲಿ ಮೇಘದಂತೆ ಶುಭಾಕಾರನಾಗಿ ಶೇಷಾಕಾರನಾದ ದೇವನನ್ನು, ಭಕ್ತರು ಪೂಜಿಸಬೇಕು. ಎಲೈ ಮುನಿಯೆ, ಗರುಡಾರೂಢನಾದ ಕೋಟಿಸೂರ್ಯ ಸಮಪ್ರಭನಾದ ಮೇಘಶ್ಯಾಮನಾದ ದೇವರನ್ನು ಪೂಜಿಸುತ್ತೇವೆ. ಶ್ರೀಗೃಧ್ರ ಕ್ಷೇತ್ರದಲ್ಲಿ ವೀರರಾಘವನ ರೂಪದಲ್ಲಿರುವ ವಿಷ್ಣು ಹವಳದ ಬಣ್ಣದಿಂದ ಶೋಭಿಸುತ್ತಿದ್ದಾನೆ. ಕಾಂಚಿಯಲ್ಲಿ ದೀಪದಂತೆ ಪ್ರಕಾಶಮಾನನಾದ ವಿಷ್ಣುವನ್ನು ವಿಜಯರಾಘವ ಎಂಬ ಹೆಸರಿನಿಂದ ಪೂಜಿಸುತ್ತೇವೆ.

ಪುಣ್ಯಾರಣ್ಯವಾದ ವೀಕ್ಷಾರಣ್ಯದಲ್ಲಿ ವೀರರಾಘವ ಶಯನ ಮಾಡುತ್ತಿದ್ದಾನೆ. ಅವನನ್ನು ಪೂಜಿಸುತ್ತೇವೆ. ತೋತಾದ್ರಿಯಲ್ಲಿ ತುಂಗಶಯನನ್ನು, ಗಜಸ್ಥಳದಲ್ಲಿ ಗಜದ ಸಂತಾಪವನ್ನು ನಿವಾರಿಸಿದವನನ್ನು, ಬಲಿಪುರದಲ್ಲಿ ಮಹಾಬಲಿಯನ್ನು, ಭಕ್ತಿಸಾರದಲ್ಲಿ ಜಗತ್ಪತಿಯನ್ನು, ಶ್ರೀಮುಷ್ಣದಲ್ಲಿ ವರಾಹಾವತಾರವನ್ನು, ಮಹೀಂದ್ರದಲ್ಲಿ ಪದ್ಮಲೋಚನನನ್ನು ಪೂಜಿಸುತ್ತೇವೆ. ಶ್ರೀರಂಗದಲ್ಲಿ ಜಗನ್ನಾಥನನ್ನು, ಶ್ರೀಧಾಮದಲ್ಲಿ ಜಾನಕೀನಾಥನನ್ನು, ಸಾರಕ್ಷೇತ್ರದಲ್ಲಿ ಸಾರನಾಥನನ್ನು, ಖಂಡನಕ್ಷೇತ್ರದಲ್ಲಿ ಹರನ ಕೋದಂಡವನ್ನು ಮುರಿದ ರಾಮನನ್ನು, ಶ್ರೀನಿವಾಸಸ್ಥಳದಲ್ಲಿ ಪೂರ್ಣನನ್ನು ಸ್ವರ್ಣಮಂದಿರದಲ್ಲಿ ಸುವರ್ಣನನ್ನು, ವ್ಯಾಘ್ರಪುರಿಯಲ್ಲಿ ಮಹಾವಿಷ್ಣುವನ್ನು, ಭಕ್ತಿ ಸ್ಥಾನಗಳಲ್ಲಿ ಭಕ್ತಿದನನ್ನು ಪೂಜಿಸುತ್ತೇವೆ. ಶ್ವೇತಹ್ರದದಲ್ಲಿ (ಬಿಳಿಯ ಸರೋವರದಲ್ಲಿ) ಶಾಂತಮೂರ್ತಿಯನ್ನು, ಅಗ್ನಿಪುರಿಯಲ್ಲಿ ಸುರಪ್ರಿಯನನ್ನು, ಭಾರ್ಗವ ಕ್ಷೇತ್ರದಲ್ಲಿ ಭರ್ಗನನ್ನು, ವೈಕುಂಠದಲ್ಲಿ ಮಾಧವನನ್ನು ಪೂಜಿಸುತ್ತೇವೆ. ಪುರುಷೋತ್ತಮ ಕ್ಷೇತ್ರದಲ್ಲಿ ಭಕ್ತಸಖದೆಂದು ಚಕ್ರತೀರ್ಥದಲ್ಲಿ ಸುದರ್ಶನನೆಂದು, ಕುಂಭಕೋಣದಲ್ಲಿ ಚಕ್ರಪಾಣಿಯೆಂದು, ಭೂತಸ್ಥಾನದಲ್ಲಿ ಶಾರ್ಙ್ಗ ಎಂದು ಆ ಹರಿಯನ್ನು ಪೂಜಿಸುತ್ತೇವೆ. ಕಪಿಸ್ಥಳದಲ್ಲಿ ಗಜಾರ್ತಿಘ್ನನೆಂದೂ, ಚಿತ್ರಕೂಟದಲ್ಲಿ ಗೋವಿಂದನೆಂದೂ, ಉತ್ತಮ ಕ್ಷೇತ್ರದಲ್ಲಿ ಅನುತ್ತಮ ಎಂದೂ, ಶ್ವೇತಾದ್ರಿಯಲ್ಲಿ ಪದ್ಮಲೋಚನನೆಂದೂ ಆ ವಿಷ್ಣು ಪೂಜಿಸಲ್ಪಡುತ್ತಿದ್ದಾನೆ.

ಪಾರ್ಥ ಸ್ಥಲದಲ್ಲಿ ಪರಬ್ರಹ್ಮ, ಕೃಷ್ಣಕೋಟಿಯಲ್ಲಿ ಮಧುದ್ವಿಟ್, ನಂದಪುರಿಯಲ್ಲಿ ಮಹಾನಂದ, ವೃದ್ಧಪುರಿಯಲ್ಲಿ ವೃಷಾಶ್ರಯ, ಸಂಗಮ ಗ್ರಾಮದಲ್ಲಿ ಅಸಂಗ,

ಅರಣ್ಯದಲ್ಲಿ ಶರಣ, ದಕ್ಷಿಣ ದ್ವಾರಕೆಯಲ್ಲಿ ಜಗತ್ಪತಿ ಗೋಪಾಲ, ಸಿಂಹಕ್ಷೇತ್ರದಲ್ಲಿ ಮಹಾಸಿಂಹ, ಮಣಿಮಂಡಪದಲ್ಲಿ ಮಲ್ಲಾರಿ, ನಿಬಿಡಕ್ಷೇತ್ರದಲ್ಲಿ ನಿಬಿಡಾಕಾರ, ಧನುಷ್ಕದಲ್ಲಿ ಜಗದೀಶ್ವರ, ಮೌಹ್ವರದಲ್ಲಿ ಕಾಲಮೇಘ, ಮಧುರೆಯಲ್ಲಿ ಸುಂದರ, ಪವಿತ್ರ ವೃಷಭಾದ್ರಿಯಲ್ಲಿ ಪರಮಸ್ವಾಮಿ ಎಂದು ಆ ವಿಷ್ಣುವೇ ಅರ್ಚಿಸಲ್ಪಡುತ್ತಿದ್ದಾನೆ.

ಶ್ರೀಮದ್ವರಗುಣ ಎಂಬಲ್ಲಿ ವಿಷ್ಣುವನ್ನು ನಾಥ ಎಂದೂ, ಕುರುಕ ಕ್ಷೇತ್ರದಲ್ಲಿ ರಮಾಸಖನೆಂದೂ, ಗೋಷ್ಠೀಪುರದಲ್ಲಿ ಗೋಷ್ಠೀಪತಿ ಎಂದೂ, ದರ್ಭಶಯನದಲ್ಲಿ ದರ್ಭೆಗಳ ಮೇಲೆ ಮಲಗಿರುವ ರೂಪದಲ್ಲೂ ಪೂಜಿಸುತ್ತಾರೆ. ವಿಷ್ಣು ಮಂಗಳಕದಲ್ಲಿ ಶೌರಿ, ಭ್ರಮರ ಸ್ಥಳದಲ್ಲಿ ಬಲಾಢ್ಯ, ಕುರಂಗದಲ್ಲಿ ಪೂರ್ಣ, ವಟಸ್ಥಳದಲ್ಲಿ ಕೃಷ್ಣ, ಕ್ಷುದ್ರನದಿಯಲ್ಲಿ ಅಚ್ಯುತ, ಅನಂತಕದಲ್ಲಿ ಪದ್ಮನಾಭ ಎಂದು ಪೂಜಿತನಾಗಿದ್ದಾನೆ. ಈ ಸ್ಥಳಗಳೆಲ್ಲ ವಿಷ್ಣುವಿನ ಪೂಜಾಸ್ಥಳಗಳು. ಮಹಾತ್ಮರು ಇಲ್ಲಿ ವಿಷ್ಣುವನ್ನು ಪೂಜಿಸುತ್ತಾರೆ.]

ಪತಿವ್ರತಾಶಿರೋಮಣಿ ಸತಿಯ ಕಥೆಯಲ್ಲಿ ಆಕೆಯ ಶರೀರದ ಚೂರುಗಳು ಬಿದ್ದ ಐವತ್ತೆರಡು ಸ್ಥಳಗಳ ಪ್ರಾಮುಖ್ಯವನ್ನು ಯಾರು ತಾನೆ ಮರೆಯಲು ಸಾಧ್ಯ? ಆಕೆಯ ಒಂದು ಬೆರಳು ಕೊಲ್ಕತ್ತಾ ಸ್ಥಳದಲ್ಲಿ ಬಿದ್ದಿತು. ಅದೇ ಕಾಲೀಘಟ್ಟ. ಆಕೆಯ ನಾಲಗೆ ಉತ್ತರ ಪಂಜಾಬಿನ ಕಾಂಗ್ರಾ (ಜ್ವಾಲಾಮುಖಿ) ಎಂಬಲ್ಲಿ ಬಿದ್ದಿತು. ಇಂದಿಗೂ ಅಲ್ಲಿ ಭೂಮಿಯ ಕೆಳಗಿನಿಂದ ಅಲ್ಲಿ ಬೆಂಕಿಯ ನಾಲಗೆಗಳು ಮೇಲೆದ್ದು ನೆಕ್ಕುತ್ತಿರುವಂತೆ ಕಾಣಿಸುತ್ತದೆ. ಆಕೆಯ ಎಡಗೈ ವಾರಾಣಸಿಯಲ್ಲಿ ಬಿದ್ದಿತು. ಅದು ಶಾಶ್ವತವಾಗಿ ಅನ್ನಪೂರ್ಣೆಯಾಗಿದೆ.[೧೯]

ಈ ಶಾಕ್ತಪೀಠಗಳು ಬೇರೆ ಬೇರೆ ತಾಂತ್ರಿಕ ಗ್ರಂಥಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ನಿರೂಪಿತವಾಗಿವೆ.

ಈ ಗ್ರಂಥಗಳಲ್ಲಿ ಮುಖ್ಯವಾದವು ಇವು:

೧. ತಂತ್ರ ಚೂಡಾಮಣಿ
ಇದರ ಒಂದು ಭಾಗವು ಪೀಠನಿರ್ಣಯ ಅಥವಾ ಮಹಾಪೀಠ ನಿರೂಪಣ ಎಂದು ಪ್ರಸಿದ್ಧವಾಗಿದೆ.
೨. ಕುಬ್ಜಿಕಾತಂತ್ರದಲ್ಲಿ ನಲವತ್ತೆರಡು ಪೀಠಸ್ಥಾನಗಳ ಪಟ್ಟಿಯನ್ನು ಕೊಟ್ಟಿದ್ದಾರೆ.
೩. ಜ್ಞಾನಾರ್ಣವತಂತ್ರದಲ್ಲಿ ಮೂವತ್ತು ಪೀಠಗಳನ್ನು ಹೆಸರಿಸಿದ್ದಾರೆ.
೪. ತಂತ್ರಸಾರದಲ್ಲಿ ಐವತ್ತೊಂದು ಪೀಠಗಳನ್ನು ನಿರೂಪಿಸಲಾಗಿದೆ.
೫. ಮತ್ಸ್ಯಪುರಾಣದಲ್ಲಿ ಒಂದುನೂರಎಂಟು ಪೀಠಗಳನ್ನು ಹೆಸರಿಸಲಾಗಿದೆ. ಸ್ಕಾಂದಪುರಾಣವೂ ಪದ್ಮಪುರಾಣವೂ ದೇವೀ ಭಾಗವತ ಪುರಾಣವೂ ಈ ಪೀಠಗಳನ್ನು ಹೇಳಿವೆ.

ಈ ಪೀಠಗಳ ಬಗೆಗೆ ಇರುವ ಸಂಪ್ರದಾಯವು ಬೇರೆ ಬೇರೆ ಮೂಲಗಳಿಂದ ವಿಷಯವನ್ನು ಸಂಗ್ರಹಿಸುವ ಬಗೆಗೆ ಸಾಕಷ್ಟು ಸ್ವಾತಂತ್ರ್ಯವನ್ನು ಕೊಡುತ್ತದೆ ಎಂದು ಕಂಡುಬರುತ್ತದೆ. ಪ್ರಾಯಶಃ ಈ ವಿಷಯಗಳನ್ನು ತಿಳಿದುಕೊಳ್ಳಲು ಜನರಿಗೆ ಒಂದೇ ಆಕರ ಇರಲಿಲ್ಲವೆಂಬುದು ಇದಕ್ಕೆ ಕಾರಣವಾಗಿರಬಹುದು. ಈ ಸಂಪ್ರದಾಯಕ್ಕೆ ಮೂಲವಾಗಿರುವುದಂತೂ ಕಾಳಿಕಾಪುರಾಣ ಮತ್ತು ದೇವೀಭಾಗವತ ಪುರಾಣ ಮುಂತಾದ ಗ್ರಂಥಗಳಲ್ಲಿ ವರ್ಣಿತವಾದ ದಕ್ಷಯಜ್ಞಭಂಗದ ಕಥೆಯೇ ಆಗಿದೆ. ನಮ್ಮ ಪ್ರಕೃತ ಉದ್ದೇಶಕ್ಕೆ ಪೀಠನಿರ್ಣಯ ಎಂಬ ಗ್ರಂಥದಲ್ಲಿ ಕೊಟ್ಟಿರುವ ಪಟ್ಟಿಯನ್ನು ಪ್ರಾತಿನಿಧಿಕ ಪಟ್ಟಿ ಎಂದು ತೆಗೆದುಕೊಂಡರೆ ಸಾಕು.

ಬ್ರಹ್ಮರಂಧ್ರಂ ಹಿಂಗುಲಾಯಾಂ ಭೈರವೀ ಭೀಮಲೋಚನಾ।
ಕೋಟ್ಟರೀ ಸಾ ಮಹಾದೇವ ತ್ರಿಗುಣಾ ಚ ದಿಗಂಬರೀ ॥೪॥
ಕರವೀರೇ ತ್ರಿಣೇತ್ರಂ ಮೇ ದೇವೀ ಮಹಿಷಮರ್ದಿನೀ।
ಕ್ರೋಧೀಶೋ ಭೈರವಸ್ತತ್ರ ಸುಗಂಧಾಯಾಂ ಚ ನಾಸಿಕಾ ॥೫॥
ದೇವಸ್ತ್ರ್ಯಂಬಕನಾಮಾ ಚ ಸುನಂದಾ ತತ್ರ ದೇವತಾ ॥೬॥
ಕಾಶ್ಮೀರೇ ಕಂಠದೇಶಶ್ಚ ತ್ರಿಸಂಧ್ಯೇಶ್ವರ ಭೈರವಃ।
ಮಹಾಮಾಯಾ ಭಗವತೀ ಗುಣಾತೀತಾ ವರಪ್ರದಾ ॥೭॥
ಜ್ವಾಲಾಮುಖ್ಯಾಂ ತಥಾ ಜಿಹ್ವಾ ದೇವ ಉನ್ಮತ್ತಭೈರವಃ।
ಅಂಬಿಕಾ ಸಿದ್ಧಿಕಾ ನಾಮ್ನೀ(ದೇವೀ)ಸ್ತನಂ ಜಾಲಂಧರೇ ಮಮ ॥೮॥
ಭೀಷಣೋ ಭೈರವಸ್ತತ್ರ ದೇವೀ ತ್ರಿಪುರಮಾಲಿನೀ ॥೯॥
ಹೃತ್ ಪೀಠಂ ವೈದ್ಯನಾಥೇ ವೈದ್ಯನಾಥಸ್ತತ್ರ ಭೈರವಂ
ದೇವತಾ ಜಯದುರ್ಗಾಖ್ಯಾ ನೇಪಾಲೇ ಜಾನುಮೇ ಶಿವ ॥೧೦॥
ಕಪಾಲೀ ಭೈರವಃ ಶ್ರೀಮಾನ್ ಮಹಾಮಾಯಾ ಚ ದೇವತಾ ॥೧೧॥
ಮಾನಸೇ ದಕ್ಷಹಸ್ತೋಮೇ ದೇವೀ ದಾಕ್ಷಾಯಣೀ ಹರ।
ಅಮರೋ ಭೈರವಸ್ತತ್ರ ಸರ್ವಸಿದ್ಧಿಪ್ರದಾಯಕಃ ॥೧೨॥
ಉತ್ಕಲೇ ನಾಭಿದೇಶಶ್ಚ ವಿರಜಾ ಕ್ಷೇತ್ರಮುಚ್ಯತೇ।
ವಿಮಲಾ ಸಾ ಮಹಾದೇವೀ ಜಗನ್ನಾಥಸ್ತು ಭೈರವಃ ॥೧೩॥
ಗಂಡಕ್ಯಾಂ ಗಂಡಪಾತಂ ಚ ತತ್ರ ಸಿದ್ಧಿರ್ನ ಸಂಶಯಃ।
ತತ್ರ ಸಾ ಗಂಡಕೀ ಚಂಡೀ ಚಕ್ರಪಾಣಿಸ್ತು ಭೈರವಃ ॥೧೪॥
ಬಹುಲಾಯಾಂ ವಾಮಬಾಹುರ್ಬಹುಲಾಖ್ಯಾ ಚ ದೇವತಾ।
ಭೀರುಕೋ ಭೈರವಸ್ತತ್ರ ಸರ್ವಸಿದ್ಧ ಪ್ರದಾಯಕಃ ॥೧೫॥
ಉಜ್ಜಯಿನ್ಯಾಂ ಕೂರ್ಪರಂ ಚ ಮಾಂಗಲ್ಯ ಕಪಿಲಾಂಬರಃ।
ಭೈರವಂ ಸಿದ್ಧಿದಃ ಸಾಕ್ಷಾದ್ ದೇವೀ ಮಂಗಳಚಂಡಿಕಾ ॥೧೬॥

ಚಟ್ಟಲೇ ದಕ್ಷಬಾಹುರ್ಮೇ ಭೈರವೇಶ್ಚಂದ್ರಶೇಖರಃ।
ವ್ಯಕ್ತರೂಪಾ ಭಗವತೀ ಭವಾನೀ ಚಾತ್ರ ದೆವತಾ॥
ವಿಶೇಷತಃ ಕಲಿಯುಗೇ ವಸಾಮಿ ಚಂದ್ರಶೇಖರ ॥೧೭॥
ತ್ರಿಪುರಾಯಾಂ ದಕ್ಷ ಪಾದೋ ದೇವೀ ತ್ರಿಪುರಸುಂದರೀ।
ಭೈರವಸ್ತ್ರಿಪುರೇಶಶ್ಚ ಸರ್ವಾಭೀಷ್ಟಪ್ರದಾಯಕಃ ॥೧೮॥
ತ್ರಿಸ್ರೋತಾಯಾಂ ವಾಮಪಾದೋ ಭ್ರಾಮರೀ ಭೈರವೇಶ್ವರಃ ॥೧೯॥
ಯೋನಿಪೀಠಂ ಕಾಮಾಗಿರೌ ಕಾಮಾಖ್ಯಾ ತತ್ರ ದೇವತಾ।
ಯತ್ರಾಸ್ತೇ ತ್ರಿಗುಣಾತೀತಾ ರಕ್ತಪಾಷಾಣರೂಪಿಣೀ ॥೨೦॥
ಭೂತಧಾತ್ರೀ ಕ್ಷೀರಗ್ರಾಮೇ ಭೈರವಃ ಕ್ಷೀರಖಂಡಕಃ।
ಯುಗಾದ್ಯಾ ಸಾ ಮಹಾಭಾಗಾ ದಕ್ಷಾಂಗುಷ್ಠೋ ಪದೋ ಮಮ ॥೨೬॥
ನಕುಲೀಶಃ ಕಾಲೀಪೀಠೇ ದಕ್ಷಪಾದಾಂಗುಲೀ ಚ ಮೇ।
ಸರ್ವಸಿದ್ಧಿಕರೀ ದೇವೀ ಕಾಲಿಕಾ ತತ್ರ ದೇವತಾ ॥೨೭॥
ಅಂಗುಲೀ ವೃಂದಂ ಹಸ್ತಸ್ಯ ಪ್ರಯಾಗೇ ಲಲಿತಾಭವಃ।
ಜಯಂತ್ಯಾಂ ವಾಮಜಂಘಾ ಚ ಜಯಂತೀ ಕ್ರಮದೀಶ್ವರಃ ॥೨೮॥
ಭುವನೇಶೀ ಸಿದ್ಧಿರೂಪಾ ಕಿರೀಟೇಽಸ್ಯಾ ಕಿರೀಟತಃ।
ದೇವತಾ ವಿಮಲಾನಾಮ್ನೀ ಸಂವರ್ತೋ ಭೈರವಸ್ತಥಾ ॥೨೯॥
ವಾರಾಣಸ್ಯಾಂ ವಿಶಾಲಾಕ್ಷೀ ದೇವತಾ ಕಾಲಭೈರವಃ।
ಮಣಿಕರ್ಣೀತಿ ವಿಖ್ಯಾತಾ ಕುಂಡಲಂ ಚ ಮಮ ಶ್ರುತೇ ॥೩೦॥
ಕನ್ಯಾಸ್ರಮೇ ಚ ಪೃಷ್ಠಂ ಮೇ ನಿಮಿಷೋ ಭೈರವಸ್ತಥಾ।
ಶರ್ವಾಣೀ ದೇವತಾ ತತ್ರ ಕುರುಕ್ಷೇತ್ರೇ ಚ ಗುಲ್ಫತಃ ॥೩೧॥
ಸ್ಥಾಣುರ್ನಾಮ್ನಾ ಚ ಸಾವಿತ್ರೀ ದೇವತಾ ಮಣಿವೇದಕೇ।
ಮಣಿಬದ್ಧೇ ಚ ಗಾಯತ್ರೀ ಸರ್ವಾನಂದಸ್ತು ಭೈರವಃ ॥೩೨॥
ಶ್ರೀಶೈಲೇ ಚ ಮಮಗ್ರೀವಾ ಮಹಾಲಕ್ಷ್ಮೀಶ್ಚ ದೇವತಾ।
ಭೈರವಃ ಶಂಬರಾನಂದೋ ದೇಶೇದೇಶೇ ವ್ಯವಸ್ಥಿತಃ ॥೩೩॥
ಕಾಂಚೀದೇಶೇ ಚ ಕಂಕಾಲೋ ಭೈರವೋ ರುರುನಾಮಕಃ॥
ದೇವತಾ ದೇವಗರ್ಭಾಖ್ಯಾ ನಿತಂಬಃ ಕಾಲಮಾಧವೇ ॥೩೪॥
ಶೋಣಾಖ್ಯಾ ಭದ್ರಸೇನಸ್ತು ನರ್ಮಾದಾಖ್ಯೇ ನಿತಂಬಕಃ।
ರಾಮಗಿರೌ ಸ್ತನೋಽನ್ಯಶ್ಚ ಶಿವಾನೀ ಚಂಡಭೈರವಃ ॥೩೭॥
ವೃಂದಾವನೇ ಕೇಶಜಾಲಂ ಉಮಾ ನಾಗ್ನೀ ಚ ದೇವತಾ।
ಭೂತೇಶೋ ಭೈರವಸ್ತತ್ರ ಸರ್ವಸಿದ್ಧಿ ಪ್ರದಾಯಕಃ ॥೩೮॥
ಸಂಸಾರಾಖ್ಯ ಊರ್ಧ್ವದಂತೋ ದೇವೀ ನಾರಾಯಣೀ ಶುಚೌ।

ಅಧೋದಂತೋ ಮಹಾರುದ್ರೋ ವಾರಾಹೀ ಪಂಚಸಾಗರೇ ॥೩೯॥
ಕರತೋಯತಟೇ ತಲ್ಪಂ (ಕರ್ಣೇ) ವಾಮೇ ವಾಮನಭೈರವಃ।
ಅಪಣಾ ದೇವತಾ ಯತ್ರ ಬ್ರಹ್ಮರೂಪಾ ಕರೋದ್ಭವಾ ॥೪೦॥
ಶ್ರೀಪರ್ವತೇ ದಕ್ಷಗುಲ್ಫ (ಕರ್ಣ) ಸ್ತತ್ರ ಶ್ರೀಸುಂದರೀ ಪರಾ।
ಸರ್ವಸಿದ್ಧೀಶ್ವರೀ ಸರ್ವಾ ಸುಂದರಾನಂದ ಭೈರವಃ ॥೪೧॥
ಕಪಾಲಿನೀ (ಕಪಾಲೀ ಚ) ಭೀಮರೂಪಾ ವಾಮಗುಲ್ಫೋ ವಿಭಾಷಕೇ।
[ಭೈರವಶ್ವ ಮಹಾದೇವಃ ಸರ್ವಾನಂದ ಶುಭಪ್ರದಃ॥] ॥೪೨॥
ಉದರಂಚ (ಅಧರಂ ಚ) ಪ್ರಭಾಸೇ ಮೇ ಚಂದ್ರಭಾಗಾ ಯಶಸ್ವಿನೀ।
ವಕ್ರತುಂಡೋ ಭೈರವಶ್ಚೋರ್ಧ್ವೋಷ್ಠೋ ಭೈರವಪರ್ವತೇ ॥೪೩॥
ಅವಂತೀ ಚ ಮಹಾದೇವೀ ಲಂಬಕರ್ಣಸ್ತು ಭೈರವಃ ॥೪೪॥
ಚಿಬುಕೇ ಭ್ರಾಮರೀ ದೇವೀ ವಿಕೃತಾಕ್ಷೋ ಜನಸ್ಥಲೇ।
ಗಂಡೋ ಗೋದಾವರೀ ತೀರೇ ವಿಶ್ವೇಶೀ ವಿಶ್ವಮಾತೃಕಾ ॥೪೫॥
ರತ್ನಾವಲ್ಯಾಂ ದಕ್ಷಸ್ಕಂಧಃ ಕುಮಾರೀ ಭೈರವಃ ಶಿವಃ ।
ಮಿಥಿಲಾಯಾಮುಮಾ ದೇವೀ ವಾಮಸ್ಕಂಧೋ ಮಹೋದರಃ ॥೪೬॥
ನಲಹಾಟ್ಯಾಂ ನಲಾಪಾತೋ ಯೋಗೀಶೋ ಭೈರವಸ್ತಥಾ।
ತತ್ರ ಸಾ ಕಾಲಿಕಾ ದೇವೀ ಸರ್ವಸಿದ್ಧಿ ಪ್ರದಾಯಿಕಾ ॥೪೮॥
ಕಾಲೀಘಾಟೇ ಮುಂಡಪಾತಃ ಕ್ರೋಧೀಶೋ ಭೈರವೀ ತಥಾ।
ದೇವತಾ ಜಯದುರ್ಗಾಖ್ಯಾ ನಾನಾಭೋಗಪ್ರದಾಯಿನೀ ॥೪೯॥
ವಕ್ರೇಶ್ವರೇ ಮನಃಪಾತೋ ವಕ್ರನಾಥಸ್ತು ಭೈರವಃ।
ನದೀ ಪಾಪಹರಾ ತತ್ರ ದೇವೀ ಮಹಿಷಮರ್ದಿನೀ ॥೫೦॥
ಯಶೋರೇ ಪಾಣಿಪದ್ಮಶ್ಚ ದೇವತಾ ಯಶೋರೇಶ್ವರೀ।
ಚಂಡಶ್ಚ ಭೈರವಶ್ಯಾತ್ರ ತತ್ರ ಸಿದ್ಧಿರ್ನ ಸಂಶಯಃ ॥೫೧॥
ಅಟ್ಟಹಾಸೇ ಚೋಷ್ಠಪಾತೋ ದೇವೀ ಸಾಫುಲ್ಲರಾ ಸ್ಮೃತಾ।
ವಿಶ್ವೇಶೋ ಭೈರವಸ್ತತ್ರ ಸರ್ವಾಭೀಷ್ಟಪ್ರದಾಯಕಃ ॥೫೨॥
ಹಾರಪಾತೋ ನಂದೀಪುರೇ ಭೈರವೋ ನಂದಿಕೇಶ್ವರಃ।
ನಂದಿನೀ ಸಾ ಮಹಾದೇವೀ ತತ್ರ ಸಿದ್ಧಿಮವಾಪ್ನುಯಾತ್ ॥೫೩॥
ಲಂಕಾಯಾಂ ನೂಪುರಂ ಚೈವ ಭೈರವೋ ರಾಕ್ಷಸೇಶ್ವರಃ ।
ಇಂದ್ರಾಣೀ ದೇವತಾ ತತ್ರ ಇಂದ್ರೇಣೋಪಾಸಿತಾ ಪುರಾ ॥೫೪॥
ವಿರಾಟದೇಶಮಧ್ಯೇ ತು ಪಾದಾಂಗುಲಿನಿಪಾತನಮ್।
ಭೈರವಶ್ಚಾಮೃತಾಖ್ಯಶ್ಚ ದೇವೀ ತತ್ರಾಂಬಿಕಾ ಸ್ಮೃತಾ ॥೫೫॥

೪. ಹಿಂಗುಲಾ (ಬಲೂಚಿ ಸ್ಥಾನದಲ್ಲಿರುವ ಹಿಂಗ್ಲಾ)ದಲ್ಲಿ ದೇವಿಯ ಬ್ರಹ್ಮ ರಂಧ್ರವು ಬಿದ್ದಿತು. ಅಲ್ಲಿ ಕೋಟ್ಟಾರಿ ರೂಪದ ಹೆಣ್ಣಿನ ಒಡೆಯನಾದ ಮಹಾದೇವನು ಭಯಾನಕ ನೇತ್ರಗಳನ್ನು ಹೊಂದಿದ್ದಾನೆ. ಅವನು ಅಲ್ಲಿ ಭೈರವ. ದಿಗಂಬರಳಾದ ತ್ರಿಗುಣಾ ಅಲ್ಲಿ ದೇವಿ.

೫. ಕರವೀರದಲ್ಲಿ (ಇಂದಿನ ಸುಕ್ಕೂರಿನಲ್ಲಿ) ದೇವಿಯ ಮೂರು ಕಣ್ಣುಗಳು ಬಿದ್ದುವು. ಅಲ್ಲಿ ದೇವಿ ಮಹಿಷಾಸುರನನ್ನು ಕೊಂದ ಮಹಿಷಮರ್ದಿನೀ, ಭೈರವ ಕ್ರೋಧೀಶ. ಸುಗಂದ ಎಂಬ ಸ್ಥಳದಲ್ಲಿ ನನ್ನ (ಸತೀದೇವಿಯ) ಮೂಗು ಬಿದ್ದಿತು.

೬. ಅಲ್ಲಿ ಭೈರವನು ತ್ರ್ಯಂಬಕ ಮತ್ತು ದೇವತೆ ಸುನಂದಾ.

೭. ಕಾಶ್ಮೀರದಲ್ಲಿ ದೇವಿಯ ಕುತ್ತಿಗೆ ಬಿದ್ದಿತು. ಅಲ್ಲಿ ಭೈರವನು ತ್ರಿಸಂಧ್ಯೇಶ್ವರ, ದೇವತೆ ಮಹಾಮಾಯೆ. ಅವಳು ತ್ರಿಗುಣಾತೀತೆ, ವರಪ್ರದೆ.

೮. ಜ್ವಾಲಾಮುಖಿಯಲ್ಲಿ ಸತೀದೇವಿಯ ನಾಲಗೆ ಬಿದ್ದಿತು. ಅಲ್ಲಿ ದೇವರು ಉನ್ಮತ್ತ ಭೈರವೆ. ಅಂಬಿಕೆ ಅಲ್ಲಿ ದೇವತೆ.

೯. ಜಾಲಂಧರದಲ್ಲಿ ದೇವಿಯ ಸ್ತನವು ಬಿದ್ದಿತು. ಅಲ್ಲಿ ಭೀಷಣ ಎಂಬ ಭೈರವ, ತ್ರಿಪುರಮಾಲೀನಿ ಎಂಬ ದೇವತೆ.

೧೦. (ಬಿಹಾರದ ಸಂತಾಲ ಪರಗಣ ಜಿಲ್ಲೆಯಲ್ಲಿರುವ ದೇವಘರ್) ವೈದ್ಯನಾಥ ಕ್ಷೇತ್ರದಲ್ಲಿ ಸತೀದೇವಿಯ ಹೃದಯವು ಬಿದ್ದಿತು. ಅಲ್ಲಿ ವೈದ್ಯನಾಥನೇ ಭೈರವ, ದೇವತೆ ಜಯದುರ್ಗಾ.

೧೧. ನೇಪಾಳದಲ್ಲಿ ಸತೀದೇವಿಯ ಮೊಳಕಾಲು ಬಿದ್ದಿತು. ಅಲ್ಲಿ ಭೈರವನು ಕಪಾಲಿ, ದೇವತೆ ಮಹಾಮಾಯೆ.

೧೨. ಮಾನಸಸರೋವರದಲ್ಲಿ ಸತೀದೇವಿಯ ಬಲಗೈ ಬಿದ್ದಿತು. ಅಲ್ಲಿ ದೇವತೆ ದಾಕ್ಷಾಯಣೀ, ಭೈರವನು ಅಮರ. ಅವನು ಸರ್ವಸಿದ್ಧಿಪ್ರದಾಯಕ.

೧೩. ಉತ್ಕಲದಲ್ಲಿ (ಒರಿಸ್ಸಾದಲ್ಲಿ), ನನ್ನ (ಸತೀದೇವಿಯ) ನಾಭಿ ಬಿದ್ದಿತು. ಅದನ್ನು ವಿರಜಾಕ್ಷೇತ್ರ ಎನ್ನುತ್ತಾರೆ. ಅಲ್ಲಿ ದೇವತೆ ವಿಮಲ, ಭೈರವನು ಜಗನ್ನಾಥ.

೧೪. ಗಂಡಕಿಯಲ್ಲಿ ಸತೀದೇವಿಯ ಕೆನ್ನೆ ಬಿದ್ದಿತು. ಅಲ್ಲಿ ಎಲ್ಲ ಸಿದ್ಧಿಗಳೂ ಉಂಟಾಗುತ್ತವೆ. ಅಲ್ಲಿ ದೇವತೆ ಚಂಡೀ, ಭೈರವನು ಚಕ್ರಪಾಣಿ.

೧೫. ಬಹುಲ ಕ್ಷೇತ್ರದಲ್ಲಿ ದೇವತೆ ಬಹುಳಾ, ಭೈರವನು ಭೀರುಕ. ಅವನು ಸರ್ವಸಿದ್ಧಿಪ್ರದಾಯಕ.

೧೬. ಉಜ್ಜಯಿನಿಯಲ್ಲಿ ಸತೀದೇವಿಯ ಮೊಣಕೈ ಬಿದ್ದಿತು. ಅಲ್ಲಿ ಭೈರವನು ಕಪಿಲಾಂಬರ, ಅವನು ಮುಕ್ತಿಯನ್ನು ನೀಡುವವನು. ಅಲ್ಲಿ ದೇವತೆ ಮಂಗಳ ಚಂಡಿಕಾ.

೧೭. ಚಿತ್ತಗಾಂಗ್ ಜಿಲ್ಲೆಯಲ್ಲಿರುವ ಚತ್ತಲ್ ಎಂಬಲ್ಲಿ ಸತೀ ದೇವಿಯ ಬಲತೋಳು ಬಿದ್ದಿತು. ಅಲ್ಲಿ ಭೈರವನು ಚಂದ್ರಶೇಖರ, ದೇವತೆ ಭವಾನಿ, ಕಲಿಯುಗದಲ್ಲಿ ಇದು ಸತೀದೇವಿಯ ಇಷ್ಟವಾದ ಪ್ರದೇಶ.

೧೮. ತ್ರಿಪುರದಲ್ಲಿ ಬಲಪಾದವು ಬಿದ್ದಿತು. ಅಲ್ಲಿ ದೇವತೆ ತ್ರಿಪುರಸುಂದರಿ, ಭೈರವನು ಎಲ್ಲ ಅಭೀಷ್ಟಗಳನ್ನು ನೆರವೇರಿಸುವ ತ್ರಿಪುರೇಶ.

೧೯. ತ್ರಿಸ್ರೋತ (ಬಿಹಾರಿನ ಉತ್ತರ ಭಾಗದಲ್ಲಿರುವ ತಿರ್‌ಹುತ್)ದಲ್ಲಿ ಎಡಪಾದವು ಬಿದ್ದಿತು. ಅಲ್ಲಿ ದೇವತೆ ಭ್ರಾಮರೀ, ಭೈರವನು ಭೈರವೇಶ್ವರ.

೨೦. ಅಸ್ಸಾಂನಲ್ಲಿರುವ ಕಾಮಗಿರಿಯಲ್ಲಿ ಯೋನಿಯು ಬಿದ್ದುದರಿಂದ ಕಾಮಪೀಠವಿದೆ. ಅಲ್ಲಿ ದೇವನು ಉನ್ಮತ್ತಭೈರವ, ದೇವತೆ ಕಾಮಾಖ್ಯಾ. ಆಕೆ ತ್ರಿಗುಣಾತೀತಳಾಗಿದ್ದು, ಕೆಂಪುಕಲ್ಲಿನಲ್ಲಿ ಮೂಡಿದ್ದಾಳೆ. ಅಲ್ಲಿ ಮಾಧವನೂ, ಉಮಾನಂದನೆಂಬ ಭೈರವನೂ ನೆಲೆಸಿದ್ದಾರೆ. ಸತೀದೇವಿಯು ಅಲ್ಲಿ ಸದಾ ಸಂಚರಿಸುತ್ತಿರುತ್ತಾರೆ. ಅಲ್ಲಿ ಯಾತ್ರೆ ಮಾಡಿದವರಿಗೆ ಮುಕ್ತಿ ಸಿದ್ಧಿಸುತ್ತದೆ.

೨೬. (ಬರ್‌ದ್ವಾನ್ ಜಿಲ್ಲೆಯಲ್ಲಿರುವ ಕಟ್ವಾ ಬಳಿ ಇರುವ) ಕ್ಷೀರಗ್ರಾಮದಲ್ಲಿ ಸತೀ ದೇವಿಯ ಬಲಗಾಲಿನ ಅಂಗುಷ್ಠ (ಹೆಬ್ಬೆರಳು) ಬಿದ್ದಿತು. ಅಲ್ಲಿ ದೇವತೆ ಮಹಾಮಾಯಾ, ಭೈರವನು ಕ್ಷೀರಖಂಡಕ ಎಂಬ ಹೆಸರನ್ನು ಹೊಂದಿದ್ದಾನೆ.

೨೭. (ಕಲ್ಕತ್ತಾದ ಉತ್ತರದಲ್ಲಿರುವ ಕಾಲೀಘಾಟ್‌ನಲ್ಲಿರುವ) ಕಾಲೀಪೀಠದಲ್ಲಿ ಸತೀ ದೇವಿಯ ಕಾಲಿನ ಬೆರಳುಗಳು ಬಿದ್ದುವು. ಅಲ್ಲಿರುವ ದೇವತೆ ಕಾಲಿಕಾ. ಎಲ್ಲ ವರಗಳನ್ನೂ ನೀಡುವ ದೇವಿ. ಅಲ್ಲಿ ಭೈರವನು ನಕುಲೀಶ.

೨೮. ಪ್ರಯಾಗದಲ್ಲಿ ಸತೀದೇವಿಯ ಕೈಬೆರಳುಗಳು ಬಿದ್ದುವು. ಅಲ್ಲಿ ದೇವತೆ ಲಲಿತಾ, ಭೈರವನು ಭವ. (ಈಗಿನ ಬಂಗ್ಲಾದೇಶದ ಸಿಲ್ಹೆಟ್ ಜಿಲ್ಲೆಯಲ್ಲಿರುವ ಕಲಾಜೋರ್) ಜಯಂತೀ ಕ್ಷೇತ್ರ. ಸತೀದೇವಿಯ ಎಡತೊಡೆ ಅಲ್ಲಿ ಬಿದ್ದಿತು. ಅಲ್ಲಿ ದೇವತೆ ಜಯಂತೀ, ಭೈರವ ಕ್ರಮದೀಶ್ವರ.

೨೯. (ಮುರ್ಶೀದಾಬಾದ್ ಜಿಲ್ಲೆಯಲ್ಲಿರುವ) ಕಿರೀಟ ಕ್ಷೇತ್ರದಲ್ಲಿ ಸತೀದೇವಿಯ ಕಿರೀಟ ಬಿದ್ದಿತು. ಅಲ್ಲಿ ದೇವತೆ ವಿಮಲಾ, ಭೈರವನು ಸಂವರ್ತ (ಅಥವಾ ದೇವತೆ ಭುವನೇಶೀ.)

೩೦. ವಾರಾಣಸಿಯಲ್ಲಿ ಸತೀದೇವಿಯ ಕರ್ಣಾಭರಣ ಬಿದ್ದಿತು. ಅಲ್ಲಿ ದೇವತೆ ವಿಶಾಲಾಕ್ಷಿ, ಭೈರವ ಕಾಲಭೈರವ. ಕರ್ಣಾಭರಣ ಬಿದ್ದುದರಿಂದ ಆ ಕ್ಷೇತ್ರಕ್ಕೆ ಮಣಿಕರ್ಣೀ ಎಂಬ ಹೆಸರು.

೩೧. ಕನ್ಯಾಶ್ರಮದಲ್ಲಿ ಸತೀದೇವಿಯ ಬೆನ್ನು ಬಿದ್ದಿತು. ಅಲ್ಲಿ ಭೈರವ ನಿಮಿಷ, ದೇವತೆ ಶರ್ವಾಣಿ.

೩೨. ಕುರುಕ್ಷೇತ್ರದಲ್ಲಿ ಸತೀದೇವಿಯ ನೂಪುರ ಬಿದ್ದಿತು. ಅಲ್ಲಿ ಭೈರವನು ಸ್ಥಾಣು, ದೇವತೆ ಸಾವಿತ್ರಿ. ಮಣಿವೇದಕ ಎಂಬ ಕ್ಷೇತ್ರದಲ್ಲಿ ದೇವತೆ ಗಾಯತ್ರೀ, ಭೈರವ ಸರ್ವಾನಂದ.

೩೩. ಶ್ರೀಶೈಲದಲ್ಲಿ (ಇದು ಬಾಂಗ್ಲಾದೇಶದಲ್ಲಿರುವ ಸಿಲ್ಹೆಟ್) ಸತೀದೇವಿಯ ಕುತ್ತಿಗೆ ಬಿದ್ದಿತು. ಅಲ್ಲಿ ದೇವತೆ ಮಹಾಲಕ್ಷ್ಮೀ, ಭೈರವ ಶಂಬರಾನಂದ.

೩೪. ಕಾಂಚಿಯಲ್ಲಿ (ಇದು ತಮಿಳುನಾಡಿನಲ್ಲಿರುವ ಕಾಂಚೀಪುರ) ದೇವಿಯ ಎಲುಬುಗೂಡು ಬಿದ್ದಿತು. ಅಲ್ಲಿ ಭೈರವನ ಹೆಸರು ರುರು. ದೇವಿಯ ಹೆಸರು ದೇವಗರ್ಭಾ.

೩೫. ಕಾಲಮಾಧವ ಕ್ಷೇತ್ರದಲ್ಲಿ ದೇವಿಯ ನಿತಂಬಗಳು ಬಿದ್ದುವು. ಅಲ್ಲಿ ಭೈರವನು ಅಸಿತಾಂಗ, ದೇವಿಯು ಕಾಳಿ. ಅವಳು ಒಳ್ಳೆಯ ವಾರ್ತೆಯನ್ನು ಕೊಡುತ್ತಾಳೆ. ಸಾಧಕರಾದ ಭಕ್ತರು ಅಲ್ಲಿಗೆ ಸತತವಾಗಿ ಯಾತ್ರೆ ಮಾಡಿದರೆ ಅವರಿಗೆ ಮಂತ್ರಗಳ ಸಿದ್ಧಿಯಾಗುತ್ತದೆ.

೩೬. ಅಮಾವಾಸ್ಯೆ ಬುಧವಾರ ಅರ್ಧರಾತ್ರಿಯಲ್ಲಿ ಅವರಿಬ್ಬರನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿದ ಭಕ್ತರಿಗೆ ಮಂತ್ರ ಸಿದ್ಧಿಯಾಗುತ್ತದೆ.

೩೭. ನರ್ಮದೆಯ ಪ್ರದೇಶದಲ್ಲಿ ದೇವಿಯ ನಿತಂಬದ ಒಂದು ಭಾಗವು ಬಿದ್ದಿತು. ಅಲ್ಲಿ ದೇವಿ ಶೋಣಾಕ್ಷಿ, ಭೈರವನು ಭದ್ರಸೇನ. ರಾಮಗಿರಿಯಲ್ಲಿ ದೇವಿಯ ಒಂದು ಸ್ತನವು ಬಿದ್ದಿತು. ಅಲ್ಲಿ ದೇವಿ ಶಿವಾನಿ, ಭೈರವನು ಚಂಡ ಭೈರವ.

೩೮. ವೃಂದಾವನದಲ್ಲಿ ದೇವಿಯ ಕೇಶಪಾಶವು ಬಿದ್ದಿತು. ಅಲ್ಲಿ ದೇವಿಯ ಹೆಸರು ಉಮಾ, ಭೈರವನು ಎಲ್ಲ ಅಭ್ಯುದಯವನ್ನು ನೀಡುವ ಭೂತೇಶ.

೩೯. ಅನಲ ಕ್ಷೇತ್ರದಲ್ಲಿ ದೇವಿಯ ಮೇಲುದವಡೆಯ ಹಲ್ಲುಗಳು ಬಿದ್ದುವು. ಅಲ್ಲಿ ದೇವಿಯ ಹೆಸರು ನಾರಾಯಣೀ, ಭೈರವನ ಹೆಸರು ಸಂಹಾರ ಭೈರವ. ದೇವಿಯ ಕೆಳಗಿನ ಹಲ್ಲುಗಳ ಸಾಲು ಪಂಚಸಮುದ್ರಗಳಲ್ಲಿ ಬಿದ್ದಿತು. ಅಲ್ಲಿ ಭೈರವನ ಹೆಸರು ಮಹಾರುದ್ರ, ದೇವಿಯ ಹೆಸರು ವಾರಾಹೀ.

೪೦. ಉತ್ತರಬಂಗಾಳದ ಪವಿತ್ರ ನದಿಯಾದ ಕರತೋಯಾ ದಡದಲ್ಲಿ ದೇವಿಯ ಎಡಗಿವಿ ಬಿದ್ದಿತು. ಅಲ್ಲಿ ಭೈರವನ ಹೆಸರು ವಾಮನ ಭೈರವ. ಬ್ರಹ್ಮನ ಕಾಂತಿಯಿಂದ ಜನಿಸಿದ ಅಪರ್ಣಾ ಅಲ್ಲಿ ದೇವಿ.

೪೧. ಕೃಷ್ಣಾನದಿಗೆ ದಕ್ಷಿಣದಲ್ಲಿರುವ ಶ್ರೀಪರ್ವತ ಅಥವಾ ಶ್ರೀಶೈಲದಲಿ ಬಲಕಾಲಗಂಟು ಬಿದ್ದಿತು. ಅಲ್ಲಿ ದೇವಿಯ ಹೆಸರು ಶ್ರೀಸುಂದರೀ, ಅವಳು ಸರ್ವಸಿದ್ಧೀಶ್ವರಿ, ಭೈರವನು ಸುಂದರಾನಂದ ಭೈರವ.

೪೨. ಮಿಡ್ನಾಪುರ ಜಿಲ್ಲೆಯಲ್ಲಿರುವ ವಿಭಾಷಕ ಕ್ಷೇತ್ರದಲ್ಲಿ ಎಡಕಾಲ ಗಂಟು ಬಿದ್ದಿತು. ಅಲ್ಲಿ ಶಿವನ ಪತ್ನಿಯಾದ ದೇವಿಯ ಹೆಸರು ಭೀಮರೂಪಾ. ಭೈರವನ ಹೆಸರು ಅಲ್ಲಿ ಮಹಾದೇವ (ಅಥವಾ ಕಪಾಲಿ).

೪೩. ಕಾಥೇವಾಡ ಜಿಲ್ಲೆಯಲ್ಲಿರುವ ಪ್ರಭಾಸದಲ್ಲಿ ದೇವಿಯ ಹೊಟ್ಟೆ (ಅಥವಾ ಕೆಳ ತುಟಿ) ಬಿದ್ದಿತು. ಅಲ್ಲಿ ದೇವಿಯ ಹೆಸರು ಚಂದ್ರಭಾಗಾ, ಭೈರವನು ವಕ್ರತುಂಡ. ದೇವಿಯ ಮೇಲಿನ ತುಟಿ ಭೈರವ ಪರ್ವತದಲ್ಲಿ (ಇದು ಪ್ರಾಯಶಃ ಮಾಳವದ ಪಶ್ಚಿಮದಲ್ಲಿದೆ) ಬಿದ್ದಿತು.

೪೪. ಅಲ್ಲಿ ದೇವಿಯ ಹೆಸರು ಅವಂತೀ, ಭೈರವನ ಹೆಸರು ಲಂಬಕರ್ಣ.

೪೫. ಜನಸ್ಥಾನದಲ್ಲಿ ದೇವಿಯ ಗದ್ದವು ಬಿದ್ದಿತು. ಅಲ್ಲಿ ದೇವತೆ ಭ್ರಾಮರೀ, ಭೈರವನು ವಿಕೃತಾಕ್ಷ. ಎಡಗೆನ್ನೆಯು ಗೋದಾವರಿಯ ದಡದ ಮೇಲೆ ಬಿದ್ದಿತು. ಅಲ್ಲಿ ಭೈರವನ ಹೆಸರು ವಿಶ್ವೇಶ, ದೇವಿಯ ಹೆಸರು ವಿಶ್ವಮಾತೃಕಾ.

೪೬. ಎಡಗೆನ್ನೆಯು ಬಿದ್ದ ಜಾಗದಲ್ಲಿ ಭೈರವನು ದಂಡಪಾಣಿ, ದೇವತೆಯು ರಾಕಿಣೀ (ರಂಕಿಣೀ ಎಂದೂ ಆಗಬಹುದು). ಅಲ್ಲಿ ಭೈರವನನ್ನು ವತ್ಸನಾಭ ಎಂದೂ ಕರೆಯುವುದುಂಟು. ಅಲ್ಲಿ ಸಿದ್ಧಿಯಾಗುವುದರಲ್ಲಿ ಸಂದೇಹವೇ ಇಲ್ಲ.

೪೭. ರತ್ನಾವಳಿಯಲ್ಲಿ ದೇವಿಯ ಬಲ ಹೆಗಲು ಬಿದ್ದಿತು. ಅಲ್ಲಿ ದೇವಿಯ ಹೆಸರು ಕುಮಾರಿ, ಭೈರವನ ಹೆಸರು ಶಿವ. ಮಿಥಿಲೆಯಲ್ಲಿ ಎಡಹೆಗಲು ಬಿದ್ದಿತು. ಅಲ್ಲಿ ದೇವಿ ಉಮಾ, ಭೈರವನು ಮಹೋದರ.

೪೮. ಬೀರ್‌ಭೂಮ್ ಜಿಲ್ಲೆಯಲ್ಲಿರುವ ನಲಹಾಟಿಯಲ್ಲಿ ದೇವಿಯ ಅನ್ನನಾಳವು ಬಿದ್ದಿತು. ಅಲ್ಲಿ ಭೈರವನು ಯೋಗೀಶ. ಅಲ್ಲಿ ಎಲ್ಲ ಸಿದ್ಧಿಗಳನ್ನು ನೀಡುವ ಕಾಳಿಕೆಯೇ ದೇವತೆ.

೪೯. ಕಾಲೀಘಟ್ಟದಲ್ಲಿ ದೇವಿಯ ತಲೆಯು ಬಿದ್ದಿತು. ಅಲ್ಲಿ ಭೈರವನು ಕ್ರೋಧೀಶ, ನಾನಾ ಸುಖಗಳನ್ನು ಅನುಗ್ರಹಿಸುವ ಜಯದುರ್ಗಾ ಎಂದು ಅಲ್ಲಿ ದೇವಿ ಪ್ರಸಿದ್ಧಳಾಗಿದ್ದಾಳೆ.

೫೦. ಬೀರ್‌ಭೂಮ್ ಜಿಲ್ಲೆಯ ದುಬ್ರಾಜ್‌ಪುರ್ ಸಮೀಪದ ವಕ್ರೇಶ್ವರ ಕ್ಷೇತ್ರದಲ್ಲಿ ದೇವಿಯ ಹೃದಯವು ಬಿದ್ದಿತು. ಅಲ್ಲಿ ಭೈರವನು ವಕ್ರನಾಥ, ದೇವಿಯು ಮಹಿಷಮರ್ದಿನೀ. ಅಲ್ಲಿರುವ ನದಿಯು ಎಲ್ಲ ಪಾಪಗಳನ್ನು ನಿವಾರಿಸುತ್ತದೆ.

೫೧. ಜೆಸ್ಸೂರಿನಲ್ಲಿ ದೇವಿಯ ಪಾಣಿಪದ್ಮವು ಬಿದ್ದಿತು. ಅಲ್ಲಿ ದೇವಿ ಯಶೋರೇಶ್ವರೀ, ಭೈರವನು ಚಂಡ. ಅಲ್ಲಿ ನಿಸ್ಸಂಶಯವಾಗಿ ಸಿದ್ಧಿಯಾಗುವುದು.

೫೨. ಅಟ್ಟಹಾಸದಲ್ಲಿ ಮೇಲ್ತುಟಿಯು ಬಿದ್ದಿತು. ಅಲ್ಲಿ ದೇವಿಯು ಫುಲ್ಲಾರ ಎಂದು ಪ್ರಸಿದ್ಧಳಾಗಿದ್ದಾಳೆ. ಭೈರವನ ಹೆಸರು ವಿಶ್ವೇಶ. ಅವನು ಸರ್ವಸಿದ್ಧಿ ಪ್ರದಾಯಕ.

೫೩. ನಂದಿಪುರದಲ್ಲಿ ದೇವಿಯ ಕಂಠಾಭರಣವು ಬಿದ್ದಿತು. ಅಲ್ಲಿ ಭೈರವನು ನಂದಿಕೇಶ್ವರ, ದೇವಿಯು ನಂದಿನೀ. ಅಲ್ಲಿ ಸಿದ್ಧಿಗಳು ಉಂಟಾಗುತ್ತವೆ.

೫೪. ಶ್ರೀಲಂಕೆಯಲ್ಲಿ ದೇವಿಯ ನೂಪುರವು ಬಿದ್ದಿತು. ಅಲ್ಲಿ ಭೈರವ ರಾಕ್ಷಸೇಶ್ವರ, ಹಿಂದೆ ಇಂದ್ರನಿಂದ ಪೂಜಿತಳಾಗಿದ್ದ ಇಂದ್ರಾಣಿಯು ಅಲ್ಲಿ ದೇವತೆ.

೫೫. ವಿರಾಟದೇಶದ ಮಧ್ಯದಲ್ಲಿ ದೇವಿಯ ಕಾಲ್ಬೆರಳುಗಳು ಬಿದ್ದವು. ಅಲ್ಲಿ ಭೈರವನ ಹೆಸರು ಅಮೃತಾಕ್ಷ ಅಥವಾ ಅಮೃತ. ಅಲ್ಲಿ ದೇವಿ ಅಂಬಿಕಾ ಎಂದು ಪ್ರಸಿದ್ಧಳಾಗಿದ್ದಾಳೆ.

ಮಹಾಪೀಠಗಳ ಈ ಪಟ್ಟಿಯ ಜೊತೆಗೆ ಶಿವಚರಿತವು ಉಪಪೀಠಗಳನ್ನೂ ಗುರುತಿಸಿದೆ. ವಾರಾಣಸೀ, ನೀಲಾಚಲ, ಅಯೋಧ್ಯಾ, ವೃಂದಾವನ, ಶ್ರೀಶೈಲ, ಪುಂಡ್ರ, ಶ್ವೇತವಂಧ್ರ ಮುಂತಾದ ಮುಖ್ಯಸ್ಥಳಗಳಲ್ಲಿ ಇಪ್ಪತ್ತಾರು ಅಂಥ ಪೀಠಗಳನ್ನು ಅಲ್ಲಿ ಹೆಸರಿಸಲಾಗಿದೆ. ಆ ವರ್ಣನಾತ್ಮಕ ಪಟ್ಟಿಯನ್ನು ಇಲ್ಲಿ ಅಂಕಣರೂಪದಲ್ಲಿ ಕೊಟ್ಟಿದೆ.

ಪೀಠ	**ಅಂಗ/ಪ್ರತ್ಯಂಗ**	**ದೇವೀ**	**ಭೈರವ**
೧. ಕಿರಾತಕೋಣ	ಕಿರೀಟ	ಭುವನೇಶೀ	ಕಿರೀಟಿನ್
೨. ಕೇಶಜಾಲ	ಕೇಶ	ಉಮಾ	ಭೂತೇಶ
೩. ವಾರಾಣಸೀ	ಕುಂಡಲ	ವಿಶಾಲಾಕ್ಷೀ	ಕಾಲಭೈರವ
		ಅನ್ನಪೂರ್ಣಾ	ವಿಶ್ವೇಶ್ವರ
೪. ಉತ್ತರ	ವಾಮಗಂಡ ಅಂಶ	ಉತ್ತರಿಣೀ	ಉತ್ಪಾದನ
೫. ನಳಸ್ಥಾನ	ದಕ್ಷಿಣಗಂಡ ಅಂಶ	ಭ್ರಾಮರೀ	ವಿರೂಪಾಕ್ಷ
೬. ಅಟ್ಟಹಾಸ	ಓಷ್ಠಾಂಶ	ಫುಲ್ಲಾರ	ವಿಶ್ವನಾಥ
೭. ಸಂಹಾರ	ದಂತಾಂಶ	ಸುರೇಶಿ	ಸುರೇಶ
೮. ನೀಲಾಚಲ	ಉಚ್ಛಿಷ್ಟ	ವಿಮಲಾ	ಜಗನ್ನಾಥ
೯. ಅಯೋಧ್ಯಾ	ಕಂಠಹಾರ	ಅನ್ನಪೂರ್ಣಾ	ಹರಿಹರ
೧೦. ನಂದಿಪುರ	ಹರಾಂಶ	ನಂದಿನೀ	ನಂದೀಶ್ವರ
೧೧. ಶ್ರೀಶೈಲ	ಗ್ರೀವಾಂಶ	ಸರ್ವೇಶ್ವರೀ	ಸಚ್ಚಿದಾನಂದ
೧೨. ಕಲಿಪೀಠ	ಶಿರೋಂಶ	ಚಂದ್ರೇಶ್ವರೀ	ಚಂದ್ರೇಶ್ವರ
೧೩. ಚಕ್ರದ್ವೀಪ	ಅಸ್ತ್ರ	ಚಕ್ರಧಾರಿಣೀ	ಶೂಲಪಾಣಿ
೧೪. ಯಶೋರ	ಪಾಣಿ	ಯಶೋರೇಶ್ವರೀ	ಪ್ರಚಂಡ
೧೫. ಸತೀಚಲ	ಕರಾಂಶ	ಸುನಂದಾ	ಸುನಂದ
೧೬. ವೃಂದಾವನ	ಸ್ಕಂಧಾಂಶ	ಕುಮಾರೀ	ಕುಮಾರ
೧೭. ಗೌರೀಶಿಖರ	ವಸಾ	ಯುಗಾದ್ಯಾ	ಭೀಮ

೧೮. ನಲಹಾಟೀ	ಶಿರೋನಾಲೀ	ಶೇಫಾಲಿಕಾ	ಯೋಗೀಶ
೧೯. ಸರ್ವಶೈಲ	ಕಕ್ಷಾಂಶ	ವಿಶ್ವಮಾತಾ	ದಂಡಪಾಣಿ
೨೦. ಶೋಣ	ನಿತಂಬಾಂಶ	ಭದ್ರಾ	ಭದ್ರೇಶ್ವರ
೨೧. ತ್ರಿಸ್ರೋತ	ಪಾದಾಂಶ	ಪಾರ್ವತೀ	ಈಶ್ವರ
೨೨. ಲಂಕಾ	ನೂಪುರ	ಇಂದ್ರಾಕ್ಷೀ	ರಾಕ್ಷಸೇಶ್ವರ
೨೩. ಕಟಕ	ಚರ್ಮಾಂಶ	ಕಟಕೇಶ್ವರೀ	ವಾಮದೇವ
೨೪. ಪುಂಡ್ರ	ಲೋಮ	ಸರ್ವಾಕ್ಷಿಣೀ	ಸರ್ವ
೨೫. ತೈಲಂಗ	ಲೋಮಖಂಡ	ಚಂಡದಾಯಿಕಾ	ಚಂಡೇಶ
೨೬. ಶ್ವೇತವಂಧ	ಭಗ್ನಾಂಶ	ಜಯಾ	ಮಹಾಭೀಮ

ಮೇಲೆ ಕೊಟ್ಟಿರುವ ಎಲ್ಲ ಪರಿಚ್ಛೇದಗಳೂ ಜನರ ಪ್ರತಿದಿನದ ಪ್ರಾರ್ಥನೆಯ ಪಠ್ಯಗಳಾಗಿದ್ದು, ಅವರ ಹೃದಯದ ಮೇಲೆ ಗಣನೀಯ ಪ್ರಭಾವವನ್ನು ಹೊಂದಿವೆ. ಅವು ಮಾತೃಭೂಮಿಯ ವಿಷಯದಲ್ಲಿರುವ ಅವರ ಭಾವನೆಗೆ ಅಭಿವ್ಯಕ್ತಿಯನ್ನು ಕೊಟ್ಟಿವೆ. ದೇಶದ ಬಗೆಗೆ ಇರುವ ಈ ಉತ್ಕಟ ಭಾವನೆ ಪ್ರಪಂಚದ ಇತರ ಯಾವ ಭಾಗದಲ್ಲೂ ಅತಿಶಯಿತವಾಗಿಲ್ಲ. ಈ ಭಾವನೆಯ ನಿಷೇಧಾತ್ಮಕ ಸಾಧನೆಯು ಎಲ್ಲ ಪವಿತ್ರ ಪೂಜನೀಯ ಸ್ಥಳಗಳೂ ಅವಿಭಕ್ತವಾದ ಭಾರತದ ಸೀಮೆಗಳೊಳಗೇ ಇವೆ ಎಂಬ ವಾಸ್ತವಾಂಶದಿಂದ ವ್ಯಕ್ತವಾಗುತ್ತದೆ. ಆ ಪವಿತ್ರ ಸ್ಥಳಗಳಲ್ಲಿ ಯಾವ ಒಂದೂ ದೂರದ ಪ್ಯಾಲೆಸ್ಟೈನ್ ಇತ್ಯಾದಿ ಸ್ಥಳಗಳಲ್ಲಿಲ್ಲ ಎಂಬುದೂ ಇದಕ್ಕೆ ಸಾಧನೆಯನ್ನೊದಗಿಸುತ್ತದೆ.

೮

ಮಾತೃಭೂಮಿಯ ಬಗೆಗೆ ಉತ್ಕಟವೂ ತೀವ್ರವೂ ಆದ ಭಾವನೆಯು ಸಂಸ್ಕೃತ ಸಾಹಿತ್ಯದ ಉದ್ದ–ಅಗಲಗಳಲ್ಲೆಲ್ಲ ಪ್ರಕಟವಾಗಿದೆ. ನಾವು ಅಲ್ಲಿನ ಉಲ್ಲೇಖಗಳನ್ನು ಅಲ್ಲೊಂದು ಇಲ್ಲೊಂದು ಆರಿಸಿ ನೋಡೋಣ. ಉದಾಹರಣೆಗೆ ಅಥರ್ವವೇದವು ತಾಯಿನಾಡನ್ನು ಧೀರರ ಮತ್ತು ಧಾರ್ಮಿಕರ, ವೀರತ್ವದ ಮತ್ತು ಉದ್ಯಮದ, ವಾಣಿಜ್ಯದ ಮತ್ತು ವ್ಯಾಪಾರದ, ವಿಜ್ಞಾನದ ಮತ್ತು ಕಲೆಗಳ, ಸದ್ಗುಣಗಳ ಮತ್ತು ಮಹತ್ತ್ವದ[೨೦], ಗಣನಾತೀತವಾದ ಔಷಧೀಯ ಮೂಲಿಕೆಗಳ ಮತ್ತು ಸಸ್ಯಗಳ ಭೂಮಿ ಎಂದು ಹಾಡಿ ಹೊಗಳಿದೆ. ಸಮುದ್ರದಿಂದ ಸುತ್ತುವರಿಯಲ್ಪಟ್ಟು, ಸಿಂಧೂ ಮುಂತಾದ ಪವಿತ್ರ ನದಿಗಳ ಜಲದಿಂದ ಫಲವತ್ತಾಗಿ ಮಾಡಲ್ಪಟ್ಟು ಧಾನ್ಯಗಳಿಂದಲೂ ಆಹಾರ ಪದಾರ್ಥಗಳಿಂದಲೂ ಶ್ರೀಮಂತವಾದ ದೇಶವಿದು[೨೧] ಎಂದು ಅಥರ್ವ ವೇದವು ಹೇಳಿದೆ. ನಮ್ಮ ಪಿತೃಪಿತಾಮಹರು ಜೀವಿಸಿ ಕೆಲಸ ಮಾಡಿ ದುಡಿದದ್ದು

ಈ ದೇಶದಲ್ಲಿ, ದೇವತೆಗಳ ಮಹಾಶಕ್ತಿಗೆ ಅಸುರರು ಸೋತು ಹಿಮ್ಮೆಟ್ಟಿದ್ದು ಇಲ್ಲಿ ಎಂದೂ ಅಥರ್ವವೇದವು[೨೨] ಬಣ್ಣಿಸಿದೆ. ಅತ್ಯಂತ ಉನ್ನತವಾದ ಪರ್ವತಗಳ ಅತಿ ಸುಂದರವಾದ ಕಾಡುಗಳ ನಾಡು[೨೩] ನಮ್ಮದು, ಯಜ್ಞಯಾಗಗಳ ಮತ್ತು ಪವಿತ್ರ ಸುಖಗಳ, ಶೌರ್ಯದ ಮತ್ತು ಕೀರ್ತಿಯ, ದೇಶಭಕ್ತಿಯ ಮತ್ತು ಸ್ವಾರ್ಥತ್ಯಾಗದ, ಧರ್ಮದ ಮತ್ತು ಕರುಣೆಯ ದೇಶ[೨೪] ನಮ್ಮದು ಎಂದು ಅಥರ್ವವೇದ ವರ್ಣಿಸಿದೆ. ಸಂಸ್ಕೃತ ಗ್ರಂಥಗಳಲ್ಲಿ ಭಾರತ ದೇಶವನ್ನು ದೇವತೆಗಳು ಆರಿಸಿಕೊಂಡ ನೆಲ,[೨೫] ಭೂಮಿಯ ಮೇಲಿರುವ ಸ್ವರ್ಗ ಎಂದು ಹೊಗಳುವ ಭಾಗಗಳಿವೆ. ಇವೆಲ್ಲವೂ

ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ

(ತಾಯಿಯೂ ತಾಯಿನಾಡೂ ಸ್ವರ್ಗಕ್ಕಿಂತಲೂ ಹೆಚ್ಚು) ಎಂದು ಹೇಳುವ ರಾಷ್ಟ್ರೀಯ ಮಹಾಘೋಷಣೆಯಲ್ಲಿ ಪರ್ಯವಸಾನಗೊಳ್ಳುತ್ತವೆ.

೬

ಭಾರತದ ಉಪಖಂಡದಲ್ಲೆಲ್ಲಾ ಹರಡಿಕೊಂಡಿರುವ ದೇವಾಲಯಗಳ ಮತ್ತು ಪವಿತ್ರ ಯಾತ್ರಾಸ್ಥಳಗಳ ಜಾಲಬಂಧವು ಇದೇ ಭಾವನೆಯನ್ನು ಉತ್ತೇಜಿಸುತ್ತದೆ. ಈ ದೇವಾಲಯಗಳು ಮತ್ತು ಯಾತ್ರಾಸ್ಥಳಗಳು ಭಾರತದ ವೈಶಿಷ್ಟ್ಯವನ್ನೂ ವೈಲಕ್ಷಣ್ಯವನ್ನೂ ಉಂಟುಮಾಡಿವೆ. ತೀರ್ಥಯಾತ್ರೆಯು ತಾಯಿನಾಡಿಗೆ ಪ್ರೀತಿಯನ್ನು ವ್ಯಕ್ತಪಡಿಸುವ ಪೂರ್ಣವಾದ ಪ್ರಕ್ರಿಯೆ, ಧಾರ್ಮಿಕ ಭಾವನೆಯನ್ನು ಬಲಪಡಿಸುವ ಮತ್ತು ಭೌಗೋಳಿಕ ಅರಿವನ್ನು ವಿಸ್ತರಿಸುವ ದೇಶಪೂಜೆಯ ವಿಧಾನಗಳಲ್ಲಿ ಒಂದು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ತೀರ್ಥಯಾತ್ರೆಯ ಧಾರ್ಮಿಕ ಪುಣ್ಯಾರ್ಜನೆಯ ಮತ್ತು ಪಾವಿತ್ರ್ಯದ ಹಿಂದೆ ನಾನು ಜಾಗಗಳ, ಕಲೆಗಳ ಮತ್ತು ಭೌಗೋಳಿಕ ಸಾಂಕೇತಿಕತೆಯ ಮೆಚ್ಚುಗೆಯೂ ಇದೆ. ಉತ್ತರದಲ್ಲಿರುವ ವಾರಾಣಸೀ ಮತ್ತು ದಕ್ಷಿಣದಲ್ಲಿರುವ ಕಾಂಚೀಪುರಗಳನ್ನು ಜನರು ಹೋಗಿ ನೋಡುವುದು ಏಕೆಂದರೆ ಅವು ದೊಡ್ಡ ದೇವಾಲಯ ನಗರಗಳು, ಶಿಲ್ಪಕಲೆಯಲ್ಲಿ, ಸಂಸ್ಕೃತಿ ನಿಧಿಯಲ್ಲಿ ಮತ್ತು ಸಂತರ ಮತ್ತು ವಿದ್ವಾಂಸರ ಸಹಯೋಗದಲ್ಲಿ ಹೆಚ್ಚು ಶ್ರೀಮಂತವಾಗಿವೆ. ಜಗನ್ನಾಥ ಪುರಿಯು ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿರುವುದಕ್ಕೆ ಕಡಲಿನ ಚೆಲುವು ಮುಖ್ಯಕಾರಣ, ಪ್ರಾಯಶಃ ದೀರ್ಘಕಾಲದವರೆಗೆ ಪೂರ್ವದಿಕ್ಕಿನ ವಾಣಿಜ್ಯವು ನಡೆಯುತ್ತಿದ್ದ ಬಂದರು, ಅದೊಂದು ವಿಶ್ವದ ಎಲ್ಲ ಜನರು ಸೇರುವ ನಗರ ಎಂಬುದೂ ಒಂದು ಕಾರಣವಾಗಿರಬಹುದು. ಅಲಹಾಬಾದನ್ನು ತೀರ್ಥರಾಜ ಪ್ರಯಾಗ ಎನ್ನುತ್ತಾರೆ. ಅಲ್ಲಿ ಎರಡು ದೊಡ್ಡ ನದಿಗಳ ನೀರು ಕೂಡುವ ಸ್ಥಳವಾದ ಸಂಗಮ ಇರುವುದರಿಂದ ಅದು ಅನಿವಾರ್ಯವಾಗಿ ಪ್ರಾಮುಖ್ಯವನ್ನು

ಗಳಿಸಿಕೊಂಡಿತು. ಹಿಮಾಲಯ ಪರ್ವತಗಳ ಸಹಜಸೊಬಗು ರಾಷ್ಟ್ರದ ಕವಿ ಪ್ರತಿಭೆಯನ್ನು ಸೆರೆಹಿಡಿದಿದೆ. ಆ ಪರ್ವತಗಳು ಸಾಧುಸಂತರಿಗೆ ಆಶ್ರಯತಾಣವಾಗಿ ಯಾತ್ರಿಕರ ಕೊನೆಯಿಲ್ಲದ ಸಾಲುಗಳನ್ನು ಆಕರ್ಷಿಸುತ್ತವೆ. ನಿಜವಾಗಿ ಹಿಂದೂಗಳ ಯಾತ್ರಾಸ್ಥಳಗಳು ಯಾವಾಗಲೂ ಹಿಮನದಿಗಳಿಂದ ಆಚ್ಛಾದಿತವಾದ ಶೈಲಗಳು, ತಾಳವೃಕ್ಷಗಳಿಂದ ಅಲಂಕೃತವಾದ ಕಡಲತೀರಗಳು, ಅಥವಾ ಸಾಗರ ಮಧ್ಯದಲ್ಲಿರುವ ದ್ವೀಪಗಳು, ಅಥವಾ ಬಹುದುರ್ಗಮವಾದ ಬೆಟ್ಟಗಳ ಕಣಿವೆಗಳು, ಅಥವಾ ಮಾನವನ ಹೆಜ್ಜೆಯ ಸದ್ದನ್ನೇ ಕೇಳಿರದ ಅರಣ್ಯಪ್ರದೇಶಗಳು. ಅಲ್ಲಿ ರೋಗಚಿಕಿತ್ಸಕವಾದ ಮತ್ತು ಆರೋಗ್ಯದಾಯಕವಾದ ಪ್ರಭಾವವನ್ನು ಬೀರಲು ಪ್ರಕೃತಿಗೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಹೀಗೆ ಭಾರತೀಯರು ಸ್ಥಳಸೌಂದರ್ಯವನ್ನು ಒಂದು ವಿಶಿಷ್ಟ ರೀತಿಯಲ್ಲಿ ನೋಡುತ್ತಾರೆ, ಆ ರೀತಿ ಪಾಶ್ಚಾತ್ಯರಿಗೆ ಅಜ್ಞಾತ. ಸೌಂದರ್ಯವನ್ನು ಮೆಚ್ಚುವ ಮತ್ತು ಆರಾಧಿಸುವ ಭಾರತೀಯ ವಿಧಾನ ವಿಭಿನ್ನವಾದುದು.

ಸೌಂದರ್ಯದ ತಾಣವು ಸಾಮಾಜಿಕ ಖುಷಿಯ ಅಥವಾ ವೈಯಕ್ತಿಕ ವಿಷಯಾಸಕ್ತಿಯ ಜಾಗವಲ್ಲ. ಅದು ಆತ್ಮಸಂಯಮದ ಮತ್ತು ಮನಸ್ಸನ್ನು ನಿಸರ್ಗದಿಂದ ನಿಸರ್ಗರೂಪಿ ಭಗವಂತನ ಕಡೆಗೆ ಒಯ್ಯುವ ಏಕಾಂತ ಧ್ಯಾನದ ಸ್ಥಾನ. ನಯಾಗರ ಜಲಪಾತವು ಗಂಗಾನದಿಯಲ್ಲಿ ಉಂಟಾಗಿದ್ದಿದ್ದರೆ ಮಾನವ ಕುಲವು ಅದರ ಬಗೆಗೆ ಮಾಡುವ ಮೌಲ್ಯಮಾಪನ ಎಷ್ಟು ಭಿನ್ನವಾಗಿರುತ್ತಿತ್ತು?[೨೫ಎ] ಆಗಾಗ ಮಾಡುವ ವನವಿಹಾರಗಳ ಮತ್ತು ರೇಲ್ವೆ ಸಂತೋಷಪ್ರಯಾಣಗಳ ಬದಲಾಗಿ ಅಲ್ಲಿ ಪೂಜಾ ತತ್ಪರರಾದ ಜನರ ಗುಂಪುಗಳ ತೀರ್ಥಯಾತ್ರೆ ನಡೆಯುತ್ತಿತ್ತು. ಉದ್ಯಾನವನಗಳ ಬದಲಾಗಿ ಆಶ್ರಮಗಳಿರುತ್ತಿದ್ದುವು. ಹೋಟೆಲುಗಳ ಬದಲಾಗಿ ದೇವಸ್ಥಾನ ಗಳಿರುತ್ತಿದ್ದುವು. ಆಡಂಬರದ ಅತಿಪ್ರದರ್ಶನದ ಬದಲಾಗಿ ಸರಳವಾದ ಸಂಯಮಭರಿತ ಜೀವನವಿರುತ್ತಿತ್ತು. ಆ ಜಲಪಾತದ ಪ್ರಬಲಶಕ್ತಿಗಳನ್ನು ಮಾನವರ ಉಪಯೋಗದ ರಥಕ್ಕಾಗಿ ಬಳಸಿಕೊಳ್ಳುವುದರ ಬದಲು ಅದು ಸಕಲವನ್ನೂ ಒಳಗೊಳ್ಳುವ ಸ್ವಾಭಿಮುಖತ್ವವನ್ನೂ, ಆತ್ಮದ ಬದುಕಿಗೆ ಆಹಾರವನ್ನೊದಗಿಸುವುದಕ್ಕಾಗಿ ಬಾಹ್ಯಪ್ರಪಂಚದಿಂದ ಮತ್ತು ಶರೀರದಿಂದ ಸಂಪೂರ್ಣವಾಗಿ ಬಿಡಿಸಿಕೊಳ್ಳುವ ವೈರಾಗ್ಯವನ್ನು ನೀಡುತ್ತಿತ್ತು!

ಹೀಗೆ ತೀರ್ಥಯಾತ್ರೆಯ ವ್ಯವಸ್ಥೆಯು ನಿರ್ವಿವಾದವಾಗಿ ಭೌಗೋಳಿಕ ಪ್ರಜ್ಞೆಯನ್ನು ಬೆಳೆಸುವ ಅತ್ಯಂತ ಪ್ರಬಲವಾದ ಸಾಧನವಾಗಿದೆ. ಭಾರತ ಎಂದರೆ ಹಲವು ಭೌಗೋಳಿಕ ಖಂಡಗಳ ಒಟ್ಟಾದ ಸನ್ನಿವೇಶ ಮಾತ್ರವಲ್ಲ, ಅದು ಬೃಹತ್ತಾದರೂ ಏಕಾತ್ಮತೆಯನ್ನುಳ್ಳ ಅವಯವಿ, ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಶಕ್ತಿಯುತವಾದ ಒಂದೇ ಜೀವದಿಂದ ಮಿಡಿಯುತ್ತಿರುವ ಅಲೆಗಳಿಂದ ಅದು ತುಂಬಿದೆ ಎಂದು ಯೋಚಿಸಲು ಮತ್ತು ಭಾವಿಸಲು ಈ ಪ್ರಜ್ಞೆಯು ಜನರಿಗೆ ಸಾಮರ್ಥ್ಯವನ್ನು

ನೀಡುತ್ತದೆ. ಅತ್ಯಂತ ಆವಶ್ಯಕವಾಗಿ ಪವಿತ್ರಸ್ಥಳಗಳಿಗೆ ಮಾಡಬೇಕಾದ ಧಾರ್ಮಿಕ ಯಾತ್ರೆಯು ವಿಶಾಲವಾದ ಪ್ರಯಾಣವನ್ನು ಒಂದು ರಾಷ್ಟ್ರೀಯ ಹವ್ಯಾಸವನ್ನಾಗಿ ಮಾಡಿದೆ. ಭಾರತದಲ್ಲಿ ಕಿರಿಯರಿಗೂ ಹಿರಿಯರಿಗೂ ಜೀವನದ ಎಲ್ಲ ವಯೋಮಾನಗಳಲ್ಲೂ ಇದು ಕರ್ತವ್ಯವಾಗಿದೆ. ಉಗಿಬಂಡಿಯ ಮತ್ತು ಯಾಂತ್ರಿಕ ಸಾಗಾಟದ ಯುಗಕ್ಕೆ ಮುಂಚೆ ಇದ್ದ ಕಾಲದಲ್ಲಿ ಮಾಡುತ್ತಿದ್ದ ಪ್ರಯಾಣವು ಅವರು ಸವೆಸುತ್ತಿದ್ದ ಮಾರ್ಗಗಳ ಬಗೆಗೆ ಅತ್ಯಂತ ಆಳವಾದ ನಿಕಟ ಜ್ಞಾನವನ್ನು ಬೆಳೆಸುತ್ತಿತ್ತು. ಇಂದಿನ ಪ್ರಪಂಚಪರ್ಯಟನಕಾರರು ಆ ಜ್ಞಾನದಿಂದ ಸುಲಭವಾಗಿ ವಂಚಿತರಾಗುತ್ತಾರೆ. ಭಾರತದ ಈ ಶ್ರೇಷ್ಠವಾದ ಯಾತ್ರಾವ್ಯವಸ್ಥೆಯು ಸ್ಥಳದಿಂದ ಸ್ಥಳಕ್ಕೆ ಜನರ ಸಂಚಾರವನ್ನು ಉತ್ತೇಜಿಸುವುದಕ್ಕಾಗಿ ಮತ್ತು ದೇಶದ ಬೇರೆ ಬೇರೆ ಭಾಗಗಳ ಮಧ್ಯದಲ್ಲಿ ಪರಸ್ಪರ ವಿಚಾರವಿನಿಮಯವನ್ನು ಪ್ರೋತ್ಸಾಹಿಸುವುದಕ್ಕಾಗಿ, ಇಂದಿನ ರೇಲ್ವೆ ಮತ್ತಿತರ ಆಧುನಿಕ ಸಲಕರಣೆಗಳ ಸ್ಥಾನದಲ್ಲಿ, ತಾನೇ ಸಮಗ್ರತೆಯ ದೃಷ್ಟಿಯನ್ನು ಉಂಟುಮಾಡುತ್ತಿತ್ತು. ಮಹಾಶಕ್ತಿಯುತವಾದ ಮಾತೃಭೂಮಿಯ ಭೌಗೋಳಿಕ ಏಕತೆಯ ಭಾವನೆಗೆ ಧಕ್ಕೆಯನ್ನು ಉಂಟುಮಡಬಹುದಾದ ಒಂದು ಗುಂಪಿನ ಅಥವಾ ಪ್ರಾಂತೀಯವಾದ ಸಂಕುಚಿತ ಭಾವನೆಗಳು ಬೆಳೆಯಲು ಅವಕಾಶವನ್ನು ತೀರ್ಥಯಾತ್ರಾವಸ್ಥೆಯು ಕೊಡಲಿಲ್ಲ. ವ್ಯಕ್ತಿಯ ತಾಯಿನಾಡನ್ನು ಹತ್ತಿರದಿಂದ ಅರಿತುಕೊಳ್ಳುವ ಪವಿತ್ರಕರ್ತವ್ಯದ ಹಾದಿಯಲ್ಲಿ ವೈಯಕ್ತಿಕಸುಖವು ಅಡ್ಡಿಯನ್ನು ಉಂಟುವಾಡಲು ಅದು ಅನುಮತಿಯನ್ನು ನೀಡಲಿಲ್ಲ. ಸ್ವಲ್ಪ ಸ್ವಲ್ಪ ದೂರದಲ್ಲೇ ಇರುತ್ತಿದ್ದ ಯಾವುದಾದರೊಂದು ಪವಿತ್ರ ಸ್ಥಳದಲ್ಲಿ ನಿಂತುಹೋಗುವ ವ್ಯವಸ್ಥೆಯು ಯಾತ್ರಿಕನ ದಾರಿಯನ್ನು ವಿಭಜಿಸಿ ಪ್ರಾಚೀನ ಪ್ರಪಂಚದ ಪ್ರಯಾಣದ ಪ್ರಯಾಸಗಳನ್ನು ಸಾಕಷ್ಟು ಕಡಿಮೆ ಮಾಡುತ್ತಿತ್ತು.

ಭಾರತದ ಎಲ್ಲ ಭಾಗಗಳಲ್ಲಿ ಉಕ್ಕಿ ಹರಿಯುತ್ತಿದ್ದ ಧಾರ್ಮಿಕ ಭಾವನೆಯು ನೆಟ್ಟು ಬೆಳೆಸಿರುವ ಅಸಂಖ್ಯಾತ ಪವಿತ್ರ ಸ್ಥಳಗಳನ್ನು ಎಣಿಸುವುದು ನಿಜವಾಗಿ ಕಷ್ಟ. ಇವುಗಳ ಅತ್ಯುತ್ತಮವಾದ ಒಂದು ಪಟ್ಟಿಯು[೨೬] *ಮಹಾಭಾರತ*ದ ವನಪರ್ವದಲ್ಲಿ ಕಂಡುಬರುತ್ತದೆ. ಪ್ರಧಾನವಾದ ಪವಿತ್ರ ಸ್ಥಳಗಳ ಎರಡು ವರ್ಣನೆಗಳು ಅಲ್ಲಿವೆ. ಒಂದು ನಾರದನಿಂದ, ಇನ್ನೊಂದು ಧೌಮ್ಯನಿಂದ. ಅಂಥ ಕೆಲವು ಪಟ್ಟಿಗಳು ಪೀಠಸ್ಥಾನಗಳೆಂದು ಪ್ರಸಿದ್ಧವಾದ ಸ್ಥಳಗಳಲ್ಲೂ ಸಿಕ್ಕುತ್ತವೆ. *ತಂತ್ರಚೂಡಾಮಣಿ*ಯಲ್ಲಿ ಜನರಿಗೆಲ್ಲ ಇಷ್ಟವಾದ ಐವತ್ತೆರಡು ಪವಿತ್ರಸ್ಥಳಗಳ ಸಂಖ್ಯೆಯನ್ನು ಕೊಡಲಾಗಿದೆ. ***ದೇವೀಭಾಗವತಾ***ನುಸಾರವಾಗಿ ಅವುಗಳ ಸಂಖ್ಯೆ ಒಂದು ನೂರೆಂಟು (೧೦೮) [೭–೩೦]. *ಕುಬ್ಜಿಕಾತಂತ್ರ*ವೆಂಬ ಗ್ರಂಥವೂ ಭಾರತದಲ್ಲಿ ಅಲ್ಲಲ್ಲಿ ಇರುವ ವಿವಿಧ ಸಿದ್ಧಪೀಠಗಳನ್ನು ನಮೂದಿಸಿದೆ. ***ಶಿವಚರಿತ***ವು ಐವತ್ತೊಂದು ಮಹಾಪೀಠಗಳನ್ನೂ,

ಇಪ್ಪತ್ತಾರು ಉಪಪೀಠಗಳನ್ನೂ ಬೇರ್ಪಡಿಸಿ ಗುರುತಿಸಿದೆ. ***ಕಾಳಿಕಾಪುರಾಣ***ದಲ್ಲೂ (೧೮, ೫೦, ೬೧ನೇ ಅಧ್ಯಾಯ) ಈ ಪವಿತ್ರಸ್ಥಳಗಳ ಉಲ್ಲೇಖವಿದೆ.

೧೦

ಹಿಂದೂ ಪವಿತ್ರ ಸ್ಥಳಗಳ ವ್ಯವಸ್ಥೆ ಮತ್ತು ಕಾರ್ಯಜಾಲಗಳ ಜೊತೆಗೆ ಬೌದ್ಧಮತ ಮತ್ತು ಜೈನಮತಗಳ ಸಂಬಂಧವನ್ನುಳ್ಳ ಸ್ಮಾರಕಭವನಗಳ ಸಮೂಹವನ್ನು ಪರಿಗಣಿಸಬೇಕು. ಈ ಎರಡು ಮತಗಳೂ ಅಂತಿಮವಾಗಿ ಮತ್ತು ಸಾರವತ್ತಾಗಿ ಹಿಂದೂಧರ್ಮದ ವಿವಿಧ ಮಜಲುಗಳು. ಇವುಗಳ ಸ್ಮಾರಕಭವನಗಳು ಆ ಮತಗಳ ನೇರ ಪ್ರಭಾವ ಒಳಗಾದ ಹೆಚ್ಚಿನ ಸಂಖ್ಯೆಯ ಜನರ ಭೌಗೋಳಿಕ ಪ್ರಜ್ಞೆಯನ್ನು ಪ್ರಭಾವಿಸಿವೆ ಮತ್ತು ಈ ದೇಶವನ್ನು ಅಲಂಕರಿಸಿವೆ. "ಐತಿಹಾಸಿಕವಾಗಿ ಬೌದ್ಧಮತ ಮತ್ತು ಜೈನಮತಗಳು ಹಿಂದೂಧರ್ಮದ ಶಾಖೆಗಳು ಅಥವಾ ಒಳಪಂಗಡಗಳು[೨೭] ಎಂದು ಭಾವಿಸಬಹುದು." ಕ್ರಿಶ್ಚಿಯನ್ ಯುಗದ ಮೊದಲಿನ ಕೆಲವು ಶತಮಾನಗಳಲ್ಲಿ ಹಿಂದೂಧರ್ಮಕ್ಕೆ ಬೌದ್ಧಮತ ಎಂಬ ಹೆಸರನ್ನು ಕೊಡಲಾಯಿತು. ಹಾಗೆ ಅದು ವಿದೇಶೀ ಪ್ರಜ್ಞೆಯಲ್ಲಿ ಹೆಪ್ಪುಗಟ್ಟಿತ್ತು. ಅದರ ವಿಶಿಷ್ಟವಾದ ಮತ್ತು ಅತ್ಯಂತ ಗಮನಾರ್ಹ ಕೊಡುಗೆ ಏನೆಂದರೆ ವಿಶಾಲ ಸಾಮ್ರಾಜ್ಯದ ಸಂಘಟನೆ. ಆ ಸಂಘಟನೆಯು ಹೆಚ್ಚು ಕೇಂದ್ರೀಕೃತವೂ, ಎಲ್ಲ ಭಾಗಗಳ ಸಮನ್ವಯವನ್ನುಳ್ಳದ್ದೂ, ಭೌಗೋಳಿಕ ಪ್ರಜ್ಞೆಯನ್ನು ಪೂರ್ಣವಾಗಿ ತುಂಬಿಸಿಕೊಂಡದ್ದೂ ಆಗಿತ್ತು. ಭಾರತದೇಶದ ಪೂರ್ವದಲ್ಲೂ ಪಶ್ಚಿಮದಲ್ಲೂ ಸಮಾನವಾಗಿದ್ದ ವಾಸ್ತುಶಿಲ್ಪದ ಆಕೃತಿಗಳಲ್ಲಿ ಅದು ತನ್ನನ್ನು ವ್ಯಕ್ತಪಡಿಸಿಕೊಂಡಿತು. ಜನರನ್ನು ಒಟ್ಟುಗೂಡಿಸಬೇಕು, ಉನ್ನತೀಕರಿಸಬೇಕು ಮತ್ತು ನಾಡನ್ನು ಅಲಂಕರಿಸಬೇಕು ಎಂಬ ಉತ್ಕಟಾಕಾಂಕ್ಷೆ ಅದಕ್ಕೆ ಇತ್ತು. ಇದರಿಂದ ಭಾರತ ದೇಶವು ಸ್ವಸಂಪೂರ್ಣವೂ ಸ್ವಪ್ರಜ್ಞಾಭರಿತವೂ ಆದ ಘಟಕವಾಗಿ, ನೆಲದ ಮೂಲಕ ಮತ್ತು ಸಮುದ್ರದ ಮೂಲಕ ಚೀನ, ಜಪಾನ್, ಸಿರಿಯಾ, ಈಜಿಪ್ಟ್ ದೇಶಗಳೊಡನೆ ಪೂರ್ಣವೂ ಜೀವಂತವೂ ಆದ ಸಂವಹನವನ್ನು ಹೊಂದಿತು. ವಿದೇಶಗಳಿಗೆ ಅದು ರಾಯಭಾರಿಗಳನ್ನೂ ವರ್ತಕರನ್ನೂ ಮತಪ್ರಚಾರಕರನ್ನೂ ಕಳುಹಿಸಿ ಕ್ರಮವಾಗಿ ಸಂದೇಶಗಳನ್ನೂ ವಾಣಿಜ್ಯಪದಾರ್ಥಗಳನ್ನೂ ವಿಚಾರಗಳನ್ನೂ ತಲುಪಿಸಿತು.

ಹಿಂದೂಮನಸ್ಸಿಗೆ ತೀರ್ಥಯಾತ್ರೆಯು ಹೇಗೋ, ಬೌದ್ಧರಿಗೆ ಬುದ್ಧಾವಶೇಷಗಳ ಪೂಜೆಯು ಹಾಗೆ. ಮೊದಲನೆಯದು ಪವಿತ್ರಸ್ಥಳಗಳ ಸ್ಥಾಪನೆಯಲ್ಲಿ ತನ್ನನ್ನು ಸಾಕ್ಷಾತ್ಕರಿಸಿಕೊಂಡಿತು. ಎರಡನೆಯದು ಭೂಮಿಯನ್ನು ಚಂದಗೊಳಿಸುವ ಸ್ಮಾರಕ ಭವನಗಳ ರಚನೆಯಿಂದ ಹಾಗೆ ಮಾಡಿತು. ಬುದ್ಧಾವಶೇಷಗಳ ಬಗೆಗೆ ಬೌದ್ಧರಿಗೆ ಇದ್ದ ಪೂಜ್ಯಭಾವನೆಯು ಗುಮ್ಮಟಗಳನ್ನು ಹೊಂದಿದ ಕುಪೋಲಗಳನ್ನೂ

ಸ್ತೂಪಗಳನ್ನೂ ಡಗೋಬಗಳನ್ನೂ ನಿರ್ಮಿಸುವುದಕ್ಕೆ ಕಾರಣವಾಯಿತು. ಈ ರಚನೆಗಳು ಬುದ್ಧಾವಶೇಷಗಳ ಸುಭದ್ರ ಸಂರಕ್ಷಣೆಗಾಗಿ ನಿರ್ಮಿತವಾದುವು. ಅವುಗಳ ಸುತ್ತಲೂ ಉಪಭವನಗಳನ್ನು ನಿರ್ಮಿಸಿ ಅವುಗಳಲ್ಲಿ ಕಲೆಗಳ ಎಲ್ಲ ಸಂಪತ್ತನ್ನೂ ಧಾರಾಳವಾಗಿ ಉಪಯೋಗಿಸಲಾಯಿತು. ಸಂನ್ಯಾಸಿ ಜೀವನದ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ವಿಹಾರಗಳನ್ನೂ ಚೈತ್ಯಗಳನ್ನೂ ನಿರ್ಮಿಸಲಾಯಿತು. ಇವು ಶಿಲೆಗಳನ್ನು ಕೊರೆದು ನಿರ್ಮಿಸಿದುವೂ ಅಥವಾ ಭೂಮಿಯ ಮೇಲೆ (ಇಟ್ಟಿಗೆ ಇತ್ಯಾದಿಗಳಿಂದ) ರಚಿತವೂ ಆಗಿದ್ದುವು.

ದೆಹಲಿ ತಿರ್‌ಹುತ್, ಸಂಕೀಸಾ, ಸಾಂಚೀ ಮುಂತಾದ ಸ್ಥಳಗಳಲ್ಲಿರುವ ಸ್ತಂಭಗಳು; ಬಿಹಾರ, ನಾಸಿಕ್, ಅಜಂತಾ, ಎಲ್ಲೋರಾ, ಕಾರ್ಲೆ, ಕನ್ಹೇರಿ, ಭಾಜ ಭೇಡ್‌ಸಾ, ಧಮ್ನಾರ್, ಉದಯಗಿರಿ, ಭಾಗ್ ಮುಂತಾದ ಸ್ಥಳಗಳಲ್ಲಿರುವ ಚೈತ್ಯ ಗುಹೆಗಳು ಮತ್ತು ವಿಹಾರಗಳು; ಮಾಣಿಕ್ಯಾಲ, ಸಾರನಾಥ, ಸಾಂಚೀ ಮತ್ತು ಅಮರಾವತಿಗಳಲ್ಲಿ ಇರುವ ಸ್ತೂಪಗಳು; ಬಾರ್ಹುತ್, ಮಥುರಾ, ಗಯಾ, ಸಾಂಚೀ ಮತ್ತು ಅಮರಾವತಿಗಳಲ್ಲಿರುವ ಶಿಲಾತೋರಣಗಳು ಮತ್ತು ಶಿಲಾಪಟ್ಟಿಕೆಗಳು; ಮತ್ತು ಕೊನೆಯದಾಗಿ ಹೆಚ್ಚಿನ ಸಂಖ್ಯೆಯ ಗಾಂಧಾರ ಆಶ್ರಮಗಳು – ಇವೆಲ್ಲ ವಿಶಾಲವಾದ ನಾಡಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಇರುವುದನ್ನು ಗಮನಿಸಿದಾಗ ಸಮಾನವಾದ ಕಲಾತ್ಮಕ ಸ್ಪಂದನದಿಂದ ಮತ್ತು ಒಂದೇ ಧಾರ್ಮಿಕ ವಿಚಾರದಿಂದ ವಿಸ್ತೃತ ಪ್ರದೇಶವು ಏಕೀಕೃತವಾಗಿದೆ ಎಂಬುದನ್ನು ಸೂಚಿಸುತ್ತದೆ.

೧೧

ಇಂಡಿಯಾದೇಶದ ನಿಜವಾದ ವೈಶಾಲ್ಯ–ವೈವಿಧ್ಯಗಳು ಅದರ ಮೂಲಭೂತ ಏಕತೆಗೆ ಹೇಗೆ ಆಧಾರವಾಗಿದೆ ಎಂಬುದನ್ನು ನಾವು ನೋಡಿದೆವು. ಅದು ರಾಷ್ಟ್ರೀಯ ಪ್ರಜ್ಞೆಯನ್ನು ಆವರಿಸಿಕೊಂಡಿದೆ ಮತ್ತು ಅದರ ನೈಸರ್ಗಿಕ ಅವಿಭಾಜ್ಯ ಅಂಗವಾಗಿ ಸೇರಿಕೊಂಡಿದೆ ಎಂಬುದನ್ನು ಅವಲೋಕಿಸಿದೆವು. ಈ ಒಂದು ವಿಶಿಷ್ಟ ರಾಷ್ಟ್ರೀಯ ಪ್ರಜ್ಞೆ ಇದ್ದಕ್ಕಿದ್ದಂತೆ ಉಂಟಾದ ಬೆಳವಣಿಗೆಯಲ್ಲ, ಅದು ಬೆಳೆಯಲು ಸಾಕಷ್ಟು ಕಾಲವನ್ನು ತೆಗೆದುಕೊಂಡಿತು ಎಂಬುದೂ ಸ್ಪಷ್ಟವಾಗಿದೆ. ಆ ಪ್ರಜ್ಞೆಯ ವಿಕಾಸವು ಪ್ರತಿಯೊಂದು ಹಂತದಲ್ಲೂ ಸ್ವಾಭಾವಿಕವಾಗಿ ಭಾರತೀಯರ ಮನಸ್ಸಿನಲ್ಲಿ ಭಾರತದ ಭೌಗೋಳಿಕ ಜ್ಞಾನದ ವಿಕಾಸಕ್ಕೆ ಅನುಗುಣವಾಗಿತ್ತು. ಇಂಡಿಯಾ ಒಂದು ಸಮಗ್ರ ದೇಶ ಎಂಬ ದೃಷ್ಟಿಕೋನ ಉಂಟಾಗಬೇಕಾದರೆ ಅದಕ್ಕೆ ಮೊದಲು ಅದರ ನಿಕಟ ಭೌಗೋಳಿಕ ಜ್ಞಾನವು ಹುಟ್ಟಿರಬೇಕು. ಆದ್ದರಿಂದ ಈ ದೇಶದ ಭೌಗೋಳಿಕ ಜ್ಞಾನ ಹೇಗೆ ಹುಟ್ಟಿತು ಮತ್ತು ಅದರ ಅನುಸ್ಯೂತವಾದ ಹಂತಗಳೇನು ಎಂದು ಗುರುತಿಸುವುದು ಅತ್ಯಂತ ಆವಶ್ಯಕ.

೧೨

ವೇದಗಳ ಕಾಲದಲ್ಲಿ ಅವರಿಗೆ ತಿಳಿದಿದ್ದ ಭೌಗೋಳಿಕ ಕ್ಷಿತಿಜಗಳು ಅಥವಾ ಎಲ್ಲೆಗಳು ಇಂಡಿಯಾ ದೇಶದ ಒಂದು ಭಾಗವನ್ನು ಮಾತ್ರ ಒಳಗೊಂಡಿತ್ತು ಎಂಬುದನ್ನು ಹೇಳಬೇಕಾಗಿಲ್ಲ. ಅದು ಸುಸ್ಪಷ್ಟ. ವೇದಗಳ ಕಾಲದ ಇಂಡಿಯಾ ದೇಶದ ವಿಸ್ತಾರ ಮತ್ತು ಸೀಮೆಗಳು ಋಗ್ವೇದದಲ್ಲಿರುವ ನದೀಸೂಕ್ತ ಮತ್ತು ಇತರ ಭೌಗೋಳಿಕ ದತ್ತಾಂಶಗಳಿಂದ ಊಹಿಸಲು ಶಕ್ಯವಾಗುತ್ತವೆ. ಆ ಸೂಕ್ತದಲ್ಲಿ ಸುಮಾರು ಇಪ್ಪತ್ತೈದು ನದಿಗಳನ್ನು ನಮೂದಿಸಲಾಗಿದೆ. ಇವುಗಳಲ್ಲಿ ಎರಡು ಮೂರನ್ನು ಬಿಟ್ಟರೆ ಉಳಿದುವೆಲ್ಲ ಸಿಂಧೂನದಿಯ ವ್ಯಾಪ್ತಿಗೆ ಒಳಪಟ್ಟಿವೆ. **ಸಪ್ತಸಿಂಧು** ಎಂಬ ಪದವನ್ನು ಆರ್ಯರ ಇಂಡಿಯಾ ದೇಶವನ್ನು ಗುರುತಿಸಲು ಒಮ್ಮೆ ಬಳಸಲಾಗಿದೆ. ಹಾಗೆಂದರೆ ಏಳು ನದಿಗಳ ನೆಲ. ಇವು ಪಂಜಾಬಿನ ಐದು ನದಿಗಳು ಮತ್ತು ಸಿಂಧೂ ಹಾಗೂ ಕಾಬೂಲ್. ಅನಂತರ ಕಾಬೂಲಿನ ಜಾಗದಲ್ಲಿ ಸರಸ್ವತಿಯನ್ನು ಆದೇಶಿಸಲಾಯಿತು. ಆರ್ಯರ ನಿವಾಸಸ್ಥಾನದ ಪೂರ್ವದ ಮಿತಿಯನ್ನು ಒಂದೆರಡು ಪ್ರದೇಶಗಳಲ್ಲಿ ಗಂಗಾ–ಯಮುನಾ ನದಿಗಳ ಉಲ್ಲೇಖದಿಂದ ಸೂಚಿಸಲಾಗಿದೆ. ಆದ್ದರಿಂದ ವೇದಕಾಲದ ಭಾರತದ ಅತ್ಯಂತ ವಿಶಾಲ ಭೌಗೋಳಿಕ ಪರಿಮಿತಿಯು ಉತ್ತರದಲ್ಲಿ ಹಿಮಾಲಯ ಪರ್ವತಗಳು, ಪಶ್ಚಿಮದಲ್ಲಿ ಸಿಂಧೂನದಿ ಮತ್ತು ಸುಲೈಮಾನ್ ಪರ್ವತಗಳು, ದಕ್ಷಿಣದಲ್ಲಿ ಸಿಂಧೂ–ಸಮುದ್ರ, ಪೂರ್ವದಲ್ಲಿ ಗಂಗಾ–ಯಮುನಾ ಕಣಿವೆ.[೨೮] ವಿಂಧ್ಯ ಪರ್ವತಶ್ರೇಣಿ ಮತ್ತು ನರ್ಮದಾ ನದಿಯ ಆಚೆಗೆ ಇದ್ದ ದೇಶವನ್ನು ಋಗ್ವೇದವು ಉಲ್ಲೇಖಿಸುವುದಿಲ್ಲ. ವೇದಕಾಲದ ಆರ್ಯರಿಗೆ ಆ ಪ್ರದೇಶವು ತಿಳಿದಿರಲಿಲ್ಲ.

ಅನಂತರ ಕಾಲದ ವೇದ ಸಾಹಿತ್ಯವೂ ದಕ್ಷಿಣ ಭಾರತದ ಬಗೆಗೆ ಯಾವ ಅರಿವನ್ನೂ ಪ್ರಕಟಿಸುವುದಿಲ್ಲ. *ಐತರೇಯ ಬ್ರಾಹ್ಮಣ*(VII–೧೮)ದಲ್ಲಿ ವಿಶ್ವಾಮಿತ್ರನು ಆಂಧ್ರರು, ಪುಂಡ್ರರು, ಶಬರರು, ಪುಲಿಂದರು, ಮುತಿಬರು ಆರ್ಯರ ದೇಶದ ಸೀಮೆಗಳ ಬಳಿ ವಾಸಿಸುತ್ತಿದ್ದಾರೆ ಎಂದು ಹೇಳುತ್ತಾನೆ. ಅದರ ಅರ್ಥವೇನೆಂದರೆ ಆ ಕಾಲದಲ್ಲಿ ವಿಂಧ್ಯ ಪರ್ವತದ ಉತ್ತರಕ್ಕಿದ್ದ ಪ್ರದೇಶದ ಹಾಗೂ ಅದರ ಆಗ್ನೇಯ ದಿಕ್ಕಿಗೆ ಇದ್ದ ದೇಶದ ಸ್ವಲ್ಪಭಾಗದ ಪರಿಚಯ ಆರ್ಯರಿಗೆ ಇತ್ತು ಎಂದು ಮಾತ್ರ ತೋರಿಸಿಕೊಡುತ್ತದೆ.

೧೩

ಕ್ರಿಸ್ತಪೂರ್ವ ಏಳನೆಯ ಶತಮಾನದವರೆಗೆ ಆರ್ಯರು ದಕ್ಷಿಣಭಾರತವನ್ನು ತಮ್ಮ ವಸಾಹತನ್ನಾಗಿ ಮಾಡಿಕೊಳ್ಳುವ ಕಾರ್ಯವು ಆಗಿರಲಿಲ್ಲ ಎಂದು ಈಗ

ನಮಗೆ ದೊರಕಿರುವ ಪುರಾವೆಗಳ ಪರೀಕ್ಷೆಯು ತೋರಿಸುತ್ತದೆ. ಪಾಣಿನಿಯು "ಕ್ರಿಶ್ಚಿಯನ್ ಯುಗದ ಪ್ರಾರಂಭಕ್ಕಿಂತಲೂ ಏಳು ಶತಮಾನಗಳಷ್ಟು ಮುಂಚೆ ಇದ್ದಿರಬೇಕು, ಅದಕ್ಕಿಂತಲೂ ಹೆಚ್ಚು ಹಿಂದಿನಕಾಲದಲ್ಲೂ ಇದ್ದಿರಬಹುದು."[೨೯] ಅವನು ಪಂಜಾಬ್ ಮತ್ತು ಆಫ್‌ಘಾನಿಸ್ಥಾನಗಳಿಗೆ ಹೆಚ್ಚು ಸಂಬಂಧಿಸಿರುವ ಸ್ಥಳಗಳನ್ನೂ ನದಿಗಳನ್ನೂ ನಮೂದಿಸಿದ್ದಾನೆ. ಅವನು ಉಲ್ಲೇಖಿಸಿರುವ ಅತ್ಯಂತ ದಕ್ಷಿಣದ ಪ್ರದೇಶಗಳು ಯಾವುವೆಂದರೆ ಕಚ್ಛ (IV–೨–೧೩೩), ಅವಂತೀ (IV–೧–೧೭೬)[೩೦], ಕೋಸಲ (IV–೧–೧೭೧), ಕರೂಷ (IV–೧–೧೭೮) ಮತ್ತು ಕಳಿಂಗ (IV–೧–೧೭೮).

ಆ ಕಾಲದ ಪಾಲೀಸಾಹಿತ್ಯವೂ ಅದೇ ತೀರ್ಮಾನವನ್ನು ದೃಢಪಡಿಸುತ್ತದೆ. ಅತ್ಯಂತ ಪ್ರಾಚೀನವಾದ ಒಂದು ಪಾಲೀಗ್ರಂಥವಾದ *ಸುತ್ತನಿಪಾತ*(೯೭೬)ದಲ್ಲಿ ದಕ್ಷಿನಪಥ[೩೧] ಎಂಬ ಪದವು ಕಾಣಿಸುತ್ತದೆ. ಆ ಪದದ ಅರ್ಥ ಇಂದಿನ ಸಂಪೂರ್ಣ ಡೆಕ್ಕನ್ ಪ್ರಸ್ಥಭೂಮಿ ಅಲ್ಲ, ಅದರ ಅರ್ಥ ಗೋದಾವರೀ ನದಿಯ ಮೇಲಿನ ಭಾಗದಲ್ಲಿರುವ ದೂರದ ಒಂದು ವಸತಿಸ್ಥಾನ ಮಾತ್ರ. ದಕ್ಷಿನಪಥ ಎಂಬ ಈ ಪದವು ನಾಲ್ಕು ನಿಕಾಯಗಳಲ್ಲಿ ಎಲ್ಲೂ ಇಲ್ಲ. ಅನಂತರ ಕಾಲದ ಒಂದು ಗ್ರಂಥದಲ್ಲಿ (*ವಿನಯಪಿಟಕ* ೧–೧೯೫, ೧೯೬; ೨–೨೯೮) ಈ ಪದವು ಕಂಡುಬರುತ್ತದೆ, ಆದರೆ ಅದಕ್ಕೂ ಅರ್ಥ ಗೋದಾವರಿಯ ಸಮೀಪದ ಅವೇ ಜಿಲ್ಲೆಗಳು ಮತ್ತು ಅವಂತಿಗೆ ಸಂಬಂಧಿಸಿದ ಪ್ರದೇಶಗಳು. ಭೂಪ್ರದೇಶಗಳ ಆಚೆಗೆ ಆಗುತ್ತಿದ್ದ ಸಮುದ್ರಯಾನಗಳ ಬಗೆಗೆ ನಿಕಾಯಗಳು ಉಲ್ಲೇಖಿಸುತ್ತದೆ (ನನ್ನ *Histroy of Indian Shipping*, ಭಾಗ ೧, ಅಧ್ಯಾಯ ೩ ನೋಡಿರಿ). ತೀರದ ಸಮೀಪದಲ್ಲಿರುವ ಕಳಿಂಗ ಮತ್ತು ದಂತಪುರಗಳನ್ನೂ ನಿಕಾಯಗಳು ನಮೂದಿಸಿವೆ. ಬುದ್ಧನ ಕಾಲದ ಅತಿ ಪ್ರಾಚೀನ ಬೌದ್ಧಮತದ ಭೌಗೋಳಿಕ ಮಿತಿಗಳನ್ನು ಮಹಾಪರಿನಿಬ್ಬಾನಸುತ್ತವು ಹೇಳಿದೆ. ಅದರಲ್ಲಿ ಬೌದ್ಧಮತಕ್ಕೆ ಪರಿವರ್ತನೆ ಹೊಂದಿದ್ದ ಅನೇಕ ರಾಜಸಂಬಂಧಿಗಳು, ಬ್ರಾಹ್ಮಣರು ಮತ್ತು ವೈಶ್ಯರು ವಾಸಮಾಡುತ್ತಿದ್ದ ಮುಖ್ಯ ಪಟ್ಟಣಗಳ ಹೆಸರುಗಳನ್ನು ಕೊಡಲಾಗಿದೆ. ಅವು ಯಾವುವೆಂದರೆ: ಚಂಪಾ, ರಾಜಗೃಹ, ಸಾವತ್ಥಿ, ಸಾಕೇತ, ಕೋಸಾಂಬಿ ಮತ್ತು ಮಗಧ ಬಾರಾನಸಿ. ಇವು ಕಾಶೀ, ಕೋಸಲ, ಮಗಧ ಎಂಬ ರಾಜ್ಯಗಳನ್ನೂ ಈಗ ಔಧ್, ಬಿಹಾರ ಎಂದು ಪ್ರಸಿದ್ಧವಾಗಿರುವ ಭೂಪ್ರದೇಶಗಳನ್ನೂ ಒಳಗೊಂಡಿವೆ. ಮಹಾಪರಿನಿಬ್ಬಾನಸುತ್ತದಲ್ಲಿ ಬುದ್ಧನ ಅವಶೇಷಗಳನ್ನು ಎಂಟು ಸ್ಥಳಗಳಿಗೆ ಹಂಚಲಾಯಿತೆಂದು ಹೇಳಲಾಗಿದೆ. ಅವು ಯಾವುವೆಂದರೆ, ರಾಜಗೃಹ, ವೇಸಾಲಿ, ಕಪಿಲವಸ್ತು, ಅಲ್ಲಕಪ್ಪ, ರಾಮಗಮ, ವೇತ್ಥದೀಪ, ಪವ ಮತ್ತು ಕುಶೀನಾರ. ಇವುಗಳನ್ನಲ್ಲದೆ ದ್ರೋಣನೆಂಬ ಬ್ರಾಹ್ಮಣನು ಕಟ್ಟಿಸಿದ ದೇವಾಲಯಗಳನ್ನೂ ಪಿಪ್ಪಲೀವನದ ಮೋರಿಯಾಗಳು ಕಟ್ಟಿಸಿದ ಚೈತ್ಯಗಳನ್ನೂ ಅಲ್ಲಿ ನಮೂದಿಸಲಾಗಿದೆ.

ಈ ಮಾಹಿತಿಗಳಿಂದಲೂ ಮೇಲೆ ಹೇಳಿದ ಭೂಪ್ರದೇಶ ಮಿತಿಗಳನ್ನೇ ನಿರ್ಧರಿಸಬಹುದು. (*S.B.E.* Vol. XI, Pp129 ff) ಇದೇ ರೀತಿಯಾಗಿ ಪ್ರಾಚೀನ ಬೌದ್ಧಮತದ ಸಮಗ್ರ ವ್ಯಾಪ್ತಿ ಪ್ರದೇಶವನ್ನು ಕೆಲವು ಪಾಲೀಗ್ರಂಥಗಳ ಭಾಗಗಳಿಂದಲೂ ತರ್ಕಿಸಿ ಅಂದಾಜಿಸಬಹುದು. (ಉದಾಹರಣೆಗೆ ಅಂಗುತ್ತರನಿಕಾಯ ೧.೨೧೩; ೪.೨೫೨, ೨೫೬, ೨೬೦; ವಿನಯ ೨.೧೪೬). ಈ ಗ್ರಂಥಗಳು ದೇಶದ ಹದಿನಾರು ಪ್ರಧಾನ ರಾಜಕೀಯ ವಿಭಾಗಗಳನ್ನು ತಿಳಿಸುತ್ತವೆ. (೧) ಅಂಗ, (೨) ಮಗಧ, (೩) ಕಾಶೀ, (೪) ಕೋಸಲ, (೫) ವಜ್ಜಿ, (೬) ಮಲ್ಲ, (೭) ಚೇದಿ, (೮) ವಂಶ, (೯) ಕುರು, (೧೦) ಪಾಂಚಾಲ, (೧೧) ಮಚ್ಛ, (೧೨) ಸುರಸೇನ, (೧೩) ಅಸ್ಸಕ, (೧೪) ಅವಂತೀ, (೧೫) ಗಾಂಧಾರ, (೧೬) ಕಾಂಭೋಜ. ಇಂತಹುದೇ ಇನ್ನೊಂದು ಪಟ್ಟಿಯನ್ನು ಗೋವಿಂದಸುತ್ತ ೩೬ರಲ್ಲಿ ನೋಡಬಹುದು [ದೀಘ ನಿಕಾಯ XIX.೩೬]. ಅಲ್ಲಿ ಬ್ರಾಹ್ಮಣ ಗೋವಿಂದನು ಏಳು ರಾಜ್ಯಗಳನ್ನು ರೇಣು ಎಂಬ ರಾಜನಿಗೂ ಮತ್ತು ಇತರ ಆರುಜನ ಕ್ಷತ್ರಿಯರಿಗೂ ಹಂಚಿದನೆಂದು ಹೇಳಲಾಗಿದೆ. ಆ ರಾಜ್ಯಗಳು (೧) ಕಲಿಂಗ, [ರಾಜಧಾನಿ ದಂತಪುರ], (೨) ಅಸ್ಸಕ [ರಾಜಧಾನಿ ಪೋತನ], (೩) ಅವಂತೀ [ರಾಜಧಾನಿ ಮಾಹಿಷ್ಮತಿ], (೪) ಸೋವೀರ [ರಾಜಧಾನಿ ರೋರುಕ], (೫) ವಿದೇಹ [ರಾಜಧಾನಿ ಮಿಥಿಲಾ], (೬) ಅಂಗ [ರಾಜಧಾನಿ ಚಂಪಾ], (೭) ಕಾಶೀ [ರಾಜಧಾನಿ ವಾರಾಣಸೀ].

ಲಲಿತವಿಸ್ತರ ಎಂಬ ಗ್ರಂಥವೂ ಜಂಬೂದ್ವೀಪದ ಬೆರೆ ಬೇರೆ ದೇಶಗಳಲ್ಲಿದ್ದ ಹದಿನಾರು ಮಹಾರಾಜ್ಯಗಳನ್ನು ಹೆಸರಿಸಿದೆ (ಅಧ್ಯಾಯ IV). ಜೊತೆಗೆ ಬುದ್ಧನ ಜನ್ಮಸ್ಥಳವಾಗಲು ಯೋಗ್ಯವಾದ ಸ್ಥಳ ಯಾವುದೆಂಬ ಚರ್ಚೆಯನ್ನು ಮಾಡುತ್ತ ಅದು ಈ ಕೆಳಗಿನ ವಂಶಗಳನ್ನೂ ಪಟ್ಟಣಗಳನ್ನೂ ಹೆಸರಿಸುತ್ತದೆ: (೧) ಮಗಧ ದೇಶದ ವೈದೇಹ ವಂಶ, (೨) ಕೋಸಲ ವಂಶ, (೩) ವಂಶರಾಜ, ಇದರ ಟಿಬೆಟನ್ ಹೆಸರು ವರ್‌ಸಾ, ರಾಜಧಾನಿ ಕೌಶಾಂಬೀ, (೪) ವೈಶಾಲೀ ಎಂಬ ಗಣರಾಜ್ಯ, (೫) ಉಜ್ಜಯಿನಿಯಲ್ಲಿ ಆಳುತ್ತಿದ್ದ ಪ್ರದ್ಯೋತನವಂಶ, (೬) ಕಂಸರಾಜನ ವಂಶದವರು ಆಳುತ್ತಿದ್ದ ಮಥುರಾ, (೭) ಪಾಂಡವರಿಗೆ ಸೇರಿದ್ದ ಹಸ್ತಿನಾಪುರ, (೮) ಮಿಥಿಲಾಪಟ್ಟಣ, (೯) ಶಾಕ್ಯರ ದೇಶ, ರಾಜಧಾನಿ ಕಪಿಲವಸ್ತು. ಇವುಗಳಲ್ಲಿ ಕೊನೆಯದನ್ನು ಬುದ್ಧನ ಜನ್ಮಕ್ಕೆ ಯೋಗ್ಯವಾದ ಸ್ಥಳ ಎಂದು ಆರಿಸಲಾಯಿತು. "ಅವನು ಜಂಬೂ ದ್ವೀಪದ ಎಲ್ಲ ರಾಜವಂಶಗಳನ್ನೂ ಕ್ಷತ್ರಿಯ ವಂಶಗಳನ್ನೂ ವೀಕ್ಷಿಸಿ ಅವುಗಳೆಲ್ಲವೂ ಕಳಂಕಿತವೆಂಬುದನ್ನು ಕಂಡುಕೊಂಡನು. ಶಾಕ್ಯವಂಶವೊಂದು ಮಾತ್ರ ಎಲ್ಲ ದೋಷಗಳಿಂದ ಮುಕ್ತವಾಗಿದೆ" ಎಂದು ಅವನಿಗೆ ತಿಳಿಯಿತು.

ಮತ್ತೆ *ಲಲಿತವಿಸ್ತರ*ದ ಹತ್ತನೆಯ ಅಧ್ಯಾಯದಲ್ಲಿ ಬೋಧಿಸತ್ತ್ವನು ಅರುವತ್ತುನಾಲ್ಕು ಪ್ರಕಾರದ ಲಿಪಿಗಳನ್ನು ಹೆಸರಿಸುವ ಸಂದರ್ಭದಲ್ಲಿ ಈ ಕೆಳಗೆ ಕೊಟ್ಟಿರುವ ಸ್ಥಳಗಳ ಮತ್ತುಬುಡಕಟ್ಟುಗಳ ಹೆಸರುಗಳಿವೆ:

(೧) ಅಂಗ, (೨) ವಂಗ, (೩) ಮಗಧ, (೪) ಶಕಾರಿ ದೇಶ, (೫) ಬ್ರಹ್ಮವಲ್ಲೀ, (೬) ದ್ರಾವಿಡ, (೭) ದಕ್ಷಿಣ, (೮) ಉಗ್ರ, (೯) ದರದ, (೧೦) ಖಸಯ, (೧೧) ಚೀನ, (೧೨) ಹೂಣದೇಶ.

ಸಂಸ್ಕೃತ ಮತ್ತು ಪಾಲಿಭಾಷೆಗಳಲ್ಲಿರುವ ಎಲ್ಲ ಮೇಲಿನ ಉಲ್ಲೇಖಗಳು ತೋರಿಸುವುದೇನೆಂದರೆ ವೇದಕಾಲದ ಮತ್ತು ಆದಿಮ ಬೌದ್ಧ ಕಾಲದ ಮಧ್ಯದಲ್ಲಿ ಭಾರತೀಯರ ಭೌಗೋಳಿಕ ಕ್ಷಿತಿಜವು ದಕ್ಷಿಣ ಭಾರತವನ್ನೂ ಸಿಲೋನ್ (ಶ್ರೀಲಂಕಾ) ಅನ್ನೂ ಒಳಗೊಂಡಿರಲಿಲ್ಲ. ಆ ಭಾಗಗಳ ಬಗೆಗೆ ಅರಿವು ಮತ್ತು ಅದನ್ನು ವಸಾಹತನ್ನಾಗಿ ಮಾಡಿಕೊಂಡಿದ್ದು ಅನಂತರ ಕಾಲದಲ್ಲಿ ಎಂಬುದಾಗಿದೆ.

೧೪

ಭಾರತೀಯ ಭೌಗೋಳಿಕ ಕ್ಷಿತಿಜದೊಳಕ್ಕೆ ದಕ್ಷಿಣ ಭಾರತ ಮೊದಲು ಪ್ರವೇಶಿಸುವುದು ಕನಿಷ್ಠಪಕ್ಷದಲ್ಲಿ ಕ್ರಿ.ಪೂ. ನಾಲ್ಕನೆಯ ಶತಮಾನದ ವೇಳೆಗೆ. ಸಮಗ್ರ ಭಾರತವು ಪಾಣಿನಿಗೆ ಗೊತ್ತಿಲ್ಲದಿದ್ದರೆ, ಅವನಿಗೆ ವಾರ್ತ್ತಿಕಗಳೆಂಬ ವ್ಯಾಖ್ಯಾನವನ್ನು ರಚಿಸಿದ ಕಾತ್ಯಾಯನನಿಗೆ ಅದು ತಿಳಿದಿತ್ತು. ಮೌರ್ಯರಿಗಿಂತ ಮುಂಚೆ ಭಾರತವನ್ನು ಆಳಿದ ನಂದರ ಕಾಲಕ್ಕೆ ಕಾತ್ಯಾಯನನು ಸೇರಿದವನೆಂದು ಭಾರತೀಯ ಪರಂಪರೆಯೂ, ಆಧುನಿಕ ವಿದ್ವಲ್ಲೋಕವೂ ಹೇಳುತ್ತವೆ. ಪಾಂಡ್ಯರು, ಚೋಳರು ಮತ್ತು ಮಹಿಷ್ಮತ್ ದೇಶಗಳನ್ನು ಕಾತ್ಯಾಯನನು ಉಲ್ಲೇಖಿಸುತ್ತಾನೆ. ಇದು ಪಾಣಿನಿಯ ವ್ಯಾಕರಣಕ್ಕೂ ಭೂಗೋಳಕ್ಕೂ ಪೂರಕವಾಗಿರುವುದು ವಾಸ್ತವ.

ಅಲೆಕ್ಸಾಂಡರನ ದಂಡಯಾತ್ರೆಯ ಸಮಯದಲ್ಲಿ ಭಾರತೀಯರಿಗೆ ಇಂಡಿಯಾ ದೇಶದಲ್ಲಿ ಸ್ವರೂಪ ಮತ್ತು ಪರಿಮಿತಿಯ ಬಗೆಗೆ ಖಚಿತವಾದ ಜ್ಞಾನವಿತ್ತು ಎಂದು ತೋರಿಸಲು ಗ್ರೀಕ್ ಪುರಾವೆಗಳೂ ಇವೆ. ಸ್ಟ್ರಾಬೋ [*ಜಿಯೋಗ್ರಾಫಿಯಾ* (II.೧.೬)] ಹೇಳುವ ಪ್ರಕಾರ, ದೇಶದ ಬಗೆಗೆ ಒಳ್ಳೆಯ ಪರಿಚಯವಿದ್ದ ಜನರು ಸಮಗ್ರ ದೇಶವನ್ನು ಬಣ್ಣಿಸುವಂತೆ ಅಲೆಕ್ಸಾಂಡರನು ಮಾಡಿದನು. ಅವನು ಕೊಟ್ಟ ವಿವರಣೆಯನ್ನು ಆಮೇಲೆ ಪೆಟ್ರೋಕಲ್ಸ್ ಎಂಬವನಿಗೆ ಕೊಡಲಾಯಿತು. ಸೆಲ್ಯೂಕಸ್ ನಿಕಟಾರ್ ಮತ್ತು ಆಂಟಿಯೋಕಸ್ ಸೋಟರ್ ಅವರ ಕೆಳಗೆ ಸತ್ರಪನಾಗಿ ಪೆಟ್ರೋಕಲ್ಸ್ ಕೆಲಸ ಮಾಡುತ್ತಿದ್ದನು. ಎರತೋಸ್ಥನೀಸ್ ಮತ್ತು ಸ್ಟ್ರಾಬೋ ಆ ವಿವರಣೆಯನ್ನು ಸತ್ಯವಾದುದೆಂದು ಒಪ್ಪಿಕೊಂಡರು. ಆ ವಿವರಣೆಯ ಆಧಾರದ ಮೇಲೆ ಅವರಿಬ್ಬರೂ ಭಾರತದ ವಿಸ್ತಾರದ ಬಗೆಗೆ ಕೆಲವು ದೂರಗಳನ್ನೂ ಆಯಾಮಗಳನ್ನೂ

ದಾಖಲಿಸಿದ್ದಾರೆ. ಅವು ಆಧುನಿಕರು ಮಾಡಿರುವ ಅಳತೆಗಳಿಗೆ ಸುಮಾರಾಗಿ ಸರಿ ಹೊಂದುತ್ತವೆ.

ಮೌರ್ಯ ಸಾಮ್ರಾಟರ ಕಾಲದಲ್ಲಿ ಸಮಗ್ರ ಭಾರತದ ಭೌಗೋಳಿಕ ಜ್ಞಾನ ಎಷ್ಟು ಆಳವೂ ವಿಶಾಲವೂ ಆಗಿತ್ತು ಎಂಬುದನ್ನು ಇತಿಹಾಸದಿಂದಲೂ ನಾವು ತಿಳಿದುಕೊಳ್ಳಬಹುದು. ಚಂದ್ರಗುಪ್ತನ ಮಂತ್ರಿಯಾಗಿದ್ದ ಚಾಣಕ್ಯನು ರಚಿಸಿದ ಗ್ರಂಥವೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಕೌಟಲೀಯ ಅರ್ಥಶಾಸ್ತ್ರವು ದಕ್ಷಿಣಭಾರತವೂ ಸೇರಿದಂತೆ ಸಮಗ್ರ ಭಾರತದ ನಾನಾ ಭಾಗಗಳ ಆರ್ಥಿಕ ಉತ್ಪನ್ನಗಳ ಉತ್ತಮ ಜ್ಞಾನವನ್ನು ಪ್ರದರ್ಶಿಸುತ್ತದೆ. ಭಾರತದ ವಾಣಿಜ್ಯ ಮಾರ್ಗಗಳನ್ನು ಸ್ಥೂಲವಾಗಿ ಎರಡು ರೀತಿಯಲ್ಲಿ ವಿಭಾಗಿಸಲಾಗಿದೆ.[೨] (೧) ಉತ್ತರದ ಮಾರ್ಗ ಎಂದರೆ ಯಾವುವು ಹಿಮಾಲಯದ ಕಡೆಗೆ ತೆರಳುವವೋ ಮತ್ತು ಆ ಕಾರಣದಿಂದ ಹೈಮವತ ಎಂದು ಕರೆಯಲ್ಪಡುವುವೋ ಅವು. (೨) ದಕ್ಷಿಣದ ಮಾರ್ಗಗಳು ಅಥವಾ ದಕ್ಷಿಣಾಪಥ. ಇವೆರಡರಲ್ಲಿ ಮೊದಲನೆಯ ಮಾರ್ಗಗಳು (ಉತ್ತರಾಪಥ) ಆನೆ, ಕುದುರೆ, ಸುಗಂಧದ್ರವ್ಯ, ಚರ್ಮ, ಬೆಳ್ಳಿ ಮತ್ತು ಚಿನ್ನಗಳಿಗೆ ಸೌಲಭ್ಯವನ್ನು ಹೊಂದಿವೆ. ಎರಡನೆಯ ಮಾರ್ಗಗಳು (ದಕ್ಷಿಣಾಪಥ) ಅಮೂಲ್ಯವಾದ ಶುಕ್ತಿ, ವಜ್ರ, ರತ್ನ, ಮುತ್ತು, ಚಿನ್ನಗಳನ್ನು ದೊರಕಿಸುತ್ತವೆ. ತಮಿಳುನಾಡು ಇವೆಲ್ಲಕ್ಕೂ ಪ್ರಸಿದ್ಧ ಮತ್ತು ಫಲವತ್ತಾದ ಆಕರವಾಗಿದೆ. ವಾಣಿಜ್ಯದೃಷ್ಟಿಯಿಂದ ದಕ್ಷಿಣಾಪಥವು ಉತ್ತರಾ ಪಥಕ್ಕಿಂತ ಹೆಚ್ಚು ಮುಖ್ಯವೆಂದು ಅಲ್ಲಿ ಹೇಳಲಾಗಿದೆ. ದಕ್ಷಿಣ ಭಾರತವು ಅನೇಕ ಗಣಿಗಳನ್ನು ಹೊಂದಿದೆ ಎಂದೂ ಅಲ್ಲಿ ಗುರುತಿಸಲಾಗಿದೆ. ದಕ್ಷಿಣ ಭಾರತದ ಮತ್ತು ಸಿಂಹಳದ ಹಲವು ನದಿಗಳು– ತಾಮ್ರಪರ್ಣಿಕಾ, ಕುಲ, ಚೂರ್ಣಾ ಮುಂತಾದವು ಮುತ್ತುಗಳು ಸಿಗುವ ಮೂಲಾಕರಗಳೆಂದೂ ಮತ್ತು ಪಾಂಡ್ಯವಟಕ, ಮಹೇಂದ್ರ ಮುಂತಾದ ಪರ್ವತಗಳು ಸಂಪನ್ಮೂಲಗಳೆಂದೂ ಅರ್ಥಶಾಸ್ತ್ರದಲ್ಲಿ ಹೇಳಲಾಗಿದೆ. ಉತ್ತರದ ತುದಿಯಲ್ಲಿದ್ದ ಹಿಮಾಲಯದ ಕೆಲವು ಗ್ರಾಮಗಳನ್ನು ಚರ್ಮಗಳು ದೊರೆಯುವ ಆಕರಗಳೆಂದು ನಮೂದಿಸಲಾಗಿದೆ. ಅವು ವಿಶಿ, ಮಹಾವಿಶಿ, ಆರೋಹ, ಮತ್ತು ಬಾಹ್ಲವ. ನೇಪಾಳವನ್ನು ಕಂಬಳಿಗಳ ಆಕರ ಎಂದೂ ಹೇಳಲಾಗಿದೆ. ಕಾಂಭೋಜ (ಆಫ್ಘಾನಿಸ್ಥಾನ, ಹ್ಯೂಯೆನ್‌ತ್ಸಾಂಗ್ ಇದನ್ನು ಕಾಓಜು ಎಂದು ಕರೆದಿದ್ದಾನೆ), ಸಿಂಧು (ಸಿಂಧ್) ಮತ್ತು ಅರಾಟ್ಟ (ಪಂಜಾಬ್, ಅಕ್ಷರಾರ್ಥ ರಾಜನಿಲ್ಲದ ದೇಶ) ಇವುಗಳು ಕುದುರೆಗಳನ್ನು ಒದಗಿಸುವ ಪ್ರದೇಶಗಳೆಂದು ನಮೂದಿಸಲ್ಪಟ್ಟಿವೆ. ಪೂರ್ವದ ದೇಶಗಳಲ್ಲಿ ವಂಗ, ಪೌಂಡ್ರ, ಸುವರ್ಣ ಕುಥ್ಯಕ (ವ್ಯಾಖ್ಯಾನಕಾರರು ಹೇಳುವಂತೆ ಇದೇ ಕಾಮರೂಪ), ಮಗಧ, ಕಾಶೀ, ಕಳಿಂಗಗಳನ್ನು ಹೆಸರಿಸಲಾಗಿದೆ. ಇವು ಆಗಿನ ಕಾಲದಲ್ಲೂ ರೇಶ್ಮೆ ಮತ್ತು ಹತ್ತಿಯ ಬಟ್ಟೆಗಳಿಗೆ ಹೆಸರುವಾಸಿಯಾಗಿದ್ದುವು. ಅಂಗ, ಕರೂಷ, ಪ್ರಾಚ್ಯ ಮತ್ತು ಕಳಿಂಗ ದೇಶಗಳನ್ನು ಆನೆಗಳನ್ನು ಒದಗಿಸುವ

ಆಕರಗಳೆಂದು ಹೇಳಲಾಗಿದೆ. ದಕ್ಷಿಣದಲ್ಲಿ ಮದುರೈ, ಪಶ್ಚಿಮದಲ್ಲಿ ಅಪರಾಂತ ಮತ್ತು ದಕ್ಖನ್ ಪ್ರಸ್ಥಭೂಮಿಯಲ್ಲಿ ಮಹಿಷ ದೇಶಗಳನ್ನೂ ಅವುಗಳ ಉತ್ತಮ ಹತ್ತಿ ಬಟ್ಟೆಗಳಿಗಾಗಿ ಹೆಸರಿಸಲಾಗಿದೆ. ಸುರಾಷ್ಟ್ರವು ಆನೆಗಳನ್ನೂ ಸೌವೀರವು ಕುದುರೆಗಳನ್ನೂ ಒದಗಿಸುವ ದೇಶಗಳೆಂದು ಹೇಳಿದ್ದಾರೆ. ಕೊನೆಯದಾಗಿ, ಭಾರತವು ಯಾವ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧವನ್ನು ಹೊಂದಿತ್ತೋ ಅಂಥ ಹೊರಗಿನ ದೇಶಗಳ ಹೆಸರನ್ನೂ ಹೇಳಲಾಗಿದೆ. ಅವುಗಳಲ್ಲಿ ಸ್ವರ್ಣಭೂಮಿಯು ಸುಗಂಧ ದ್ರವ್ಯಗಳಿಗೂ, ಚೀನವು ರೇಶ್ಮೆಗೂ (ಚೀನ ಪಟ್ಟ), ವನಾಯು (ಅರೇಬಿಯಾ) ಕುದುರೆಗಳಿಗೂ ಹೆಸರಾಗಿದ್ದುವು.[೩೩]

ಅಶೋಕನ ಕಾಲದಲ್ಲೂ ಸಮಗ್ರವಾದ ಭಾರತದ ಅರಿವು ಇತ್ತೆಂಬುದಕ್ಕೆ ಅವನ ಶಿಲಾಶಾಸನಗಳು ದೃಢವಾದ ಪುರಾವೆಗಳನ್ನು ಒದಗಿಸುತ್ತವೆ. ಆಗ ದಕ್ಷಿಣದಲ್ಲಿ ಸ್ವತಂತ್ರ ರಾಜ್ಯಗಳಾಗಿದ್ದ ಚೋಳ, ಪಾಂಡ್ಯ, ಸತ್ಯಪುತ್ರ ಮತ್ತು ಕೇರಳಪುತ್ರಗಳನ್ನು ಒಟ್ಟಿಗೆ ನಮೂದಿಸಲಾಗಿದೆ. ಅವುಗಳೊಡನೆ ಆಂಧ್ರ, ಪುಳಿಂದಗಳನ್ನೂ ಸೇರಿಸಲಗಿದೆ. ವಾಯವ್ಯ ದಿಕ್ಕಿನಲ್ಲೂ ಡೆಕ್ಕನ್ ಪ್ರಸ್ಥಭೂಮಿಯಲ್ಲೂ ಇದ್ದ ಸೀಮಾ ಪ್ರದೇಶಗಳನ್ನೂ ಅಶೋಕನ ಶಾಸನಗಳಲ್ಲಿ ಯೋನ (ಯವನ), ಕಾಂಭೋಜ, ಗಾಂಧಾರ, ರಾಷ್ಟ್ರಿಕ, ಪಿತೇನಿಕ (ಪ್ರಾಯಶಃ ಇದು ಪೈಠಣಕ್ಕೆ ಸಂಬಂಧಿಸಿರಬಹುದು), ನಭಟ ಇತ್ಯಾದಿಯಾಗಿ ಹೇಳಿದ್ದಾರೆ. ಸಿಲೋನ್ ದೇಶದ ಜನರನ್ನು ಮಹೇಂದ್ರನು ಬೌದ್ಧ ಧರ್ಮಕ್ಕೆ ಪರಿವರ್ತಿಸಿದನೆಂಬುದನ್ನು ಐತಿಹಾಸಿಕ ಸತ್ಯವೆಂದೇ ಭಾವಿಸಬಹುದು. ಏಕೆಂದರೆ ಅದಕ್ಕೆ ಉತ್ತರದ ಮತ್ತು ದಕ್ಷಿಣದ ಪರಂಪರೆಗಳ ಬೆಂಬಲವಿದೆ.

ಹೀಗೆ ಮೌರ್ಯಸಾಮ್ರಾಜ್ಯದ ಕಾಲದಲ್ಲಿ ಭಾರತದ ಎಲ್ಲ ಭಾಗಗಳ ಅರಿವು ಎಲ್ಲರಿಗೂ ಸಮಾನವಾಗಿ ಲಭಿಸಿತ್ತು, ಅದು ಜನರೆಲ್ಲರ ಭೌಗೋಳಿಕ ಪ್ರಜ್ಞೆಯ ಅಂಶವಾಗಿತ್ತು. ಆ ಕಾಲದ ಮತ್ತು ಮುಂದಿನ ಸಾಹಿತ್ಯದಲ್ಲಿ ಭೌಗೋಳಿಕ ವಿವರಣೆಗಲು ತುಂಬಿರುವುದನ್ನು ನಾವು ಕಾಣುತ್ತೇವೆ.

೧೫

ಪತಂಜಲಿ (ಕ್ರಿ.ಪೂ. ೧೫೦) ಕಾತ್ಯಾಯನನಿಗಿಂತಲೂ ಹೆಚ್ಚು ಮುಂದುವರಿದ ಜ್ಞಾನವನ್ನು ಹೊಂದಿದ್ದು, ದಕ್ಷಿಣದ ಬಗೆಗೆ ನಿಕಟ ಜ್ಞಾನವನ್ನು ಪಡೆದಿದ್ದಾನೆ. ಮಾಹಿಷ್ಮತೀ (III.೧.೨೬), ವೈದರ್ಭ (IV–೧–೪), ಕಾಂಚೀಪುರ (IV–೨–೨೧) ಮತ್ತು ಕೇರಳ ಮತ್ತು ಮಲಬಾರ್ (IV–೧–೧೭೫)ಗಳನ್ನು ಮಹಾಭಾಷ್ಯದಲ್ಲಿ ಹೆಸರಿಸುವುದಲ್ಲದೆ ದಕ್ಷಿಣದಲ್ಲಿ ಕೆಲವು ಭಾಷಾ ಪ್ರಯೋಗಗಳನ್ನೂ ಪತಂಜಲಿ ಗುರುತಿಸುತ್ತಾನೆ. (I–೧–೧೯)[೩೪]

ರಾಮಾಯಣ ಮತ್ತು *ಮಹಾಭಾರತ*ಗಳೆಂಬ ಮಹಾಕಾವ್ಯಗಳ (ಅಥವಾ ಇತಿಹಾಸ ಕಾವ್ಯಗಳ) ಖಚಿತ ಕಾಲಿಕ ಮೌಲ್ಯವನ್ನು ನಿರ್ಧರಿಸುವುದು ಈಗ ನಮಗೆ ಅವು ಸಿಕ್ಕಿರುವ ಸ್ಥಿತಿಯಲ್ಲಿ ಕಷ್ಟ. ಜನಪ್ರಿಯವಾದ ಹಿಂದೂ ನಂಬಿಕೆಗೆ ಅನುಸಾರವಾಗಿ ರಾಮಾಯಣವು ಮಹಾಭಾರತಕ್ಕಿಂತ ಪ್ರಾಚೀನವಾದುದು.[೩೫] ದಕ್ಷಿಣ ಭಾರತದ ಬಗೆಗೆ ರಾಮಾಯಣದಲ್ಲಿರುವ ಅರಿವು ಮಹಾಭಾರತದಲ್ಲಿರುವುದಕ್ಕಿಂತಲೂ ಕಡಿಮೆ ಎಂಬುದೂ ಈ ತೀರ್ಮಾನಕ್ಕೆ ಅನುಕೂಲವಾಗಿದೆ. ದಕ್ಷಿಣದಲ್ಲಿದ್ದ ಸ್ಥಳಗಳಲ್ಲಿ ರಾಮಾಯಣವು ಉತ್ಕಲ, ಕಳಿಂಗ ದಶಾರ್ಣ (ಭಿಲ್ಸಾ), ಅವಂತೀ ಮತ್ತು ವಿದರ್ಭಗಳನ್ನು ಹೆಸರಿಸುತ್ತದೆ. ಇವು ವಿಂಧ್ಯಪರ್ವತದ ರೇಖೆಗಿಂತ ಹೆಚ್ಚು ದೂರಕ್ಕೆ ನಮ್ಮನ್ನು ಒಯ್ಯಲಾರವು. ಇವುಗಳಿಗೂ ದೂರದಕ್ಷಿಣದ ಚೋಳ–ಪಾಂಡ್ಯ–ಕೇರಳಗಳಿಗೂ ಮಧ್ಯದಲ್ಲಿ ದಂಡಕಾರಣ್ಯವನ್ನು ಬಿಟ್ಟು ಬೇರೆ ಯಾವ ಸ್ಥಳವನ್ನೂ *ರಾಮಾಯಣ*ವು ನಮೂದಿಸುವುದಿಲ್ಲ. ಭೌಗೋಳಿಕ ಜ್ಞಾನದ ಈ ಸ್ಥಿತಿಯು ಅನಂತರಕಾಲದ, ಎಂದರೆ ಏಳನೆಯ ಶತಮಾನಕ್ಕಿಂತಲೂ ಹಿಂದಿನ ವೇದಸಾಹಿತ್ಯದ ದಿನಗಳಿಗೆ ನಮ್ಮನ್ನು ಒಯ್ಯುತ್ತದೆ. ಕಿಷ್ಕಿಂಧಾಕಾಂಡದಲ್ಲಿ (ಸರ್ಗ ೪೦–೪೩) ಸುಗ್ರೀವನು ಮಾಡುವ ಜನರ ಮತ್ತು ಜನಪದಗಳ ವರ್ಣನೆಯಾದರೋ ಸಮಗ್ರ ಭಾರತದ ಪರಿಕಲ್ಪನೆಯನ್ನು ನೀಡುತ್ತದೆ. ವಿಶಾಲಭಾರತ ಎಂದು ನಾವು ಯಾವುದನ್ನು ಕರೆಯಬಹುದೋ ಅದರ ಭಾಗಗಳಿಗಿಂತ ಬೇರೆಯಾಗಿ ಮತ್ತು ಸುತ್ತುವರಿದ ದೇಶಗಳಿಂದ ಮತ್ತು ರಾಷ್ಟ್ರಗಳಿಂದ ಪೃಥಕ್ಕಾಗಿ ಇರುವ ಸಮಗ್ರ ಭಾರತ ಈ ಪರಿಕಲ್ಪನೆಯಾಗಿದೆ.

ವಾಸುದೇವ, ಅರ್ಜುನ ಮತ್ತು ಯುಧಿಷ್ಠಿರರ ಬಗೆಗೆ ಪಾಣಿನಿಯು ನೀಡುವ ಉಲ್ಲೇಖಗಳಿಂದ ಅವನಿಗಿಂತಲೂ ಮುಂಚೆ ಒಂದು ಮಹಾಭಾರತವು ಇತ್ತು ಎಂಬುದು ಸಾಬೀತಾಗುತ್ತದೆ.

ಇಂದು ನಮಗೆ ದೊರಕಿರುವ *ಮಹಾಭಾರತ*ದ ಭೌಗೋಳಿಕ ಕ್ಷಿತಿಜಗಳು ಅದರ ಹಲವು ಭಾಗಗಳಲ್ಲಿ ಇರುವಂತೆ ಇನ್ನೊಂದು ಪರಿಚ್ಛೇದದಿಂದಲೂ ಸೂಚಿತವಾಗಿದೆ. ಅದರಲ್ಲಿ ಪಾಂಡ್ಯರನ್ನೂ ದ್ರಾವಿಡರನ್ನೂ ಉದ್ರರನ್ನೂ ಕೇರಳರನ್ನೂ ಆಂಧ್ರರನ್ನೂ ಸಹದೇವನು ಸೋಲಿಸಿದನೆಂದು ಹೇಳಲಾಗಿದೆ (ಸಭಾಪರ್ವ, ೩೧ನೆಯ ಅಧ್ಯಾಯ). ಇದನ್ನು ಭೀಷ್ಮಪರ್ವದ ಒಂಬತ್ತನೆಯ ಅಧ್ಯಾಯವೂ ಸೂಚಿಸುತ್ತದೆ. ಅದರಲ್ಲಿ ಭಾರತದ ಕೆಲವು ಮುಖ್ಯ ಪರ್ವತಗಳನ್ನು ನಮೂದಿಸಲಾಗಿದೆ. ಭೀಷ್ಮ ಪರ್ವದ ಹತ್ತನೆಯ ಅಧ್ಯಾಯದಲ್ಲಿ ಭಾರತದ ಸುಮಾರು ಇನ್ನೂರು ನದಿಗಳ ಹೆಸರುಗಳನ್ನು ಕೊಡಲಾಗಿದೆ. ದಕ್ಷಿಣದ ನದಿಗಳೆಂದು ಮಹಾನದೀ, ಗೋದಾವರೀ, ಕೃಷ್ಣಾ, ಕಾವೇರೀ, ನರ್ಮದಾ, ಕೃಷ್ಣವೇಣೀ, ವೇನ, ತುಂಗವೇನ– ಇವುಗಳನ್ನು ಹೆಸರಿಸಲಾಗಿದೆ. ಭೀಷ್ಮಪರ್ವದ ಒಂಬತ್ತನೆಯ ಅಧ್ಯಾಯವು ಉತ್ತರ ಭಾರತದ

೧೫೭ ಜನಾಂಗಗಳನ್ನೂ, ನರ್ಮದೆಯ ದಕ್ಷಿಣಕ್ಕಿದ್ದ ಐವತ್ತು ಜನಾಂಗಗಳನ್ನೂ ದಾಖಲಿಸುತ್ತದೆ. ಈಗಾಗಲೇ ತಿಳಿಸಿರುವಂತೆ, ಪವಿತ್ರ ಸ್ಥಳಗಳ ಪಟ್ಟಿಯನ್ನು ಕೊಡುವಾಗ ಆಸಕ್ತಿಯನ್ನು ಮೂಡಿಸುವ ಭೌಗೋಳಿಕ ಅಂಶಗಳನ್ನು ತಿಳಿಸಿಕೊಡುತ್ತದೆ. ಅಲ್ಲಿ ನಮೂದಿಸಲ್ಪಟ್ಟ ದಕ್ಷಿಣಭಾರತದ ಪವಿತ್ರ ಸ್ಥಳಗಳು ಯಾವುವೆಂದರೆ– ಗೋದಾವರೀ, ವೇನಾ, ಪಯೋಷ್ಣೀ, ಅಗಸ್ತ್ಯತೀರ್ಥ, ವರೂಣತೀರ್ಥ, ತಾಮ್ರಪರ್ಣೀ, ಗೋಕರ್ಣತೀರ್ಥ, ಕಾವೇರೀ ಮತ್ತು ಕನ್ಯಾತೀರ್ಥ (ಪ್ರಾಯಃ ಇದು ಕನ್ಯಾಕುಮಾರೀ). ಪಾಂಡವರ ಪ್ರಯಾಣ ವಿವರಣೆಗಳೂ ಅಂತೆಯೇ ತುಂಬ ಆಕರ್ಷಕ. ಕಳಿಂಗದಲ್ಲಿರುವ ವೈತರಣಿ, ಪರಶುರಾಮನ ನಿವಾಸವಾಗಿದ್ದ ಮಹೇಂದ್ರ ಪರ್ವತ, ಎಲ್ಲಿ ಪಾಂಡವರು ಸುರ್ಪಾರಕವನ್ನು ಕಂಡರೋ ಆ ಪಾಂಡ್ಯದೇಶ ಇತ್ಯಾದಿ ಪ್ರದೇಶಗಳನ್ನು ಅವುಗಳಲ್ಲಿ ಉಲ್ಲೇಖಿಸಲಾಗಿದೆ.

ದೇಶದ ಭಾಗಗಳ ಬಗೆಗೆ ಇರುವ ಇಂಥ ನಿಕಟ ಜ್ಞಾನದ ಜೊತೆಗೆ ಮಹಾಭಾರತವು ಇಡೀ ಒಂದು ಭೌಗೋಳಿಕ ಘಟಕವೆಂಬ ಪರಿಕಲ್ಪನೆಯನ್ನೂ ನೀಡುತ್ತದೆ. ಭೀಷ್ಮಪರ್ವದ ಒಂದು ಪ್ರಸಿದ್ಧ ಪರಿಚ್ಛೇದದಲ್ಲಿ ಭಾರತದ ಆಕಾರವು ಒಂದು ಸಮಬಾಹುತ್ರಿಭುಜ, ಅದನ್ನು ನಾಲ್ಕು ಸಮಾನ ತ್ರಿಭುಜಗಳಾಗಿ ವಿಭಜಿಸಬಹುದು, ಒಟ್ಟು ತ್ರಿಭುಜದ ಶಿರೋಬಿಂದು ಕನ್ಯಾಕುಮಾರಿಯಲ್ಲಿದೆ, ಪಾದರೇಖೆಯ ಹಿಮಾಲಯ ಪರ್ವತಗಳ ಸಾಲಿನ ಪಾದರೇಖೆ ಎಂದು ವರ್ಣಿಸಲಾಗಿದೆ. ಕನಿಂಗ್‌ಹಾಮ್ ಸ್ಪಷ್ಟವಾಗಿ ಹೇಳುತ್ತಾನೆ (*ಏನ್ಷಿಯೆಂಟ್ ಜಿಯೋಗ್ರಫಿ ಆಫ್ ಇಂಡಿಯಾ*, ಪುಟ ೫) "ಈ ಆಕಾರವು ಇಂಡಿಯಾ ದೇಶದ ಸಾಮಾನ್ಯ ಆಕಾರದೊಡನೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಅದಕ್ಕಾಗಿ ನಾವು ಭಾರತದ ಪರಿಮಿತಿಗಳನ್ನು ವಾಯವ್ಯ ದಿಕ್ಕಿನಲ್ಲಿ ಘಜನಿಯವರೆಗೂ ವಿಸ್ತರಿಸಬೇಕು ಮತ್ತು ತ್ರಿಭುಜದ ಉಳಿದ ಎರಡು ಬಿಂದುಗಳನ್ನು ಕನ್ಯಾಕುಮಾರಿ ಮತ್ತು ಅಸ್ಸಾಮಿನಲ್ಲಿರುವ ಸಾದಿಯಾದಲ್ಲಿ ಗುರುತಿಸಬೇಕು."

೧೬

*ಮಹಾಭಾರತ*ದ ಭೌಗೋಳಿಕ ಜ್ಞಾನವನ್ನು ಪುರಾಣಗಳು ಅನುಸರಿಸುತ್ತವೆ. ಇಂಡಿಯಾ ದೇಶದ ಜನರ ಮತ್ತು ಸ್ಥಳಗಳ ಬಗೆಗೆ ಸವಿಸ್ತಾರ ಮಾಹಿತಿಯನ್ನು ಪುರಾಣಗಳು ಕೊಡುವುದು ಸುವಿದಿತ. ಈ ದೇಶದ ವರ್ಣನೆಗಳಲ್ಲಿ ಇಂಡಿಯಾ (ಅಥವಾ ಭಾರತ) ಒಂದು ಭೌಗೋಳಿಕ ಘಟಕ ಎಂಬ ಪರಿಕಲ್ಪನೆಯನ್ನೂ ಅವು ನೀಡುತ್ತವೆ. ಅವು ಹೇಳುವಂತೆ ಈ ದೇಶದಲ್ಲಿ ಒಂಬತ್ತು ವಿಭಾಗಗಳಿವೆ. ಅವು ಯಾವುವೆಂದರೆ– ಇಂದ್ರ, ಕಶೇರುಮತ, ತಾಮ್ರಪರ್ಣ, ಗಭಸ್ತಿಮತ, ಕುಮಾರಿಕ, ನಾಗ, ಸೌಮ್ಯ, ವರುಣ ಮತ್ತು ಗಂಧರ್ವ. ಪ್ರಸಿದ್ಧ ಖಗೋಳಶಾಸ್ತ್ರಜ್ಞನಾಗಿದ್ದ

ಭಾಸ್ಕರಾಚಾರ್ಯನು ಮಾಡುವ ವಿಭಾಗಗಳಿಗೂ ಇವು ಸರಿ ಹೊಂದುತ್ತವೆ. (*ಸಿದ್ಧಾಂತ ಶಿರೋಮಣಿ*, ಅಧ್ಯಾಯ III–೪೧).

ಆದರೆ ವರಾಹಮಿಹಿರನು (*ಬೃಹತ್ಸಂಹಿತಾ*, ಅಧ್ಯಾಯ–XIV) ಈ ಒಂಬತ್ತು ವಿಭಾಗಗಳಿಗೆ ಬೇರೆ ಹೆಸರುಗಳಿರುವ ಪಟ್ಟಿಯನ್ನು ಕೊಡುತ್ತಾನೆ. ಅದು ಭೂಮಿಯ ಮೇಲ್ಮೈಯಿನ ವಿವರಗಳನ್ನು ಸಮೃದ್ಧವಾಗಿ ಕೊಡುವುದರಿಂದ ಹೆಚ್ಚು ಗಮನವನ್ನು ನೀಡಲು ಅರ್ಹವಾಗಿದೆ. ಈ ಕೆಳಗೆ ಅದನ್ನು ಕೊಟ್ಟಿದ್ದೇವೆ.

I. ಕೇಂದ್ರ ವಿಭಾಗ– ಬುಡಕಟ್ಟು ಜನಾಂಗಗಳು: ಕುರು, ಪಾಂಚಾಲ, ಪಾಂಡು, ಶೂರಸೇನ, ವತ್ಸ ಇತ್ಯಾದಿ. ಪಟ್ಟಣಗಳು ಮಥುರಾ ಮತ್ತು ಸಾಕೇತ. ನದಿಗಳು ಯಮುನಾ ಮತ್ತು ಸರಸ್ವತೀ.

II. ಪೂರ್ವವಿಭಾಗ– ಬುಡಕಟ್ಟು ಜನಾಂಗಗಳು: ಅಂಬಷ್ಠ, ಕೌಸಲಕ, ಪೌಡ್ರ, ಪ್ರಾಗ್‌ಜ್ಯೋತಿಷ, ತಾಮ್ರಲಿಪ್ತಿಕ, ಉತ್ಕಲ. ದೇಶಗಳು: ಕೋಸಲ, ಮಿಥಿಲಾ, ಕಾಶೀ, ಮಗಧ, ಪುಂಡ್ರ, ತಾಮ್ರಲಿಪ್ತಿ, ಸಮತಟ, ಉದ್ರ ಇತ್ಯಾದಿ.

III. ಆಗ್ನೇಯ ವಿಭಾಗ– ಬುಕಡಟ್ಟು ಜನಾಂಗಗಳು: ಚೇದಿಕ, ದಶಾರ್ಣ, ನಿಷಧ ಇತ್ಯಾದಿ. ದೇಶಗಳು: ಅಂಗ (ಚೇದಿ), ಉಪವಂಗ, ವಂಗ, ಕಳಿಂಗ, ಆಂಧ್ರ, ವಿದರ್ಭ ಇತ್ಯಾದಿ. ಪರ್ವತ: ವಿಂಧ್ಯ.

IV. ದಕ್ಷಿಣ ವಿಭಾಗ– ಬುಡಕಟ್ಟು ಜನಾಂಗಗಳು: ಆಭೀರ, ಆವಂತಕ, ಚೇರ್ಯ, ಕೈರಲಕ ಇತ್ಯಾದಿ. ವಾಚಂಕ ಇತ್ಯಾದಿ. ದೇಶಗಳು: ಅವಂತಿಯ ವೈಡೂರ್ಯ ಗಣಿಗಳು, ಶಂಖಗಳು ಸಿಗುವ ಪ್ರದೇಶವಾದ ಭರುಕಚ್ಛ, ಚಿತ್ರಕೂಟ, ಕಾಂಚೀ, ಲಂಕಾ, ದಕ್ಷಿಣ ಸಮುದ್ರ, ಮುತ್ತುಗಳು ಸಿಗುವ ಪ್ರದೇಶ, ಸಿಂಹಳ, ತಾಲಿಕಟ, ವೆಲ್ಲೂರ, ಚೇರ, ಚೋಳ, ಕಚ್ಛ, ಕರ್ಣಾಟ, ಕೇರಳ, ಕೊಂಕಣ ಇತ್ಯಾದಿ. ಅರಣ್ಯಗಳು: ದಂಡಕಾವನ. ಪರ್ವತಗಳು: ದುರ್ದುರ, ಕುಸುಮ, ಮಹೇಂದ್ರ, ಮಲಯ, ಮಾಲಂದ್ಯ, ಋಷ್ಯಮೂಕ, ಶೂರ್ಪ ಇತ್ಯಾದಿ. ನದಿಗಳು: ಕಾವೇರೀ, ಕೃಷ್ಣಾ, ತಾಮ್ರಪರ್ಣೀ, ವೇನಾ.

V. ನೈರುತ್ಯ ವಿಭಾಗ– ಬುಡಕಟ್ಟು ಜನಾಂಗಗಳು: ಆಭೀರ, ಆರವ, ಬರ್ಬರ, ಕಿರಾತ, ಮಕರ, ಪಹ್ಲವ, ಸಿಂಧು, ಸೌವೀರ, ಶೂದ್ರ, ಯವನ ಇತ್ಯಾದಿ. ದೇಶಗಳು: ಮಹಾರ್ಣವ, ಆನರ್ತ, ದ್ರಾವಿಡ, ಕಾಂಭೋಜ, ಪಾರಶವ, ಸೌರಾಷ್ಟ್ರ ಇತ್ಯಾದಿ.

VI. ಪಶ್ಚಿಮ ವಿಭಾಗ– ಬುಡಕಟ್ಟು ಜನಾಂಗಗಳು: ಅಪರಾಂತಕ, ಹೈಹಯ, ಮ್ಲೇಚ್ಛ, ಶಕ, ವೈಶ್ಯ ಇತ್ಯಾದಿ.

VII. ವಾಯವ್ಯ ವಿಭಾಗ– ಇದರಲ್ಲಿ ಹರಹೌರರು ಇದ್ದರು. ಸ್ತ್ರೀರಾಜ್ಯವೂ, ವೇಣುಮತೀನದಿಯೂ ಇದ್ದುವು.

VIII. ಉತ್ತರ ವಿಭಾಗ– ಬುಡಕಟ್ಟು ಜನಾಂಗಗಳು: ಹೂಣ, ಕೈಕಯ, ಉದೀಚ್ಯ ಇತ್ಯಾದಿ. ನಗರಗಳು: ಪುಷ್ಕಲಾವತೀ, ತಕ್ಷಶಿಲಾ. ದೇಶಗಳು: ಗಾಂಧಾರ, ಉತ್ತರಕುರು. ಪರ್ವತಗಳು: ಧನುಷ್ಮತ್, ಹಿಮವತ್, ಕೈಲಾಸ ಇತ್ಯಾದಿ. ನದೀ: ಯಮುನಾ.

IX. ಈಶಾನ್ಯ ವಿಭಾಗ– ಕಾಶ್ಮೀರ ಇತ್ಯಾದಿ.

೧೭

ಭಾರತೀಯರ ಭೌಗೋಳಿಕ ಜ್ಞಾನದ ಬೆಳವಣಿಗೆಯ ವಿವರಣೆಯನ್ನು ಕಾಳಿದಾಸನ ಭೂಗೋಳ ಜ್ಞಾನದ ನಿರೂಪಣೆಯಿಂದ ಮುಗಿಸಬಹುದು. ರಘುದಿಗ್ವಿಜಯದ ವರ್ಣನೆಯಲ್ಲಿ ಕಾಳಿದಾಸನು ಪೂರ್ವದಿಕ್ಕಿನಲ್ಲಿದ್ದ ಸುಹ್ಮರನ್ನೂ ವಂಗರನ್ನೂ ಕಪಿಶಾನದಿಯನ್ನೂ ಉತ್ಕಲರನ್ನೂ ಕಳಿಂಗರನ್ನೂ ಮಹೇಂದ್ರ ಪರ್ವತವನ್ನೂ ಉಲ್ಲೇಖಿಸಿದ್ದಾನೆ. ದಕ್ಷಿಣದಲ್ಲಿ ಕಾವೇರೀ ನದಿಯನ್ನೂ, ಅದನ್ನು ದಾಟಿ ಹೋದ ಮೇಲೆ ಪಾಂಡ್ಯರನ್ನೂ, ತಾಮ್ರಪರ್ಣೀನದಿಯ ಮುಖಜಭೂಮಿಯಲ್ಲಿ ಉತ್ಪನ್ನವಾಗುತ್ತಿದ್ದ ಮುತ್ತುಗಳನ್ನೂ ಮಲಯ, ದರ್ದುರ ಎಂಬ ಪರ್ವತಗಳನ್ನೂ ಅನಂತರ ಕೇರಳ ದೇಶವನ್ನೂ ವರ್ಣಿಸಿದ್ದಾನೆ. ಪಶ್ಚಿಮದಲ್ಲಿ ಮುರಲಾನದಿಯನ್ನೂ, ಅನಂತರ ಸಹ್ಯಪರ್ವತ ಶ್ರೇಣಿಗೂ ಸಮುದ್ರಕ್ಕೂ ಮಧ್ಯೆ ಇದ್ದ ಅಪರಾಂತವನ್ನೂ ಬಣ್ಣಿಸಿದ್ದಾನೆ. ಅಲ್ಲಿದ್ದ ಪಾರಸೀಕರನ್ನೂ ನಮೂದಿಸಿದ್ದಾನೆ. ಮತ್ತೆ ಉತ್ತರದಲ್ಲಿ ಯವನರು, ಹೂಣರು, ಕಾಂಭೋಜರು, ಕಿರಾತರು ಮತ್ತು ಕೈಲಾಸಪರ್ವತದ ಸುತ್ತಮುತ್ತ ಇದ್ದ ಬುಡಕಟ್ಟುಗಳನ್ನೂ ಹೇಳಿದ್ದಾನೆ. ಅತ್ಯಂತ ಪೂರ್ವದಲ್ಲಿದ್ದ ಪ್ರಾಗ್ ಜ್ಯೋತಿಷಪುರವೂ ಅವನಿಗೆ ಗೊತ್ತು. ಮೇಘದೂತ ಕಾವ್ಯದಲ್ಲಿ ರಾಮಗಿರಿಯಿಂದ ಅಲಕಾನಗರಿಯವರೆಗೆ ಸಂದೇಶ ವಾಹಕವಾದ ಮೋಡವು ಪಯಣಿಸಬೇಕಾದ ಮಾರ್ಗದಲ್ಲಿ ಕಾಣುವ ಪ್ರದೇಶಗಳಿವು: ಸಾತ್ಪುರಬೆಟ್ಟಗಳು, ಮಾಲವ, ರೇವಾ (ನರ್ಮದಾ) ನದೀ, ವಿಂಧ್ಯಪರ್ವತ, ದಶಾರ್ಣ, ರಾಜಧಾನೀ ವಿದಿಶಾ, ಸಿಪ್ರಾ ನದಿಯ ದಡದಲ್ಲಿರುವ ಉಜ್ಜಯಿನೀ, ಗಂಧವತೀ ನದೀ, ಗಂಭೀರಾನದೀ, ದೇವಗಿರಿ, ಚರ್ಮಣ್ವತೀ (ಚಂಬಲ್) ನದೀ, ದಶಪುರ, ಕುರುಕ್ಷೇತ್ರ, ಸರಸ್ವತೀನದೀ, ಕನಖಲ, ಗಂಗಾನದೀ, ಅದರ ಮೂಲ, ಕೈಲಾಸಪರ್ವತ, ಮಾನಸ ಸರೋವರ, ಅನಂತರ ಅಲಕಾ.

೧೮

ಉಗಿಬಂಡಿ ಮತ್ತು ಸ್ವಯಂಚಾಲಿತ ಯಂತ್ರವಾಹನಗಳ ಯುಗಕ್ಕೂ ಮುಂಚೆ ಪ್ರಾಚೀನ ಕಾಲದಲ್ಲೇ ಭಾರತದ ನಾನಾ ಪ್ರದೇಶಗಳ, ಜನಾಂಗಗಳ ಮತ್ತು ವಂಶಗಳ

ಬಗೆಗೆ ಭಾರತೀಯರಿಗೆ ನಿಷ್ಕೃಷ್ಟವಾದ ಅರಿವು ಇತ್ತು ಎಂಬುದನ್ನು ನೋಡಿದೆವು. ಅವರ ವಿಶಾಲ ದೇಶದ ಭೌಗೋಳಿಕ ಅಖಂಡತ್ವದ ಅರಿವಿಗಾಗಿ ಅತ್ಯಂತ ಆವಶ್ಯಕವಾಗಿದ್ದ ಈ ಜ್ಞಾನವು ಅವರನ್ನು ಒಟ್ಟಿಗೆ ಬೆಸೆದಿತ್ತು. ಅದು ಕೇವಲ ಬೌದ್ಧಿಕ ಕಲ್ಪನೆಯೋ ಅಥವಾ ಊಹಾತ್ಮಕ ಚಿಂತನೆಯೋ ಆಗಿರಲಿಲ್ಲ. ಅದು ಅವರ ಹೃದಯಾಂತರಾಳದಿಂದ ಮೂಡಿಬಂದ ಸಾಕಾರ ಸಾಕ್ಷಾತ್ಕಾರವಾಗಿತ್ತು; ಕ್ಷಣಿಕವಾದ ಸ್ಫೂರ್ತಿಯ ಉಲ್ಲಾಸಮಯ ಹಾರಾಟವಾಗಿರಲಿಲ್ಲ, ಧಾರ್ಮಿಕ ಗ್ರಂಥಗಳಿಂದ ಮತ್ತು ದೈನಂದಿನ ಪ್ರಾರ್ಥನೆಗಳಿಂದ ಪ್ರೇರಿತವಾದ ರಾಷ್ಟ್ರೀಯ ಚಿಂತನೆಯ ನಿಶ್ಚಿತ ವರ್ತನೆಯಾಗಿತ್ತು ಎಂಬುದನ್ನೂ ನಾವು ಕಂಡೆವು.

ಮೇಲೆ ತಿಳಿಸಿರುವಂತೆ ಉಂಟಾದ ಧಾರ್ಮಿಕ ಪ್ರಭಾವದ ಜೊತೆಗೆ, ಭಾರತದ ಭೌಗೋಳಿಕ ಏಕತೆಯ ಜನಪ್ರಿಯ ಪ್ರಜ್ಞೆಯನ್ನು ಉತ್ಪಾದಿಸುವುದರಲ್ಲಿ ರಾಜಕೀಯ ಪ್ರಭಾವವೂ ಇತ್ತು. ಸಮಸ್ತ ಭಾರತದ ಮೇಲೆ ಪರಮ ಪ್ರಭುತ್ವವನ್ನು ಸ್ಥಾಪಿಸುವ ಆಕಾಂಕ್ಷೆಯನ್ನಿಟ್ಟುಕೊಂಡಿದ್ದು ಅದರಲ್ಲಿ ಸಫಲರಾದ ಅನೇಕ ಭಾರತೀಯ ರಾಜರ ಹೆಸರುಗಳನ್ನು ಇತಿಹಾಸವು ದಾಖಲಿಸಿದೆ. ಅದಕ್ಕೆ ಅನುಗುಣವಾಗಿ ಸಮಸ್ತ ಭಾರತವನ್ನು ಒಂದು ದೇಶವನ್ನಾಗಿ ಮತ್ತು ರಾಷ್ಟ್ರೀಯ ಕಾರ್ಯಚಟುವಟಿಕೆಗಳಿಗೆ ಒಂದು ಕ್ಷೇತ್ರವನ್ನಾಗಿ ಪರಿಗಣಿಸಲಾಗಿತ್ತು. ಹಿಂದಿನ ಕಾಲದಲ್ಲಿ ಇದ್ದ ಅಂಥ ಒಬ್ಬ ದೊರೆ ಹರ್ಷವರ್ಧನ. ಅವನು ಉತ್ತರ ಭಾರತವನ್ನು ಕ್ರಿ.ಶ. ೬೦೬ರಿಂದ ೬೪೮ರವರೆಗೆ ಆಳಿದನು. ಗಂಗಾನದಿಯ ಸಮಸ್ತ ಪಾತ್ರವನ್ನೂ, ನೇಪಾಳದೊಡನೆ ಹಿಮಾಲಯ ಪರ್ವತದಿಂದ ನರ್ಮದಾ ನದಿಯವರೆಗಿನ ಭಾರತವನ್ನು ಅವನ ಸಾಮ್ರಾಜ್ಯ ಒಳಗೊಂಡಿತ್ತು. ಅಲ್ಲದೆ ಮಾಳ್ವ, ಗುಜರಾತ್ ಮತ್ತು ಸೌರಾಷ್ಟ್ರಗಳೂ ಅದರಲ್ಲಿ ಸೇರಿದ್ದುವು. ದೇಶದ ಪರಮೋಚ್ಚ ಪ್ರಭುತ್ವ ಎಂದು ಅದನ್ನು ಗುರುತಿಸಲಾಗಿತ್ತು. ಅದಕ್ಕೂ ಹಿಂದಿನ ಕಾಲದಲ್ಲಿ ಇದ್ದ ಅಂಥ ರಾಜನೆಂದರೆ ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿದ್ದ ಸಮುದ್ರಗುಪ್ತ. ಅವನು ತನ್ನ ವಿಜಯಿ ಸೈನ್ಯವನ್ನು ಗಂಗಾತೀರದಿಂದ ತಮಿಳುನಾಡಿನ ಎಲ್ಲೆಯವರೆಗೆ ನಡೆಸಿಕೊಂಡು ಹೋಗಿ ಭಾರತದೇಶದ ಬಹುಭಾಗದ ರಾಜಕೀಯ ಏಕೀಕರಣವನ್ನು ಸಾಧಿಸಿದನು. ಆಕ್ಸಸ್‌ನಿಂದ ಸಿಲೋನ್ (ಶ್ರೀಲಂಕಾ)ವರೆಗೂ ಅವನು ರಾಜಮೈತ್ರಿಯನ್ನೂ ವಿಸ್ತರಿಸಿದ್ದನು. ಕ್ರಿ.ಶ.ಕ್ಕೂ ಹಿಂದೆ ಇದ್ದ ಅಂಥ ಒಬ್ಬ ದೊರೆ ಎಂದರೆ ಅಶೋಕ ಚಕ್ರವರ್ತಿ. ಭಾರತದ ಸಮ್ರಾಟರಲ್ಲಿ ಅವನದು ಪ್ರೋಜ್ಜ್ವಲ ವ್ಯಕ್ತಿತ್ವ. ಆಫ್ಘಾನಿಸ್ಥಾನದಿಂದ ದಕ್ಷಿಣಭಾರತದಲ್ಲಿ ಮೈಸೂರಿನವರೆಗೂ ಅವನ ಸಾಮ್ರಾಜ್ಯವು ಹರಡಿತ್ತು. ಇಂದಿನ (ಸ್ವಾತಂತ್ರ್ಯಪೂರ್ವದ) ಬ್ರಿಟಿಷ್ ಇಂಡಿಯಾ, (ಬರ್ಮಾವನ್ನು ಒಳಗೊಂಡಂತೆ) ಎಷ್ಟಿದೆಯೋ ಅದಕ್ಕಿಂತಲೂ ಅಶೋಕನ ಸಾಮ್ರಾಜ್ಯ ಹೆಚ್ಚು ವಿಶಾಲವಾಗಿತ್ತು (*ಅಶೋಕ*, ವಿ.ಎ. ಸ್ಮಿತ್, ಪುಟ ೮೧). ಸಕ್ರಿಯವಾಗಿದ್ದ ಅಂತಾರಾಷ್ಟ್ರೀಯ ಸಂಬಂಧಗಳನ್ನಿಟ್ಟು ಕೊಂಡಿದ್ದ ಆ ಸಾಮ್ರಾಜ್ಯವು

ಒಂದು ಆತ್ಮಪ್ರಜ್ಞಾವಂತ ರಾಜಕೀಯ ಶಕ್ತಿಯೂ ಆಗಿತ್ತು. ಚಂದ್ರಗುಪ್ತನನ್ನು ಪ್ರಥಮ ಐತಿಹಾಸಿಕ ಭಾರತೀಯ ಚಕ್ರವರ್ತಿ ಎಂದು ತಪ್ಪಾಗಿ ಊಹಿಸಲಾಗಿದೆ ಅವನ ಕೈಕೆಳಗೆ ಭಾರತವು ತನ್ನನ್ನು ಒಂದು ರಾಜಕೀಯ ಘಟಕ ಎಂದು ಗುರುತಿಸಿಕೊಂಡಿತು ಅದಕ್ಕೂ ಮೊದಲೇ ಅದು ನಿಸರ್ಗದಿಂದಲೇ ಒಂದು ಭೌಗೋಳಿಕ ಘಟಕವಾಗಿತ್ತು.

೧೯

ಸಮಗ್ರ ಇಂಡಿಯಾ ದೇಶವನ್ನು ಆಳುವ ಏಕೈಕ ಶಕ್ತಿಯ ಪರಿಕಲ್ಪನೆಯನ್ನು ಭಾರತದ ರಾಜಕೀಯಕ್ಕೆ ಪರಿಚಯಿಸಿದ ಮೊದಲನೆಯ ದೊರೆ ಚಂದ್ರಗುಪ್ತ ಎಂದು ಭಾವಿಸುವುದು ತಪ್ಪು. ಏಕೆಂದರೆ ಈ ಪರಿಕಲ್ಪನೆ ಚಂದ್ರಗುಪ್ತನಿಗಿಂತಲೂ ಎಷ್ಟೋ ಹಿಂದಿನದು. ಅತ್ಯಂತ ಪ್ರಾಚೀನ ಕಾಲದಿಂದಲೇ ಅದು ಮುಂದಿನ ಪೀಳಿಗೆಗಳಿಗೆ ಕೊಡಲ್ಪಟ್ಟಿತ್ತು. ಚಕ್ರವರ್ತಿ ಅಥವಾ ಸಾಮ್ರಾಟ್ ಆದವನು ಸಾಮಂತರಾಜರಿಂದ ಕಪ್ಪಕಾಣಿಕೆಗಳನ್ನೂ ನಿಷ್ಠಾಭಕ್ತಿಯನ್ನೂ ಪಡೆದುಕೊಳ್ಳುತ್ತಿದ್ದುದು ಪ್ರಾಚೀನ ಹಿಂದೂಗಳಿಗೆ ಅತ್ಯಂತ ಪರಿಚಿತವಾದ ರಾಜಕೀಯ ವ್ಯವಸ್ಥೆಯಾಗಿತ್ತು. ಅಂಥ ಪರಮೋಚ್ಚ ಪ್ರಭುವಿನ ಬಗೆಗೆ ವೇದ ಸಾಹಿತ್ಯವು ಹಲವಾರು ಪದಗಳನ್ನು ಒದಗಿಸಿಕೊಟ್ಟಿದೆ.

(೧) ಅಧಿರಾಜ: ಪ್ರಾಚೀನ ಸಾಹಿತ್ಯದಲ್ಲಿ ಈ ಶಬ್ದವು ಸಾಕಷ್ಟು ಸ್ಥಳಗಳಲ್ಲಿ ರಾಜರುಗಳ ಮತ್ತು ಆಳುವ ಪ್ರಭುಗಳ ಅಧೀಶ್ವರನನ್ನು ಸೂಚಿಸಲು ಬಳಸಲ್ಪಟ್ಟಿದೆ. ಋಗ್ವೇದ, ೧೨೮..೯; ಅಥರ್ವ ವೇದ VI.೯೮.೧ ಮತ್ತು IX.೧೦.೨೪; ತೈತ್ತರೀಯ ಸಂಹಿತಾ .II೪.೧೪.೨; ಮೈತ್ರಾಯಣೀಸಂಹಿತಾ IV.೧೨.೩; ಕಾಠಕಸಂಹಿತಾ VIII.೧೭; ತೈತ್ತಿರೀಯ ಬ್ರಾಹ್ಮಣ III.೧.೨.೯; ಶತಪಥ ಬ್ರಾಹ್ಮಣ V.೪.೨; ನಿರುಕ್ತ VIII.೨ ಇವುಗಳಲ್ಲಿ ಅಧಿರಾಜ ಎಂಬ ಶಬ್ದವಿದೆ.

(೨) ರಾಜಾಧಿರಾಜ: (ರಾಜರ ರಾಜ) ಎಂಬ ಶಬ್ದವು ಅನಂತರ ಕಾಲದ ತೈತ್ತಿರೀಯ ಆರಣ್ಯಕದಲ್ಲಿ (I.೩೧.೬) ಬಂದಿದೆ.

(೩) ಸಾಮ್ರಾಟ್ (ಸಮ್ರಾಜ್): ರಾಜನಿಗಿಂತಲೂ ಹೆಚ್ಚು ಶಕ್ತಿಶಾಲಿಯಾದ ಪರಮಪ್ರಭುವನ್ನು ಸೂಚಿಸಲು ಈ ಶಬ್ದವನ್ನು ಬಳಸಿದ್ದಾರೆ. ಇದು *ಋಗ್ವೇದ*ದಲ್ಲೇ ಕಂಡುಬರುತ್ತದೆ. III.೫೫.೭; III.೫೬.೫; IV.೨೧.೧; VI.೨೭.೮; VIII.೧೯.೩೨. ಮತ್ತೆ *ವಾಜಸನೇಯಿ ಸಂಹಿತೆ*ಯಲ್ಲಿಯೂ ಈ ಪದವಿದೆ. V.೩೨; XII.೩೫; XX.೫ ಇತ್ಯಾದಿ.

*ಶತಪಥ ಬ್ರಾಹ್ಮಣ*ದಲ್ಲಿ ಸಾಮ್ರಾಟನು ರಾಜನಿಗಿಂತ ಹೆಚ್ಚು ಅಧಿಕಾರವನ್ನೂ ಅಂತಸ್ತನ್ನೂ ಉಳ್ಳವನೆಂದು ಹೇಳಿ, ವಾಜಪೇಯ ಯಾಗವನ್ನು ಮಾಡುವುದರಿಂದ ರಾಜನು ಸಾಮ್ರಾಟನಾಗುವನೆಂದು ಪ್ರತಿಪಾದಿಸಲಾಗಿದೆ. V.೧.೧.೧೩ [XII.೮.೩.೪; XIV.೧.೩.೮] ಶತಪಥ ಬ್ರಾಹ್ಮಣದಲ್ಲೇ (XI.೩.೨.೧.೬; ೨.೨.೩) ವಿದೇಹದ ಜನಕನಿಗೆ ಸಾಮ್ರಾಟ್ ಎಂಬ ವಿಶೇಷಣವನ್ನು ಕೊಡಲಾಗಿದೆ. *ಬೃಹದಾರಣ್ಯಕ ಉಪನಿಷತ್ತಿ*ನಲ್ಲೂ (IV.೧.೧; ೩.೧) ಜನಕನಿಗೆ ಈ ವಿಶೇಷಣವನ್ನು ಕೊಡಲಾಗಿದೆ. ಐತರೇಯ ಬ್ರಾಹ್ಮಣದಲ್ಲಿ ಪ್ರಾಚ್ಯ (ಪೂರ್ವದಿಕ್ಕಿನ) ದೇಶಗಳ ರಾಜನಿಗೆ ಬಿರುದಾಗಿ ಈ ಶಬ್ದವನ್ನು ಬಳಸಲಾಗಿದೆ. (VIII.೧೪.೨, ೩). ಇದು ಮಗಧ ಸಾಮ್ರಾಜ್ಯದ ಕುರುಹಾಗಿರಬಹುದು. ಸಾತ್ತ್ವತರೆಂಬ ಜನರ ರಾಜರಾಗಿದ್ದ ದಕ್ಷಿಣದ ದೊರೆಗಳಿಗೆ ಕೊಟ್ಟಿದ್ದ ಬಿರುದು ಭೋಜ. ನೀಚ್ಯ, ಅಪಾಚ್ಯ ಎಂಬ ಜನಗಳ ದೊರೆಗಳಾಗಿದ್ದ ಪಶ್ಚಿಮ ದಿಕ್ಕಿನ ರಾಜರಿಗೆ ಸ್ವಾರಾಟ್ ಎಂಬ ಬಿರುದು. ಹಿಮಾಲಯದ ಆಚೆಗೆ ಇದ್ದ ಉತ್ತರ ರಾಜ್ಯಗಳಾದ ಉತ್ತರಕುರು ಮತ್ತು ಉತ್ತರಮದ್ರಗಳ ರಾಜರಿಗೆ ಇದ್ದ ಬಿರುದು ವಿರಾಟ್. ಕುರುಪಾಂಚಾಲರ ಮತ್ತು ಉಶೀನರಜನರ ರಾಜರಾಗಿದ್ದ ಮಧ್ಯದೇಶದವರಿಗೆ ಇಟ್ಟಿದ್ದ ಹೆಸರು ರಾಜ.[೩೬]

(೪) ಏಕರಾಜ: ಈ ಪದದ ಅರ್ಥ ಒಬ್ಬನೇ ಆದ ಸ್ವತಂತ್ರ ರಾಜ. ಇದನ್ನು ರೂಪಕ ರೀತಿಯಲ್ಲಿ *ಋಗ್ವೇದ*ದಲ್ಲಿ ಬಳಸಲಾಗಿದೆ (VIII.೩೭.೩). ಅಕ್ಷರಾರ್ಥದಲ್ಲಿ ಅದನು ಐತರೇಯ ಬ್ರಾಹ್ಮಣದಲ್ಲಿ (VIII.೧೫)[೧೮] ಮತ್ತು ಅಥರ್ವವೇದದಲ್ಲಿ (III.೧.೪.೧)[೫೯] ಬಳಸಿದ್ದಾರೆ.

*ಶುಕ್ರನೀತಿ*ಯು ಹೇಳುವಂತೆ (I.೧೮೩.೧೮೭ Oppert Ed) ನೃಪತಿ ಎಂಬ ಸಾಮಾನ್ಯ ಶಬ್ದವು ಮುಂದೆ ಕೊಟ್ಟಿರುವ ರಾಜರ ಎಲ್ಲ ವರ್ಗಗಳಿಗೆ ಅನ್ವಯಿಸುತ್ತದೆ. ಈ ಪಟ್ಟಿಯಲ್ಲಿ ಮುಂದೆ ಮುಂದೆ ಕೊಟ್ಟಿರುವ ರಾಜರು ಹಿಂದು ಹಿಂದಿನವರಿಗಿಂತ ಆದಾಯದಲ್ಲೂ ಶಕ್ತಿಯಲ್ಲೂ ಹೆಚ್ಚಿನವರೆಂದು ತಿಳಿದುಕೊಳ್ಳಬೇಕು.

ಸಾಮಂತ–ಮಾಂಡಲಿಕ–ರಾಜ–ಮಹಾರಾಜ–ಸಾಮ್ರಾಟ್–ವಿರಾಟ–ಸಾರ್ವಭೌಮ.

೨೦

ರಾಜನಿಗೆ ವಾಚಕಗಳಾಗಿದ್ದ ಈ ಮೇಲ್ಕಂಡ ಶಬ್ದಗಳ ಜೊತೆಗೆ ಅತ್ಯುನ್ನತ ಅಧಿಕಾರ, ಪರಮೋಚ್ಚ ಪ್ರಭುತ್ವ ಅಥವಾ ಪರಮೈಶ್ವರ್ಯವನ್ನು ಸೂಚಿಸುವ ಇತರ ಶಬ್ದಗಳೂ ಬಳಕೆಯಲ್ಲಿದ್ದುವು. ಹಾಗೆ ರಾಜ್ಯ ಎಂಬ ಶಬ್ದವು ಅಧಿಕಾರವನ್ನು ಸೂಚಿಸುವ ಸಾಮಾನ್ಯ ಶಬ್ದವಾಗಿತ್ತು. ಅದು *ಅಥರ್ವವೇದ*ದಲ್ಲಿದೆ (III.೪.೨; IV.೮೧; XI.೬.೧೫; XII.೩.೩೧; XVIII.೪.೩೧). ಅದು *ತೈತ್ತಿರೀಯ ಸಂಹಿತೆ*ಯಲ್ಲೂ ಇದೆ). (II.೧.೩.೪; ೬.೬.೫; VII.೫.೮.೩) ಇತ್ಯಾದಿ. *ಐತರೇಯ ಬ್ರಾಹ್ಮಣ* (VII.೨೩ ಇತ್ಯಾದಿ)ದಲ್ಲೂ, *ಜೈಮಿನೀಯ ಉಪನಿಷದ್ ಬ್ರಾಹ್ಮಣ* (I.೪.೫)ದಲ್ಲೂ ರಾಜ್ಯ ಶಬ್ದವಿದೆ. ಕೆಲವು ಸ್ಥಳಗಳಲ್ಲಿ ಅನಿಯಂತ್ರಿತ ಪ್ರಭುತ್ವ ಎಂಬ

ಅರ್ಥದ ಸ್ವರಾಜ್ಯ[೪೦] ಎಂಬುದು ರಾಜ್ಯಕ್ಕೆ ಪ್ರತಿಶಬ್ದವಾಗಿದೆ (ಕಾಠಕಸಂಹಿತೆ XIV.೫; ಮೈತ್ರಾಯಣೀ ಸಂಹಿತೆ I.II.೫) ಹೋಲಿಸಿ: ತೈತ್ತಿರೀಯ ಬ್ರಾಹ್ಮಣ I.೩.೨.೨. ಐತರೇಯ ಬ್ರಾಹ್ಮಣವು ರಾಜ್ಯಾಧಿಕಾರದ ವಿವಿಧ ರೂಪಗಳನ್ನೂ ಅಂತಸ್ತುಗಳನ್ನೂ ಸೂಚಿಸಲು ಶಬ್ದಗಳ ಒಂದು ದೀರ್ಘ ಸರಣಿಯನ್ನೇ ಕೊಡುತ್ತದೆ (VIII.೧೨,೪,೫ ಇತ್ಯಾದಿ). ಅವು ಯಾವುವೆಂದರೆ ರಾಜ್ಯ, ಸಾಮ್ರಾಜ್ಯ, ಭೌಜ್ಯ, ಸ್ವಾರಾಜ್ಯ, ವೈರಾಜ್ಯ, ಪಾರಮೇಷ್ಠ್ಯ, ಮಹಾರಾಜ್ಯ, ಆಧಿಪತ್ಯ, ಸ್ವಾವಾಸ್ಯ. ಆಧಿಪತ್ಯ ಎಂಬ ಶಬ್ದವು ಪಂಚವಿಂಶ ಬ್ರಾಹ್ಮಣ (XV.೩.೩೫)ದಲ್ಲೂ ಛಾಂದೋಗ್ಯ ಉಪನಿಷತ್ತಿನಲ್ಲೂ (V.೨.೬)[೪೧] ಕಂಡು ಬರುತ್ತದೆ.

೨೧

ಚಕ್ರವರ್ತಿಗಳ ಪಟ್ಟಾಭಿಷೇಕಕ್ಕೆ ಸಂಬಂಧಿಸಿದ ಪ್ರಸಿದ್ಧ ಸಮಾರಂಭಗಳೂ[೪೨] ಇದ್ದುವು. ಸಾಮಾನ್ಯವಾಗಿ ಇವು ವಾಜಪೇಯ ಮತ್ತು ರಾಜಸೂಯ. ವೈದಿಕ ಸಾಹಿತ್ಯದಲ್ಲಿ ಇವುಗಳ ವಿವರಣೆಗಳು ರಕ್ಷಿಸಲ್ಪಟ್ಟಿದ್ದುವು. ಭಾರತೀಯರ ಮನಸ್ಸನ್ನು ಇಡೀ ಭಾರತವನ್ನು ಆಳುವ **ಏಕರಾಟ್** ಎಂಬ ಕಲ್ಪನೆ ಹಿಡಿದಿಟ್ಟಿತ್ತು ಎಂಬುದನ್ನು ಅವು ಸೂಚಿಸುತ್ತವೆ. ಶತಪಥ ಬ್ರಾಹ್ಮಣ (V.೧.೧.೧೩) ಮತ್ತು ಕಾತ್ಯಾಯನ ಶ್ರೌತಸೂತ್ರ (XV.೧.೧.೨)ಗಳಿಗೆ ಅನುಸಾರವಾಗಿ ವಾಜಪೇಯವು ಉನ್ನತತರವಾದ ಯಜ್ಞ, ಏಕೆಂದರೆ ಅದು ಯಜ್ಞವನ್ನು ಮಾಡಿದವನಿಗೆ ಸಾಮ್ರಾಜ್ಯವನ್ನು ನೀಡುತ್ತದೆ. ರಾಜಸೂಯ ಯಾಗವಾದರೋ ಕೇವಲ ರಾಜಗೌರವ(ರಾಜ್ಯ)ವನ್ನು ಕೊಡುತ್ತದೆ. ಮೇಲೆ ಉಲ್ಲೇಖಿಸಿದ ಶತಪಥ ಬ್ರಾಹ್ಮಣ ಮಂತ್ರದ ಮಾತುಗಳಲ್ಲೇ ಹೇಳಬೇಕೆಂದರೆ, "ರಾಜಸೂಯದ ಆಚರಣೆಯಿಂದ ಅವನು ರಾಜನಾಗುತ್ತಾನೆ. ವಾಜಪೇಯದಿಂದ ಅವನು ಸಾಮ್ರಾಟ್ ಎನಿಸಿಕೊಳ್ಳುತ್ತಾನೆ. ರಾಜನ ಸ್ಥಾನ ಕೆಳಗಿನದು ಸಮ್ರಾಟನ ಸ್ಥಾನ ಮೇಲಿನದು. ರಾಜನು ನಿಜವಾಗಿ ಸಾಮ್ರಾಟ್ ಆಗಲು ಬಯಸಬಹುದು. ಏಕೆಂದರೆ ರಾಜನ ಸ್ಥಾನ ಕೆಳಗಿನದು. ಆದರೆ ಸಾಮ್ರಾಟರು ಎಂದೂ ರಾಜರಾಗಲು ಬಯಸುವುದಿಲ್ಲ, ಏಕೆಂದರೆ ಸಾಮ್ರಾಟರ ಸ್ಥಾನ ಮೇಲಿನದು, ರಾಜರ ಸ್ಥಾನ ಅವರಿಗಿಂತ ಕೆಳಗಿನದು."[೪೩]

ಆದರೆ ಬೇರೆ ಪ್ರಮಾಣಗ್ರಂಥಗಳಿಗೆ ಅನುಸಾರವಾಗಿ ವಾಜಪೇಯವು ಸಣ್ಣಪುಟ್ಟ ರಾಜರಿಂದ ತಮಗೆ ಅಧಿಪತಿ ಆಗಲು ಆರಿಸಲ್ಪಟ್ಟ ರಾಜನು ಆಚರಿಸುವ ಪ್ರಾರಂಭಿಕ ಯಾಗವಷ್ಟೇ– ವಾಜಪೇಯವಾದ ಮೇಲೆ ರಾಜನ ಸಿಂಹಾಸನಾರೋಹಣ ಮತ್ತು ಪಟ್ಟಾಭಿಷೇಕಗಳು ಜರುಗುತ್ತವೆ. ಆಮೇಲೆ ಅವನು ರಾಜಸೂಯವನ್ನು ಮಾಡಬೇಕು. ಹಾಗೆ *ಆಶ್ವಲಾಯನ ಶ್ರೌತಸೂತ್ರ*ದಲ್ಲಿ ನಿರ್ದೇಶಿಸಿರುವಂತೆ, (IX.೯.೧೯) "ವಾಜಪೇಯವನ್ನು ಆಚರಿಸಿದ ಮೇಲೆ ರಾಜನು ರಾಜಸೂಯವನ್ನು ಮಾಡಬೇಕು."

ಈ ನಿಯಮದೊಡನೆ *ತೈತ್ತಿರೀಯ ಸಂಹಿತಾ* (V.೬.೨.೧) ಮತ್ತು *ತೈತ್ತಿರೀಯ ಬ್ರಾಹ್ಮಣ* (II.೭.೬.೧)ಗಳಲ್ಲಿ ಈ ಎರಡು ಯಾಗಗಳಿಗೆ ಕೊಟ್ಟಿರುವ ಸಾಪೇಕ್ಷ ಮೌಲ್ಯವು ಹೊಂದಿಕೊಳ್ಳುವಂತೆ ಕಾಣಿಸುತ್ತದೆ. ಅದಕ್ಕೆ ಅನುಸಾರವಾಗಿ ವಾಜಪೇಯವು ಒಂದು ಸಾಮ್ರಾಟ್‌ಸವ, ಎಂದರೆ ಪರಮಪ್ರಭುವೆಂದು ಗೌರವಕ್ಕಾಗಿ ಮಾಡುವ ಯಜ್ಞ, ಆದರೆ ರಾಜಸೂಯವು ವರುಣಸವ. ಹಾಗೆಂದರೆ ಸಾಯಣಾಚಾರ್ಯನು ಹೇಳುವ ಪ್ರಕಾರ, ವರುಣನು ಪ್ರಯೋಗಿಸುವ ವಿಶ್ವವ್ಯಾಪಿ ಅಧಿಕಾರವನ್ನು ಪಡೆಯಲು ಆಚರಿಸುವ ಯಾಗ. (ಹೋಲಿಸಿ: *ಸಾಂಖ್ಯಾಯನ ಶ್ರೌತಸೂತ್ರ* XV. ೧೩.೪; "ಹಾಗೆ ಅವರು ಪಟ್ಟಾಭಿಷೇಕವನ್ನು ಮಾಡುವುದು ವರುಣನಿಗೆ.") ಇದೇ ಅರ್ಥದಲ್ಲಿ ಕಾತ್ಯಾಯನನು ವಾಜಪೇಯದ ಉದ್ದೇಶವನ್ನು ನಿರ್ದೇಶಿಸುವಾಗ ಕೊಡುವ ನಿಯಮವನ್ನೂ ನಾವು ಅರ್ಥೈಸಬೇಕು. [VIII.೧೧.೧] "ಯಾರನ್ನು ಬ್ರಾಹ್ಮಣರೂ ರಾಜರೂ (ಶ್ರೀಮಂತರೂ) ತಮ್ಮ ನಾಯಕನನ್ನಾಗಿ ಆರಿಸಿಕೊಳ್ಳುವರೋ, ಅವನು ವಾಜಪೇಯವನ್ನು ಆಚರಿಸತಕ್ಕದ್ದು."[೪೪] ವಾಜಪೇಯದ ಕಾರ್ಯಕಲಾಪಗಳಲ್ಲಿ ವಿಶಿಷ್ಟವಾಗಿದ್ದು, ಅತ್ಯಂತ ಆಸಕ್ತಿಜನಕವೂ ಆಗಿರುವುದು ರಥಗಳ ಪಂದ್ಯ. ಅದರಲ್ಲಿ ಯಜ್ಞ ಮಾಡುವ ರಾಜನು ಮರದ ಕೊಂಬೆಯನ್ನು ಹೊತ್ತುಕೊಂಡು ಹೋಗಲು ಅವಕಾಶವನ್ನು ನೀಡಲಾಗುತ್ತದೆ. ಅದರಿಂದಲೇ ಯಾಗಕ್ಕೆ ಅದರ ಹೆಸರು ಬಂದಿದೆ. ರಥಗಳ ಪಂದ್ಯದ ಅನಂತರ ಮತ್ತೊಂದು ಆಸಕ್ತಿಜನಕ ಅಂಶವೆಂದರೆ ಯಜ್ಞವನ್ನು ಮಾಡುವ ರಾಜ (ರಾಜನಾಗಲು ಆರಿಸಲ್ಪಟ್ಟವನು) ಮತ್ತು ಅವನ ಪತ್ನಿ ಯಜ್ಞಯೂಪಸ್ತಂಭವನ್ನು ಏರುವುದು. ಅದರಿಂದ ಭೂಮಾತೆಗೆ ಅರ್ಪಣೆಯನ್ನು ಮಾಡಲಾಗುತ್ತದೆ. ಅನಂತರ ಸಿಂಹಾಸನಾರೋಹಣ. ಅದು ರಾಜತ್ವದ ಚಿಹ್ನೆ. "ಆಗ ಅವನು ಉಳಿದೆಲ್ಲರಿಗಿಂತ ಮೇಲಿನ ಸ್ಥಾನವನ್ನು ಪಡೆಯುತ್ತಾನೆ." [ಶತಪಥ ಬ್ರಾಹ್ಮಣ V.೨.೧.೨೪). ಸಿಂಹಾಸನಾರೋಹಣವು ರಾಜತ್ವದ ಚಿಹ್ನೆಯೆಂದು ಅಥರ್ವವೇದದಲ್ಲೂ (III.೧.೪.೨) ಹೇಳಿದೆ. ಅದರಲ್ಲಿ "ಸಿಂಹಾಸನವು ರಾಷ್ಟ್ರದ ಶರೀರದಲ್ಲಿ ಅತ್ಯುನ್ನತವಾದ ಸ್ಥಾನ" ಎಂದು ವರ್ಣಿಸಲಾಗಿದೆ. (ರಾಷ್ಟ್ರಸ್ಯ ಕಕುದಿ ಶ್ರಯಸ್ವ.) ಅನಂತರ ಆ ಯಜ್ಞವನ್ನು ಮಾಡಿದವನನ್ನು 'ರಾಜ' ಎಂದು ವಿಧಿವತ್ತಾಗಿ ಘೋಷಿಸಲಾಗುತ್ತದೆ.[೪೫] "ಅವನೇ ಸರ್ವರನ್ನೂ ಆಳುವವನು, ಅವನೇ ಎಲ್ಲರನ್ನೂ ಆಳುವವನು" [*ಶತಪಥ ಬ್ರಾಹ್ಮಣ* V.೨.೨.೧೫). ಅನಂತರ ಈ ಶಬ್ದಗಳಲ್ಲೂ[೪೬] ಘೋಷಿಸಲಾಗುತ್ತದೆ. "ಈ ರಾಜ್ಯವು ನಿನ್ನದು. ನೀನು ಇದನ್ನು ಆಳುವವನು, ಆಳುವ ಪ್ರಭು. ನೀನು ಸ್ಥಿರನೂ ನೇರ ನಡೆವಳಿಕೆಯವನೂ ಆಗಿರುವೆ. ನಿನಗೆ ಈ ರಾಜ್ಯವನ್ನು ಕೃಷಿಗಾಗಿ, ಕ್ಷೇಮಕ್ಕಾಗಿ, ಸಂಪತ್ತಿಗಾಗಿ, ಅಭಿವೃದ್ಧಿಗಾಗಿ, ಜನರೆಲ್ಲರ ಯೋಗಕ್ಷೇಮಕ್ಕಾಗಿ ಸುಖಕ್ಕಾಗಿ ಕೊಡಲಾಗಿದೆ." (ಅದೇ V.೨.೧.೨೫)

೨೨

ರಾಜಸೂಯ, ಅಥವಾ ರಾಜನ ಆಳ್ವಿಕೆಯ ಆರಂಭೋತ್ಸವ, ಹೆಚ್ಚು ಸಂಕೀರ್ಣವಾದ ಧಾರ್ಮಿಕ ಸಮಾರಂಭವಾಗಿತ್ತು. ಅದರಲ್ಲಿ ಅನುಸ್ಯೂತವೂ ದೀರ್ಘವೂ ಆದ ಯಾಜ್ಞಿಕ ಪ್ರಕ್ರಿಯೆಗಳಿದ್ದುವು. ಅವು ಎರಡು ವರ್ಷಗಳಿಗಿಂತ ಹೆಚ್ಚು ಕಾಲ ನಡೆಯಬೇಕಾಗಿತ್ತು. ಅದು *ಅಥರ್ವವೇದದಲ್ಲಿ* [IV.೮.೧.;X೧.೭.೭) ಮತ್ತು ಅನಂತರ ಕಾಲದ ಸಾಹಿತ್ಯದಲ್ಲಿ ಉಲ್ಲಿಖಿತವಾಗಿದೆ. [*ತೈತ್ತಿರೀಯ ಸಂಹಿತಾ* V.೬.೨.೧, *ಐತರೇಯ ಬ್ರಾಹ್ಮಣ* V.೧.೧.೧೨]. ಸೂತ್ರಗಳಲ್ಲಿ ರಾಜಸೂಯದ ಪ್ರಕ್ರಿಯೆ ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಆದರೆ ಅದರ ಪ್ರಮುಖ ಲಕ್ಷಣಗಳು ಬ್ರಾಹ್ಮಣಗಳಲ್ಲೇ ಸ್ಪಷ್ಟವಾಗಿ ವಿವೃತವಾಗಿವೆ. ವಿಶೇಷವಾಗಿ *ಶತಪಥ ಬ್ರಾಹ್ಮಣದಲ್ಲಿ* ಮತ್ತು *ಮೈತ್ರಾಯಣೀ* ಸಂಹಿತೆಯಲ್ಲಿ (IV.೩.೧ ಇತ್ಯಾದಿ), ಅದರ *ತೈತ್ತಿರೀಯ ಸಂಹಿತೆಯಲ್ಲಿ* (I.೮.೧ ಇತ್ಯಾದಿ) ಅದರ ವಿವರಣೆಗಳು ಸಿಕ್ಕುತ್ತವೆ. ಈ ಯಾಗದಲ್ಲಿ ಬಳಸಬೇಕಾದ ಮಂತ್ರಗಳು ಯಜುರ್ವೇದದ ಸಂಹಿತೆಗಳಲ್ಲಿ ಸೇರಿವೆ. ಉದಾಹರಣೆಗೆ ತೈತ್ತಿರೀಯ ಸಂಹಿತೆ (I.೮), ಕಾರಕ ಸಂಹಿತೆ [XV], *ಮೈತ್ರಾಯಣೀ ಸಂಹಿತೆ* (II.೬) ಮತ್ತು ವಾಜಸನೇಯೀ ಸಂಹಿತೆ (X.೧).

ರಾಜಸೂಯಯಾಗದ ಅತ್ಯಂತ ಆಸಕ್ತಿಜನಕವಾದ ಲಕ್ಷಣಗಳಲ್ಲಿ ಒಂದು 'ರತ್ನ ಹವೀಂಷಿ' ಎಂಬ ಕಾರ್ಯಕಲಾಪ. ಇದರಲ್ಲಿ ರತ್ನಗಳನ್ನು ಸ್ವೀಕರಿಸುವವರು ರತ್ನಿನಃ (ರತ್ನಿಗಳು). ಅವರು ಯಾರೆಂದರೆ ರಾಜ್ಯದ ವಿವಿಧ ಅತ್ಯಾವಶ್ಯಕ ಇಲಾಖೆಗಳನ್ನು ಪ್ರತಿನಿಧಿಸುತ್ತಿದ್ದ ಅಧಿಕಾರಿಗಳು. ರೂಪಕ ವಿಧದಲ್ಲಿ ತೆಗೆದುಕೊಂಡರೆ ಅವರು ಸಾಮ್ರಾಜ್ಯದ ಕಿರೀಟದಲ್ಲಿ ಹೊಳೆಯುವ ರತ್ನಗಳು.

ಅವರನ್ನು *ಶತಪಥಬ್ರಾಹ್ಮಣದಲ್ಲಿ* ಈ ಕ್ರಮದಲ್ಲಿ ನಮೂದಿಸಲಾಗಿದೆ [V.೩.೧೩]: (೧) ಸೇನಾನೀ, (೨) ರಾಜಪುರೋಹಿತ, (೩) ಪಟ್ಟಮಹಿಷೀ (ರಾಣಿ), (೪) ಆಸ್ಥಾನದ ಘಟನೆಗಳನ್ನು ದಾಖಲಿಸುತ್ತಿದ್ದ ಸೂತ, (೫) ಗ್ರಾಮಣೀಃ (ಹಳ್ಳಿಗಳ ಮುಖಂಡರ ಪ್ರತಿನಿಧಿ), (೬) ಕ್ಷತ್ರ್ಯ, (೭) ಖಜಾನೆಯ ಅಧಿಕಾರಿ ಸಂಗ್ರಹೀತ್ರ್, (ಇವನನ್ನು ಸಾಯಣನು ಧನವನ್ನು ಸಂಗ್ರಹಿಸಿಡುವ ಕೋಶಾಧ್ಯಕ್ಷ ಎಂದು ವಿವರಿಸಿದ್ದಾನೆ), (೮) ಭಾಗದುಘ (ತೆರಿಗೆಗಳನ್ನು ಸಂಗ್ರಹಿಸುವ ಮುಖ್ಯಾಧಿಕಾರಿ), (೯) ಅಕ್ಷಾವಾಪ (ಜೂಜಿನ ವ್ಯವಹಾರಗಳ ಅಧಿಕಾರಿ), (೧೦) ಗೋನಿಕರ್ತನ (ಸಾಯಣನು ಹೇಳುವ ಪ್ರಕಾರ ಬೇಟೆಯಲ್ಲಿ ಇವನು ಸದಾ ರಾಜನ ಜೊತೆಯಲ್ಲಿ ಇರುವವನು), ಮತ್ತು (೧೧) ಪಾಲಾಗಲ (ಸಂದೇಶವಾಹಕ). ತೈತ್ತಿರೀಯ ಸಂಹಿತೆ(I.೮.೯.೧)ಯಲ್ಲಿ ಇನ್ನೊಂದು ಪಟ್ಟಿಯನ್ನು ಕೊಟ್ಟಿದೆ. ತೈತ್ತಿರೀಯ ಬ್ರಾಹ್ಮಣದಲ್ಲೂ (I.೭.೩.೧) ಅದು ಇದೆ. ಅದರಲ್ಲಿ ಗೋಕರ್ತನನ ಮತ್ತು ಪಾಲಾಗಲನ ಹೆಸರುಗಳನ್ನು ಬಿಡಲಾಗಿದೆ ಮತ್ತು 'ರಾಜನ್ಯ'ನನ್ನು ಸೇರಿಸಿಕೊಳ್ಳಲಾಗಿದೆ.

ಇದೇರೀತಿಯಾಗಿ ಮೈತ್ರಾಯಣೀ ಸಂಹಿತೆಯು (II.೬–೫; IV.೩.೮೧) ರಾಜನ್, ವೈಶ್ಯಗ್ರಾಮಣಿ ಮತ್ತು ತಕ್ಷ–ರಥಕಾರರನ್ನು ಹೆಸರಿಸಿದೆ.[೪೭] ತಕ್ಷಾ ಎಂದರೆ ಬಡಗಿ, ರಥಕಾರ ಎಂದರೆ ರಥಗಳನ್ನು ನಿರ್ಮಿಸುವವನು. ಪ್ರಾಯಶಃ ಇವರು ಕೈಗಾರಿಕೆಯ ಪ್ರಾತಿನಿಧಿಗಳು. *ಕಾಠಕಸಂಹಿತೆಯೂ* (XVI.೪) ಇದೇ ಪಟ್ಟಿಯನ್ನು ಕೊಟ್ಟರೂ ತಕ್ಷರಥಕಾರರನ್ನು ಕೈಬಿಟ್ಟು ಗೋವ್ಯಚನನ್ನು ಸೇರಿಸಿಕೊಂಡಿದೆ.

ಅಥರ್ವವೇದದಲ್ಲಿ (III.೫.೭) ರಾಜಕರ್ತೃಗಳ ಅಥವಾ ರಾಜಕೃತ್ ಎಂಬುವರ ಹೆಚ್ಚು ಸರಳವಾದ ಪಟ್ಟಿ ಇದೆ. ಇವರು ಪ್ರಾಯಶಃ ಸ್ವಯಂ ರಾಜರಲ್ಲದಿದ್ದರೂ ರಾಜನ ಪ್ರತಿಷ್ಠಾಪನೆಯಲ್ಲಿ ಸಹಾಯಕರಾಗಿರುತ್ತಿದ್ದರು. ಬೇರೆ ಗ್ರಂಥಗಳಲ್ಲಿರುವ ಮೇಲ್ಕಂಡ ಪಟ್ಟಿಗಳು ಅಥರ್ವವೇದದ ಸರಳಪಟ್ಟಿಯ ಬೆಳವಣಿಗೆ ಇರಬೇಕು. ರಾಜಕರ್ತೃಗಳು ಸೂತ, (ಸಾರಥಿ, ರಥಕಾರ), ಗ್ರಾಮಣಿ (ಹಳ್ಳಿಗಳ ಮುಖಂಡ), ಮತ್ತು ಜನ (ಪ್ರತಿನಿಧಿ).[೪೮]

ಐತರೇಯ ಬ್ರಾಹ್ಮಣದಲ್ಲಿ (VIII.೧೭.೫) ರಾಜಕರ್ತ ಎಂಬ ಪದಕ್ಕೆ ವ್ಯಾಖ್ಯಾನಕಾರನು ರಾಜನ ತಂದೆ, ಸಹೋದರ ಇತ್ಯಾದಿ ಎಂದು ವಿವರಣೆಯನ್ನು ಕೊಟ್ಟಿದ್ದಾನೆ. ರಾಜನ ಪಟ್ಟಾಭಿಷೇಕದಲ್ಲಿ ಸಹಾಯಕರಾಗಿದ್ದವರ ಈ ಪಟ್ಟಿಗಳಿಂದ ತೋರಿಬರುವುದೇನೆಂದರೆ ರಾಜಸೂಯದಲ್ಲಿ ರಾಜ್ಯದ ಅಧಿಕಾರಿಗಳೂ, ಬೇರೆಯವರೂ ಭಾಗವಹಿಸುತ್ತಿದ್ದರು ಎಂಬುದು. ರಾಜನ ಕಿರೀಟಕ್ಕೂ ರತ್ನಗಳಿಗೂ ಇರುವ ಸಂಬಂದವು ಒಂದು ಕಡೆ ರಾಜನಿಗೂ, ಇನ್ನೊಂದು ಕಡೆ ರಾಜ್ಯದ ಅಧಿಕಾರಿಗಳಿಗೂ ಜನರ ಪ್ರತಿನಿಧಿಗಳಿಗೂ ಇದ್ದ ಸಂಬಂಧವೆಂದು ಅರ್ಥಾತ್ ಸಿದ್ಧವಾಗುತ್ತದೆ. ಒಬ್ಬರು ಇನ್ನೊಬ್ಬರಿಗೆ ಅತ್ಯಾವಶ್ಯಕ.

ರಾಜಸೂಯದಲ್ಲಿ ಮುಂದೆ ಆಸಕ್ತಿಯನ್ನು ಹುಟ್ಟಿಸುವ ಅಂಶ 'ಅಭಿಷೇಚನೀಯ'. ಇದೇ ಪಟ್ಟಾಭಿಷೇಕ ಸಮಾರಂಭ. ಸವಿತೃ ಮತ್ತು ಸತ್ಯ ಪ್ರಸವರಿಗೆ ಕೊಡುವ ಆಹುತಿಗಳಿಂದ ಇದು ಆರಂಭಗೊಳ್ಳುತ್ತದೆ. ಧರ್ಮದ ಶಕ್ತಿಗಾಗಿ ಈ ಆಹುತಿಗಳನ್ನು ಕೊಡಲಾಗುತ್ತದೆ. ಅಗ್ನಿ ಗೃಹಪತಿಗೆ ಗೃಹಸ್ಥನ ಅಭಿವೃದ್ಧಿಗಾಗಿ ಆಹುತಿಗಳ ಅರ್ಪಣೆ. ಹೀಗೆ ಮರಗಳ, ಅರಣ್ಯಗಳ ಮತ್ತು ಕೃಷಿಯ ಅಭಿವೃದ್ಧಿಗಾಗಿ ಸೋಮವನಸ್ಪತಿಗೆ, ಮಾತಿನ ಶಕ್ತಿಗಾಗಿ ಬೃಹಸ್ಪತಿ ಮತ್ತು ವಾಗ್ದೇವಿಗೆ, ಆಳುವ ಶಕ್ತಿಗಾಗಿ ಇಂದ್ರನಿಗೆ, ಪಶುಗಳ ಒಳಿತಿಗಾಗಿ ರುದ್ರನಿಗೆ, ಸತ್ಯಕ್ಕಾಗಿ ಮಿತ್ರನೆಂಬ ದೇವತೆಗೆ, ಧರ್ಮಶಾಸನದ ರಕ್ಷಣೆಗೆ ವರುಣನಿಗೆ ಆಹುತಿಗಳನ್ನು ಅರ್ಪಿಸಲಾಗುತ್ತದೆ. "ಯಾವಾಗ ಧರ್ಮಶಾಸನಕ್ಕೆ ಒಬ್ಬನು ಅಧಿಪತಿಯೋ ಆಗಲೇ ನಿಜವಾಗಿ ರಾಜ್ಯವು ಉತ್ತಮರಾಜ್ಯ. ಇದಾದ ಅನಂತರ ಪಟ್ಟಾಭಿಷೇಕದ ಪವಿತ್ರ ಜಲದ ತಯಾರಿಕೆ. ಇದರಲ್ಲಿ ಹದಿನೇಳಕ್ಕೆ ಕಡಿಮೆಯಾಗದ ನೀರು ಸೇರಿರುತ್ತವೆ. ಅವುಗಳಲ್ಲಿ ಮಂಜಿನ ನೀರು, ಕೊಳದ ನೀರು, ಸಮುದ್ರದ ನೀರು ಸೇರಿರುತ್ತವೆ. ನೀರನ್ನು ಒಬ್ಬ ಬ್ರಾಹ್ಮಣನೂ,

ರಾಜನಾಗಲಿರುವವನ ಒಬ್ಬ ಬಂಧುವೂ, ಒಬ್ಬ ರಾಜನ್ಯನೂ ಒಬ್ಬ ವೈಶ್ಯನೂ ಪವಿತ್ರ ಜಲವನ್ನು ಚುಮುಕಿಸುತ್ತಾರೆ. ಆಮೇಲೆ ಪಟ್ಟಾಭಿಷೇಕದ ವಿಶೇಷ ವಸ್ತ್ರಗಳನ್ನೂ, ಒಂದು ಬಿಲ್ಲನ್ನೂ ಮೂರು ಬಾಣಗಳನ್ನೂ ರಾಜನಿಗೆ ಕೊಡಲಾಗುತ್ತದೆ. ಇದು ಪರಮಾಧಿಕಾರದ ಸಂಕೇತ. "ಬಾಣಗಳ ಸಹಾಯದಿಂದ ಎಲ್ಲ ದಿಕ್ಕುಗಳನ್ನೂ ರಾಜನಿಗೆ ಕ್ಷೇಮಯುತವನ್ನಾಗಿ ಮಾಡುವುದಕ್ಕೆ" ಇವುಗಳನ್ನು ಕೊಡುವುದು. ಬ್ರಾಹ್ಮಣರಿಗೂ ಕ್ಷತ್ರಿಯರಿಗೂ ಪುರೋಹಿತರಿಗೂ ರಾಜನ್ಯರಿಗೂ ಚರಾಚರಾತ್ಮಕವಾದ ಪ್ರಕೃತಿಗೂ, ಎಲ್ಲ ವರ್ಗಗಳ ಜನರಿಗೂ ರಾಜತ್ವ ಸ್ವೀಕಾರದ ಘೋಷಣೆಯಾಗುತ್ತದೆ. ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಮತ್ತು ಊರ್ಧ್ವ ಎಂಬ ದಿಕ್ಕುಗಳಿಗೂ ಘೋಷಣೆ ಮಾಡಲಾಗುತ್ತದೆ. "ಅವನು (ರಾಜನು) ಇಲ್ಲಿರುವ ಎಲ್ಲರಿಗಿಂತ ಮೇಲೆ, ಇಲ್ಲಿರುವ ಎಲ್ಲರೂ ಎಲ್ಲವೂ ಅವನ ಕೆಳಗೆ" ಎಂದು ಘೋಷಣೆ. ಅರ್ಥವತ್ತಾದ ಮಂತ್ರಗಳಿಂದ ಅವನ ಪಟ್ಟಾಭಿಷೇಕ.[೪೯] "ಎಲೈ ದೇವತೆಗಳೇ, ಇವನನ್ನು ಪರಮಾಧಿಪತ್ಯಕ್ಕೆ ಬೇಗನೆ ಅಣಿಗೊಳಿಸಿರಿ. ಅವನಿಗೆ ಶತ್ರುಗಳಿಲ್ಲದಿರಲಿ. ಜನರನ್ನು ಆಳಲು ಈ ಮನುಷ್ಯನನ್ನು ಸಜ್ಜುಗೊಳಿಸಿರಿ. ಇವನು ಅವರ ರಾಜ. ಎಲೈ ಜನರೆ, ಇವನು (ತೈತ್ತಿರೀಯ ಸಂಹಿತೆಯಲ್ಲಿ ಭರತನು) ನಿಮ್ಮ ರಾಜ..."

೨೩

ವಾಜಪೇಯ ಮತ್ತು ರಾಜಸೂಯವೇ ಅಲ್ಲದೆ ಮತ್ತೆರಡು ರಾಜತ್ವಾರಂಭದ ಪ್ರಕ್ರಿಯೆಗಳನ್ನೂ *ಐತರೇಯ ಬ್ರಾಹ್ಮಣ*ದಲ್ಲಿ ವರ್ಣಿಸಲಾಗಿದೆ ಎಂಬುದನ್ನೂ ನಾವು ಕಾಣಬಹುದು. ಅವುಗಳನ್ನು ಪುನರಭಿಷೇಕ ಮತ್ತು ಐಂದ್ರ ಮಹಾಭಿಷೇಕ ಎಂದು ಕರೆಯುತ್ತಾರೆ. ಈ ವಿಶೇಷ ಪ್ರತಿಷ್ಠಾಪನೆಗಳ ಉದ್ದೇಶವನ್ನು ಹೀಗೆ ವರ್ಣಿಸಲಾಗಿದೆ– ರಾಜಪದವಿಗಾಗಿ ಆರಿಸಲ್ಪಟ್ಟ ಕ್ಷತ್ರಿಯನು ಎಲ್ಲ ವಿಧದ ವಿಜಯಗಳನ್ನು ಪಡೆಯಬೇಕು, ಎಲ್ಲ ಜನರನ್ನೂ ಅರಿತುಕೊಳ್ಳಬೇಕು, ನಾಯಕತ್ವದ ಸ್ಥಾನಕ್ಕೆ ಏರಬೇಕು, ರಾಜರಲ್ಲೆಲ್ಲ ಆದ್ಯತೆಯನ್ನೂ ಉತ್ಕರ್ಷವನ್ನೂ ಹೊಂದಬೇಕು, ಪರಮ ಪ್ರಭುತ್ವವನ್ನು ಗಳಿಸಬೇಕು, ಧರ್ಮದ ರಾಜ್ಯವನ್ನು ಆಳಬೇಕು, ಸಂಪೂರ್ಣವಾಗಿ ಸ್ವತಂತ್ರನಾಗಿರಬೇಕು, ಆಳ್ವಿಕೆಯಲ್ಲಿ ಅತ್ಯುನ್ನತ ಗೌರವವನ್ನು ಸಂಪಾದಿಸಬೇಕು, ಉನ್ನತವಾದ ಆಸೆಗಳನ್ನು ಈಡೇರಿಸಬೇಕು, ವಿಶಾಲತಮವಾದ ಸಾಮ್ರಾಜ್ಯವನ್ನೂ ಅತ್ಯುನ್ನತ ಅಧಿಕಾರವನ್ನೂ ಪಡೆದುಕೊಳ್ಳಬೇಕು, ವಿಶ್ವದ ಅಧಿಪತಿಯಾಗಬೇಕು, ಅವನ ಅಧಿಕಾರ ಸಮುದ್ರಪರ್ಯಂತವಾಗಿ ಎಲ್ಲೆಡೆಯೂ ನಡೆಯಬೇಕು, ವಿಶಾಲ ಸಾಮ್ರಾಜ್ಯದ ಏಕಮಾತ್ರ ರಾಜನಾಗಬೇಕು ಎಂದು ಅಪೇಕ್ಷಿಸುವ ಪುರೋಹಿತನು ರಾಜನಿಗೆ ಐಂದ್ರ ಮಹಾಭಿಷೇಕವನ್ನು ನೆರವೇರಿಸಬೇಕು. ಸತ್ಯವನ್ನಾಗಲಿ, ಧರ್ಮವನ್ನಾಗಲಿ ಮೀರಿಹೋದರೆ ನನ್ನ ಸರ್ವಸ್ವವನ್ನೂ ನನ್ನ ಎಲ್ಲ ಪುಣ್ಯಕರ್ಮಗಳ ಫಲಗಳನ್ನೂ ನನ್ನ ಪ್ರಾಣವನ್ನೂ ಕಳೆದುಕೊಳ್ಳುವಂತಾಗಲಿ

ಎಂಬ ಪ್ರತಿಜ್ಞಾಪೂರ್ವಕವಾಗಿ ರಾಜನು ಆಶ್ವಾಸನೆಯನ್ನು ಕೊಡುವಂತೆ ಪುರೋಹಿತನು ಒತ್ತಾಯಪೂರ್ವಕವಾಗಿ ಕೇಳಬೇಕು.[೫೦]

೨೪

ಸಾಮ್ರಾಟನ ರಾಜತ್ವದ ಆರಂಭವನ್ನು ಕುರಿತ ಈ ಯಾಗಕಲಾಪಗಳ ವಿಸ್ತರಣವನ್ನು[೫೧] ಹೆಚ್ಚು ವಿವರಣೆಗಳೊಂದಿಗೆ ಪರಿಶೀಲಿಸುವುದು ನಮ್ಮ ಪ್ರಕೃತ ಉದ್ದೇಶದ ದೃಷ್ಟಿಯಲ್ಲಿ ಅನಾವಶ್ಯಕ. ಆದರೆ ಅದು ಯಾವ ಸಂಶಯವೂ ಇಲ್ಲದೆ ಅಂದಿನ ರಾಜಕೀಯ ಪರಿಸರವನ್ನೂ, ಭಾರತದಲ್ಲಿ ರಾಜತ್ವವು ಗಳಿಸಿಕೊಂಡಿದ್ದ ಆದರ್ಶದ ಉನ್ನತಿಯನ್ನೂ ಸೂಚಿಸುತ್ತದೆ. ಭಾರತದ ಭೌಗೋಳಿಕ ಸ್ಥಿತಿಯು ವಸ್ತುತಃ ಅದರ ಇತಿಹಾಸದ ಮೇಲೆ ಸ್ವಲ್ಪಮಟ್ಟಿಗೆ ಪ್ರಭಾವವನ್ನೂ ಬೀರಿದೆ. ಪ್ರಾರಂಭಿಕವಾಗಿ ನೆಲೆಯೂರಿದವರಿಗೂ ವಸಾಹತುದಾರರಿಗೂ ಭಾರತದ ಬೃಹದ್ ವೈಶಾಲ್ಯಕ್ಕೆ ಯಾವ ಸೀಮಿತಗಳೂ ಇರಲಿಲ್ಲ. ಆದೇಶವೇ ಅವರಿಗೆ ಒಂದು ಪ್ರಪಂಚವಾಗಿತ್ತು. ಅನಂತವಾದ ಪ್ರದೇಶದ ಭೂಮಿಯು ಒಂದು ಮನೋಭೂಮಿಕೆಯನ್ನೂ ಒಂದು ಜೀವನದೃಷ್ಟಿಯನ್ನೂ ಉತ್ಪಾದಿಸಿತು. ಅದರಲ್ಲಿ ಪೂರ್ಣದ ಮತ್ತು ಶಾಶ್ವತದ ಭಾವನೆಯು ಪ್ರಬಲವಾಗಿತ್ತು.[೫೨] ಹಿಂದೂ ಋಷಿಯು ತನ್ನ ಪರಿಮಿತ ಆತ್ಮದ ಅಭಿವೃದ್ಧಿಗೆ ಅಥವಾ ವಿಸ್ತರಣಕ್ಕೆ ಯಾವ ಸೀಮೆಗಳನ್ನೂ ಒಪ್ಪಿಕೊಳ್ಳಲಿಲ್ಲ. ಹಿಂದೂ ರಾಜನೂ ತನ್ನ ರಾಜಕೀಯ ಆಕಾಂಕ್ಷೆಗಳಿಗೆ ಎಲ್ಲೆಗಳನ್ನೂ ಹಾಕಿಕೊಳ್ಳುತ್ತಿರಲಿಲ್ಲ. ವಿಶ್ವಪ್ರಭುತ್ವಕ್ಕೆ ಅದೇನೂ ಕಡಿಮೆಯಾಗುತ್ತಿರಲಿಲ್ಲ. ಅದರೆ ವಾಸ್ತವ ಪರಿಸರದ ನೈಜ ಸ್ಥಿತಿಗಳಿಂದ ಅದು ಸಮಗ್ರ ಭಾರತದಷ್ಟಕ್ಕೆ, "ಸಮುದ್ರಗಳವರೆಗೆ" ಎಂದು ಇಳಿಸಲ್ಪಟ್ಟಿತ್ತು. ಹಿಂದೂ ರಾಜರ ತಾರತಮ್ಯದಲ್ಲಿ ಅತ್ಯುನ್ನತ ವರ್ಗಕ್ಕೆ ಸೇರಿದವರು "ಆಸಮುದ್ರ ಕ್ಷಿತೀಶರು" ಎಂದರೆ ಸಮುದ್ರಗಳವರೆಗೆ ಹರಡಿದ್ದ ನಾಡಿನ ಪ್ರಭುಗಳು. ಐತರೇಯ ಬ್ರಾಹ್ಮಣವು ಹೇಳುವಂತೆ "ರಾಜತ್ವವು ಅದರ ಅತಿ ಎತ್ತರದ ಮಟ್ಟದಲ್ಲಿ ನೈಸರ್ಗಿಕ ಎಲ್ಲೆಗಳವರೆಗೆ ಹರಡುವ ಸಾಮ್ರಾಜ್ಯವನ್ನು ಹೊಂದಿರಬೇಕು. ಭೂವ್ಯಾಪ್ತಿಯಲ್ಲಿ ಅದು ಸರ್ವವ್ಯಾಪಿಯಾಗಿರಬೇಕು, ಅತ್ಯಂತ ಕೊನೆಯವರೆಗೂ ಅವಿಚ್ಛಿನ್ನವಾಗಿರಬೇಕು. ಸಮುದ್ರಗಳವರೆಗೆ ಹರಡಿದ ನಾಡಿನಲ್ಲಿ ಒಂದೇ ರಾಜ್ಯವಿದ್ದು, ಒಂದೇ ಆಡಳಿತವಿರಬೇಕು" (VIII.೪.೧). ಹೀಗೆ ಹಿಂದೂ ರಾಜನ ಮುಂದೆ ದೇಶದ ವಿಸ್ತಾರದ ಜೊತೆಗೆ ಸಮಾನ ವಿಸ್ತಾರವುಳ್ಳ ಅಧಿಕಾರದ ವ್ಯಾಪ್ತಿ ಇರಬೇಕು ಎಂಬ ಆದರ್ಶವನ್ನಿಟ್ಟಿದ್ದು ಮತ್ತೆ ಧರ್ಮವೇ. ಪ್ರಾದೇಶಿಕವಾದ ಸಂಶ್ಲೇಷಣವು ರಾಜಕೀಯ ಸಂಶ್ಲೇಷಣಕ್ಕೆ ದಾರಿ ಮಾಡಿಕೊಡುತ್ತದೆ ಮತ್ತು ಮುಂದೆ ರಾಜಕೀಯ ಸಂಶ್ಲೇಷಣದಿಂದ ಪ್ರಾದೇಶಿಕ ಸಂಶ್ಲೇಷಣವು ದೃಢಗೊಳ್ಳುತ್ತದೆ.

೨೫

ಸಮಗ್ರ ಭಾರತದ ಚಕ್ರಾಧಿಪತ್ಯದ ಆದರ್ಶ ಮತ್ತು ಪರಿಕಲ್ಪನೆಗಳ ಜೊತೆ ಜೊತೆಗೆ, ಗ್ರಂಥಗಳು ನಮಗಾಗಿ ತಮ್ಮ ಜೀವನದಲ್ಲಿ ಈ ಆದರ್ಶಗಳನ್ನು ನನಸಾಗಿ ಮಾಡಿಕೊಳ್ಳುವುದರಲ್ಲಿ ಸಫಲರಾದ ಹಲವಾರು ರಾಜರ ಪಟ್ಟಿಗಳನ್ನು[೫೩] ಉಳಿಸಿಕೊಟ್ಟಿವೆ. ರಾಜಕೀಯ ಹಾಗೂ ಭೌಗೋಳಿಕ ಘಟಕವಾಗಿ ಭಾರತದ ಪರಿಕಲ್ಪನೆಯು ಹಿಂದೂಪ್ರಜ್ಞೆಗೆ ಹೊರಗಿನದಾಗಿರಲಿಲ್ಲ ಎಂಬುದಕ್ಕೆ ಅವು ಇನ್ನೊಂದು ಪುರಾವೆಯನ್ನು ಒದಗಿಸುತ್ತವೆ. ಅಂಥ ಒಂದು ಪಟ್ಟಿ *ಐತರೇಯ ಬ್ರಾಹ್ಮಣ*ದಲ್ಲಿ (VIII.೧೪.೪; ೧೯.೨) ಸಿಕ್ಕುತ್ತದೆ. ಎಲ್ಲ ದಿಕ್ಕುಗಳಲ್ಲೂ ಅತ್ಯಂತ ತುದಿಯವರೆಗೂ ಸಾಗಿ ಸಮಸ್ತ ದೇಶವನ್ನು ಸ್ವವಶಪಡಿಸಿಕೊಂಡ ವಿಶಿಷ್ಟ ಕೀರ್ತಿಗೆ ಭಾಜನರಾದ ಮಹಾಚಕ್ರವರ್ತಿಗಳ ಹೆಸರುಗಳನ್ನು ಆ ಪಟ್ಟಿಯು ಕೊಟ್ಟಿದೆ.

(೧) ಜನಮೇಜಯ ಪರೀಕ್ಷಿತ, ಅವನ ಪುರೋಹಿತ ತುರ ಕವಷೇಯ ಸಹಿತ.
(೨) ಶರ್ಯಾತ ಮಾನವ, ಅವನ ಪುರೋಹಿತ ಚ್ಯವನಭಾರ್ಗವನೊಡನೆ.
(೩) ಶತಾನೀಕ ಸತ್ರಾಜಿತ, ಅವನ ಪುರೋಹಿತ ಸೋಮಸುಷ್ಮ ವಾಜರತ್ನಾಯನನೊಡನೆ
(೪) ಆಂಬಷ್ಠ್ಯ, ಅವನ ಪುರೋಹಿತರಾಗಿದ್ದ ಪರ್ವತ ಮತ್ತು ನಾರದರೊಡನೆ.
(೫) ಯುಧನಶ್ರೌಸ್ತಿ ಔಗ್ರಸೇನ್ಯ, ಅವನ ಪುರೋಹಿತರಾಗಿದ್ದ ಪರ್ವತ ಮತ್ತು ನಾರದರೊಡನೆ.
(೬) ವಿಶ್ವಕರ್ಮಭೌವನ, ಅವನ ಪುರೋಹಿತ ಕಶ್ಯಪನೊಡನೆ.
(೭) ಸುದಾಸ ಪೈಜವನ, ಅವನ ಪುರೋಹಿತ ವಶಿಷ್ಠನೊಡನೆ.
(೮) ಮರುತ್ತ ಅವೀಕ್ಷಿತ, ಅವನ ಪುರೋಹಿತ ಸಂವರ್ತನೊಡನೆ.
(೯) ಅಂಗ ವೈರೋಚನ, ಅವನ ಪುರೋಹಿತ ಉದಮಯ ಆತ್ರೇಯನೊಡನೆ. ವೈರೋಚನನು ಪುರೋಹಿತರಿಗೆ ಲೆಕ್ಕವಿಲ್ಲದಷ್ಟು ಹಸುಗಳನ್ನೂ, ಎಂಬತ್ತು ಸಾವಿರ ಬಿಳಿಕುದುರೆಗಳನ್ನೂ, ಹತ್ತು ಸಾವಿರ ಆನೆಗಳನ್ನೂ ದಾನವಾಗಿ ಕೊಟ್ಟನೆಂದು ಹೇಳಲಾಗಿದೆ.
(೧೦) ಭರತ ದೌಷ್ಮಂತಿ, ಅವನ ಪುರೋಹಿತ ದೀರ್ಘತಮಸ್ ಮಾಮತೇಯನೊಡನೆ.
   (i) ಭರತನು ಸ್ವರ್ಣಖಚಿತ ಬಿಳಿಯ ದಂತಗಳನ್ನುಳ್ಳ, ಕಪ್ಪುಬಣ್ಣದ ಲೆಕ್ಕವಿಡಲಾಗದಷ್ಟು ಸಂಖ್ಯೆಯ ಆನೆಗಳನ್ನು ಮಸನರ ಎಂಬ ದೇಶದಲ್ಲಿ ದಾನವಾಗಿ ಕೊಟ್ಟನು.

   (ii) ಭರತನು ಶಚೀಗುಣವೆಂಬ ದೇಶದಲ್ಲಿ ಅಸಂಖ್ಯಾತವಾದ ಗೋವುಗಳನ್ನು ಒಂದು ಸಹಸ್ರ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಯಮುನಾ ನದಿಯ ಸಮೀಪದ ಪ್ರದೇಶದಲ್ಲಿ ಭರತನು ಎಪ್ಪತ್ತೆಂಟು ಕುದುರೆಗಳನ್ನೂ, ಗಂಗಾನದಿಯ ತೀರದ ವೃತ್ರಘ್ನ ಎಂಬ ಪ್ರದೇಶದಲ್ಲಿ ಐವತ್ತೈದು ಕುದುರೆಗಳನ್ನೂ ಅಶ್ವಮೇಧಯಾಗಕ್ಕಾಗಿ ರಕ್ಷಿಸಿ ಇಟ್ಟಿದ್ದನು ಮತ್ತು ಶತ್ರುಗಳ ಶಕ್ತಿಯನ್ನು ಇಲ್ಲವಾಗಿಸಿದನು. ಆಕಾಶವು ಹೇಗೆ ಮಾನವರ ಕೈಗಳಿಗೆ ಎಟುಕುವುದಿಲ್ಲವೋ ಹಾಗೆ ಭರತನ ಸಿದ್ಧಿಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಯಾವ ವರ್ಣದ ಮಾನವರಿಗೂ ಮುಟ್ಟಲಾಗುತ್ತಿರಲಿಲ್ಲ. ಈ ಭರತನ ಹೆಸರಿನಿಂದಲೆ ಇಂಡಿಯಾ ದೇಶಕ್ಕೆ ಭಾರತವರ್ಷ ಎಂಬ ಹೆಸರು ಉಂಟಾಯಿತು.
(೧೧) ದುರ್ಮುಖ ಪಾಂಚಾಲ, ಅವನ ಪುರೋಹಿತ ಬೃಹದುಕ್ತನ ಜೊತೆಗೆ.
(೧೨) ಅತ್ಯರತಿ ಜಾನಂತಪಿ, ಅವನ ಪುರೋಹಿತ ವಸಿಷ್ಠ ಸತ್ಯಹವ್ಯನೊಡನೆ. ಈ ರಾಜನು ಅವನ ಪುರೋಹಿತನಿಗೆ ವಿಶ್ವಾಸಘಾತವನ್ನು ಮಾಡಿದನೆಂದು ಅವನ ಅಧಿಕಾರವನ್ನು ಕಿತ್ತುಕೊಳ್ಳಲಾಯಿತು. ಶೈವ್ಯ ಸುಷ್ಮಿಣನೆಂಬ ಶತ್ರು ಜಾನಂತಪಿಯನ್ನು ಕೊಂದುಹಾಕಿದನು. ಇವನ ಕಥೆಯಲ್ಲಿ ಉತ್ತರಕುರು ದೇಶವು ಅಜೇಯ ಎಂದು ಹೇಳಲಾಗಿದೆ.

ಐತರೇಯ ಬ್ರಾಹ್ಮಣರಲ್ಲಿರುವ ಮಹಾರಾಜರ ಪಟ್ಟಿಯೇ ಅಲ್ಲದೆ ಶತಪಥಬ್ರಾಹ್ಮಣ (XIII.೫.೪)ದಲ್ಲೂ ಅಶ್ವಮೇಧ ಯಾಗವನ್ನು ಮಾಡಿ ಪರಮ ಪ್ರಭುಗಳು, ಚಕ್ರಾಧಿಪತಿಗಳು ಎಂದು ಗುರುತಿಸಲ್ಪಟ್ಟ ರಾಜರ ಪಟ್ಟಿಯನ್ನು ಕೊಡಲಾಗಿದೆ. ಎಲ್ಲರಿಗೂ ತಿಳಿದಿರುವಂತೆ, ಅಶ್ವಮೇಧಯಾಗವನ್ನು ಮಾಡಲು ರಾಜನ ಬಲವನ್ನು ಒತ್ತಿಹೇಳಬೇಕಾಗುತ್ತದೆ. ಅವನು ರಾಜಕೀಯ ಅಧಿಕಾರವನ್ನು ಪ್ರದರ್ಶಿಸಬೇಕಾಗುತ್ತದೆ. ವಿವಾದಾಸ್ಪದವಲ್ಲದ ಪರಮಪ್ರಭುತ್ವವುಳ್ಳ ರಾಜನು ಮಾತ್ರ ಅಶ್ವಮೇಧ ಯಾಗವನ್ನು ಆಚರಿಸಲು, ಯಾವ ಮುಖಭಂಗವೂ ಇಲ್ಲದೆ, ಪ್ರಯತ್ನಿಸಬಹುದಷ್ಟೆ. ಈ ವಿಷಯದಲ್ಲಿ *ಆಪಸ್ತಂಭ ಶ್ರೌತಸೂತ್ರ*ವನ್ನು (XX.೧.೧) ಇಲ್ಲಿ ಉಲ್ಲೇಖಿಸಬಹುದು.

"ಸಾರ್ವಭೌಮನಾದ ರಾಜನು ಮಾತ್ರ ಅಶ್ವಮೇಧ ಯಾಗವನ್ನು[೫೪] ಮಾಡಬೇಕು."

೧. ಜನಮೇಜಯ ಪರೀಕ್ಷಿತ, ಋಷಿ ಇಂದ್ರೋತ ದೈವಪ ಶೌನಕನೊಡನೆ
೨. ಭೀಮಸೇನ, ಪರೀಕ್ಷಿತರು
೩. ಉಗ್ರಸೇನ, ಪರೀಕ್ಷಿತರು

೪. ಶ್ರುತಸೇನ, ಪರೀಕ್ಷಿತರು

೫. ಪರ ಅತ್ನರ, ಕೌಸಲ್ಯರಾಜ

೬. ಪುರುಕುತ್ಸ, ಐಕ್ಷ್ವಾಕ ದೊರೆ

೭. ಮರುತ್ತ ಅವೀಕ್ಷಿತ, ಅಯೋಗವ ರಾಜ

೮. ಕ್ರೈವ್ಯ, ಪಾಂಚಾಲರಾಜ (ಕ್ರಿವಿಗಳ ದೊರೆ)

೯. ಧವಸನ ದ್ವೈತವನ, ಮತ್ಸ್ಯದೇಶದ ರಾಜ

೧೦. ಭರತ ದೌಷ್ಯಂತಿ (ಈಗ ಭಾರತರಿಗೆ ಸಲ್ಲುವ ವಿಶಾಲ ಕೀರ್ತಿಯನ್ನು ಗಳಿಸಿದವನು) ಯಮುನಾ ನದಿಯ ಬಳಿ ಎಪ್ಪತ್ತೆಂಟು ಕುದುರೆಗಳನ್ನೂ ಗಂಗೆಯ ಬಳಿ ಐವತ್ತೈದು ಕುದುರೆಗಳನ್ನೂ ಕಟ್ಟಿದ್ದ ಭರತನು ಸಮಸ್ತ ಭೂಮಂಡಲವನ್ನು ಜಯಿಸಿದ್ದನು.

(ಹೋಲಿಸಿ: ಐತರೇಯ ಬ್ರಾಹ್ಮಣ, ಮೇಲೆ ಕೊಟ್ಟಿದೆ).

೧೧. ಋಷಭ ಯಜ್ಞಸುತ

೧೨. ಸತ್ರಸಹ, ಪಾಂಚಾಲ ರಾಜ

೧೩. ಶತಾನೀಕ, ಸತ್ರಾಜಿತ

ಶಾಂಖಾಯನ ಶ್ರೌತಸೂತ್ರವೂ (XIV.೯) ಅಶ್ವಮೇಧ ಯಾಗವನ್ನು ಮಾಡಿದವರ ಒಂದು ಪಟ್ಟಿಯನ್ನು ಕೊಡುತ್ತದೆ. ಅದರಲ್ಲಿ ಸೇರಿರುವ ರಾಜರು–

೧. ಜನಮೇಜಯ, ಪರೀಕ್ಷಿತರು

೨. ಉಗ್ರಸೇನ, ಪರೀಕ್ಷಿತರು

೩. ಭೀಮಸೇನ, ಪರೀಕ್ಷಿತರು

೪. ಶ್ರುತಸೇನ, ಪರೀಕ್ಷಿತರು

೫. ರಿಷವ (ಋಷಭ) ಯಜ್ಞಾತುರ

೬. ವೈದೇಹ ಆಲ್ಹಾರ

೭. ಮರುತ್ತ ಅವೀಕ್ಷಿತ

೨೬

ವೈದಿಕ ಸಾಹಿತ್ಯದಲ್ಲಿ ರಕ್ಷಿತವಾಗಿರುವ ಸಾರ್ವಭೌಮ ರಾಜರ ಪಟ್ಟಿಗಳಿಗೆ ಪುರಾಣಗಳಲ್ಲೂ ಮತ್ತಿತರ ಗ್ರಂಥಗಳಲ್ಲೂ ಇರುವ ಅಂಥ ರಾಜರ ಪಟ್ಟಿಗಳು ಪೂರಕವಾಗಿವೆ. *ಕೂರ್ಮಪುರಾಣವು* (XX.೩೧) ವಸುಮಾನ ಎಂಬ ರಾಜನನ್ನೂ, *ಪದ್ಮಪುರಾಣವು* ದಿಲೀಪ ಮತ್ತು ಅವನ ವಂಶದ ಪೂರ್ವಜರಾದ ಮನು, ಸಗರ, ಮರುತ್ತ ಮತ್ತು ಯಯಾತಿಗಳನ್ನೂ (IV.೧೧೦–೧೧೮), ಅಗ್ನಿಪುರಾಣವು (೨೧೯. ೫೦–೫೧) ಪೃಥು, ದಿಲೀಪ, ಭರತ, ವಾಲಿ, ಮಲ್ಲಕಾಕುತ್ಸ್ಥ, ಯೌವನಾಶ್ವ,

ಜಯದ್ರಥ, ಮಾಂಧಾತಾ, ಮುಚುಕುಂದ, ಪುರೂರವಸ್ ಎಂಬವರನ್ನೂ ನಮೂದಿಸಿವೆ. ಬ್ರಹ್ಮಪುರಾಣವು ಪೃಥಿವೀಪತಿ[೫೫] ಎಂದು ಪುರೂರವಸನನ್ನೂ, ರಾಜರಾಟ್[೫೬] ಎಂದು ಭೀಮನನ್ನೂ, ಸಮುದ್ರಪರ್ಯಂತವಾದ ಭೂಮಿಯನ್ನು ವಶಪಡಿಸಿಕೊಂಡ ಯಯಾತಿಯನ್ನೂ[೫೭], ಸಾಮ್ರಾಟ್ ಚಕ್ರವರ್ತಿ ಎಂದು ಕರೆಸಿಕೊಂಡ ಕಾರ್ತವೀರ್ಯಾರ್ಜುನನನ್ನೂ[೫೮] ಉಲ್ಲೇಖಿಸಿದೆ. ಬ್ರಹ್ಮಾಂಡಪುರಾಣವು ಪೃಥುಮಹಾರಾಜನನ್ನು[೫೯] ಹೆಸರಿಸಿದೆ. ಮಾರ್ಕಂಡೇಯ ಪುರಾಣವು ಚಕ್ರವರ್ತಿಗಳೆಂದು ಪುರೂರವಸನನ್ನೂ[೬೦] ಮರುತ್ತನನ್ನೂ[೬೧] ಹೆಸರಿಸಿದೆ. ಬ್ರಹ್ಮಾಂಡ ಪುರಾಣವು ಪೃಥುವಿನ ಹೆಸರನ್ನು ಹೇಳಿದೆ.

ಶಿವಪುರಾಣವು ಚಿತ್ರರಥ[೬೨] ಮತ್ತು ಪೃಥು[೬೩]ಗಳನ್ನು ಚಕ್ರವರ್ತಿಗಳೆಂದೂ ಹರಿಶ್ಚಂದ್ರನನ್ನು[೬೪] ಸಾಮ್ರಾಟ್ ಎಂದೂ ಹೇಳಿದೆ. ಲಿಂಗಪುರಾಣವು ಯಯಾತಿ[೬೫], ಕಾರ್ತವೀರ್ಯಾರ್ಜುನ[೬೬], ಶಶವಿಂದ[೬೭] ಮತ್ತು ಉಶನ[೬೮]ರನ್ನು ಉಲ್ಲೇಖಿಸಿದೆ. ಸ್ಕಾಂದ ಪುರಾಣವು ಕಾರ್ತವೀರ್ಯನನ್ನು[೬೯] ಸಾಮ್ರಾಟ್ ಚಕ್ರವರ್ತಿ ಎಂದು ಕರೆದಿದೆ. ಭಾಗವತ ಪುರಾಣವು ಮಾಂಧಾತ[೭೦] ಮತ್ತು ಸಗರ[೭೧]ರನ್ನು ಚಕ್ರವರ್ತಿಗಳೆಂದೂ, ಮುಚುಕುಂದ[೭೨]ನನ್ನು ಅಖಂಡಭೂಮಿಪನೆಂದೂ ಹೆಸರಿಸಿದೆ. ದೇವೀಪುರಾಣವು ಘೋರನೆಂಬ ದೈತ್ಯನ ಬಗೆಗೆ ಏಕರಾಟ್[೭೩] ಎಂಬ ಶಬ್ದವನ್ನು ಬಳಸಿದೆ. ವಿಷ್ಣುಪುರಾಣವು ಸಗರ[೭೪], ಚಂದ್ರ[೭೫], ಭರತ[೭೬], ಮಹಾಪದ್ಮನಂದ[೭೭] ಮತ್ತು ಚಂದ್ರಗುಪ್ತ[೭೮]ರನ್ನು ಉಲ್ಲೇಖಿಸಿದೆ. ವಾಯುಪುರಾಣವು ಸಗರ[೭೯], ಕಾರ್ತವೀರ್ಯಾರ್ಜುನ[೮೦] ಮತ್ತು ಉಶನ[೮೧] ಎಂಬವರನ್ನು ಹೆಸರಿಸಿದೆ. ಮತ್ಸ್ಯಪುರಾಣವು ಪುರೂರ್‌ವಸ್[೮೨] ಮತ್ತು ಯಯಾತಿಯ ಮಗ ಪುರು[೮೩] ಇವರನ್ನು ಹೇಳಿದೆ.

ಮಹಾಭಾರತವು ಪ್ರಾಚೀನಕಾಲದ ರಾಜರನ್ನು ಹಲವು ಸ್ಥಳಗಳಲ್ಲಿ ಉಲ್ಲೇಖಿಸುತ್ತದೆ. ಅವರ ಸಂಪೂರ್ಣ ಎಣಿಕೆಯ ಪಟ್ಟಿಯು ಶಾಂತಿಪರ್ವದ ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿ ಸಿಕ್ಕುತ್ತದೆ. ಅಲ್ಲಿ ಉಲ್ಲೇಖಿತರಾದ ರಾಜರು–

೧. ಮರುತ್ತ, ಅವೀಕ್ಷಿತನ ಮಗ

೨. ಸುಹೋತ್ರ, ಅತಿಥಿಯ ಮಗ

೩. ಬೃಹದ್ರಥ, ಅಂಗದೇಶದ ರಾಜ

೪. ಶಿಬಿ, ಉಶೀನರನ ಮಗ.

ಇವನು ಗುರಾಣಿಯನ್ನು ಕೈಯಲ್ಲಿ ಹಿಡಿದುಕೊಳ್ಳುವಂತೆ ಸಮಸ್ತ ಭೂಮಿಯನ್ನು ಕೈಗೆ ತೆಗೆದುಕೊಂಡಿದ್ದನು. ಅವನ ಜೈತ್ರರಥದ ಚಕ್ರಗಳು ಭೂಮಿಯಲ್ಲೆಲ್ಲ ಅವಿರೋಧವಾಗಿ ಹರಿದುವು.[೮೪] ಸಮಸ್ತ ಭೂಮಿಯನ್ನು ಒಂದು ಶಾಸನದ ಕೆಳಗೆ ತಂದನಿವನು.

೫. ಭರತ, ದುಷ್ಯಂತ ಮತ್ತು ಶಕುಂತಲೆಯರ ಮಗ. ಐತರೇಯ ಬ್ರಾಹ್ಮಣದಲ್ಲಿ ಇವನು ಯಮುನಾನದಿಯ ದಡದಲ್ಲಿ ಮುನ್ನೂರು ಕುದುರೆಗಳನ್ನೂ, ಸರಸ್ವತೀನದಿಯ ಬಳಿ ಇಪ್ಪತ್ತು ಕುದುರೆಗಳನ್ನೂ, ಗಂಗಾನದೀ ತೀರದಲ್ಲಿ ಹದಿನಾಲ್ಕು ಕುದುರೆಗಳನ್ನೂ ಯಾಗಕ್ಕಾಗಿ ಬಳಸಿದನು[೮೫] ಎಂದು ವರ್ಣಿಸಲಾಗಿದೆ.

೬. ರಾಮ, ದಶರಥನ ಮಗ

೭. ಇಕ್ಷ್ವಾಕುವಂಶದ ಭಗೀರಥ

೮. ದಿಲೀಪ

೯. ಮಾಂಧಾತಾ, ಯುವನಾಶ್ವನ ಮಗ.
ಇವನು ಸಮಸ್ತ ಭೂಮಿಯನ್ನೂ ವಶಪಡಿಸಿಕೊಂಡು, ಅಂಗಾರೆ, ಮರುತ್ತ, ಅಸಿತ, ಗಯ ಮತ್ತು ಅಂಗರಾಜ ಬೃಹದ್ರಥ ಎಂಬುವರನ್ನೆಲ್ಲ ಸೋಲಿಸಿದನು.[೮೬] ಇವನ ಸಾಮ್ರಾಜ್ಯದಲ್ಲಿ ಸೂರ್ಯನು ಮುಳುಗುತ್ತಲೇ ಇರಲಿಲ್ಲ.

೧೦. ಯಯಾತಿ, ನಹುಷನ ಮಗ.
ಇವನು ಸಮುದ್ರಪರ್ಯಂತವಾದ ಸಮಸ್ತ ಭೂಮಿಯನ್ನು ಗೆದ್ದು ಒಂದು ನೂರು ವಾಜಪೇಯಗಳನ್ನು ಆಚರಿಸಿದನು.[೮೭]

೧೧. ಅಂಬರೀಷ, ನಾಭಾಗನ ಮಗ. ಇವನು ಅಸಂಖ್ಯಾತ ರಾಜರ ರಾಜ.[೮೮]

೧೨. ಶಶವಿಂದು, ಚಿತ್ರರಥನ ಮಗ.

೧೩. ಗಯ, ಅಮೂರ್ತರಾಯನ ಮಗ

೧೪. ರಂತಿದೇವ, ಸೌಕೀರ್ತಿಯ ಮಗ.

೧೫. ಸಗರ, ಇಕ್ಷ್ವಾಕುವಂಶದವನು. ಇವನ ಆಳ್ವಿಕೆ ಸಮಸ್ತ ಭೂಮಿಯ ಮೇಲೆ ಹರಡಿತ್ತು.[೮೯]

೧೬. ಪೃಥು, ವೇನನ ಮಗ.

ಕೌಟಿಲ್ಯನ *ಅರ್ಥಶಾಸ್ತ್ರವೂ* ಸಮಗ್ರ ಭಾರತದ ಚಕ್ರವರ್ತಿಯ ಪರಿಕಲ್ಪನೆಗೆ ಅಭಿವ್ಯಕ್ತಿಯನ್ನು ಕೊಟ್ಟು ಈ ಆದರ್ಶವನ್ನು ನನಸಾಗಿ ಮಾಡಿಕೊಂಡ ರಾಜರ ಪಟ್ಟಿಯನ್ನು ಕೊಟ್ಟಿದೆ. ಇಂಥ ಚಕ್ರವರ್ತಿಯನ್ನು ಅರ್ಥಶಾಸ್ತ್ರವು 'ಚತುರಂತೋ ರಾಜಾ' ಎಂದು ಕರೆದಿದೆ. (ಮೈಸೂರು ಆವೃತ್ತಿ, ಪುಟ ೧೧.) ಹಾಗೆಂದರೆ ನಾಲ್ಕು ದಿಕ್ಕುಗಳವರೆಗೆ ಪ್ರಸರಿಸಿರುವ ದೇಶ ಅವನದು. ಅವನ ಅಧಿಕಾರವನ್ನು ಇಡೀ ರಾಜ್ಯದಲ್ಲಿ ಯಾರೂ ಪ್ರಶ್ನಿಸುವಂತಿಲ್ಲ. (ಅನನ್ಯಾಂ ಪೃಥಿವೀಂ ಭುಂಕ್ತೇ). ಅವನ ರಾಜ್ಯವನ್ನು ಎಂದರೆ ಚಕ್ರವರ್ತಿ ಕ್ಷೇತ್ರವನ್ನು ಹಿಮಾಲಯದಿಂದ ಸಮುದ್ರದವರೆಗಿನ ಭೂಮಿ ಎಂದು ನಿಗದಿಪಡಿಸಲಾಗಿದೆ. ಅದು ಚಂದ್ರಗುಪ್ತನ ಪ್ರಭುತ್ವದ ವ್ಯಾಪ್ತಿಗೆ

ಸೂಚನೆ ಎಂಬುದು ಸ್ಪಷ್ಟ. ('ಹಿಮವತ್ ಸಮುದ್ರಾಂತಂ ಚಕ್ರವರ್ತಿ ಕ್ಷೇತ್ರಂ', ಮೈಸೂರು ಪ್ರಕಾಶನ, ಪುಟ ೩೩).

೨೭

ಭಾರತದ ರಾಜರ ಸುದೀರ್ಘವಾದ ಪರಂಪರೆಯನ್ನು ಅನುಸರಿಸುತ್ತಾ ಬಂದಾಗ ಯುಧಿಷ್ಠಿರನ ಕಂಗೊಳಿಸುವ ಹೆಸರು ನಮಗೆ ಗೋಚರವಾಗುತ್ತದೆ. ಇಂದ್ರಪ್ರಸ್ಥದ ಚಕ್ರವರ್ತಿಯ ದರ್ಬಾರಿನಲ್ಲಿ ತಾನು ಸಾಮ್ರಾಟ್ ಎಂದು ಅವನು ಘೋಷಿಸಿಕೊಂಡನು. ಭಾರತದ ಅತ್ಯಂತ ದೂರದ ಭಾಗಗಳಿಂದಲೂ ಅದಕ್ಕೂ ಆಚೆಯ ದೇಶಗಳಿಂದಲೂ ಆ ದರ್ಬಾರಿಗೆ ರಾಜರನ್ನು ಆಹ್ವಾನಿಸಲಾಗಿತ್ತು. ಅಲ್ಲಿ ಅವರೆಲ್ಲ ಯುಧಿಷ್ಠಿರನಿಗೆ ಗೌರವವನ್ನು ಸಮರ್ಪಿಸಿ ಅವರ ಚಿಕ್ಕ ಚಿಕ್ಕ ರಾಜ್ಯಗಳೆಲ್ಲ ವಿಶಾಲವಾದ ಚಕ್ರಾಧಿಪತ್ಯಕ್ಕೆ ಒಳಪಟ್ಟಿವೆ, ಆ ಚಕ್ರಾಧಿಪತ್ಯದಲ್ಲಿ ಏಕತೆ ಇದೆ ಎಂದು ಅರಿತುಕೊಳ್ಳುವುದಕ್ಕಾಗಿ ಕರೆಸಲ್ಪಟ್ಟಿದ್ದರು. ರಾಜಕೀಯವಾಗಿ ಅಸಂಖ್ಯಾತ ಸಣ್ಣಪುಟ್ಟ ರಾಜ್ಯಗಳಾಗಿ, ಪಾಳೆಯಗಳಾಗಿ ಮತ್ತು ಗಣರಾಜ್ಯಗಳಾಗಿ ಹಂಚಿಹೋಗಿದ್ದ ಭಾರತದ ಚಿತ್ರವನ್ನು ಮಹಾಭಾರತವು ನಮಗೆ ಉಳಿಸಿಕೊಟ್ಟಿದೆ; ಆ ರಾಜ್ಯಗಳ ಪಾರಸ್ಪರಿಕ ಅಸೂಯೆ ಮತ್ತು ಶತ್ರುತ್ವಗಳು ಅನಂತರ ಕಾಲದಲ್ಲಿ *ಮಹಾಭಾರತದ* ಮಹಾಸಂಗ್ರಾಮದಲ್ಲಿ ಕೊನೆಗೊಂಡುವು. ಪ್ರತಿಯೊಂದು ರಾಜ್ಯವೂ ತನಗೆ ಉಚಿತವಾದ ವಲಯದಲ್ಲಿ ಮತ್ತು ಪರಿಧಿಯಲ್ಲಿ ಇದ್ದು, ಸಮಗ್ರದೇಶದ ವಿಶಾಲವಾದ ಜೀವನವನ್ನು ಉನ್ನತೀಕರಿಸಲು ಸಾಧ್ಯವಾಗುವ ಶಾಂತಿಮಯ ಒಕ್ಕೂಟಕ್ಕೆ ಸೇರಿ ವಿಕಾಸಗೊಳ್ಳುವುದರಿಂದ ಮೇಲೆ ಹೇಳಿದ ವಿಚ್ಛಿದ್ರಕಾರಕ ಪ್ರವೃತ್ತಿಗಳನ್ನು ಸ್ವಲ್ಪಕಾಲದವರೆಗೂ ಹತೋಟಿಯಲ್ಲಿ ಇಡುವ ಹೊಣೆಗಾರಿಕೆ ಯುಧಿಷ್ಠಿರನ ಉನ್ನತಾಧಿಕಾರದ್ದಾಗಿತ್ತು. ರಾಜಕೀಯ ಪುನಾರಚನೆಯ ಕಾರ್ಯವು ಸುಲಭವಾಗಿರಲಿಲ್ಲ. ಸಾಗರ ಪರ್ಯಂತವಾದ ಈ ವಿಶಾಲದೇಶವನ್ನು ಒಂದು ಪರಮಾಧಿಕಾರದ ನೊಗದ ಅಡಿಯಲ್ಲಿ ತರುವ ಪ್ರಾಚೀನ ಶಾಸ್ತ್ರೋಕ್ತವಾದ ಆದರ್ಶ ಸಾಮ್ರಾಜ್ಯವನ್ನು ಸಾಧಿಸುವುದು ತುಂಬ ಕಷ್ಟ ಎಂದು ಯುಧಿಷ್ಠಿರನಿಗೆ ತಿಳಿದಿತ್ತು (ಸಭಾಪರ್ವ, XV.೨)

"ಎಲ್ಲೆಡೆಗಳಲ್ಲೂ ಸ್ವತಂತ್ರವಾಗಿ ಜೀವಿಸುತ್ತಿರುವ, ತಮಗೆ ಇಷ್ಟವಾದುದನ್ನು ಮಾಡುತ್ತಿರುವ ದೊರೆಗಳು ಇದ್ದಾರೆ: ಆದರೆ ಅವರು ಯಾರೂ ಚಕ್ರವರ್ತಿ ಎಂಬ ಸ್ಥಾನಕ್ಕೆ ಏರಿಲ್ಲ. ಆ ಬಿರುದನ್ನು ಪಡೆಯುವುದು ಕಷ್ಟ."[೯೦] ನಿಜವಾಗಿಯೂ ಆಗಿನ ಪರಿಸ್ಥಿತಿ ಕಷ್ಟಗಳಿಂದ ತುಂಬಿತ್ತು. ಎಲ್ಲ ದಿಕ್ಕುಗಳಲ್ಲೂ ಸಾಮ್ರಾಟನ ಸ್ಥಾನವನ್ನು ಅಪೇಕ್ಷಿಸುತ್ತಿದ್ದ ಬಲಶಾಲಿ ರಾಜರಿದ್ದರು. ಉತ್ತರ ದಿಕ್ಕಿನಲ್ಲಿ ಹಸ್ತಿನಾಪುರವಿತ್ತು. ಅದು ಕುರುವಂಶದವರ ರಾಜಧಾನಿ. ಪೂರ್ವದಿಕ್ಕಿನಲ್ಲಿ ಮಧುರೆಯನ್ನು ಒಬ್ಬ

ಶಕ್ತಿಶಾಲಿ ಪ್ರಭು ಆಳುತ್ತಿದ್ದನು. ದಕ್ಷಿಣದಲ್ಲಿ ಮಾಳವದ ದೊರೆ ಸದಾ ಎದ್ದು ನಿಂತಿದ್ದ ವಿಪತ್ತೇ ಆಗಿದ್ದನು. ಪಶ್ಚಿಮದಲ್ಲೂ ಮಹತ್ತ್ವಾಕಾಂಕ್ಷಿಯಾಗಿದ್ದ ವಿರಾಟನ ಪಾಳೆಯವಿತ್ತು. ಭಾರತದ ಇತರ ಭಾಗಗಳಲ್ಲೂ ಪ್ರಬಲರಾದ ಇತರ ದೊರೆಗಳಿದ್ದರು. ಅವರಲ್ಲೆಲ್ಲ ಅತಿ ಬಲಶಾಲಿಯಾಗಿದ್ದವನು ಚಕ್ರವರ್ತಿ ಆಗಲು ಬಯಸುತ್ತಿದ್ದ ಮಗಧಾಧಿಪತಿ ಜರಾಸಂಧ. ಸಮಸ್ತ ಭಾರತವನ್ನು ಗೆಲ್ಲಲು ಅಪೇಕ್ಷಿಸುತ್ತಿದ್ದ ಪಾಂಡವರ ಕಾರ್ಯದಲ್ಲಿ ಜರಾಸಂಧನನ್ನು ಸೋಲಿಸುವುದೇ ಪ್ರಮುಖ ಪ್ರಥಮ ಕೆಲಸವಾಗಿತ್ತು. ಅದಾದ ಮೇಲೆ ನಾಲ್ಕು ಭಾರಿ ದಂಡಯಾತ್ರೆಗಳನ್ನು, ಅವುಗಳಲ್ಲಿ ಒಂದೊಂದೂ ಒಂದೊಂದು ದಿಕ್ಕಿನಲ್ಲಿರುವಂತೆ ಕೈಗೊಳ್ಳಲಾಯಿತು. ಉತ್ತರ ದಿಕ್ಕಿನ ದಂಡಯಾತ್ರೆಗೆ ಅರ್ಜುನನೇ ಹೊರಟನು. ಕುಳಿಂದ, ಕಾಲಕೂಟ, ಆವರ್ತ, ಸ್ವಕಾಲ ದ್ವೀಪಿಗಳು, ಪ್ರಾಗ್‌ಜ್ಯೋತಿಷದ ಭಗದತ್ತ, ಹಿಮಾಲಯ ಪ್ರದೇಶದ ಉಲೂಕ, ಮೋದಪುರ, ವೈನದೇವ, ಸುದಾಮನ್, ಸುಶಂಕುಲ, ದೇವಪ್ರಸ್ಥ, ಕಿರಾತ ಮತ್ತು ಚೀನ ಇತ್ಯಾದಿಗಳು ಅರ್ಜುನನ ಬಲಕ್ಕೆ ಸೋತು ಮಣಿದರು. ಅನಂತರ ಅರ್ಜುನನ್ನು ಪಶ್ಚಿಮಕ್ಕೆ ತಿರುಗಿ ಕಾಶ್ಮೀರದ ಮೂಲಕ ಬಾಲ್ಕ್‌ಗೆ ತಲುಪಿದನು. ಹಿಂದಿರುಗುವ ದಾರಿಯಲ್ಲಿ ಕಾಂಬೋಜ, ದರದ ಇತ್ಯಾದಿಗಳನ್ನು ಅವನು ಗೆದ್ದನು. ಹಿಮಾಲಯ ಪರ್ವತದ ಪ್ರದೇಶದಲ್ಲಿ ಕಾಂಪಿಲ್ಲವರ್ಷ ಮತ್ತು ಮಾನಸಸರೋವರದ ಬಳಿಯ ಹಾಲಕದ ರಾಜರು ಅರ್ಜುನನಿಗೆ ಎದುರಾದರು. ಕೊನೆಯದಾಗಿ ಅವನು ಉತ್ತರಕುರುಗಳನ್ನೂ ಜಯಿಸಿದನು. ಎರಡನೆಯ ದಂಡಯಾತ್ರೆಯನ್ನು ಪೂರ್ವದಿಕ್ಕಿನಲ್ಲಿ ಭೀಮನು ನಡೆಸಿದನು. ಅವನು ದ್ರುಪದ, ದಶಾರ್ಣ, ಪುಲಿಂದ, ಚೇದಿ, ಕೋಸಲ, ಅಯೋಧ್ಯಾ, ಉತ್ತರ ಕೋಸಲ, ಉರುಳ್ಳ, ತೇರಾಯ್, ಕಾಶೀ, ಮತ್ಸ್ಯ, ಮಲದ, ಮದಧಾರ, ವತ್ಸಭೂಮ್ಯ, ಭಂಗ, ಸಂತಕ, ವರ್ಮಕ ಎಂಬ ರಾಜರನ್ನೂ ಮತ್ತೂ ಹಲವು ಕಿರಾತರನ್ನೂ ಇತರ ವಂಶಗಳನ್ನೂ ಭೀಮನು ಸೋಲಿಸಿದನು. ಮಿಥಿಲೆಯು ಸ್ನೇಹವನ್ನು ಒಪ್ಪಿಕೊಂಡಿತು, ಮತ್ತು ಮಗಧವು ಕಪ್ಪಕಾಣಿಕೆಗಳನ್ನು ಕೊಟ್ಟಿತು. ಆಮೇಲೆ ಭೀಮನು ಕರ್ಣನ ದೇಶವನ್ನು (ಭಾಗಲ್‌ಪುರವನ್ನು) ಸೋಲಿಸಿ ಅನಂತರ ವಂಗದೇಶದ ಸಣ್ಣ ಪುಟ್ಟ ರಾಜರನ್ನು ಪರಾಜಿತರನ್ನಾಗಿ ಮಾಡಿದನು. ದಕ್ಷಿಣ ದಿಕ್ಕಿನ ದಂಡಯಾತ್ರೆ ಸಹದೇವನ ನಾಯಕತ್ವದಲ್ಲಿ ಜರುಗಿತು. ಅನೇಕ ಸಣ್ಣ ರಾಜ್ಯಗಳನ್ನು ಅವನು ಗೆದ್ದನು. ನರ್ಮದಾ ನದಿಯನ್ನು ದಾಟಿ ಕಿಷ್ಕಿಂಧಾ ಮತ್ತು ಮಾಹಿಷ್ಮತಿಗಳ ಮೂಲಕ ದಕ್ಷಿಣಭಾರತಕ್ಕೆ ಬಂದು ದ್ರವಿಡ, ಸರಭಿ ಪಟ್ಟಣ, ತಾಮ್ರ ದ್ವೀಪ, ತಿಮಿಂಗಿಲ, ಕಳಿಂಗ, ಆಂಧ್ರ, ಉದ್ರ, ಕೇರಳ, ತಲವನ, ಸಿಲೋನ್ (ಲಂಕಾ) ಮತ್ತಿತರ ರಾಜ್ಯಗಳನ್ನು ಸಹದೇವನು ವಶಪಡಿಸಿಕೊಂಡನು. ತನ್ನ ದೇಶಕ್ಕೆ ಹಿಂದಿರುಗುವಾಗ ಪಶ್ಚಿಮ ತೀರದಲ್ಲಿ ಪಯಣಿಸುತ್ತಾ ಸೂರತ್ ಮತ್ತು ಗುಜರಾತಿನ ಮೂಲಕ ಬಂದು ಸೇರಿದನು. ಅವನು ಅಪಾರವಾದ ಸಂಪತ್ತನ್ನು ಕಾಣಿಕೆಗಳನ್ನೂ

ಇಂದ್ರಪ್ರಸ್ಥಕ್ಕೆ ತಂದನು. ಪಶ್ಚಿಮ ದಿಕ್ಕಿನಲ್ಲಿ ದಂಡಯಾತ್ರೆಯನ್ನು ನಡೆಸಿದ ನಕುಲನು ರೋಹಿತಕ, ದಕ್ಷಿಣರಾಜಪುತ್ರಸ್ಥಾನ ಮಹೇತ್ಥ, ಶಿಬಿ, ತ್ರಿಗರ್ತ, ಅಂಬಷ್ಠ, ಮಾಲವ, ಪಂಚಕೈಘಟ, ಮಧ್ಯಮಕ, ವಟಧಾನ ಎಂಬ ರಾಜ್ಯಗಳನ್ನು ಗೆದ್ದುಕೊಂಡನು. ಆಮೇಲೆ ಪುಷ್ಕರದ ಕಡೆಗೆ ತಿರುಗಿ ಆಭೀರರಾಜ್ಯದ ಮುಖಾಂತರ ಪಂಜಾಬನ್ನು ಆಕ್ರಮಿಸಿದನು. ಅನಂತರ ವಾಯವ್ಯ ದಿಕ್ಕಿನಲ್ಲಿ ಪಲ್ಲವ, ಬರ್ಬರ, ಕಿರಾತ, ಯವನ, ಶಕ ಎಂಬ ರಾಜರನ್ನೆಲ್ಲ ಸೋಲಿಸಿ ಅವರೆಲ್ಲರಿಂದಲೂ ಅಮೂಲ್ಯವಾದ ಕಾಣಿಕೆಗಳನ್ನೂ ಅಧೀನತೆಯ ಅಂಗೀಕಾರವನ್ನೂ ಪಡೆದುಕೊಂಡು ನಕುಲನು ಹಿಂದಿರುಗಿದನು.

ಹೀಗೆ ಸಮಸ್ತ ಭಾರತ ವರ್ಷವೂ ಆ ಕಾಲದಲ್ಲಿ ಪಾಂಡವರ ವಿಜಯ ಯಾತ್ರೆಗಳ ಜಯಧ್ವನಿಗಳಿಂದ ನಿನಾದಿತವಾಯಿತು. ಅದು ಸಮಗ್ರ ದೇಶದಲ್ಲಿ ಒಂದು ಪರಮಾಧಿಕಾರವನ್ನು ದೃಢವಾಗಿ ಒತ್ತಿಹೇಳಿತು. ಒಬ್ಬ ಸಾಮ್ರಾಟನಿಗೆ ತಲೆಬಾಗಿ ಗೌರವವನ್ನೂ, ಅಧೀನತೆಯನ್ನೂ ಒಪ್ಪಿಕೊಂಡು ಇಡೀ ಭಾರತ ದೇಶವು ಒಟ್ಟುಗೂಡಿತು. ಇನ್ನೊಮ್ಮೆ ಇಂಡಿಯಾ ಒಂದು ರಾಜಕೀಯ ಘಟಕವಾಗಿ ಊಹಿಸಲ್ಪಟ್ಟು ಬಳಕೆಗೆ ಬಂದಿತು. ದೇಶದ ಬೇರೆ ಬೇರೆ ಭಾಗಗಳು ಒಂದು ಒಕ್ಕೂಟಕ್ಕೆ ಸೇರಿ ಒಟ್ಟಾದುವು. ಪ್ರಾಂತಗಳ ವಿಭಕ್ತವಾಗಿದ್ದ ಜೀವನಗಳು ಸಮಾನ ಬದುಕಿನಲ್ಲಿ ಒಂದಾಗಿ ಸೇರಿದುವು. ಅದರಲ್ಲಿ ಈ ಕೆಳಗೆ ಕೊಟ್ಟಿರುವ ಹೆಸರುಗಳ ರಾಜರ ಪಟ್ಟಿಯೂ ಇದೆ.

(೧) ದಾಂಡಕ್ಯ ಭೋಜ, (೨) ವೈದೇಹ ಕರಾಳ, (೩) ಜನಮೇಜಯ, (೪) ತಾಲಜಂಘ, (೫) ಐಲ, (೬) ಅಜಬಿಂದುಸೌವೀರ, (೭) ರಾವಣ, (೮) ದುರ್ಯೋಧನ, (೯) ದಂಭೋದ್ಭವ, (೧೦) ಹೈಯಯಾರ್ಜುನ, (೧೧) ವಾತಾಪಿ. ಈ ರಾಜರುಗಳೆಲ್ಲ ಇಂದ್ರಿಯಜಯವನ್ನು ಮಾಡಲಾರದೆ ವಿಷಯಾಸಕ್ತರಾಗಿ ಮಹಾನ್ ಎನಿಸಿಕೊಳ್ಳುವುದರಲ್ಲಿ ವಿಫಲರಾದರು. ಸಫಲರಾದ ಚಕ್ರವರ್ತಿಗಳಲ್ಲಿ ಅಂಬರೀಷ ಮತ್ತು ನಾಭಾಗ ಎಂಬವರನ್ನು ಹೆಸರಿಸಲಾಗಿದೆ. (ಮೈಸೂರು ಪ್ರಕಾಶನ, ಪುಟ ೧೧, ೧೨).

೨೮

ಯುಧಿಷ್ಠಿರ(ಧರ್ಮರಾಜ)ನ ಕಥೆ ಪ್ರತಿಯೊಬ್ಬ ಹಿಂದುವಿಗೂ ಗೊತ್ತು. ಸಮಸ್ತ ಭಾರತದ ಚಕ್ರಾಧಿಪತ್ಯ ಎಂಬ ವೈದಿಕಸಾಹಿತ್ಯದ ಪರಿಕಲ್ಪನೆಯನ್ನು ಯುಧಿಷ್ಠಿರನ ಕಥೆ ಜನಪ್ರಿಯಗೊಳಿಸಿದೆ. ಈ ಪರಿಕಲ್ಪನೆಗೆ ಯುಧಿಷ್ಠಿರ ಅತ್ಯಂತ ಪ್ರಮುಖ ಮೂರ್ತಿವೆತ್ತ ಉದಾಹರಣೆ. ಪ್ರಾಚೀನ ಭಾರತೀಯರಿಗೆ ಈ ಪರಿಕಲ್ಪನೆ ಪ್ರಚಲಿತ ರಾಜಕೀಯ ವೈಚಾರಿಕ ವಿಷಯವಾಗಿತ್ತು. ಅದು ಅವರ ಚಿಂತನೆಯ

ವಿಷಯವಾಗಿರಲಿಲ್ಲ, ಆದರೆ ಚಿಂತನೆಯ ಅವಿಭಾಜ್ಯ ಅಂಗವೇ ಆಗಿಬಿಟ್ಟಿತ್ತು. ಅನಂತರ ಕಾಲದಲ್ಲೂ ಅದು ತನ್ನ ಶಕ್ತಿಯನ್ನೇನೂ ಕಳೆದುಕೊಳ್ಳಲಿಲ್ಲ. ಅತ್ಯಂತ ಆರಂಭಕಾಲದ ಬೌದ್ಧ ಚಿಂತನೆಯ ಮೇಲೂ ತನ್ನ ಮುದ್ರೆಯನ್ನೊತ್ತುವಷ್ಟು ಓಜಸ್ಸು ಅದರಲ್ಲಿತ್ತು. ಬೌದ್ಧಮತದ ಮೇಲೆ ಹಿಂದೂಮತದ ಪ್ರಭಾವಗಳ ಬಗೆಗೆ ನಮಗೆಲ್ಲ ಸಾಕಷ್ಟು ಪರಿಚಯವಿದೆ. ಬೌದ್ಧಮತವು ಹಿಂದೂಗಳ ಧಾರ್ಮಿಕ ಊಹಾಪೋಹ ವಿಚಾರಗಳಲ್ಲಿ ಎಷ್ಟು ಆಳವಾಗಿ ಬೇರೂರಿದೆ ಎಂಬುದೂ ನಮಗೆ ಗೊತ್ತು. ಬೌದ್ಧರ ಕೆಲವು ಮೂಲಭೂತ ಧಾರ್ಮಿಕ ಪರಿಕಲ್ಪನೆಗಳು ಹಿಂದೂ ಧಾರ್ಮಿಕ ಕಲ್ಪನೆಗಳಿಗಿಂತಲೂ ವಿಭಿನ್ನವಾದ ಹಿಂದೂ ರಾಜಕೀಯ ಚಿಂತನೆಗಳಿಂದ ಸ್ಫೂರ್ತಿಯನ್ನು ಪಡೆದುವೆಂಬುದು ನಮಗೆ ಇನ್ನೂ ತಿಳಿಯದು.

ಏಕೆಂದರೆ ಬುದ್ಧನ ವಿಷಯದಲ್ಲಿ ಆದಿಮ ಬೌದ್ಧ ಚಿಂತನೆಗಳಲ್ಲೆಲ್ಲ, ಅಂದು ಹಿಂದುಗಳಲ್ಲಿ ಪ್ರಚಲಿತವಾಗಿದ್ದ ಚಕ್ರವರ್ತಿರಾಜನ ಆದರ್ಶರೂಪವು ಪ್ರಬಲವಾಗಿ ಸೇರಿಕೊಂಡಿತ್ತು. ಬುದ್ಧನು ಆ ಚಕ್ರವರ್ತಿಲಕ್ಷಣಗಳಿಗೆ ಅನುಗುಣವಾಗಿದ್ದ ಎಂದು ಯಾವಾಗಲೂ ಬೌದ್ಧರು ಚಿಂತಿಸುತ್ತಿದ್ದರು ಮತ್ತು ವರ್ಣಿಸುತ್ತಿದ್ದರು. ಹಿಂದುಗಳ ಈ ಒಂದು ಆದರ್ಶವನ್ನು ಅರಿತುಕೊಂಡಿದ್ದ ಬೌದ್ಧರು ತಮ್ಮ ಆದಿಮಸುತ್ತ (ಸೂತ್ರ)ಗಳಲ್ಲಿ ಬುದ್ಧನನ್ನು ರಾಜರ ರಾಜ, ಧರ್ಮಾನುಗುಣವಾಗಿ ಆಳುವ ಧರ್ಮ ಪ್ರಭು, ಭೂಮಿಯ ಚತುರ್ದಿಕ್ಕುಗಳಿಗೂ ಅಧಿಪತಿ, ಅಜೇಯ, ತನ್ನ ಜನರ ರಕ್ಷಕ, ಏಳು ರಾಜನಿಧಿಗಳನ್ನು ಪಡೆದುಕೊಂಡವನು[೯೧] ಎಂದು ಬಣ್ಣಿಸುತ್ತಿದ್ದರು.

ಇವುಗಳಲ್ಲಿ ಮೊದಲನೆಯ ನಿಧಿಯು ಧರ್ಮಚಕ್ರದ ನಿಧಿ. ವೇದದ ಮಂತ್ರಕವಿತೆಯಲ್ಲಿ ಸೂರ್ಯನನ್ನು ವರ್ಣಿಸಿರುವಂತೆ, ಈ ಚಕ್ರವು ಸತತವಾಗಿ ಮುಂದಕ್ಕೆ ಉರುಳುತ್ತಿರುವಂತೆ, ಪ್ರಪಂಚದ ತುಟ್ಟತುದಿಗಳನ್ನೂ ಜಯಿಸಿ ಮುಂದೆ ಹೋಗುತ್ತಿರುವಂತೆ ಚಿತ್ರಿತವಾಗಿದೆ.[೯೨] ರಾಜರ ರಾಜನ ಎರಡನೆಯ ನಿಧಿ ಬಿಳಿಯಾನೆ. ಅದು ತನ್ನ ಪ್ರಭುವನ್ನು ಸಮುದ್ರಗಳವರೆಗೆ ಹರಡಿರುವ ವಿಶಾಲ ಭೂಮಿಯಲ್ಲೆಲ್ಲ ಇಂದ್ರನ ಐರಾವತದಂತೆ ಹೊತ್ತು ಒಯ್ಯಬಲ್ಲದು. ಅದು ಭೂಮಿಯನ್ನು ಫಲವತ್ತಾಗಿ ಒಯ್ಯಬಲ್ಲದು. ಅದು ಭೂಮಿಯನ್ನು ಫಲವತ್ತಾಗಿ ಮಾಡಬಲ್ಲ, ಮಾನ್‌ಸೂನ್ ವಾಯುವಿಗಿಂತಲೂ ಮೊದಲು ಕಾಣಿಸಿಕೊಂಡು ವೇಗದಿಂದ ಆಕಾಶದಲ್ಲಿ ಚಲಿಸುವ ಬಿಳಿಯ ಮೋಡದ ಸಾಕಾರರೂಪ. ಮೂರನೆಯ ನಿಧಿ ಕುದುರೆ. ಇದೂ ಪ್ರಾಯಶಃ ವೇದಗಳಲ್ಲಿ ಪ್ರಸಿದ್ಧವಾದ ಅಶ್ವರಾಜನಿಂದಲೇ ಪ್ರೇರಿತವಾಗಿರಬೇಕು. ನಾಲ್ಕನೆಯ ನಿಧಿ ಎಂದರೆ ವೇಲೂರಿಯ ಎಂದು ಕರೆಯಲಾಗುವ ಮಣಿ. (ಪ್ರಾಯಶಃ ಇಂಗ್ಲಿಷಿನ beryl ಎಂಬ ಶಬ್ದ ನಿಷ್ಪನ್ನವಾಗಿರಬಹುದು.) ಈ ಮಣಿಯ ಕಾಂತಿಯು ಸುತ್ತಲೂ ಹರಡುತ್ತಿತ್ತು. ಅದು ವೇದಗಳಲ್ಲಿ ವರ್ಣಿತನಾದ ಇಂದ್ರನು ಕತ್ತಲೆಯ ರಾಕ್ಷಸನನ್ನು ಸೀಳಿಹಾಕಲು ಉಪಯೋಗಿಸಿದ ವಜ್ರಾಯುಧದಂತೆ ಇರುತ್ತದೆ. ರಾಜರ ರಾಜನು

ಹೊಂದಿರುವ ಐದನೆಯ ನಿಧಿ ನಾರಿಯರಲ್ಲಿ ಮುತ್ತಿನಂತೆ ಹೊಳೆಯುವ ಹೆಣ್ಣು. ಕೊನೆಯ ಎರಡು ನಿಧಿಗಳು ಒಬ್ಬ ಕೋಶಾಧ್ಯಕ್ಷ ಮತ್ತು ಒಬ್ಬ ಮಾರ್ಗದರ್ಶಕ. ಮುತ್ತಿನಂತೆ ಹೊಳೆಯುವ ಹೆಣ್ಣಿನಂತೆ ಈ ಇಬ್ಬರೂ ರಾಜರು ರಾಜನ ವಿಶ್ವಾಸಾರ್ಹ ಸೇವಕರು.

ಅಂಥ ರಾಜರ ರಾಜನನ್ನು ಆದಿಮ ಬೌದ್ಧರು ಬುದ್ಧನಲ್ಲಿ ಕಂಡುಕೊಂಡರು. ಆ ಬುದ್ಧನು ನಿಸರ್ಗಾತೀತ ಪ್ರಪಂಚದ ಅಧಿಪತಿಯಾದನು.[೯೩] ಆ ಪ್ರಪಂಚ ಸತ್ಯದ ಸಾಮ್ರಾಜ್ಯ; ಅದರ ಚಕ್ರ ಧರ್ಮರಾಜನೇ ತಿರುಗಿಸಿದ ಧರ್ಮಚಕ್ರ. ಎಲ್ಲಿಯೂ ತಡೆಯಿಲ್ಲದೆ ಆ ಧರ್ಮಚಕ್ರವು ಜಗತ್ತಿನಲ್ಲೆಲ್ಲ ತಿರುಗುವುದು. ಆ ಸಾಮ್ರಾಜ್ಯದ ಪ್ರಧಾನಮಂತ್ರಿ ಸಾರಿಪುತ್ತ. ಅಲ್ಲಿ ಬುದ್ಧನ ಉಪದೇಶವು ಮಳೆಗಾಲದ ಮೋಡದಂತೆ ಆನಂದವೆಂಬ ಅಮೃತದ ಧಾರೆಗಳನ್ನು ಸುರಿಸುತ್ತದೆ. ಅದು ಕಾಮ, ದ್ವೇಷ ಮತ್ತು ಮೋಹಗಳ ಬೆಂಕಿಯನ್ನು ಆರಿಸಿ ಸಮ್ಯಗ್‌ದರ್ಶನದ ಕ್ಷೇತ್ರವನ್ನು ಫಲವತ್ತಾಗಿ ಮಾಡುವುದು.

ಪರಮಾಧಿಪತ್ಯದ ಬಗೆಗೆ ಇದ್ದ ಪ್ರಾಚೀನ ಹಿಂದೂ ಪರಿಕಲ್ಪನೆಯನ್ನು ತಮ್ಮದಾಗಿಸಿಕೊಂಡ ಆದಿಮ ಬೌದ್ಧ ಚಿಂತಕರು ತಮ್ಮ ಸಿದ್ಧಿಸಾಧನೆಗಳನ್ನು ವರ್ಣಿಸಲು ಅದನ್ನು ಬಳಸಿಕೊಂಡರು. ಅದು ಒಂದು ಭಾವನಾತ್ಮಕವಾದ ಆದರ್ಶಸಾಮ್ರಾಜ್ಯದ ಸ್ಥಾಪನೆಯಲ್ಲಿ ಫಲಿಸಿತು. ಅದು ಮಾನವರ ಹೃದಯಗಳಲ್ಲಿ ನೆಲೆಗೊಂಡ ಧರ್ಮ ಸಾಮ್ರಾಜ್ಯ. ಹಿಂದೂ ಚಕ್ರವರ್ತಿಯು ತನ್ನ ರಥದ ಚಕ್ರಗಳು ಪ್ರಪಂಚದಲ್ಲೆಲ್ಲ ತಡೆಯಿಲ್ಲದೆ ಚಲಿಸುವಂತೆ ಮಾಡಿದ್ದನು. ಚಕ್ರವು ಅವನ ಶಕ್ತಿಯ ಚಿಹ್ನೆಯಾಗಿತ್ತು. ಆದರೆ ಬುದ್ಧನು ಬೇರೆ ಪ್ರಕಾರದ ಚಕ್ರವರ್ತಿ. ಅವನು ಸತ್ಯ ಮತ್ತು ಧರ್ಮಗಳ ವಿಶ್ವಸಾಮ್ರಾಜ್ಯದ ರಾಜರಥದ ಚಕ್ರವನ್ನು ಪ್ರವರ್ತಿಸಿದನು. ಅದಕ್ಕೆ ಅನುಗುಣವಾಗಿ ಅವನ ಕಾರ್ಯವನ್ನು 'ಧರ್ಮಚಕ್ರ ಪ್ರವರ್ತನ' ಎಂದು ಕರೆದಿದ್ದಾರೆ. ಬುದ್ಧನ ಉಪದೇಶಗಳ ಸಾರವೇ ಮೂರ್ತಿವೆತ್ತಂತಿರುವ ಪ್ರಸಿದ್ಧ ಸೂತ್ರಕ್ಕೆ 'ಧರ್ಮಚಕ್ರ ಪ್ರವರ್ತನ ಸೂತ್ರ' ಎಂಬ ಹೆಸರನ್ನು ಕೊಡಲಾಗಿದೆ.[೯೪]

೨೯

ಪ್ರಾಚೀನ ಬೌದ್ಧಮತದ ಕಾಲದಲ್ಲಿ ಸಮಗ್ರ ಭಾರತವೂ ಸಮಸ್ತ ದೇಶವನ್ನೂ ಆವರಿಸುವ ಒಂದು ಶಾಸನಾಧಿಕಾರದೊಳಗೆ ತರಲ್ಪಡುವ ಏಕಪ್ರದೇಶವೆಂದು ಗ್ರಹಿಸಲ್ಪಟ್ಟಿತ್ತು ಎಂಬುದು ಅತ್ಯಂತ ಸ್ಪಷ್ಟ. ಬೌದ್ಧಮತೀಯ ಶ್ರದ್ಧೆಯಿಂದ ಈ ಪರಿಕಲ್ಪನೆಯು ವಿಸ್ತರಿಸಲ್ಪಟ್ಟು ಆದರ್ಶೀಕೃತವಾಯಿತಷ್ಟೆ. ಈ ಕಾರಣದಿಂದ ಸಮಗ್ರ ಭಾರತದ ಏಕಚ್ಛತ್ರಾಧಿಪತ್ಯವನ್ನು ಪ್ರಥಮತಃ ಮನಗಂಡು ಸಾಕಾರಗೊಳಿಸಿದವನು ಚಂದ್ರಗುಪ್ತ ಅಲ್ಲ. ಅದು ಅವನಿಗೆ ಶ್ರೀಮಂತ ಪೂರ್ವಾರ್ಜಿತ ಸ್ವತ್ತಿನಂತೆ ಬಂದಿತು,

ಅವನ ಸಹಜಪ್ರತಿಭೆಯು ಆ ಪರಿಕಲ್ಪನೆಯನ್ನು ಉಪಯೋಗಿಸಿಕೊಂಡು ಪೂರ್ಣರೂಪದಲ್ಲಿ ಉತ್ತಮಗೊಳಿಸಿತು. ಅವನು ಪ್ರತಿನಿಧಿಸಿದ ಮತ್ತು ಸಾಕಾರಗೊಳಿಸಿದ ಆದರ್ಶದ ಶಕ್ತಿಗೂ ಜನಪ್ರಿಯತೆಗೂ ಅವನ ಸಫಲತೆಯು ಸ್ವಾಭಾವಿಕವಾಗಿ ಸಾಕಷ್ಟು ಕೊಡುಗೆಯನ್ನು ನೀಡಿತು. “ರಾಜನು ರಾಜಾಧಿರಾಜ ಅಥವಾ ರಾಜರ ರಾಜ ಆಗುವುದು ಹೇಗೆ?” ಎಂಬ ಸಮಸ್ಯೆ ಬಹುಬೇಗ ಪ್ರಾಚೀನ ರಾಜಕೀಯ ಚಿಂತನೆಯ ಶಾಲೆಗಳಲ್ಲಿ ಚರ್ಚೆಯ ವಸ್ತುವಾಯಿತು. ನೀತಿ ಶಾಸ್ತ್ರಗ್ರಂಥಗಳಲ್ಲಿ ನಿರೂಪಿತವಾಗಿರುವಂತೆ ಅದು ಹೆಚ್ಚು ವೈಜ್ಞಾನಿಕವೂ ವ್ಯವಸ್ಥಿತವೂ ಆದ ಊಹಾಪೋಹ ವಿಚಾರಸರಣಿಗೆ ಮಾರ್ಗವನ್ನೊದಗಿಸಿ ಮಂಡಲ ಅಥವಾ ರಾಜರ ಸಮಿತಿಯ ವಾದದಲ್ಲಿ ರೂಪವನ್ನು ಪಡೆಯಿತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ಕಾಮಂದಕನ ನೀತಿಶಾಸ್ತ್ರದಲ್ಲೂ ಈ ವಾದದ ವಿವರಣಸಹಿತ ವ್ಯಾಖ್ಯಾನವನ್ನು ನಾವು ಕಾಣುತ್ತೇವೆ. ಈ ಗ್ರಂಥಗಳಲ್ಲಿ ಹಿಂದಿನ ಪ್ರಮಾಣೀಭೂತ ಆಚಾರ್ಯರ ಉಲ್ಲೇಖಗಳೂ ಇವೆ. ಸಣ್ಣ ದೊರೆಗಳಲ್ಲಿ ಸ್ವಾಭಾವಿಕವಾಗಿ ಮತ್ತು ಅನಿವಾರ್ಯವಾಗಿ ದೊಡ್ಡ ರಾಜರಾಗಲು ಹುಟ್ಟುವ ಆಸೆಯನ್ನು ಈ ವಾದವು ಪ್ರಸ್ತಾವಿಸಿ ಭೌತಪ್ರಪಂಚವನ್ನು ಗುರುತ್ವಾಕರ್ಷಣವು ಹೇಗೆ ಆಳುವುದೋ, ಬಹುಮಟ್ಟಿಗೆ ಅದೇ ಅರ್ಥದಲ್ಲಿ ರಾಜಕೀಯ ಪ್ರಪಂಚವನ್ನು ಆಳುವ ನಿಯಾಮಕತತ್ತ್ವವನ್ನು ರಾಜರ ಸಹಜವಾದ ಆಸೆಯಲ್ಲಿ ಕಾಣುತ್ತದೆ. ಆ ಆಸೆಯೇ ರಾಜ್ಯಗಳ ವಿಕಾಸವನ್ನೂ ಸಾಮ್ರಾಜ್ಯಗಳ ಬೆಳವಣಿಗೆಯನ್ನೂ ನಿರ್ಧರಿಸಿ ಸ್ಥಿರವಾದ ಸಮತೋಲನವನ್ನೂ ಶಕ್ತಿಯ ಸಮತೂಕವನ್ನೂ ಪ್ರತಿಷ್ಠಾಪಿಸುತ್ತದೆ.

ಸಮಗ್ರ ದೇಶವನ್ನು ಒಂದು ರಾಜಕೀಯ ವೃತ್ತ ಅಥವಾ ಮಂಡಲ ಎಂದು ಪರಿಗ್ರಹಿಸಿ ಅದರ ಕೇಂದ್ರದಲ್ಲಿ ಮಂಡಲಾಧಿಪನು ಇರುತ್ತಾನೆ ಎಂದು ಹೇಳಿದೆ. ಅವನನ್ನು ಪಾರಿಭಾಷಿಕವಾಗಿ ವಿಜಿಗೀಷು ಎಂದು ಕರೆದಿದ್ದಾರೆ. ವಿಜಿಗೀಷು ಎಂದರೆ ದೇಶವನ್ನು ಗೆಲ್ಲಲು ಬಯಸುವವನು. ಅವನು ಸಮಸ್ತ ವ್ಯವಸ್ಥೆಯ ಪ್ರಬಲತಮ ಶಕ್ತಿಯಾಗಿ ಮೇಲೇರುವವನು, ತನ್ನ ವಲಯದಲ್ಲಿ ಪೂರ್ಣಚಂದ್ರನಂತೆ ಹೊಳೆಯುವವನು.[೯೫] ಸಾಮಾನ್ಯವಾದ ರಾಜಕೀಯ ಮಂಡಲವು ಹನ್ನೆರಡು ಜನ ರಾಜರಿಂದ ರಚಿತವಾಗಿರುತ್ತದೆ.[೯೬] ವಿಜೇತೃವಾದ ರಾಜನು ಅಥವಾ ಪರಮಪ್ರಭು ಕೇಂದ್ರದಲ್ಲಿದ್ದು ಸುತ್ತಲೂ, ಎಂದರೆ ಮುಂದೆ ಮತ್ತು ಹಿಂದೆ, ಒಂಬತ್ತು ಜನ ಅಧೀನರಾಜರು ಇರುತ್ತಾರೆ. ಅವರ ಸ್ನೇಹ ಮತ್ತು ದ್ವೇಷಗಳು (ರಾಜನ ಬಗೆಗೆ) ಬೇರೆಬೇರೆ ಮಟ್ಟಗಳಲ್ಲಿರುತ್ತದೆ. ಇವರ ಜೊತೆಗೆ ಮಧ್ಯಮ ಮತ್ತು ಉದಾಸೀನ ಎಂಬ ಇಬ್ಬರು ತಟಸ್ಥ ದೊರೆಗಳೂ ಇರುತ್ತಾರೆ. ಸಾಧ್ಯವಾದ ಎಲ್ಲ ರಾಜಕೀಯ ಸಂಬಂಧಗಳಿಂದ ಪರಸ್ಪರ ಸಂಯೋಜಿತವಾದ ಈ ಹನ್ನೆರಡು ರಾಜ್ಯಗಳ ಒಕ್ಕೂಟವು ವಾಸ್ತವವಾದ ಪರಿಸ್ಥಿತಿಗೆ ಒಂದು ಅತಿಸಮೀಪ ಸಂನಿವೇಶ ಎಂದು

ಪರಿಗಣಿಸಲಾಗುತ್ತದೆ. ಅಂದರೆ ಅದು ವಾಸ್ತವ ರಾಜಕೀಯ ಸಂದರ್ಭದ ಒಂದು ಭೂಪಟವೆನ್ನಬಹುದು. ಅದರ ರಚನಾಘಟಕಗಳ ಎಲ್ಲ ಊಹ್ಯ ಭಾವನಾ ಪರಿವರ್ತನೆಗಳಿಂದ ಉಂಟಾಗಬಹುದಾದ ಸಮಸ್ತ ಸಂಭವನೀಯ ರಾಜಕೀಯ ಬೆಳವಣಿಗೆಗಳನ್ನೂ ಆ ಭೂಪಟ ತೋರಿಸುತ್ತದೆ. ಹೀಗೆ ಸಾಮಾನ್ಯ ರಾಜಕೀಯ ವ್ಯವಸ್ಥೆಯ ಏರುಪೇರುಗಳನ್ನೂ ಪ್ರಾಚೀನ ಅರ್ಥಶಾಸ್ತ್ರಕಾರರು ಗಮನಿಸಿದ್ದಾರೆ. ಕೌಟಿಲ್ಯನು[೯೭] ಪ್ರಭಾವವಲಯವನ್ನು ಸೃಷ್ಟಿಸಬಹುದಾದ ಮೂವರು ರಾಜರ ಮಂಡಲವನ್ನು ಅಥವಾ ಒಕ್ಕೂಟವನ್ನು ಉಲ್ಲೇಖಿಸುತ್ತಾನೆ. ಮಯನು[೯೮] ನಾಲ್ವರು ರಾಜರು ಒಟ್ಟುಗೂಡುವ ಚತುಷ್ಕ ಮಂಡಲವನ್ನೂ, ಪುಲೋಮನು[೯೯] ಆರು ರಾಜರ, ಬೃಹಸ್ಪತಿಯು[೧೦೦] ಹದಿನೆಂಟುರಾಜರ, ಮತ್ತು ವಿಶಾಲಾಕ್ಷನು[೧೦೧] ಐವತ್ತನಾಲ್ಕು ರಾಜರ ಒಕ್ಕೂಟವನ್ನು ಹೇಳುತ್ತಾರೆ. ಹೀಗೆ ಕೇಂದ್ರದಲ್ಲಿರುವ ಮುಖ್ಯರಾಜನು ತನ್ನ ಕ್ರಿಯಾವಲಯದಲ್ಲಿ ಸ್ನೇಹಪರರಾದ ಹಾಗೂ ದ್ವೇಷ ಮಾಡುವ ರಾಜ್ಯಗಳ ಸಂಬಂಧವನ್ನು ಹೊಂದಿರುತ್ತಾನೆ.[೧೦೨] ಆದೂ ಅವನು ಸ್ವಯಂಶಕ್ತನಾಗಿದ್ದರೆ, ರಾಜ್ಯಾಧಿಕಾರದ ಎಲ್ಲ ಅಂಗಗಳಲ್ಲೂ ಪ್ರಬಲನಾಗಿದ್ದರೆ, ಅಂಥವನು ಸರ್ವಪ್ರಾಮುಖ್ಯವನ್ನು ಗಳಿಸುವುದು ಮತ್ತು ಏಕೈಶ್ವರ್ಯವನ್ನು[೧೦೩] ಪಡೆದುಕೊಳ್ಳುವುದು ಅವನ ಉತ್ಕೃಷ್ಟ ನೀತಿಯಿಂದಲೂ ರಾಜ್ಯ ನಿರ್ವಹಣಾ ನೈಪುಣ್ಯದಿಂದಲೂ ಸಾಧ್ಯವಾಗುವುದು. ವಿವಿಧ ರಾಜಕೀಯ ಶಕ್ತಿಗಳ ಉಚಿತ ಪ್ರಯೋಗದಿಂದ ಅವನ ಸ್ಥಾನವೂ ಸ್ಥಿರವೂ ಅನಾಕ್ರಮಣೀಯವೂ ಪರಮೋಚ್ಚವೂ ಅತ್ಯುನ್ನತವೂ ಆಗುವುದು.[೧೦೪]

೩೦

ಸಮಸ್ತ ಭಾರತದ ಮೇಲೆ ಪರಮಾಧಿಕಾರವನ್ನು ನಡೆಸುವ ಚಕ್ರವರ್ತಿಯ ಆದರ್ಶವು ಸಾಹಿತ್ಯದಲ್ಲಿ ಅಭಿವ್ಯಕ್ತಿಯನ್ನು ಪಡೆಯುವುದರ ಜೊತೆಗೆ ಭಾರತೀಯ ಆದಿಮ ಶಿಲಾಲೇಖಗಳ ದಾಖಲೆಗಳಲ್ಲೂ ಸುನಿಶ್ಚಿತ ರೂಪದಲ್ಲಿ ಗುರುತಿಸಿಕೊಳ್ಳುತ್ತದೆ. ಹೀಗೆ ಮಹಾರಾಜ ಎಂಬ ಪದವನ್ನು ಕಾನಿಷ್ಕ, ಹುವಿಷ್ಕ ಮತ್ತು ವಾಸುದೇವ ಎಂಬವರು ಪರಮಾಧಿಕಾರದ್ಯೋತಕವಾದ ಬಿರುದುಗಳಲ್ಲಿ ಬಳಸಿಕೊಂಡಿದ್ದರು. ಈ ದೊರೆಗಳು ಪರಮೋಚ್ಚಾಧಿಕಾರವುಳ್ಳ ಸಾಮ್ರಾಟರಾಗಿದ್ದರು ಎಂದು ನಂಬಲು ಎಲ್ಲ ಕಾರಣಗಳೂ ಇವೆ. ಒಂಬತ್ತನೆಯ, ಮೂವತ್ತೊಂಬತ್ತನೆಯ ಮತ್ತು ಎಂಬತ್ತ ಮೂರನೆಯ ವರ್ಷಗಳಲ್ಲಿ ಅವರು ಬರೆಸಿದ ಶಾಸನಗಳಲ್ಲಿ[೧೦೫] ಮಹಾರಾಜ ಎಂಬ ಪದವನ್ನು ಉಪಯೋಗಿಸಿದ್ದಾರೆ. ಇವರೇ ಮೂವರು ರಾಜರು ಹನ್ನೊಂದನೆಯ, ನಲವತ್ತೇಳನೆಯ, ಮತ್ತು ಎಂಬತ್ತೇಳನೆಯ ವರ್ಷಗಳ ಶಾಸನಗಳಲ್ಲಿ ಮಹಾರಾಜ ಎಂಬುದನ್ನು ಇನ್ನೂ ಉನ್ನತ ಬಿರುದಾದ ರಾಜಾಧಿರಾಜ ಎಂಬುದರ ಜೊತೆಯಲ್ಲಿ ಹಾಕಿಕೊಂಡಿದ್ದಾರೆ.[೧೦೬] ಇದಕ್ಕಿಂತಲೂ ಹಿಂದಿನ ದಿನಗಳಲ್ಲಿ ಈ

ಮಹಾರಾಜ ಎಂಬ ಬಿರುದು ಕೆಲವು ಸಲ ರಾಜಾಧಿರಾಜ ಎಂಬುದರ ಜೊತೆ, ಮತ್ತೆ ಕೆಲವು ಸಲ ರಾಜರಾಜ ಎಂಬುದರ ಜೊತೆ ಬಳಸಲ್ಪಡುತ್ತಿತ್ತು. (ಈ ಎರಡು ಶಬ್ದಗಳು ಒಟ್ಟಿಗೆ ಸೇರಿ ಗ್ರೀಕ್ ಭಾಷೆಯ basileus basileon ಎಂಬುದಕ್ಕೆ ಸಮಾನ) ಹೆಮೋಕಡ್‌ಫೈಸಿಸ್[೧೦೭] (Hemokadphises) ಎಂಬುವನ ನಾಣ್ಯಗಳಲ್ಲಿ ಮಹಾರಾಜ ಎಂಬುದು ರಾಜಾಧಿರಾಜ ಎಂಬುದರ ಜೊತೆಗೆ, ಮತ್ತು ಏಜ಼ಸ್ (Azes) ಎಂಬುವನ ನಾಣ್ಯಗಳಲ್ಲಿ ರಾಜರಾಜ ಎಂಬುದರ ಜೊತೆಗೆ ಬಳಸಲ್ಪಟ್ಟಿತ್ತು.[೧೦೮] ಹರ್ಮೇಯಸ್ (Hermaeus) ಎಂಬುವನ ನಾಣ್ಯದಲ್ಲಿ ಗ್ರೀಕ್‌ನ basileus ಎಂಬುದಕ್ಕೆ ಪ್ರತಿಯಾಗಿ ಬಳಸಲ್ಪಟ್ಟಿತ್ತು. ರಾಜಾಧಿರಾಜ ಎಂಬ ಬಿರುದು ಮಾಉಸ್[೧೦೯](Maues)ನ ನಾಣ್ಯಗಳಲ್ಲಿ ಕಂಡುಬರುತ್ತದೆ.

ಏಜಸ್‌ನ ಕೆಲವು ನಾಣ್ಯಗಳಲ್ಲಿ ರಾಜಾಧಿರಾಜ ಎಂಬ ಬಿರುದು ಮಹಾರಾಜ ಎಂಬುದರ ಜೊತೆಗೆ ಸೇರಿದೆ. ಹುವಿಷ್ಕನ ಮಥುರಾ ಶಾಸನದಲ್ಲಿ ರಾಜಾಧಿರಾಜ ಎಂಬುದು ಅದೇ ಅರ್ಥದಲ್ಲಿ ಮಹಾರಾಜ ಎಂಬುದರೊಡನೆ ಕಂಡುಬರುತ್ತದೆ (ವರ್ಷ–೪೭), ಹಾಗೆಯೇ ವಾಸುದೇವನ[೧೧೨] ಎಂಬತ್ತೇಳನೆಯ ವರ್ಷದ ಶಾಸನದಲ್ಲಿಯೂ ಕಂಡುಬರುತ್ತದೆ.

ಗುಪ್ತರ ಶಾಸನಗಳಲ್ಲಿ ಪರಮೈಶ್ವರ್ಯವನ್ನು ಸೂಚಿಸಲು ಬಳಸಲಾಗುವ ಬಿರುದುಗಳು ಯಾವುವು ಎಂದರೆ– ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ರಾಜಾಧಿರಾಜ ಮತ್ತು ಚಕ್ರವರ್ತಿ. ಅಲಹಾಬಾದ್‌ನಲ್ಲಿರುವ ಸಮುದ್ರಗುಪ್ತನ ಮರಣೋತ್ತರ ಸ್ತಂಭಶಾಸನವು ಅವನನ್ನು ಮಹಾರಾಜಾಧಿರಾಜ ಕೀರ್ತಿಶಾಲಿ ಸಮುದ್ರಗುಪ್ತ ಎಂದು ಹೇಳಿ ಅವನ ಸಮಸ್ತ ಜಗತ್ತಿನ ದಿಗ್ವಿಜಯವನ್ನು ಉಲ್ಲೇಖಿಸುತ್ತದೆ. ಕೀರ್ತಿಶಾಲಿ ಮಹಾರಾಜಾಧಿರಾಜ ಮತ್ತು ಮಹಾದೇವಿ ಕುಮಾರದೇವಿಯ[೧೧೩] ಮಗ ಎಂದೂ ಅವನನ್ನು ಹೊಗಳುತ್ತದೆ ಮತ್ತು ದ್ವಿತೀಯ ಚಂದ್ರಗುಪ್ತನನ್ನು ಪರಮಭಟ್ಟಾರಕ[೧೧೪] ಎಂದು ಕರೆಯುತ್ತದೆ ಈ ಶಾಸನ. ಸಮುದ್ರಗುಪ್ತನ ಏರಣ್ (Eran) ಶಿಲಾಶಾಸನವು ಅವನನ್ನು ಪ್ರಾಚೀನರಾದ ಪೃಥು ಮತ್ತು ರಾಘವ[೧೧೫]ರಿಗೆ ಹೋಲಿಸುತ್ತದೆ. ಅವನು ಭೂಮಿಯ ಮೇಲಿರುವ ಎಲ್ಲ ಕ್ಷತ್ರಿಯ ಕುಲಗಳನ್ನೂ[೧೧೬] ವಶಪಡಿಸಿಕೊಂಡನೆಂದೂ ಈ ಶಾಸನ ಹೇಳುತ್ತದೆ.

ದ್ವಿತೀಯ ಚಂದ್ರಗುಪ್ತನ ಉದಯಗಿರಿ ಗುಹಾ ಶಾಸನಗಳು ಅವನನ್ನು ಪರಮಭಟ್ಟಾರಕ ಮತ್ತು ಮಹಾರಾಜಾಧಿರಾಜ ಎಂದು ಬಣ್ಣಿಸುತ್ತದೆ. ಅವನ ಮಥುರಾ ಶಿಲಾಶಾಸನವು ಸಮುದ್ರಗುಪ್ತನನ್ನೂ ಪ್ರಥಮ ಚಂದ್ರಗುಪ್ತನನ್ನೂ ಮಹಾರಾಜಾಧಿರಾಜ ಎಂದು ಕರೆದು ದ್ವಿತೀಯ ಚಂದ್ರಗುಪ್ತನನ್ನು ಸರ್ವರಾಜೋಚ್ಛೇತ್ತಾ, ಪೃಥಿವಿಯಲ್ಲಿ ಅಪ್ರತಿರಥ ಮತ್ತು ಚತುರುದಧಿಸಲಿಲಾಸ್ವಾದಿತಯಶಸ್ ಎಂದು ಹೊಗಳಿದೆ.[೧೧೭]

ಅನೇಕ ಕಾಲದವರೆಗೆ ನಿಂತುಹೋಗಿದ್ದ ಅಶ್ವಮೇಧಯಾಗವನ್ನು ಮತ್ತೆ ಉಜ್ಜೀವಿತಗೊಳಿಸಿದವನೆಂದೂ ಅವನನ್ನು ಶ್ಲಾಘಿಸಲಾಗಿದೆ.

ದ್ವಿತೀಯ ಚಂದ್ರಗುಪ್ತನ ಸಾಂಚೀ ಶಿಲಾಶಾಸನವೂ ಅವನನ್ನು ಮಹಾರಾಜಾಧಿರಾಜ ಎಂದು ಉಲ್ಲೇಖಿಸಿ ಅವನು ಅನೇಕ ಯುದ್ಧಗಳಲ್ಲಿ ವಿಜಯಯಶಃಪತಾಕೆಯನ್ನು ಹಾರಿಸಿದ್ದನೆಂದು[೧೧೮] ಹೇಳಿದೆ. ಅವನದೇ ಆದ ಇನ್ನೊಂದು ಉದಯಗಿರಿ ಗುಹಾಶಾಸನವು ಚಂದ್ರಗುಪ್ತನ ವಿಕ್ರಮವು ಭೂಮಿಯನ್ನೆಲ್ಲ ಕೊಂದು ರಾಜರನ್ನೆಲ್ಲ ಅವನ ದಾಸರನ್ನಾಗಿ ಮಾಡಿತು ಎಂದು ಉಲ್ಲೇಖಿಸಿದೆ.[೧೧೯] ಅದರಲ್ಲಿಯೂ ರಾಜಾಧಿರಾಜ ಎಂಬ ಬಿರುದು ಇದೆ. ದ್ವಿತೀಯ ಚಂದ್ರಗುಪ್ತನದೇ ಆದ ಗಧ್ವಾ ಶಿಲಾಶಾಸನವೂ ಅವನನ್ನು ಮಹಾರಾಜಾಧಿರಾಜ[೧೨೦] ಎಂದು ಕರೆದಿದೆ.

ಗಧ್ವಾದ ಎರಡು ಶಿಲಾಶಾಸನಗಳಲ್ಲಿ[೧೨೧] ಕುಮಾರಗುಪ್ತನನ್ನು ಮಹಾರಾಜಾಧಿರಾಜ ಎಂದು ಕರೆಯಲಾಗಿದೆ. ಬಿಲ್ಸಾದ್ ಸ್ತಂಭಶಿಲಾಶಾಸನವು[೧೨೨] ಮಹಾರಾಜಾಧಿರಾಜ ಎಂಬ ಬಿರುದನ್ನು ಕುಮಾರಗುಪ್ತನ ಪೂರ್ವಜರಾದ ದ್ವಿತೀಯ ಚಂದ್ರಗುಪ್ತ[೧೨೩] ಸಮುದ್ರಗುಪ್ತ[೧೨೪] ಮತ್ತು ಪ್ರಥಮ ಚಂದ್ರಗುಪ್ತರಿಗೆ ಕೊಟ್ಟಿದೆ. ಸಮುದ್ರಗುಪ್ತನನ್ನು ಅಶ್ವಮೇಧದ ಉಜ್ಜೀವನಕಾರ (ಅಶ್ವಮೇಧಾಹರ್ತಾ)[೧೨೫] ಎಂದು ವಿಶೇಷವಾಗಿ ಉಲ್ಲೇಖಿಸಿದೆ. ಆದರೆ ಮಾಂಕುವರಿನ (Mankuwur) ಶಿಲಾಪ್ರತಿಮಾ ಶಾಸನವು ಕುಮಾರಗುಪ್ತನನ್ನು ಮಹಾರಾಜ ಎಂದು ಮಾತ್ರ ಉಲ್ಲೇಖಿಸಿದೆ. ಆಗ ಅದು ಅಧೀನ ಸಾಮಂತರಾಜರ ಬಿರುದಾಗಿತ್ತು. ಇದು ತಪ್ಪಿನಿಂದ ಆಗಿರಬಹುದು, ಅಥವಾ ಪುಷ್ಯಮಿತ್ರರು ಮತ್ತು ಹೂಣರು ಅವನನ್ನು ಆ ದರ್ಜೆಗೆ ಇಳಿಸಿದ ಕಾರಣದಿಂದಲೂ ಆಗಿರಬಹುದು. ಮಂದಸೋರ್ (Mandasor) ಶಿಲಾಶಾಸನವು ಕುಮಾರಗುಪ್ತನು ಸಮಸ್ತ ಪೃಥಿವಿಯನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[೧೨೬]

ಬಿಹಾರ್ ಶಿಲಾಶಾಸನವು[೧೨೭] ಸ್ಕಂದಗುಪ್ತನನ್ನು ಮಹಾರಾಜಾಧಿರಾಜನೆಂದು ಕರೆಯುವುದಲ್ಲದೆ ಅವನ ಪಿತೃಪಿತಾಮಹಾದಿಗಳ ಮಾಮೂಲು ಉಲ್ಲೇಖಗಳನ್ನೂ ಮಹಾಕಾರ್ಯಗಳನ್ನೂ ಪುನರಾವರ್ತಿಸುತ್ತದೆ. ಬಿಹಾರಿ ಶಿಲಾಸ್ತಂಭ ಶಾಸನವು[೧೨೮] ಗುಪ್ತವಂಶೈಕವೀರ ಎಂದು ಅವನನ್ನು ಹೊಗಳಿ ವಿಜಯಗಳಿಂದ ಪೃಥಿವಿಯನ್ನು ಗೆದ್ದವನು[೧೨೯] ಎಂದು ಹೇಳಿ ಅವನ ಪೂರ್ವಜರ ಸಾಹಸಗಳನ್ನು ಪುನರುಕ್ತಿಗೊಳಿಸುತ್ತದೆ.

ಜುನಾಗಢದ ಶಿಲಾಶಾಸನವೂ ಸ್ಕಂದಗುಪ್ತನನ್ನು ರಾಜರಾಜಾಧಿರಾಜ[೧೩೦] ಎಂದು ಕರೆದು ಚತುರದಧಿಜಲಾಂತವಾದ ಭೂಮಿಯನ್ನು ವಶಪಡಿಸಿಕೊಂಡವನು, ಶತ್ರುಗಳ ದರ್ಪವನ್ನು ಮುರಿದು ಎಲ್ಲ ದೇಶಗಳಲ್ಲಿ ರಕ್ಷಕರನ್ನು ನಿಯೋಜಿಸಿದವನು[೧೩೧], ವಂಶದ ಪತಾಕೆ, ಸಕಲಾವನೀಪತಿ, ರಾಜಾಧಿರಾಜ್ಯಾಧಿಕ ಪುಣ್ಯಕರ್ಮಗಳನ್ನು ನೆರವೇರಿಸಿದವನು[೧೩೨] ಎಂದು ಹೊಗಳುತ್ತದೆ. ಕಹೌಮ್(Kahaum) ಶಿಲಾಸ್ತಂಭ

ಶಾಸನವು ಒಂದು ನೂರು ರಾಜರ ಅಧಿಪತಿಯೆಂದೂ, ಆ ನೂರು ಜನ ರಾಜರು ನಮಸ್ಕರಿಸುವಾಗ ಉಂಟಾದ ಗಾಳಿಯಿಂದ ಅವನ ಆಸ್ಥಾನಮಂಡಪವು ನಡುಗುತ್ತಿತ್ತೆಂದೂ ಸ್ಕಂದಗುಪ್ತನನ್ನು ವರ್ಣಿಸಿದೆ.[೧೩೩] ಸ್ಕಂದಗುಪ್ತನ ಇಂದೂರ್ ತಾಮ್ರಪತ್ರ ಶಾಸನವು ಅವನಿಗೆ ಪರಮಭಟ್ಟಾರಕ ಮತ್ತು ಮಹಾರಾಜಾಧಿರಾಜ ಎಂಬ ಬಿರುದುಗಳನ್ನು ಅನ್ವಯಿಸಿ ಅವನ ರಾಜ್ಯವಿಜಯವು ಅಭಿವರ್ಧಿಸುತ್ತಿತ್ತು ಎಂದು ಹೇಳಿದೆ.[೧೩೪]

ಮೆಹರೌಲಿಯಲ್ಲಿರುವ, ಚಂದ್ರನ ಮರಣೋತ್ತರ ಕಬ್ಬಿಣದ ಸ್ತಂಭದ ಶಾಸನವು ಜಗತ್ತಿನಲ್ಲಿ ಅವನು ಪರಮೈಶ್ವರ್ಯವನ್ನು ಗಳಿಸಿದ್ದನೆಂದೂ, ಅವನ ವಿಕ್ರಮದ ಮಂದಾನಿಲದಿಂದ ದಕ್ಷಿಣಸಮುದ್ರವು ಪರಿಮಳಿತವಾಗಿತ್ತೆಂದೂ ಉಲ್ಲೇಖಿಸುತ್ತದೆ. ಅವನು ಸಿಂಧೂನದಿಯ ಏಳು ಪಾತ್ರಗಳನ್ನು ದಾಟಿ ಬಾಹ್ಲೀಕರನ್ನು ಗೆದ್ದನೆಂದೂ ಅದು ದಾಖಲಿಸುತ್ತದೆ.[೧೩೫]

ಯಶೋಧರ್ಮನ ಮಂದಸೋರ್ (Mandasor) ಸ್ತಂಭಶಾಸನವು ಭಾರತದ ವಿಶಾಲ ಪ್ರದೇಶವನ್ನು ಆಳುತ್ತಿದ್ದ ಸಾಮ್ರಾಟ್ ಯಶೋಧರ್ಮನು ಲೌಹಿತ್ಯ ಅಥವಾ ಬ್ರಹ್ಮಪುತ್ರದಿಂದ ಪಶ್ಚಿಮ ಸಮುದ್ರದವರೆಗೆ, ಹಿಮಾಲಯದಿಂದ ಮಹೇಂದ್ರ ಪರ್ವತದವರೆಗೆ ಹಿಮಾಲಯದಿಂದ ಮಹೇಂದ್ರಪರ್ವತದವರೆಗೆ ಹಬ್ಬಿದ್ದ ಸಾಮ್ರಾಜ್ಯಾಧಿಪತಿ ಎಂದೂ, ಮನು, ಭರತ, ಅಲರ್ಕ ಮತ್ತುಮಾಂಧಾತರೆಂಬ ಸಮ್ರಾಟರಿಗೆ ಸಮಾನನೆಂದು ವರ್ಣಿಸಿದೆ.[೧೩೬]

ಮಾಂಡಸೋರಿನ ಇನ್ನೊಂದು ಶಿಲಾಶಾಸನವು ವಿಷ್ಣುವರ್ಧನನಿಗೆ ರಾಜಾಧಿರಾಜ ಮತ್ತು ಪರಮೇಶ್ವರ ಎಂಬ ಬಿರುದುಗಳನ್ನು ಅನ್ವಯಿಸಿ ಪೂರ್ವದ ಮತ್ತು ಉತ್ತರದ ಹಲವಾರು ರಾಜರನ್ನು ಅವನು ಪರಾಜಿತರನ್ನಾಗಿ ಮಾಡಿದ್ದನೆಂದು ಉಲ್ಲೇಖಿಸಿದೆ.[೧೩೭]

ಏಳನೆಯ ಶೀಲಾದಿತ್ಯನ ದೀರ್ಘವಾಗಿರುವ ತಾಮ್ರಪತ್ರ ಶಾಸನವು ನಾಲ್ಕನೆಯ ಧರಾಸೇನನಿಗೆ ಪರಮಭಟ್ಟಾರಕ, ಮಹಾರಾಜಾಧಿರಾಜ, ಪರಮೇಶ್ವರ ಮತ್ತು ಚಕ್ರವರ್ತಿ ಎಂಬ ನಾಲ್ಕು ಬಿರುದುಗಳನ್ನು (ಅಥವಾ ವಿಶೇಷಣಗಳನ್ನು) ನೀಡಿ, ಅವುಗಳಲ್ಲಿ ಮೊದಲಿನ ಮೂರು ವಿಶೇಷಣಗಳನ್ನು ಮೂರನೆಯ, ನಾಲ್ಕನೆಯ, ಐದನೆಯ, ಆರನೆಯ ಮತ್ತು ಏಳನೆಯ ಶೀಲಾದಿತ್ಯ ದೇವರಿಗೆ ಕೊಟ್ಟಿದೆ.

ಆದಿತ್ಯಸೇನನ ಮಂದಾರಪರ್ವತ ಶಿಲಾಶಾಸನವು ಅವನಿಗೆ ಅತ್ಯುನ್ನತವಾದ ಪರಮಭಟ್ಟಾರಕ ಮತ್ತು ಮಹಾರಾಜಾಧಿರಾಜ ಎಂಬ ಬಿರುದುಗಳನ್ನು ಅನ್ವಯಿಸಿದೆ.

ಎರಡನೆಯ ಜೀವಿತಗುಪ್ತನ ದೇವವರುಣಾರ್ಕ (Deo-Baranark) ಶಾಸನವು ದೇವಗುಪ್ತದೇವ, ವಿಷ್ಣುಗುಪ್ತದೇವ ಮತ್ತು ದ್ವಿತೀಯ ಜೀವಿತಗುಪ್ತ ದೇವನಿಗೆ ಪರಮೇಶ್ವರ ಎಂಬ ಉನ್ನತ ಬಿರುದನ್ನು ಕೊಟ್ಟು ವರ್ಣಿಸಿದೆ.

ಹರ್ಷವರ್ಧನನ ಸೋನ್‌ಪೇಟ್ ತಾಮ್ರ ಮುದ್ರಾಶಾಸನವು ಪ್ರಭಾಕರವರ್ಧನ, ದ್ವಿತೀಯ ರಾಜ್ಯವರ್ಧನ ಮತ್ತು ಹರ್ಷವರ್ಧನರಿಗೆ ಅತ್ಯುನ್ನತವಾದ ಪರಮಭಟ್ಟಾರಕ ಮತ್ತು ಮಹಾರಾಜಾಧಿರಾಜ ಎಂಬ ಬಿರುದುಗಳನ್ನಿತ್ತಿದೆ.

ಗಯೆಯಲ್ಲಿ ಪತ್ತೆಯಾಗಿರುವ ಸಮುದ್ರಗುಪ್ತನ ತಾಮ್ರಪತ್ರಶಾಸನವು ಅವನ ಮಹಾರಾಜಾಧಿರಾಜ ಎಂಬ ಬಿರುದನ್ನೂ ಅವನ ಮತ್ತು ಪೂರ್ವಜರ ಸಿದ್ಧಿ ಸಾಧನೆಗಳನ್ನೂ ಪುನರಾವರ್ತಿಸಿದೆ.

ಪಶ್ಚಿಮ ಭಾರತದ ಗುಹಾಂತರ್ದೇವಾಲಯಗಳಲ್ಲಿರುವ ಕೆಲವು ಐತಿಹಾಸಿಕ ಶಾಸನಗಳು ಕೆಲವರು ಸಫಲರಾಜರಿಂದ ಉಪಯೋಗಿಸಲ್ಪಟ್ಟಿದ್ದ ಪರಮೈಶ್ವರ್ಯದ ಬಿರುದುಗಳ ಉಲ್ಲೇಖಗಳನ್ನು ಹೊಂದಿವೆ. ಗೋಮತೀಪುತ್ರ[೧೩೮] ಶಾತಕರ್ಣಿ ಮತ್ತು ಪುಲಮಾಯಿಯ ನಾಲ್ಕು ಶಾಸನಗಳಲ್ಲಿ ಅತ್ಯಂತ ದೀರ್ಘವಾದ ಒಂದು ಶಾಸನವು ಗೋಮತೀಪುತ್ರನನ್ನು ರಾಜರ ರಾಜ, ಇವನ ಸಾಹಸಕಾರ್ಯಗಳು ಮತ್ತು ವಿಜಯಗಳು ರಾಮ, ಕೇಶವ, ಅರ್ಜುನ ಮತ್ತು ಭೀಮಸೇನರ ವಿಜಯಗಳಿಗೆ ಸ್ಪರ್ಧಿಗಳಾಗಿವೆ ಎಂದು ವರ್ಣಿಸಿದೆ. ಅವನ ವಿಕ್ರಮವು ನಾಭಾಗ, ನಹುಷ, ಜನಮೇಜಯ, ಸಗರ, ಯಯಾತಿ, ರಾಮ ಮತ್ತು ಅಂಬರೀಷರ ವಿಕ್ರಮಕ್ಕೆ ಸಮನಾಗಿತ್ತೆಂದು ಹೊಗಳಿದೆ.

ಎರಡನೆಯ ಪುಲಿಕೇಶಿ(ಕ್ರಿ.ಶ. ೬೧೧–೬೩೪)ಯ ಶಾಸನಗಳು ಅವನು ಸಾಮ್ರಾಟನಿಗೆ ಯೋಗ್ಯವಾದ ಪರಮೇಶ್ವರ ಎಂಬ ಬಿರುದನ್ನು ಸ್ವೀಕರಿಸಿದ್ದನೆಂದು ತಿಳಿಸುತ್ತವೆ. ಚಾಲುಕ್ಯರನ್ನು ಕಿತ್ತೆಸೆದ ರಾಷ್ಟ್ರಕೂಟ ಚಕ್ರವರ್ತಿ ದಂತಿದುರ್ಗನೂ, ಅವನ ಮಗ ಕೃಷ್ಣರಾಜನೂ ಪರಮಾಧಿಕಾರದ ಸಾಮ್ರಾಟರಾಗಿದ್ದರೆಂದು ಅವರ ತಾಮ್ರಪತ್ರ ಶಾಸನಗಳಲ್ಲಿ ಹೇಳಲಾಗಿದೆ. ಅವರ ಉತ್ತರಾಧಿಕಾರಿ ಮೂರನೆಯ ಗೋವಿಂದನೂ ಒಬ್ಬ ಸಾಮ್ರಾಟನೇ ಆಗಿದ್ದನೆಂದೂ, ಅಧೀನ ರಾಜರನ್ನು ನಿಯೋಜಿಸುವಲ್ಲಿ ಮತ್ತು ಕಿತ್ತೆಸೆಯುವಲ್ಲಿ ಪರಮಾಧಿಕಾರವನ್ನು ಹೊಂದಿದ್ದನೆಂದೂ ಬರೋಡ ತಾಮ್ರಪತ್ರಶಾಸನದಿಂದ ತಿಳಿದುಬರುತ್ತದೆ.

ಬಂಗಾಲದ ಕೆಲವರು 'ಪಾಲ' ದೊರೆಗಳೂ ಪರಮಾಧಿಕಾರದ ಉನ್ನತ ಬಿರುದುಗಳನ್ನು ತಮಗೆ ಕೊಟ್ಟುಕೊಂಡಿದ್ದರೆಂದು ಅವರ ಶಾಸನಗಳಿಂದ ತಿಳಿದುಬರುತ್ತದೆ. ಒಂದು ಪರಮಭಟ್ಟಾರಕ ಮಹಾರಾಜಾಧಿರಾಜ ಪರಮೇಶ್ವರ ಎಂದು ಉಲ್ಲೇಖಿಸಿದೆ. ಬುದ್ಧಗಯೆಯ ಇನ್ನೊಂದು ಶಾಸನವು "ಪರಮಭಟ್ಟಾರಕ ಶ್ರೀಮನ್ಮಹೀಪಾಲ ದೇವ" ಎಂದು ಹೇಳುತ್ತದೆ. ಮೋಂಘ್ಯೆರ್‌ನ ಒಂದು ತಾಮ್ರಪತ್ರ ಶಾಸನದಲ್ಲಿ ಗೋಪಾಲನನ್ನು ಭೂಮಂಡಲದ ರಾಜ ಎಂದು ಕರೆದು ಅವನನ್ನು ಪೃಥು, ಸಗರ ಮುಂತಾದವರೊಂದಿಗೆ ಹೋಲಿಸಲಾಗಿದೆ.[೧೩೯]

೩೧

ಹೀಗೆ ಪ್ರಾಚೀನ ಭಾರತೀಯ ಇತಿಹಾಸವು ತಪ್ಪಾಗಿ ತಿಳಿಯಲು ಅವಕಾಶವಿಲ್ಲದಂತೆ ತೋರಿಸುವುದೇನೆಂದರೆ ಈ ದೇಶದ ಜನಗಳ ರಾಜಕೀಯ ಪ್ರಜ್ಞೆಯು ಬಹು ಹಿಂದಿನ ಕಾಲದಿಂದಲೂ ಸಮಗ್ರ ಭಾರತವನ್ನು ಒಂದು ಘಟಕವಾಗಿ ಗ್ರಹಿಸಿತ್ತು ಮತ್ತು ಈ ಸಮಸ್ತ ಪ್ರದೇಶವನ್ನು ತನ್ನ ಚಟುವಟಿಕೆಯ ರಂಗವೆಂದು ದೃಢವಾಗಿ ನಂಬಿತ್ತು. ಭಾರತದ ತುದಿಯಿಂದ ತುದಿಯವರೆಗೆ ಸ್ಪಂದಿಸುತಿದ್ದ ಜೀವನದ ತರಂಗವು ಅದರ ವಿವಿಧ ಭಾಗಗಳನ್ನೂ ವೈವಿಧ್ಯಗಳನ್ನೂ ಒಟ್ಟಾಗಿ ಕೂಡಿಸುತ್ತಾ ಮತ್ತು ಏಕೀಕರಿಸುತ್ತಾ ಒಂದು ಮಹಾಶಕ್ತಿಶಾಲಿ ಕಾಯವನ್ನಾಗಿ ಮಾಡಿತು ಮತ್ತು ಕಾಲಕ್ರಮದಲ್ಲಿ ಅನಿವಾರ್ಯವಾಗಿ ಅದು ಭೌಗೋಳಿಕ ಸೀಮೆಗಳನ್ನು ದಾಟಿಹೋಗಿ ಬೇರೆ ದೇಶಗಳಲ್ಲೂ ಹರಡಿಕೊಂಡಿತು. ಭಾರತವು ವಸಾಹತುಗಳನ್ನು ಕಟ್ಟಿದ ಚಟುವಟಿಕೆಯ ಮತ್ತು ಸಮುದ್ರಗಳಾಚೆಗೂ ವಿಶಾಲ ಭಾರತವನ್ನು ಕ್ರಮಶಃ ಬೆಳೆಸಿದ ಕಥೆಗಿಂತ ಬೇರೆ ಯಾವ ಪುರಾವೆ ಬೇಕು ಭಾರತೀಯ ಏಕತೆಯ ಶಕ್ತಿಯನ್ನೂ ವಾಸ್ತವತೆಯನ್ನೂ ಸ್ಪಷ್ಟವಾಗಿ ಸಾಧಿಸಿ ಕೊಡುವುದಕ್ಕೆ? ಇದಕ್ಕಿಂತ ಬೇರೆ ಪುರಾವೆ ಬೇಕಿಲ್ಲ. ಆಸಕ್ತಿಜನಕವಾದ ಆ ಇತಿಹಾಸವನ್ನು ಎಲ್ಲ ವಿವರಣೆಗಳೊಂದಿಗೆ ತೆರೆದಿಡಲು ಇದು ಉಚಿತವಾದ ಸ್ಥಳ ಅಥವಾ ಸಂದರ್ಭವಲ್ಲ. ಅದು ಭಾರತದ ಇತಿಹಾಸದಲ್ಲಿ ಇಂದಿಗೂ ಪ್ರಕಾಶಕ್ಕೆ ಬರದಿರುವ ಅಧ್ಯಾಯವಾಗಿದೆ. ಇಲ್ಲಿ ಕೇವಲ ಸಾಮಾನ್ಯ ತೀರ್ಮಾನಗಳನ್ನೂ, ಸ್ಪಷ್ಟವಾಗಿ ಮತ್ತು ನಿಶ್ಚಿತವಾಗಿ ಎದ್ದುನಿಲ್ಲುವ ವಸ್ತುಸ್ಥಿತಿಗಳನ್ನು ಮಾತ್ರ ಹೇಳಿ ನಾನು ತೃಪ್ತಿಪಡುತ್ತಿದ್ದೇನೆ. ಅನೇಕ ಶತಮಾನಗಳವರೆಗೆ ಭಾರತವು ದೂರಪ್ರಾಚ್ಯ ದೇಶಗಳಿಗೆ ವಸಾಹತುಕಾರರನ್ನೂ ನೆಲೆಸಿಗರನ್ನೂ ಧಾರೆಧಾರೆಯಾಗಿ ಕಳುಹಿಸಿಕೊಟ್ಟಿತ್ತು. ಆ ದೇಶಗಳಲ್ಲಿ ಮುಖ್ಯಭೂಮಿಯಲ್ಲಿರುವ ಪೆಗು, ಸಯಾಮ್ (ಥಾಯ್ಲೆಂಡ್) ಕಾಂಬೋಡಿಯಾಗಳೂ, ಮಲಯದ್ವೀಪ ಸ್ತೋಮದಲ್ಲಿರುವ ಜಾವಾ (ಯವದ್ವೀಪ), ಸುಮಾತ್ರ, ಬಲಿ (ಬಾಲಿ), ಬೋರ್ನಿಯೋ ಎಂಬ ದ್ವೀಪಗಳೂ ಸೇರಿದ್ದವು. "ಭಾರತಕ್ಕೆ ಆ ದೂರದೇಶಗಳ ಋಣಿತ್ವದ ವಾಸ್ತವತೆಯು ವಸ್ತುಗಳ ಅವಶೇಷಗಳಿಂದಲೂ, ಜಾವಾ ದ್ವೀಪಕ್ಕೆ ಪೂರ್ವದಲ್ಲಿರುವ ಬಾಲಿದ್ವೀಪದಲ್ಲಿ ಜೀವಂತವಾಗಿರುವ ಬೌದ್ಧ ಮತ್ತು ಬ್ರಾಹ್ಮಣಮತಗಳ ಅಸ್ತಿತ್ವದಿಂದಲೂ ಚೀನದೇಶದ ಇತಿಹಾಸದಿಂದಲೂ, ಇಂಡಿಯಾದೇಶದಲ್ಲಿಯೂ ಪೆಗು, ಸಯಾಮ್ (ಥಾಯ್‌ಲೆಂಡ್) ಮತ್ತು ದ್ವೀಪಸ್ತೋಮದಲ್ಲಿಯೂ ಸುರಕ್ಷಿತವಾಗಿರುವ ಬಹುಸಂಖ್ಯೆಯ ಸಂಪ್ರದಾಯಗಳಿಂದಲೂ ಚೆನ್ನಾಗಿ ಪ್ರಮಾಣಿಸಲ್ಪಡುತ್ತದೆ.[೧೪೦] ಈ ಒಂದು ವಸಾಹತುಕಾರಿ ಚಟುವಟಿಕೆಯು ಭಾರತದಿಂದ ಸಂಪರ್ಕಿತವಾದ ದೇಶಗಳಲ್ಲಿ ಪ್ರಾಯೋಗಿಕ ಭಾರತೀಕರಣ (Indianisation) ಅಥವಾ ಸಂಸ್ಕೃತಿಯ ಸ್ಥಾನಾಂತರೀಕರಣ(Transplantation)ನಲ್ಲಿ ಪರಿಣಮಿಸಿತು. ಮತ್ತೆ ಕೆಲವು

ಸಂದರ್ಭಗಳಲ್ಲಿ ಭಾರತೀಯ ಕಲಾಪ್ರಕಾರಗಳ ಮತ್ತು ಭೌಗೋಳಿಕ ನಾಮಧೇಯಗಳ ಪುನರುತ್ಪಾದನೆಯಲ್ಲಿಯೂ ಕೊನೆಗಂಡಿತು.

ಭಾರತೀಯ ಕಲೆಯ ಕೆಲವು ಅತ್ಯುತ್ತಮ ಮೇರುಕೃತಿಗಳು ಭಾರತದ ಆಚೆ ಇರುವ, ಅದರ ಪ್ರಭಾವಕ್ಕೆ ಒಳಗಾದ ದೇಶಗಳಲ್ಲಿವೆ ಎಂಬುದು ಸುವಿದಿತವಾಗಿದೆ. ಅದರ ವಿಚಾರಗಳು ಮತ್ತು ಸಂಸ್ಥೆಗಳು ಬೌದ್ಧಮತದ ಪ್ರಸಾರದೊಡನೆ ದೇಶಾಂತರಗಳಿಗೂ ಪಯಣಿಸಿದುವು. ಬೌದ್ಧಮತದ ಮಹಾಯಾನ ಪಂಥವನ್ನು ಟಿಬೆಟ್, ನೇಪಾಳ, ಚೀನ ಮತ್ತು ನೆರೆಹೊರೆಯ ದೇಶಗಳೂ, ದೂರಭಾರತದ ಭಾಗಗಳಾಗಿದ್ದ ಜಾವಾ ದ್ವೀಪ ಮುಂತಾದವೂ ಅಪ್ಪಿಕೊಂಡವು. ಹೀನಯಾನ ಪಂಥವು ದೂರಭಾರತದ ಹಲವು ದೇಶಗಳನ್ನೇ ಅಲ್ಲದೆ ಸಿಲೋನ್ (ಶ್ರೀಲಂಕಾ), ಬರ್ಮಾ (ಮಾಯಾನ್ಮಾರ್), ಸಯಾಮ್ (ಥಾಯ್ಲೆಂಡ್) ಮತ್ತು ಕಾಂಬೋಡಿಯಾ ದೇಶಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ನಿಸ್ಸಂಶಯವಾಗಿ ಭಾರತೀಯ ಚಿಂತನೆಯ ಮತ್ತು ಸಂಸ್ಥೆಗಳ ಪ್ರಚಾರವು ಅಸಂಖ್ಯಾತ ವಸಾಹತುಕಾರಿಗಳ ಮತ್ತು ಮತಪ್ರಸಾರಕರ ಕಾರ್ಯವಾಗಿತ್ತು, ಮತ್ತು ಅದನ್ನು ಅನೇಕ ಶತಮಾನಗಳವರೆಗೆ ಅವರು ನಡೆಸುತ್ತಿದ್ದರು. ಒಂದು ಸಮಾನವಾದ ಭೂಮಿ ಮತ್ತು ದೇಶದ ಮೇಲೆ ಅಭಿವೃದ್ಧಿಗೊಂಡ ಶ್ರೀಮಂತ ಮತ್ತು ಸ್ಥಿರ ಆತ್ಮಪ್ರಜ್ಞೆಯಿಂದ ಅವರ ಶ್ರದ್ಧೆಯು ಪೋಷಿತವಾಗಿರಬೇಕು. ಈ ವಸಾಹತುಗಾರಿಕೆಯು ದೇಶದ ವಿಶಿಷ್ಟತೆಯನ್ನೂ ಪವಿತ್ರತೆಯನ್ನೂ ಅರಿತುಕೊಳ್ಳುವುದರಿಂದ ಹುಟ್ಟಿದ ಜನಪ್ರಿಯ ಉತ್ಸಾಹತರಂಗದ ಕೇವಲ ಶಿಖರವಾಗಿತ್ತು. ಆ ದೇಶವು ಯಾವುದಕ್ಕಾಗಿ ನಿಂತಿದೆಯೋ, ಅದರ ವಿಚಾರಗಳು ಮತ್ತು ಸಂಸ್ಥೆಗಳು ಯಾವುವು ಇವೆಯೋ ಅದರ ಗಂಭೀರ ಮೌಲ್ಯಗ್ರಹಣಪೂರ್ವಕ ಪ್ರಶಂಸೆಯಿಂದ ಆ ಉತ್ಸಾಹತರಂಗವು ಪುಷ್ಟಿಗೊಳ್ಳುತ್ತಿತ್ತು.

೩೨

ಪ್ರಾಚೀನ ಕಾಲದಲ್ಲೇ ಭಾರತದಲ್ಲಿ ಧರ್ಮ ಮತ್ತು ರಾಜಕೀಯ ಅನುಭವಗಳು ಜನರಲ್ಲಿ ಭೌಗೋಳಿಕ ಪ್ರಜ್ಞೆಯ ಬೆಳವಣಿಗೆಗೆ ತಮ್ಮ ಕಾಣಿಕೆಯನ್ನು ನೀಡಿದುವು, ಭಾರತದ ಭೂಖಂಡಸದೃಶವಿಶಾಲತೆ ಮತ್ತು ವೈವಿಧ್ಯದ ಹಿಂದೆ ಇರುವ ಮೂಲಭೂತ ಏಕತೆಗೂ ಧರ್ಮ ಮತ್ತು ರಾಜಕೀಯಗಳು ಕೊಡುಗೆಯನ್ನು ಕೊಟ್ಟುವು ಎಂಬುದನ್ನು ನಾವೀಗ ಕಂಡೆವು. ಸಮಗ್ರದೇಶವು ಒಂದು ಭೌಗೋಳಿಕ ಘಟಕ ಎಂಬುದನ್ನು ರಾಷ್ಟ್ರೀಯ ಚಿಂತನೆಯು ಸುಲಭವಾಗಿ ಮತ್ತು ಸ್ವಾಭಾವಿಕವಾಗಿ ಗ್ರಹಿಸಿತ್ತು. ಒಂದಾಗಿ ಬೆಸೆಯಲಾಗಿದ್ದ ಈ ನಾಡಿನ ಬೇರೆಬೇರೆ ಭಾಗಗಳ ನಿಕಟಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಯಂತ್ರಪೂರ್ವಯುಗದಲ್ಲಿದ್ದ ಭೌತಿಕಕ್ಲೇಶಗಳು ರಾಷ್ಟ್ರೀಯ ಚಿಂತನೆಯ ಶಕ್ತಿ ಮತ್ತು ಶ್ರದ್ಧೆಗಳಿಂದ ಸೋಲಿಸಲ್ಪಟ್ಟುವು. ಒಂದು ನಿಜವಾದ ಅರ್ಥದಲ್ಲಿ

ಅದು ದ್ರವ್ಯದ ಮೇಲೆ ಮನಸ್ಸಿನ ವಿಜಯ; ಆಧ್ಯಾತ್ಮಿಕ ಶಕ್ತಿಗೆ ಭೌತಿಕ ಜಗತ್ತಿನ ತಲೆಬಾಗುವಿಕೆ. ಪ್ರತಿಕೂಲವಾದ ನೈಸರ್ಗಿಕ ಪರಿಸರವಿದ್ದರೂ ಭಾರತದ ಪ್ರತಿಯೊಂದು ಭಾಗದಲ್ಲೂ ಜನರ ಮನಸ್ಸು ಅವರ ಮಹಾಶಕ್ತಿಶಾಲಿನಿ ಮಾತೃಭೂಮಿಯನ್ನು ಸಮಗ್ರವಾಗಿ ಅದು ಒಂದು ನಾಡು ಎಂದು ಅರಿಯಲ್ಪಟ್ಟಿತ್ತು.

ಆಧುನಿಕ ಕಾಲವು ಸಂಚಾರ ಸೌಕರ್ಯದ ಉತ್ತಮಿಕೆಯನ್ನು ತಂದ ಯುಗ. ಇದರಲ್ಲಿ ಸಮಸ್ತ ಪ್ರಪಂಚವೇ ಆಕಾರದಲ್ಲಿ ಚಿಕ್ಕದಾಗುತ್ತಿದೆ. ರೇಲ್ವೆ, ಟೆಲಿಗ್ರಾಫ್, ವಿದ್ಯುತ್‌ಯಂತ್ರಗಳಿಂದ ಜಗತ್ತು ಕೇಂದ್ರೀಕೃತವಾಗುತ್ತಿದೆ. ಅಡ್ಡಗೋಡೆ ಎಂದು ಪರಿಗಣಿಸಲಾಗಿದ್ದ ಸಾಗರವೇ ಈಗ ಅಂತಾರಾಷ್ಟ್ರೀಯ ಕ್ರಿಯಾವಿನಿಮಯಕ್ಕೆ ದೊಡ್ಡ ಹೆದ್ದಾರಿಯಾಗಿ ಮಾರ್ಪಡಿಸಲ್ಪಟ್ಟಿದೆ. ಈಗ ನಾವು ಸ್ವಾಭಾವಿಕವಾಗಿ ಮತ್ತು ಸುಲಭವಾಗಿ ಸಮಗ್ರ ಭಾರತದ ಭೌಗೋಳಿಕ ಏಕತೆಯನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಮತ್ತು ಜೊತೆಗೆ ಈ ಏಕತೆಯು ಭೂಪಟದಲ್ಲಿ ಸ್ಪಷ್ಟವಾಗಿ ಕಾಣುವುದಿಲ್ಲವೆ? ಯಾವ ದೇಶದ ಭಾಗಗಳನ್ನು ಬೇರ್ಪಡಿಸುವ ಅಡ್ಡಗೋಡೆಗಳು ಆ ದೇಶವನ್ನು ಇತರ ದೇಶಗಳಿಂದ ಬೇರ್ಪಡಿಸುವ ಅಡ್ಡಗೋಡೆಗಳಿಗಿಂತ ಕಡಿಮೆ ಅಡ್ಡಿಪಡಿಸುವು ವಾಗಿರುವುವೋ ಅಂತರ ದೇಶವು ಭೌಗೋಳಿಕವಾಗಿ ಒಂದು. ಇದು ಅತ್ಯಂತ ಸ್ಪಷ್ಟ. ಏಕತೆಯ ಈ ಪರೀಕ್ಷೆಯನ್ನು ಭಾರತ ತೃಪ್ತಿಕರವಾಗಿ ದಾಟುತ್ತದೆ ಎಂದು ಓಡುವ ಯಾವ ಮನುಷ್ಯನಾದರೂ ಕಂಡುಕೊಳ್ಳಬಹುದು. ಉತ್ತರ ದಿಕ್ಕಿನಲ್ಲಿ ಹಿಮಾಲಯ ಪರ್ವತಗಳಿಂದ ರಚಿತವಾದ ಮಹಾನ್ ಅಡ್ಡಗೋಡೆಯು ಸುಲಭವಾಗಿ ಅಭೇದ್ಯವಾಗಿ ಮಾಡಲು ತಕ್ಕುದಾಗಿದೆ. ಅದು ಏಷ್ಯಾಖಂಡದ ಇತರ ದೇಶಗಳಿಂದ ಭಾರತವನ್ನು ಕಾರ್ಯತಃ ಬೇರ್ಪಡಿಸುತ್ತದೆ. ಎರಡು ಸಾವಿರ ಮೈಲಿಗಳ ಸಿಮಾರೇಖೆಯಾಗಿ ಅದು ಭಾರತಕ್ಕೆ ರಕ್ಷಣೆಯನ್ನು ಒದಗಿಸಿದೆ. ದಕ್ಷಿಣದಲ್ಲಾದರೋ ಪರಿರಕ್ಷಿತ ಸ್ಥಾನದ ಸವಲತ್ತುಗಳನ್ನು ಸಮುದ್ರವೇ ನೀಡಿದೆ. ಹೀಗೆ ಸಮುದ್ರದಿಂದ ಸುತ್ತುವರಿಯಲ್ಪಟ್ಟು ಪರ್ವತಗಳಿಂದ ರಕ್ಷಿತವಾದ ಭಾರತವು ನಿರ್ವಿವಾದವಾಗಿ ಒಂದು ಭೌಗೋಳಿಕ ಘಟಕ.

ಆಂತರಿಕವಾಗಿ ದೇಶದ ಭಾಗಗಳ ಮಧ್ಯದಲ್ಲಿರುವ ದಾಟಲಾಗದ ಅಡ್ಡಗೋಡೆಗಳ ಬಗೆಗೆ ಹೇಳಬೇಕೆಂದರೆ ಅಂಥದ್ದು ಯಾವುದೂ ನಮಗೆ ಕಾಣಿಸುವುದೇ ಇಲ್ಲ. ಹಿಮಾಲಯಗಳ ಮುಂದೆ ಇರುವ ವಿಶಾಲ ಮೈದಾನ ಸಿಂಧೂ–ಗಂಗೆಗಳ ತಗ್ಗುಪ್ರದೇಶ. ಫ್ರಾನ್ಸ್, ಜರ್ಮನಿ, ಆಸ್ಟ್ರಿಯಾಗಳನ್ನು ಒಟ್ಟುಗೂಡಿಸಿದರೆ ಆಗುವುದಕ್ಕಿಂತ ಹೆಚ್ಚು ವಿಶಾಲ ಪ್ರದೇಶ. ಇದು ಭಾರತದ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಜನರಿಗೆ ವಾಸಸ್ಥಳವಾಗಿದೆ. ಈ ಪ್ರದೇಶದ ಬಗೆಗೆ ಸರ್ ರಿಚರ್ಡ್ ಸ್ಟ್ರಾಚೀ ಹೀಗೆ ಹೇಳಿದ್ದಾನೆ: "ಬಂಗಾಳಕೊಲ್ಲಿಯಿಂದ ಗಂಗಾನದಿಯ ಮೇಲೆ ಹಾಯ್ದು ಪಂಜಾಬಿನ ಮೂಲಕ ಸಿಂಧೂನದಿಯನ್ನು ದಾಟಿ ಕೆಳಗೆ ಸಮುದ್ರದವರೆಗೆ ಸುಮಾರು

ಎರಡು ಸಾವಿರ ಮೈಲಿಗಳಷ್ಟು ದೂರವನ್ನು ಒಂದು ಸಣ್ಣ ಕಲ್ಲಿನ ಚೂರನ್ನೂ ಕಾಣದೆ ಸಾಗಬಹುದು." ಈ ಸಮಸ್ತ ಪ್ರದೇಶವೂ ಸಮತಟ್ಟಾಗಿದೆ, ಯಾವುದೇ ತಡೆಗೋಡೆಯಿಲ್ಲದ ಅನುಸ್ಯೂತವಾಗಿ ಹರಡಿದ ಭೂಮಿಯಾಗಿದೆ. ಅದು ನದಿಗಳ, ಕಾಲುವೆಗಳ ಮತ್ತು ರೇಲ್ವೆಗಳ ಜಾಲಗಳಿಂದ ಆವೃತ್ತವಾಗಿದೆ. ಅದರಲ್ಲಿ ಗೋಧಿ, ಜೋಳ, ಮೆಕ್ಕೆಜೋಳಗಳ ಅವಿಚ್ಛಿನ್ನವಾದ ಭೂಖಂಡಗಳನ್ನೂ ಭತ್ತದ ಅನಂತ ಸಮುದ್ರಗಳನ್ನೂ, ಕಬ್ಬು ಮತ್ತು ನೀಲಿಗಳ ಎಲ್ಲೆಯೇ ಇಲ್ಲದ ಕಾವಲುಗಳನ್ನೂ ಯಾರುಬೇಕಾದರೂ ನೋಡಬಹುದಾಗಿದೆ. ಅದು ಕೃಷಿ ಸಂಪತ್ತಿನ ದೃಷ್ಟಾಂತವಾಗಿದ್ದು, ಅದರ ಏಕತಾನತೆ ದಮನಕಾರಕವೋ ಎಂಬಂತಿದೆ. ಉತ್ತರ ಮತ್ತು ದಕ್ಷಿಣ ಭಾರತಗಳ ನಡುವೆ ವಿಂಧ್ಯಪರ್ವತವಾಗಲಿ ಸಾತ್ಪುರ ಬೆಟ್ಟಗಳ ಶ್ರೇಣಿಯಾಗಲಿ ಸಂಪರ್ಕಕ್ಕೆ ಅಡ್ಡಿಯಾಗುವಷ್ಟು ದೊಡ್ಡ ಅಡ್ಡಗೋಡೆಯಾಗಿಲ್ಲ. ಸಮುದ್ರಮಟ್ಟಕ್ಕಿಂತ ನಾಲ್ಕು ಸಾವಿರ ಅಡಿಗಳಿಗಿಂತ ಹೆಚ್ಚೇನೂ ಎತ್ತರವಿಲ್ಲದ ಈ ಎರಡು ಶ್ರೇಣಿಗಳೂ ಈಗ ರಸ್ತೆಗಳಿಂದಲೂ ರೇಲ್ವೆಯಿಂದಲೂ ಸೀಳಲ್ಪಟ್ಟಿವೆ. ಭಾರತೀಯ ಆರ್ಯ ನಾಗರಿಕತೆಯ ಹರಡುವಿಕೆಯಲ್ಲಿ ಪೂರ್ವಕಾಲದಲ್ಲೂ ಈ ಪರ್ವತಶ್ರೇಣಿಗಳು ಅಂಥ ಗಂಭೀರವಾಗಿ ಅಡ್ಡಬರಲಿಲ್ಲ. ಅವುಗಳಿಗೆ ದಕ್ಷಿಣದಲ್ಲಿರುವ ಭಾರತದ ಭಾಗಗಳಿಗೆ ಹಿಂದೂ ಸಂಸ್ಕೃತಿಯ ಪ್ರಸರಣಕ್ಕೆ ಅಥವಾ ವಿದ್ಯೆಯ ಪ್ರಸಾರಕ್ಕೆ ಬೆಟ್ಟದ ಶ್ರೇಣಿಗಳು ಅಡ್ಡಿಯಾಗಲಿಲ್ಲ. ದಕ್ಷಿಣ ಭಾಗಗಳೂ ಉತ್ತರ ಭಾರತದಂತೆ ಹಿಂದೂಧರ್ಮದ ಮಹಾನ್ ಭದ್ರಕೋಟೆಗಳೇ ಆಗಿವೆ.

ಕೊನೆಯದಾಗಿ, ಇಂಡಿಯಾ ದೇಶವನ್ನು ಇತರ ದೇಶಗಳಿಂದ ಪ್ರತ್ಯೇಕಿಸುವ ನೈಸರ್ಗಿಕ ಲಕ್ಷಣಗಳಲ್ಲಿ ಮಾನ್‌ಸೂನ್ ಮಾರುತಗಳನ್ನು ಉಲ್ಲೇಖಿಸಬಹುದು. ಇವು ಸಮಗ್ರ ದೇಶದ ಮೇಲೆ ಒಂದು ವಿಶಿಷ್ಟ ವೈಲಕ್ಷಣ್ಯವನ್ನು ಮುದ್ರೆಯೊತ್ತಿ ಮೂಡಿಸಿವೆ. ಅವು ಭಾರತದೇಶವನ್ನು ಮುಖ್ಯವಾಗಿ ಕೃಷಿಪ್ರಧಾನವಾದ ನಾಡನ್ನಾಗಿಯೂ, ಪ್ರಪಂಚದಲ್ಲೇ ಅತ್ಯುತ್ತಮವಾದ ಜಲಸಂಪದ್ಭರಿತ ಪ್ರದೇಶವನ್ನಾಗಿಯೂ ಮಾಡುವ ಜಲಶಾಸ್ತ್ರೀಯ ಸಂನಿವೇಶಗಳನ್ನೊದಗಿಸಿವೆ. ಜನಗಣತಿಯ ವರದಿಗಳು ದೇಶದ ಜನಸಂಖ್ಯೆಯ ಶೇಕಡಾ ಎಪ್ಪತ್ತಮೂರರಷ್ಟು (೭೩%) ಜನರು ಜೀವಿಕೆಗಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ ಎಂದು ತಿಳಿಸುತ್ತವೆ. ಇಲ್ಲಿ ನಿಶ್ಚಯಿಸಲ್ಪಡಬಹುದಾದ ಇನ್ನೊಂದು ಅಂಶವೇನೆಂದರೆ, ಬ್ರಿಟಿಷ್ ಇಂಡಿಯಾದಲ್ಲಿ ಒಟ್ಟು ೨೨೬ ದಶಲಕ್ಷ ಎಕರೆಗಳಲ್ಲಿ ಕೃಷಿಗಾಗಿ ಬಿತ್ತನೆ ನಡೆಯುತ್ತಿದ್ದು, ಅದರಲ್ಲಿ ಕೇವಲ ೪೪ ದಶಲಕ್ಷ ಎಕರೆಗಳು ಮಾತ್ರ ಪ್ರಾಕೃತಿಕವಾದ ಜಲವಿತರಣೆಯನ್ನು ಹೊಂದಿರಲಿಲ್ಲ, ಅಷ್ಟಕ್ಕೆಮಾತ್ರ ಮನುಷ್ಯನ ಕೃತಕಯಂತ್ರಗಳಿಂದ ನೀರಾವರಿಯನ್ನು ಒದಗಿಸಬೇಕಾಗಿತ್ತು. ಹೀಗೆ ಪೂರ್ಣವಾಗಿ ಶೇಕಡಾ ಎಂಬತ್ತರಷ್ಟು ಬಿತ್ತನೆ ಪ್ರದೇಶವು ಭಾರತದ ನದಿಗಳಿಂದ ಜಲವಿತರಣೆಯನ್ನು ಪಡೆಯುತ್ತಿದ್ದು, ಅವುಗಳ

ಔದಾರ್ಯದಿಂದ ಸಮೃದ್ಧಿಯನ್ನು ಹೊಂದಿದೆ. ಈ ಭೌತಿಕ ಕಾರಣಗಳ ಕ್ರಿಯೆಯ ಪರಿಣಾಮವಾಗಿ ಒಂದು ಮೂಲಭೂತವಾದ ಹಾಗೂ ವಿಶಿಷ್ಟವಾದ ವಸ್ತುಸ್ಥಿತಿ ಎದ್ದುಕಾಣಿಸುತ್ತದೆ. ಅದೇನೆಂದರೆ ಭಾರತದ ನಾಗರಿಕತೆಯು ಬೆಳೆದದ್ದೂ ಸ್ಥಿರವಾಗಿ ನೆಲೆ ನಿಂತಿರುವುದೂ ಅಕ್ಕಿಯ ಮೇಲೆ ಮತ್ತು ರಾಷ್ಟ್ರೀಯ ಆಹಾರವು ವಾಸ್ತವದಲ್ಲಿ ಸಸ್ಯಾಹಾರವೇ ಆಗಿದೆ.

೩೩

ಪ್ರಪಂಚದ ಸಾಂಸ್ಕೃತಿಕ ಇತಿಹಾಸದಲ್ಲಿ ತನಗೆ ಭಗವಂತನಿಂದ ನಿಯಮಿಸಲ್ಪಟ್ಟ ಗುರಿಯನ್ನು ಸಫಲಗೊಳಿಸುವುದಕ್ಕಾಗಿ ತನ್ನ ವೈಶಿಷ್ಟ್ಯವನ್ನು ಕಾಣಲು, ಸಂರಕ್ಷಿಸಲು ಮತ್ತು ಉನ್ನತೀಕರಿಸಲು ಮತ್ತು ತನ್ನನ್ನು ಒಂದು ಘಟಕವನ್ನಾಗಿ ಸಾಕ್ಷಾತ್ಕರಿಸಿಕೊಳ್ಳಲು ಭಾರತವು ಭೌಗೋಳಿಕ ಸನ್ನಿವೇಶಗಳಿಂದಲೂ ಐತಿಹಾಸಿಕ ಅನುಭವಗಳಿಂದಲೂ ಧಾರ್ಮಿಕ ಮತ್ತು ರಾಜಕೀಯ ವಿಚಾರಗಳಿಂದಲೂ ಪ್ರಕೃತಿಯಿಂದಲೂ ಪೋಷಣೆಯಿಂದಲೂ ನೆರವನ್ನು ಪಡೆದುಕೊಂಡಿದೆ. ಮಾನವಕುಲದ ಚಿಂತನೆಯ ವಿಕಾಸದಲ್ಲಿ ಭಾರತೀಯ ಚಿಂತನೆಯು ವಿಶಿಷ್ಟ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ಮಾನವನ ಇತಿಹಾಸದಲ್ಲಿ ಭಾರತೀಯ ಜೀವನವು ಒಂದು ಮುಖ್ಯ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಭಾರತದ ಕೊಡುಗೆ ಇಲ್ಲದಿದ್ದರೆ, ಮಾನವನ ಸಂಸ್ಕೃತಿಯು ಅಪೂರ್ಣವೂ ಬಡಕಲೂ ಆಗಿಬಿಡುತ್ತಿತ್ತು. ಭಾರತ, ಜೀವಂತವೂ ಪುನರ್ಯೌವನಯುತವೂ ಆದ ಭಾರತ, ಅದರ ಸಂದೇಶ, ಅದರ ಸಂಸ್ಕೃತಿ ಮತ್ತು ಅದರ ಧರ್ಮ ಪ್ರಪಂಚಕ್ಕೆ ಬೇಕಾಗಿದೆ. ಏಕೆಂದರೆ ಭಾರತ ಪ್ರತಿನಿಧಿಸುವುದೇನು? ಶಾಶ್ವತ ನಗರಿಯಿಂದ ಪ್ರಯತ್ನಿಸಲ್ಪಟ್ಟ ವಿಶ್ವಸಾಮ್ರಾಜ್ಯವನ್ನಲ್ಲ. ಎಲ್ಲ ಚರ್ಚುಗಳ ತಾಯಿಯಂಥ ವಿಶ್ವ ಆಧ್ಯಾತ್ಮಿಕ ರಾಜ್ಯವನ್ನೂ ಅಲ್ಲ. ಪ್ರಪಂಚಕ್ಕೆ ಭಾರತದ ಕೊಡುಗೆ ಒಂದು ನ್ಯಾಯಯುತ ಸಾಮ್ರಾಜ್ಯದ ಸಂರಚನೆ[೧೪೧], ವಿಶ್ವಶಾಂತಿಯ ಮತ್ತು ಅಹಿಂಸೆಯ ಬುನಾದಿಯ ಮೇಲೆ ಕಟ್ಟಿದ ರಾಷ್ಟ್ರೀಯತೆ. ಮನುಷ್ಯ–ಮನುಷ್ಯರ ನಡುವೆ, ಮನುಷ್ಯನ ಮತ್ತು ಸಜೀವವಾದ ಪ್ರತಿಯೊಂದು ಪ್ರಾಣಿಯ ನಡುವೆ ಇರಬೇಕಾದ ಶಾಂತಿ. ಒಂದು ಸಂರಚನೆ, ಅಯ್ಯೋ, ಯಾವ ಸಂರಚನೆಯನ್ನು ಐತಿಹಾಸಿಕ ಸೈನ್ಯಗಳ ಘರ್ಷಣೆಯೂ ಆಘಾತವೂ ನಿರ್ದಯವಾಗಿ ಚೂರುಚೂರು ಮಾಡಿದುವೋ, ಆ ರಚನೆ. ಪ್ರಾಯಶಃ ಸಮಸ್ತ ಇತಿಹಾಸದ ಆದಿಕರ್ತನು ಈ ಪ್ರಪಂಚವು ಯಾತನಾಮಯವಾದ ಐತಿಹಾಸಿಕ ಬೆಳವಣಿಗೆಯ ಪ್ರಕ್ರಿಯೆಯ ಮೂಲಕ, ಪಶುವಿನಿಂದ ಮಾನವನ ಸ್ಥಿತಿಗೆ ಸಾಗಿ ಹೋಗಬೇಕು ಎಂದು ಆದೇಶಿಸಿರಬೇಕು.

ಐತಿಹಾಸಿಕ ರಾಷ್ಟ್ರೀಯತೆಗಳ ಮತ್ತು ತುಂಬುತ್ತಿರುವ ಕೋಟೆಗಳ ಹಿನ್ನೆಲೆಯಲ್ಲಿ ಏಕಾಕಿಯಾಗಿ ನಿಂತುಕೊಂಡು ಭೂಮಂಡಲದ ಎಲ್ಲ ಪ್ರಬಲತಮ ರಾಷ್ಟ್ರಗಳಿಗೂ ಆತ್ಮದ ಸಂಸ್ಕೃತಿಯ ಕರೆಯನ್ನು ಕೊಡುತ್ತಿದೆ; ಅವರ ಗರ್ವ ಮತ್ತು ದ್ವೇಷಗಳನ್ನು ಕೆಳಗೆ ತಳ್ಳಲು, ಅವರ ರಾಜದಂಡಗಳನ್ನೂ ಖಡ್ಗಗಳನ್ನೂ ಕೆಳಗಿಳಿಸಲು, ಎಲ್ಲರನ್ನೂ ಮುಕ್ತಗೊಳಿಸುವ ದೈನ್ಯ–ಪ್ರೀತಿ–ತ್ಯಾಗಗಳಿಂದ ಪುನರ್ಬರ್ಬರೀಕರಣದ ಶಕ್ತಿಗಳನ್ನು ಒಗ್ಗಟ್ಟಿನಿಂದ ಎದುರಿಸಿ ಹೋರಾಡಲು ಕರೆಯನ್ನು ನೀಡುತ್ತಿದೆ; ಆ ಬರ್ಬರ ಶಕ್ತಿಗಳು ಸಮಗ್ರ ಭೂಖಂಡಗಳನ್ನು ಶಸ್ತ್ರಸಜ್ಜಿತ ದ್ವೇಷಭರಿತ ಸೇನಾನಿವೇಶಗಳನ್ನಾಗಿ ಪರಿವರ್ತಿಸುತ್ತಿವೆ. ಭಾರತ ದೇಶದ ಆತ್ಮಸಂಸ್ಕೃತಿಯಲ್ಲೇ ಎಲ್ಲಾ ರಾಷ್ಟ್ರಗಳೂ, ವ್ಯಕ್ತಿಗಳಂತೆಯೇ, ವಿಶ್ರಾಂತಿಯನ್ನೂ ಶಾಂತಿಯನ್ನೂ ಕಂಡು ಕೊಳ್ಳುವುವು; ತನ್ಮೂಲಕವಾಗಿಯೇ, ಜಗತ್ತಿನ ರಾಷ್ಟ್ರಗಳ ಒಕ್ಕೂಟದ ಅಥವಾ ಸಕಲ ಮಾನವರ ಸಂಸತ್ತಿನ ಪ್ರಜಾತಂತ್ರಾತ್ಮಕ ಕನಸನ್ನು ನನಸಾಗಿ ಮಾಡಬಲ್ಲವು.[೧೪೨]

* * * *

ಟಿಪ್ಪಣಿಗಳು

೧. ಇವು ವಿಭಜನಾಪೂರ್ವದ ಅವಿಭಕ್ತ ಭಾರತಕ್ಕೆ ಸಂಬಂಧಿಸಿವೆ.

೨. *ಇಂಪೀರಿಯಲ್ ಗೆಜೆಟಿಯರ್*, ಹೊಸ ಸಂಸ್ಕರಣ, ಸಂಪುಟ ೧, ಪು.೧೫೭.

೩. ಅದೇ ಪು.೨೧೩

೪. ಡಾ. ಕಲ್ಪ್ ಅವರು ಹೇಳುವ ಪ್ರಕಾರ, ಸಮಗ್ರ ಭಾರತದಲ್ಲಿ ಮತ್ತು ಅದರ ಸೀಮಾ ಪ್ರದೇಶಗಳಲ್ಲಿ ಸಂಸ್ಕಾರ ಸಂಪನ್ನವಾದ ಅಥವಾ ಹಾಗಲ್ಲದ ೫೪೫ಕ್ಕೆ ಕಡಿಮೆ ಇಲ್ಲದ ಭಾಷೆಗಳಿವೆ.

೫. ಈ ಐಕ್ಯಭಾವನೆಯ ಒಂದು ಅಂಶವನ್ನು ಮೋನಿಯರ್ ವಿಲಿಯಮ್ಸ್ ಈ ರೀತಿಯಾಗಿ ವಿವರಿಸಿದ್ದಾನೆ (*Hinduism*, p.13): "ಇಂಡಿಯಾದೇಶದಲ್ಲಿ, ನಾವು ಈಗಾಗಲೇ ನೋಡಿರುವಂತೆ, ಐನೂರಕ್ಕಿಂತಲೂ ಹೆಚ್ಚು ಭಾಷೆಗಳಿದ್ದರೂ, ಅವರಲ್ಲಿರುವ ಪವಿತ್ರ ಭಾಷೆ ಮತ್ತು ಪವಿತ್ರ ಸಾಹಿತ್ಯ ಒಂದೇ, ಅದು ಹಿಂದೂಧರ್ಮದ ಎಲ್ಲ ಅನುಯಾಯಿಗಳಿಂದ, ಅವರ ವಂಶ, ಆಡುವ ಭಾಷೆ, ಸಾಮಾಜಿಕ ಅಂತಸ್ತು ಮತ್ತು ಪಂಗಡಗಳು ಬೇರೆಬೇರೆಯಾಗಿದ್ದರೂ, ಅಂಗೀಕೃತವಾಗಿದೆ. ಆ ಭಾಷೆ ಸಂಸ್ಕೃತ ಮತ್ತು ಆ ಸಾಹಿತ್ಯ ಸಂಸ್ಕೃತ ಸಾಹಿತ್ಯ. ಅದು ವೇದ ಅಥವಾ ಜ್ಞಾನದ ನಿಧಿ, ಆ ಶಬ್ದದ ವಿಶಾಲಾರ್ಥದಲ್ಲಿ. ಆ ಭಾಷೆಯೇ ಹಿಂದೂ ದೇವತಾವಾದದ, ದರ್ಶನದ, ಸ್ಮೃತಿಗಳ ಮತ್ತು ಪುರಾಣಗಳ ವಾಹಕ, ಹಿಂದುಗಳ ಎಲ್ಲ ಪಂಗಡಗಳೂ, ಅಭಿಪ್ರಾಯಗಳೂ, ಸಂಪ್ರದಾಯಗಳೂ ಮತ್ತು ಪ್ರಯೋಗಗಳೂ ಪ್ರತಿಫಲಿತವಾಗಿರುವ ಏಕೈಕ ದರ್ಪಣ. ಮತ್ತು (ನಮಗೆ ನಾಲ್ಕನೆಯ ರೂಪಕವು ಅನುಮತವಾದರೆ) ದೇಶಭಾಷೆಗಳನ್ನು ಸಂಪದ್ಭರಿತವಾಗಿ ಮಾಡಲು ಮತ್ತು ಮುಖ್ಯವಾದ ಧಾರ್ಮಿಕ ಮತ್ತು ವೈಜ್ಞಾನಿಕ ವಿಚಾರಗಳನ್ನು ವ್ಯಕ್ತಪಡಿಸಲು ಆವಶ್ಯಕವಾದ ಮೂಲವಸ್ತುಗಳನ್ನು ಪಡೆದುಕೊಳ್ಳಲು ಇರುವ ಏಕೈಕ ಗಣಿ."

೬. ಇಂಡಿಯಾ ದೇಶವನ್ನು ಮೂಲತಃ ಜಂಬೂದ್ವೀಪವೆಂದು ಕರೆಯುತ್ತಿದ್ದರು. ಅಶೋಕನ ಕಾಲದಲ್ಲೂ ಈ ಹೆಸರು ಬಳಕೆಯಲ್ಲಿತ್ತು. ಬೌದ್ಧಗ್ರಂಥಗಳಲ್ಲಿ ಅವನನ್ನು ಜಂಬೂದ್ವೀಪದ ದೊರೆ ಎಂದು ಅನೇಕಬಾರಿ ಹೇಳಲಾಗಿದೆ. ಪಾಲವಂಶದ ಕೆಲವರು ದೊರೆಗಳೂ ತಮ್ಮ ಶಾಸನಗಳಲ್ಲಿ ತಮ್ಮನ್ನು ಜಂಬೂದ್ವೀಪದ ರಾಜರೆಂದು ಕರೆದುಕೊಂಡಿದ್ದಾರೆ. ಜಂಬೂದ್ವೀಪ ಎಂಬ ಹೆಸರಿಗೆ ಭೌಗೋಳಿಕವಾದ ಹಿನ್ನೆಲೆಯಿದೆ, ಆದರೆ ಭಾರತವರ್ಷ ಎಂಬ ಹೆಸರಿನಲ್ಲಿ ಸಮಗ್ರ ಭಾರತವು ಒಬ್ಬ ರಾಜನಿಂದ ಆಳಲ್ಪಡುತ್ತಿತ್ತು ಎಂಬ ವಿಚಾರವನ್ನು ಸೂಚಿಸುವ ರಾಜಕೀಯ ಹಿನ್ನೆಲೆಯಿದೆ. (ಈ ಶಬ್ದದ ನಿಷ್ಪತ್ತಿಯ ಪ್ರಾಮುಖ್ಯವನ್ನು ತಿಳಿಯಲು ಪುರಾಣಗಳನ್ನು ನೋಡಬೇಕು.) ಆರ್ಯರಿಂದ ಜಯಿಸಲ್ಪಟ್ಟ ಅಥವಾ ವಸಾಹತಾಗಿ ಮಾಡಿಕೊಳ್ಳಲ್ಪಟ್ಟ ಪ್ರದೇಶಕ್ಕೆ ಜಂಬೂದ್ವೀಪ ಮತ್ತು ಭಾರತವರ್ಷ ಎಂಬ ಎರಡು ಹೆಸರುಗಳೂ ಅನ್ವಯವುಳ್ಳದ್ದಾದರೂ ಅನಂತರ ಕಾಲದಲ್ಲಿ ವಿಜಯಯಾತ್ರೆಗಳಿಂದ ಸೇರಿಕೊಂಡ ಪ್ರದೇಶಗಳೂ ಈ ಸಾಮಾನ್ಯ ನಾಮಧೇಯಗಳಿಂದ ಪ್ರಸಿದ್ಧವಾದುವು. ಆದರೂ ಮುಖ್ಯಭೂಭಾಗಕ್ಕೆ ಸೇರಿಕೊಂಡ ಪ್ರದೇಶಗಳು ಭಾರತವರ್ಷವೆಂಬ ಹೆಸರಿನಿಂದಲೇ ಪ್ರಸಿದ್ಧವಾದುವು.

೭. III.೩೩

೮. ಪಂಜಿಕಾ VIII: "ಏತೇನ ಹ ವಾ ಐಂದ್ರೇಣ ಮಹಾಭಿಷೇಕೇಣ ದೀರ್ಘತಮಾ ಮಾಮತೇಯಃ ದೌಷ್ಮಂತಿಂ ಭರತಮ್ ಅಭಿಷಿಷೇಚ। ತಸಾದು ದೌಷ್ಮಂತಿಃ ಭರತಃ ಸಮಂತಂ ಸರ್ವತಃ ಪೃಥಿವೀಂ ಜಯನ್ ಪರೀಯಾಯ ಅಶ್ವೈಃ ಉಚ ಮೇಧ್ಯೈರೀಜೇ" ಇತ್ಯಾದಿ.

೯. ಪ್ರೊ ಬಿನೊಯ್ ಕುಮಾರ್ ಸರ್ಕಾರ್ ಎಂ.ಎ. ಅವರು ತಮ್ಮ '*edogogy of the Hindus*' ಎಂಬ ಲೇಖದಲ್ಲಿ ಗುರುತಿಸಿ ಸೂಚಿಸಿರುವಂತೆ, ಈ ಸಂಶ್ಲೇಷಣಾತ್ಮಕ ಸಂಕೀರ್ಣ ಭಾರತೀಯ ಸಂಸ್ಕೃತಿಯು ಭಾರತದ ವಿದ್ಯಾಭ್ಯಾಸ ಕ್ರಮದ ಫಲ. ಈ ವಿದ್ಯಾಭ್ಯಾಸಕ್ರಮವು ಎಲ್ಲ ಕಾಲಗಳಲ್ಲಿದ್ದ ರಾಷ್ಟ್ರೀಯ ಆವಶ್ಯಕತೆಗಳಿಗೆ ತನ್ನನ್ನು ಒಗ್ಗಿಸಿಕೊಂಡಿತ್ತು. ಸರ್ಕಾರ್ ಅವರು ಹೀಗೆ ವಾದಿಸುತ್ತಾರೆ: ಬೇರೆ ಬೇರೆ ಕಾಲಗಳಲ್ಲೂ ಪ್ರಾಂತಗಳಲ್ಲೂ ಜನರ ಆವಶ್ಯಕತೆಗಳಿಗೆ ಅನುಗುಣವಾಗಿ ಬಹುಸಂಖ್ಯೆಯ ಪುರಾಣಗಳೂ ಸಂಹಿತೆಗಳೂ ತಂತ್ರಗಳೂ ಪರಿವರ್ತಿತ ರೂಪಗಳಲ್ಲಿ ಹುಟ್ಟಿದುದನ್ನು ಬೇರೆ ಯಾವ ರೀತಿಯಲ್ಲಿ ವಿವರಿಸಲು ಸಾಧ್ಯ? ಈ ಸಮಾಜದ ನೇತಾರರು ಮನಃಶಾಸ್ತ್ರದಲ್ಲೂ ಸಮಾಜವಿಜ್ಞಾನದಲ್ಲೂ ಪರಿಣತರಾಗಿದ್ದುದರಿಂದ ಈ ದೇಶದಲ್ಲಿ ಪ್ರಚಲಿತವಾಗಿದ್ದ ಮೂಢನಂಬಿಕೆಗಳನ್ನೂ ಯಾಂತ್ರಿಕ ಆಚರಣೆಗಳನ್ನೂ ಸಮಾರಂಭಗಳನ್ನೂ ವಿಭಿನ್ನ ಧಾರ್ಮಿಕ ಸಂಪ್ರದಾಯಗಳನ್ನೂ ಪೌರಾಣಿಕ ಭಾವನೆಗಳನ್ನೂ ಅವರು ಕಡೆಗಣಿಸಲಿಲ್ಲ. ಅದರ ಬದಲಾಗಿ ವೈವಿಧ್ಯವುಳ್ಳ ಆತ್ಮಯಾನಶಾಸ್ತ್ರವನ್ನೂ (eschatology), ವೈವಿಧ್ಯವುಳ್ಳ ಪುರಾಣಸಾಹಿತ್ಯವನ್ನೂ ವೈವಿಧ್ಯವುಳ್ಳ ಧಾರ್ಮಿಕ ವ್ಯವಸ್ಥೆಯನ್ನೂ ಜನರ ವಿವಿಧವಾದ ಭೌಗೋಳಿಕ ಮತ್ತು ಐತಿಹಾಸಿಕ ಸ್ಥಿತಿಗೆ ಅನುಗುಣವಾಗಿ ಬೆಳೆಸಿದರು.

೧೦. *ಋಗ್ವೇದ* X.೭೫.೫

೧೧. ಶುತುದ್ರಿ = ಸಟ್ಲೆಜ್; ಪರುಷ್ಣೀ = ರಾವೀ
ಅಸಿಕ್ನೀ = ಚೀನಾಬ್; ಮರುದ್‌ವೃಧಾ = ಅಕೇಸೈನ್ಸ್ ಮತ್ತು ಹೈದಾಸ್ಪಸ್ ಹೊಳೆಗಳ ಸಂಯುಕ್ತ ನದೀಪ್ರವಾಹ.
ವಿತಸ್ತಾ = ಗ್ರೀಕ್ ಹೈದ್ರಾಸ್ಪಸ್ = ಜೀಲಮ್
ಆರ್ಜಿಕೀಯಾ = ವಿಪಾಶಾ (ಯಾಸ್ಕನು ಹೇಳುವಂತೆ)
ಇದು ಇಂದಿನ ಬಿಯಾಸ್
ಸುಷೋಮಾ = ಸಿಂಧು (ಯಾಸ್ಕನು ಹೇಳುವಂತೆ) (ಭೂಪಟವನ್ನು ನೋಡಿರಿ).

೧೨. ಸಪ್ತಸಿಂಧು (ಏಳು ನದಿಗಳ ನಾಡು) ಎಂಬ ಶಬ್ದವನ್ನು ವೇದಕಾಲದ ಸಮಗ್ರ ಭಾರತಕ್ಕೆ ಅನ್ವಯಿಸಲಾಗುತ್ತದೆ. (*ಋಗ್ವೇದ* VIII.೨೪, ೨೭) ಹೀಗೆ ಸಪ್ತ ಸಿಂಧು ಎಂಬುದೂ ದೇಶದ ಭೌಗೋಳಿಕ ಏಕತೆಯ ಇನ್ನೊಂದು ಅಭಿವ್ಯಕ್ತಿ. ಪಂಜಾಬಿನ ವೈದಿಕ ವರ್ಣನೆಯ ಇತಿಹಾಸ ಪ್ರತಿರೂಪವು ಮಹಾಭಾರತದ ಕರ್ಣಪರ್ವದ ನಲವತ್ತನಾಲ್ಕನೆಯ ಅಧ್ಯಾಯದ ಒಂದು ಶ್ಲೋಕ

ಶತದ್ರುಶ್ಚ ವಿಪಾಶಾ ಚ ತೃತೀಯೈರಾವತೀ ತಥಾ।
ಚಂದ್ರಭಾಗಾ ವಿತಸ್ತಾ ಚ ಸಿಂಧುಃ ಷಷ್ಠಾ ಬಹಿರ್ಗಿರೇಃ॥

೧೩. ಮಾನವಧರ್ಮಸೂತ್ರಕ್ಕೆ ಹೊಂದಿಕೊಳ್ಳುವಂತೆ ವಸಿಷ್ಠ ಧರ್ಮಸೂತ್ರವೂ (೧.೯) ಆರ್ಯಾವರ್ತವನ್ನು ವಿಂಧ್ಯ ಮತ್ತು ಹಿಮಾಲಯಗಳ ನಡುವೆ ಇರುವ ಪ್ರದೇಶವೆಂದು ಹೇಳಿದೆ. ಕೌಶೀತಕೀ ಉಪನಿಷತ್ತಿನಲ್ಲೂ (ii–೧೩) ಆರ್ಯರ ಜಗತ್ತಿಗೆ ಈ ಎರಡು ಪರ್ವತ ಶ್ರೇಣಿಗಳೇ ಎಲ್ಲೆಗಳಾಗಿದ್ದುವೆಂದು ತೋರುತ್ತದೆ. ರಾಜಶೇಖರ ಕವಿಯ ಬಾಲರಾಮಾಯಣವು ಆರ್ಯಾವರ್ತ ಮತ್ತು ದಕ್ಷಿಣಾಪಥಗಳನ್ನು ವಿಂಗಡಿಸುವ ಸೀಮಾರೇಖೆ ನರ್ಮದಾ ನದೀ ಎಂದು ಹೇಳುತ್ತದೆ.

೧೪. ಶಿವಪುರಾಣದಲ್ಲಿರುವ (II.xii) ಸಪ್ತಗಂಗೆಗಳ ವಚನವನ್ನು ಈ ಸಂದರ್ಭದಲ್ಲಿ ನಾವು ಹೋಲಿಸಿ ನೋಡಬಹುದು. ಅವು ಯಾವುವೆಂದರೆ– ಗಂಗಾ, ಗೋದಾವರೀ, ಕಾವೇರೀ, ತಾಮ್ರಪರ್ಣೀ, ಸಿಂಧು, ಸರಯೂ ಮತ್ತು ರೇವಾ.

೧೫. ಈ ಶ್ಲೋಕವು ಮಹಾಭಾರತ, ಭೀಷ್ಮಪರ್ವ, ಒಂಬತ್ತನೆಯ ಅಧ್ಯಾಯದಲ್ಲಿಯೂ ಕಂಡುಬರುತ್ತದೆ.

೧೬. ಮಹೇಂದ್ರ=ಗಂಜಾಂ ಮತ್ತು ಪೂರ್ವಘಟ್ಟಗಳಲ್ಲಿರುವ ಮಹೇಂದ್ರಮಲೈ ಎಂಬ ಬೆಟ್ಟ; ರಾಮನಿಂದ ಪರಾಜಿತನಾದ ಪರಶುರಾಮನು ಇಲ್ಲಿಗೆ ಹೋಗಿ ವಿಶ್ರಾಂತನಾದ. ಮಲಯ=ಪಶ್ಚಿಮಘಟ್ಟಗಳ ದಕ್ಷಿಣ ಭಾಗ. ಸಹ್ಯ=ಪಶ್ಚಿಮ ಘಟ್ಟಗಳ ಉತ್ತರಭಾಗ; ಋಕ್ಷಪರ್ವತ=ವಿಂಧ್ಯ ಪರ್ವತ ಶ್ರೇಣಿಯ ಪೂರ್ವಭಾಗ,

ಗೋಂಡವನದ ಬೆಟ್ಟಗಳು. ಪಾರಿಪಾತ್ರ ಅಥವಾ ಪಾರಿಯಾತ್ರ=ವಿಂಧ್ಯದ ಪಶ್ಚಿಮ ಭಾಗ, ಇದರಲ್ಲಿ ಆರಾವಳೀ ಬೆಟ್ಟಗಳೂ ಸೇರಿವೆ. ಭೂಪಟವನ್ನು ನೋಡಿರಿ.

೧೭. ಇಲ್ಲಿ ಉಕ್ತವಾಗಿರುವ ಏಳು ಪವಿತ್ರ ಸ್ಥಳಗಳು–
ಅಯೋಧ್ಯಾ, ಮಥುರಾ, ಮಾಯಾ ಅಥವಾ ಹರಿದ್ವಾರ, ಕಾಶೀ ಅಥವಾ ವಾರಾಣಸೀ, ಕಾಂಚೀ, ಅವಂತೀ ಅಥವಾ ಉಜ್ಜಯಿನೀ, ದ್ವಾರಾವತೀ ಎಂದರೆ ಗುಜರಾತಿನಲ್ಲಿರುವ ದ್ವಾರಕಾ.

೧೮. ಈ ಪವಿತ್ರ ಸ್ಥಳಗಳು ಉತ್ತರದಲ್ಲಿರುವ ಬದರೀ ಕೇದಾರನಾಥ, ದಕ್ಷಿಣದಲ್ಲಿರುವ ರಾಮೇಶ್ವರ, ಪಶ್ಚಿಮದಲ್ಲಿರುವ ದ್ವಾರಕಾ ಮತ್ತು ಪೂರ್ವದಲ್ಲಿರುವ ಜಗನ್ನಾಥಪುರೀ.

೧೯. ದೇವೀಗೀತದ ಎಂಟನೆಯ ಅಧ್ಯಾಯವು ದೇವಿಗೆ ಅಥವ ದುರ್ಗೆಗೆ ಪವಿತ್ರವಾದ ಭಾರತದಲ್ಲೆಲ್ಲ ಹರಡಿರುವ ವಿವಿಧ ಸ್ಥಳಗಳನ್ನು ಹೆಸರಿಸಿದೆ.

೨೦. ಅಥರ್ವವೇದ XII.೨ "ನಾನಾವೀರ್ಯಾ ಮೌಷಧೀಯಾಂ ಬಿಭರ್ತಿ."

೨೧. ಅಥರ್ವವೇದ XII.೩ "ಯಸ್ಯಾಂ ಸಮುದ್ರ ಉತ ಸಿಂಧುರಾಪೋ ಯಸ್ಯಾಮನ್ನಂ ಕೃಷ್ಟಯಃ ಸಂಬಭೂವುಃ"

೨೨. *ಅಥರ್ವವೇದ* XII.೫ "ಯಸ್ಯಾಂ ಪೂರ್ವೇ ಪೂರ್ವಜನಾ ವಿಚಕ್ರಿರೇ ಯಸ್ಯಾಂ ದೇವಾ ಅಸುರಾನಭ್ಯವರ್ತಯನ್."

೨೩. *ಅಥರ್ವವೇದ* XII.೧೧ "ಗಿರಯಸ್ತೇ ಪರ್ವತಾ ಹಿಮವಂತೋಽ ಅರಣ್ಯಂತೇ ಪೃಥಿವಿನ್ಯೋ ನಮಸ್ತು."

೨೪. *ಅಥರ್ವವೇದ* XII.೧.೨೨ "ಭೂಮ್ಯಾಂ ದೇವೇಭ್ಯೋ ದದತಿ ಯಜ್ಞ ಹವ್ಯಮರಂ ಕೃತಮ್."

೨೫. *ಅಥರ್ವವೇದ* XII.೧.೪೧

ಯಸ್ಯಾಂ ಗಾಯಂತಿ ನೃತ್ಯಂತಿ ಭೂಮ್ಯಾಂ ಮರ್ತ್ಯಾ ವ್ಯೈಲವಾಃ। (?)
ಯುಧ್ಯಂತೇ ಯಸ್ಯಾಮಾಕ್ರಂದೋ ಯಸ್ಯಾಂ ವದತಿ ದುಂದುಭಿಃ॥

ಮನು II.೧೭ "ತಂ ದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ"
ವಿಷ್ಣುಪುರಾಣ II. iii–೨೪

ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ತೇ ಭಾರತಭೂಮಿಭಾಗೇ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ
ಭವಂತಿ ಭೂಯಃ ಪುರುಷಾಃ ಸುರತ್ವಾತ್॥

[ದೇವತೆಗಳೂ ಭಾರತವರ್ಷದ ಬಗೆಗೆ ಗೀತೆಗಳನ್ನು ಹಾಡುತ್ತಾರೆ. ಭಾರತದ ಭೂಮಿಯಲ್ಲಿ ಹುಟ್ಟಿದವರು ಧನ್ಯರು. ಸ್ವರ್ಗಕ್ಕೂ ಅಪವರ್ಗ(ಮೋಕ್ಷ)ಕ್ಕೂ ಆ ನೆಲವೇ ಮಾರ್ಗ. ದೇವತ್ವಕ್ಕಿಂತಲೂ ಇಲ್ಲಿ ಮನುಷ್ಯರಾಗುವುದು ಉತ್ತಮ.]

ಅಹೋ ಅಮೀಷಾಂ ಕಿಮಕಾರಿ ಶೋಭನಂ
ಪ್ರಸನ್ನ ಏಷಾಂ ಸ್ವಿದುತ ಸ್ವಯಂ ಹರಿಃ।
ಯೈರ್ಜನ್ಮ ಲಬ್ಧ ನೃಷು ಭಾರತಾಜಿರೇ
ಮುಕುಂದಸೇವೋಪಯಿಕಂ ಸ್ಪೃಹಾ ಹಿ ನಃ॥ ೨೦

(ಆಹಾ, ಭಗವಾನ್ ಹರಿಯೇ ಇವರಲ್ಲಿ ಪ್ರಸನ್ನನಾಗಿದ್ದಾನೆ. ಇವರು ಎಂಥ ಒಳ್ಳೆಯ ಕರ್ಮಗಳನ್ನು ಮಾಡಿದ್ದರೋ? ಮುಕುಂದನ ಸೇವೆಗೆ ಅನುಕೂಲವಾದ ಭಾರತದೇಶದಲ್ಲಿ ಮನುಷ್ಯರಾಗಿ ಇವರು ಜನ್ಮವನ್ನು ಪಡೆದರಲ್ಲ! ನಮಗೂ ಅದೇ ಆಸೆ.)

ಯದ್ಯತ್ರ ನಃ ಸ್ವರ್ಗಸುಖಾವಶೇಷಿತಂ
ಸ್ವಿಷ್ಟಸ್ಯ ಸೂಕ್ತಸ್ಯ ಕೃತಸ್ಯ ಶೋಭನಮ್।
ತೇನಾಜನಾಭೇ ಸ್ಮೃತಿಮಜ್ಜನ್ಮ ನಃ ಸ್ಯಾದ್
ವರ್ಷೇ ಹರಿರ್ಯದ್ ಭಜತಾಂ ಶಂ ತನೋತಿ॥

(ಬ್ರಹ್ಮನಿಗೆ ಜನ್ಮವನ್ನು ಕೊಟ್ಟ ನಾಭಿಕಮಲವನ್ನುಳ್ಳ ಹರಿಯೇ, ನಮ್ಮ ಹಿಂದಿನ ಸುಕೃತಗಳ ಫಲವಾಗಿ ಅನುಭವಿಸಬೇಕಾದ ಸುಖವು ಉಳಿದಿದ್ದರೆ, ಹರಿಯು ಎಲ್ಲ ಶುಭಗಳನ್ನೂ ಅನುಗ್ರಹಿಸುವ ಭಾರತವರ್ಷದಲ್ಲಿ ನಾವು ಜನ್ಮವನ್ನು ಆ ಸುಕೃತಗಳಿಂದ ಪಡೆಯುವಂತಾಗಲಿ.)

೨೫ಎ. ಹೋಲಿಸಿ: ಸೋದರಿ ನಿವೇದಿತಾ ಅವರ *The Web of Indian Life,* ಪುಟ ೨೪೧.

೨೬. ಗರುಡಪುರಾಣವು ಭಾರತದ ಹಿಂದೂ ಪವಿತ್ರ ಸ್ಥಳಗಳ ಅಧಿಕೃತ ಪಟ್ಟಿಗಳನ್ನು ಸಂರಕ್ಷಿಸಿದೆ. ಅರವತ್ತಾರನೆಯ ಅಧ್ಯಾಯದಲ್ಲಿರುವ ಈ ಪಟ್ಟಿಯು ಪ್ರಧಾನವಾದ ಪವಿತ್ರ ಸ್ಥಳಗಳನ್ನು ಹೀಗೆ ಗುರುತಿಸಿದೆ–

ಶಾಲಗ್ರಾಮೋ ದ್ವಾರಕಾ ಚ ನೈಮಿಷಂ ಪುಷ್ಕರಂ ಗಯಾ।
ವಾರಾಣಸೀ ಪ್ರಯಾಗಂ ಚ ಕುರುಕ್ಷೇತ್ರಂ ಚ ಸೂಕರಮ್॥
ಗಂಗಾ ಚ ನರ್ಮದಾ ಗೋದಾ ಚಂದ್ರಭಾಗಾ ಸರಸ್ವತೀ।
ಶ್ರೀಕ್ಷೇತ್ರಂ ಚ ಮಹಾಕಾಲಸ್ತೀರ್ಥಾನ್ಯೇತಾನಿ ಶಂಕರ॥
ಸರ್ವಪಾಪಹರಾಣ್ಯೇವ ಭುಕ್ತಿಮುಕ್ತಿಪ್ರದಾನಿ ವೈ॥

ಯಾತ್ರಿಕರಿಗೆ ಭುಕ್ತಿಯನ್ನೂ (ಲೌಕಿಕ ಸುಖವನ್ನೂ), ಮುಕ್ತಿಯನ್ನೂ (ಮೋಕ್ಷವನ್ನೂ) ಕೊಡುವ ಮತ್ತು ಎಲ್ಲ ಪಾಪಗಳನ್ನು ನಿವಾರಿಸುವ ಕ್ಷೇತ್ರಗಳಿವು:

ಶಾಲಗ್ರಾಮ, ದ್ವಾರಕಾ, ನೈಮಿಷ, ಪುಷ್ಕರ, ಗಯಾ, ವಾರಾಣಸೀ, ಪ್ರಯಾಗ, ಕುರುಕ್ಷೇತ್ರ, ಸೂಕರ, ಗಂಗಾ, ನರ್ಮದಾ, ಗೋದಾವರೀ, ಚಂದ್ರಭಾಗಾ, ಸರಸ್ವತೀ ಎಂಬ ನದಿಗಳು, ಶ್ರೀಕ್ಷೇತ್ರ ಮತ್ತು ಮಹಾಕಾಲ.

ಆದರೆ ಪ್ರಾಯಶಃ ಅತ್ಯುತ್ತಮವೂ ಮತ್ತು ಹೆಚ್ಚು ವ್ಯಾಪಕವೂ ಆದ ಪವಿತ್ರ ಸ್ಥಳಗಳ ಸಂಖ್ಯಾನವು (ಎಣಿಕೆಯು) ಎಂಬತ್ತೊಂದನೆಯ ಅಧ್ಯಾಯದಲ್ಲಿ ಇದೆ. ಕೆಳಗೆ ಕೊಟ್ಟಿರುವ ಶ್ಲೋಕಗಳಲ್ಲಿ ಅದು ಹಿಮಾಲಯದಿಂದ ಕನ್ಯಾಕುಮಾರಿ ಭೂಶಿರದವರೆಗೆ ಇರುವ ಸಂಪೂರ್ಣ ಭೂಖಂಡವನ್ನು ಅವಲೋಕಿಸುತ್ತದೆ:

ಸರ್ವತೀರ್ಥಾನಿ ವಕ್ಷ್ಯಾಮಿ ಗಂಗಾತೀರ್ಥೋತ್ತಮೋತ್ತಮಾ।
ಸರ್ವತ್ರ ಸುಲಭಾ ಗಂಗಾ ತ್ರಿಷು ಸ್ಥಾನೇಷು ದುರ್ಲಭಾ॥
ಹರಿದ್ವಾರೇ ಪ್ರಯಾಗೇ ಚ ಗಂಗಾಸಾಗರ ಸಂಗಮೇ।
ಪ್ರಯಾಗಂ ಪರಮಂ ತೀರ್ಥಂ ಮೃತಾನಾಂ ಭುಕ್ತಿಮುಕ್ತಿದಮ್।
ಸೇವನಾತ್ ಕೃತಪಿಂಡಾನಾಂ ಪಾಪಮಿತ್ ಕಾಮದಂ ನೃಣಾಮ್।
ವಾರಾಣಸೀ ಪರಂ ತೀರ್ಥಂ ವಿಶ್ವೇಶೋ ಯತ್ರ ಕೇಶವಃ।
ಕುರುಕ್ಷೇತ್ರಂ ಪರಂ ತೀರ್ಥಂ ದಾನಾದ್ಯೈರ್ಭುಕ್ತಿಮುಕ್ತಿದಮ್।
ಪ್ರಭಾಸಂ ಪರಮಂ ತೀರ್ಥಂ ಸೋಮನಾಥೋ ಹಿ ಯತ್ರ ಚ॥
ದ್ವಾರಕಾ ಚ ಪುರೀ ರಮ್ಯಾ ಭುಕ್ತಿ ಮುಕ್ತಿ ಪ್ರದಾಯಿಕಾ।
ಪ್ರಾಚೀ ಸರಸ್ವತೀ ಪುಣ್ಯಾ ಸಪ್ತಸಾರಸ್ವತಃ ಪರಮ್॥
ಕೇದಾರಂ ಸರ್ವಪಾಪಘ್ನಂ ಶಂಭಲಗ್ರಾಮ ಉತ್ತಮಮ್।
ನರನಾರಾಯಣಂ ತೀರ್ಥಂ ಮುಕ್ತ್ಯೈ ಬದರಿಕಾಶ್ರಮಮ್॥
ಶ್ವೇತದ್ವೀಪಂ ಪುರೀ ಮಾಯಾ ನೈಮಿಷಂ ಪುಷ್ಕರಂ ಪರಮ್।
ಅಯೋಧ್ಯಾ ಚಾರ್ಯತೀರ್ಥಂ ತು ಚಿತ್ರಕೂಟಂ ಚ ಗೋಮತೀಮ್॥
ವೈನಾಯಕಂ ಮಹಾತೀರ್ಥಂ ರಾಮಗಿರ್ಯಾಶ್ರಮಂ ಪರಮ್।
ಕಾಂಚೀಪುರೀ ತುಂಗಭದ್ರಾ ಶ್ರೀಶೈಲಂ ಸೇತುಬಂಧನಮ್।
ರಾಮೇಶ್ವರಂ ಪರಂ ತೀರ್ಥಂ ಕಾರ್ತಿಕೇಯಂ ತಥೋತ್ತಮಮ್॥
ಭೃಗುತುಂಗಂ ಕಾಮತೀರ್ಥಂ ಚಾಮರಕಂಠಕಂ ತಥಾ॥
ಉಜ್ಜಯಿನ್ಯಾಂ ಮಹಾಕಾಲಃ ಕುಬ್ಜಕೇ ಶ್ರೀಧರೋ ಹರಿಃ।
ಕುಬ್ಜಾಮ್ರಕಂ ಮಹಾತೀರ್ಥಂ ಕಾಲಸರ್ಪಿಶ್ಚ ಕಾಮದಮ್॥
ಮಹಾಕೇಶೀ ಚ ಕಾವೇರೀ ಚಂದ್ರಭಾಗಾ ವಿಪಾಶಯಾ।
ಏಕಾಮ್ರಂ ಚ ತಥಾ ತೀರ್ಥಂ ಬ್ರಹ್ಮೇಶಂ ದೇವಕೋಟಿಕಮ್॥
ಮಥುರಾ ಚ ಪುರೀ ರಮ್ಯಾ ಶೋಣಶ್ಚೈವ ಮಹಾನದಃ।
ಜಂಬೂಸರೋ ಮಹಾತೀರ್ಥಂ ತಾನಿ ತೀರ್ಥಾನಿ ವಿದ್ಧಿ ಚ॥

ಸೂರ್ಯಃ ಶಿವೋ ಗಣೋ ದೇವೀ ಹರಿರ್ಯತ್ರ ಚ ತಿಷ್ಠತಿ।
ಏತೇಷು ಚ ತಥಾನ್ಯೇಷು ಸ್ನಾನದಾನಂ ಜಪಸ್ತಪಃ॥
ಪೂಜಾ ಶ್ರಾದ್ಧಂ ಪಿಂಡದಾನಂ ಸರ್ವಂ ಭವತಿ ಚಾಕ್ಷಯಮ್।
ಶಾಲಗ್ರಾಮಂ ಸರ್ವದಂ ಸ್ಯಾತ್ ತೀರ್ಥಂ ಪಶುಪತೇಃ ಪರಮ್॥
ಕೋಕಾಮುಖಂ ಚ ವಾರಾಹಂ ಭಾಂಡೀರಂ ಸ್ವಾಮಿಸಂಜ್ಞಕಮ್।
ಮೋಹದಂಡೇ ಮಹಾವಿಷ್ಣುರ್ಮಂದಾರೇ ಮಧುಸೂದನಃ॥
ಕಾಮರೂಪಂ ಮಹಾತೀರ್ಥಂ ಕಾಮಾಖ್ಯಾ ಯತ್ರ ತಿಷ್ಠತಿ।
ಪುಣ್ಯವರ್ಧನಕಂ ತೀರ್ಥಂ ಕಾರ್ತ್ತಿಕೇಯಶ್ಚ ಯತ್ರ ಚ॥
ವಿರಜಂತ ಮಹಾತೀರ್ಥಂ ತೀರ್ಥಂ ಶ್ರೀಪುರುಷೋತ್ತಮಮ್।
ಮಹೇಂದ್ರಪರ್ವತಸ್ತೀರ್ಥಂ ಕಾವೇರಿ ಚ ನದೀ ಪರಾ॥
ಗೋದಾವರೀ ಮಹಾತೀರ್ಥಂ ಪಯೋಷ್ಣೀ ವರದಾ ತಥಾ।
ವಿಂಧ್ಯಃ ಪಾಪಹರಂ ತೀರ್ಥಂ ನರ್ಮದಾಭೇದ ಉತ್ತಮಃ॥
ಗೋಕರ್ಣಂ ಪರಮಂ ತೀರ್ಥಂ ತೀರ್ಥಂ ಮಾಹಿಷ್ಮತೀ ಪುರೀ।
ಕಾಲಂಚರಂ ಮಹಾತೀರ್ಥಂ ಶುಕ್ರತೀರ್ಥಮನುತ್ತಮಮ್॥
ಕೃತಶೋಚಂ ಮುಕ್ತಿದಂ ಚ ಶಾರ್ಙ್ಗಧಾರೀ ಚ ದಂಡಕೇ।
ವಿರಜಂ ಸರ್ವದಂ ತೀರ್ಥಂ ಸ್ವರ್ಣಾಕ್ಷಂ ತೀರ್ಥಮುತ್ತಮಮ್॥
ನಂದಿತೀರ್ಥಂ ಮುಕ್ತಿದಂ ಚ ಕೋಟಿತೀರ್ಥಫಲಪ್ರದಮ್।
ನಾಸಿಕ್ಯಂ ಚ ಮಹಾತೀರ್ಥಂ ಗೋವರ್ಧನಮತಃ ಪರಮ್॥
ಕೃಷ್ಣವೇಣೀ ಭೀಮರೇಖಾ ಗಂಡಕೀ ಯಾತ್ವಿರಾವತೀ।
ತೀರ್ಥಂ ಬಿಂದುಸರಃ ಪುಣ್ಯಂ ವಿಷ್ಣುಪಾದೋದಕಂ ಪರಮ್॥
ಶ್ರೀರಂಗಶ್ಚ ಹರೇಸ್ತೀರ್ಥಂ ತಾಪೀ ಶ್ರೇಷ್ಠಾ ಮಹಾನದೀ।
ಸಪ್ತಗೋದಾವರಂ ತೀರ್ಥಂ ತೀರ್ಥಂ ಕೋಣಗಿರಿಃ ಪರಮ್॥
ಮಹಾಲಕ್ಷ್ಮೀರ್ಯತ್ರ ದೇವೀ ಪ್ರಣೀತಾ ಪರಮಾ ನದೀ।
ಸಹ್ಯಾದ್ರೌ ದೇವದೇವೇಶ ಏಕವೀರಃ ಸುರೇಶ್ವರೀ॥
ಗಂಗಾದ್ವಾರೇ ಕುಶಾವರ್ತೇ ವಿಂಧ್ಯಕೇ ನೀಲಪರ್ವತೇ॥
ಸ್ನಾತ್ವಾಕನಖಲೇ ತೀರ್ಥೇ ಸ ಭವೇನ್ನ ಪುನರ್ಭವೇ॥

[ಎಲ್ಲ ಪವಿತ್ರ ಕ್ಷೇತ್ರಗಳನ್ನು ಹೇಳುತ್ತೇನೆ. ಉತ್ತಮೋತ್ತಮ ತೀರ್ಥ ಎಂದರೆ ಗಂಗೆ. ಎಲ್ಲ ಜಾಗಗಳಲ್ಲಿ ಗಂಗೆ ಸುಲಭ, ಆದರೆ ಹರಿದ್ವಾರ, ಪ್ರಯಾಗ ಮತ್ತು ಗಂಗಾಸಾಗರ ಸಂಗಮಗಳಲ್ಲಿ ಗಂಗೆ ಅತ್ಯಂತ ಪವಿತ್ರ. ಪ್ರಯಾಗವು ಪರಮಶ್ರೇಷ್ಠ ತೀರ್ಥ. ಮೃತರಿಗೆ ಇಲ್ಲಿ ಪಿಂಡದಾನವನ್ನು ಮಾಡಿದರೆ ಗಂಗೆ ಅವರಿಗೆ ಭುಕ್ತಿಯನ್ನೂ ಮುಕ್ತಿಯನ್ನೂ ನೀಡುವಳು. ಈ ತೀರ್ಥಗಳಲ್ಲಿ ವಾಸಿಸುವವರಿಗೆ

ಗಂಗೆ ಪಾಪಗಳನ್ನು ನಿವಾರಿಸಿ ಇಷ್ಟಾರ್ಥಗಳನು ನೆರವೇರಿಸುವಳು. ವಾರಾಣಸೀ ಎಂಬ ತೀರ್ಥದಲ್ಲಿ ಕೇಶವನನ್ನೂ ವಿಶ್ವೇಶನನ್ನೂ ಪೂಜಿಸುತ್ತಾರೆ. ಕುರುಕ್ಷೇತ್ರ ಉತ್ತಮ ತೀರ್ಥ, ದಾನಾದಿಗಳನ್ನು, ಇಲ್ಲಿ ಮಾಡಿದರೆ ಭುಕ್ತಿಯನ್ನೂ ಮುಕ್ತಿಯನ್ನೂ ಅದು ಕೊಡುವುದು. ಸೋಮನಾಥನಿರುವ ಪ್ರಭಾಸವು ಶ್ರೇಷ್ಠತೀರ್ಥ. ರಮ್ಯವಾದ ದ್ವಾರಕಾಪುರಿಯೂ ಭುಕ್ತಿ ಮುಕ್ತಿಗಳನ್ನು ನೀಡುತ್ತದೆ. ಪೂರ್ವದಿಕ್ಕಿನ ಸರಸ್ವತೀ, ಸಪ್ತಸಾರಸ್ವತ, ಸರ್ವಪಾಪಹರ ಕೇದಾರ, ಶಂಭಲಗ್ರಾಮ, ಬದರಿಕಾಶ್ರಮ, ನರನಾರಾಯಣ ಕ್ಷೇತ್ರ, ಶ್ವೇತದ್ವೀಪ, ಮಾಯಾನಗರೀ, ನೈಮಿಷಾರಣ್ಯದ ಪುಷ್ಕರ, ಅಯೋಧ್ಯಾ, ಚಿತ್ರಕೂಟ, ಗೋಮತೀ– ಇವೆಲ್ಲ ಉತ್ತಮ ತೀರ್ಥಗಳು.

ವೈನಾಯಕ ತೀರ್ಥ, ರಾಮಗಿರ್ಯಾಶ್ರಮ, ಕಾಂಚೀಪುರ, ತುಂಗಭದ್ರಾ, ಶ್ರೀಶೈಲ, ಸೇತುಬಂಧ, ರಾಮೇಶ್ವರ, ಕಾರ್ತ್ತಿಕೇಯ, ಭೃಗುತುಂಗ, ಕಾಮತೀರ್ಥ ಮತ್ತು ಅಮರಕಂಠಕ ಇವು ಅತ್ಯಂತ ಪವಿತ್ರ ತೀರ್ಥಗಳು. ಉಜ್ಜಯಿನಿಯ ಮಹಾಕಾಲ ಮತ್ತು ಕುಬ್ಜಕ ಕ್ಷೇತ್ರದಲ್ಲಿ ಶ್ರೀಧರ; ಕುಬ್ಜಾಮ್ರಕ ಮತ್ತು ಸರ್ವಾಭೀಷ್ಟಗಳನ್ನು ಪೂರೈಸುವ ಕಾಲಸರ್ಪಿ, ಮಹಾಕೇಶೀ, ಕಾವೇರೀ, ಚಂದ್ರಭಾಗಾ ಮತ್ತು ವಿಪಾಶಾ ಎಂಬ ನದಿಗಳು, ಏಕಾಮ್ರ, ಬ್ರಹ್ಮೇಶ, ದೇವಕೋಟಕ, ಸುಂದರ ನಗರ ಮಧುರಾ, ದೊಡ್ಡ ನದ ಶೋಣ, ಜಂಬೂಸರಸ್ಸು – ಇವೆಲ್ಲವೂ ಮಹಾಕ್ಷೇತ್ರಗಳು. ಏಕೆಂದರೆ ಇವುಗಳಲ್ಲಿ ಸೂರ್ಯ, ಶಿವ, ಗಣೇಶ, ದೇವೀ ಮತ್ತು ಹರಿ ವಾಸಿಸುತ್ತಾರೆ. ಇವುಗಳಲ್ಲಿ ಮಾಡುವ ಸ್ನಾನ, ದಾನ, ಜಪ, ತಪ, ಪೂಜೆ, ಶ್ರಾದ್ಧ, ಪಿಂಡದಾನ ಇವೆಲ್ಲ ಅಕ್ಷಯ ಫಲವನ್ನು ಕೊಡುತ್ತವೆ. ಪಶುಪತಿಯ ಶ್ರೇಷ್ಠತೀರ್ಥವಾದ ಶಾಲಗ್ರಾಮವು ಸರ್ವವನ್ನೂ ಕೊಡುತ್ತದೆ. ಕೋಕಾಮುಖನಾದ ವಾರಾಹ, ಸ್ವಾಮಿ ಎಂಬ ಸಂಜ್ಞೆಯುಳ್ಳ ಭಾಂಡೀರ (ಆಲದ ಮರ?), ಮೋಹದಂಡದಲ್ಲಿ ಮಹಾವಿಷ್ಣು, ಮಂದಾರದಲ್ಲಿ ಮಧುಸೂದನ, ಇವೆಲ್ಲ ತೀರ್ಥಗಳು. ಕಾಮರೂಪವೆಂಬ ಮಹಾತೀರ್ಥದಲ್ಲಿ ಕಾಮಾಖ್ಯಾ ನೆಲೆಸಿದ್ದಾಳೆ. ಪುಣ್ಯವರ್ಧನ ಎಂಬ ತೀರ್ಥದಲ್ಲಿ ಕಾರ್ತ್ತಿಕೇಯನು ವಾಸಿಸುತ್ತಾನೆ. ಅಲ್ಲಿ ವಿರಜಾಂತ ಮತ್ತು ಪುರುಷೋತ್ತಮ ಎಂಬ ತೀರ್ಥಗಳಿವೆ. ಮಹೇಂದ್ರಪರ್ವತ, ಶ್ರೇಷ್ಠ ನದಿಗಳಾದ ಕಾವೇರಿ, ಗೋದಾವರೀ, ಪಯೋಷ್ಣೀ, ವಿಂಧ್ಯಪರ್ವತ, ಶ್ರೇಷ್ಠವಾದ ನರ್ಮದಾನದಿಯ ಹೊಳೆ, ಗೋಕರ್ಣ, ಮಾಹಿಷ್ಮತೀ ಎಂಬನಗರ, ಕಾಲಂಜರ, ಶುಕ್ರತೀರ್ಥ– ಇವೆಲ್ಲ ಪವಿತ್ರ ತೀರ್ಥಗಳು. ದಂಡಕಾರಣ್ಯದಲ್ಲಿ ಶಾರ್ಙ್ಗಧಾರಿ ವಿಷ್ಣು ಶೋಕವನ್ನು ಹೋಗಲಾಡಿಸಿ ಮುಕ್ತಿಯನ್ನು ಕೊಡುತ್ತಾನೆ. ವಿರಜತೀರ್ಥವು ಶುದ್ಧಿಯನ್ನೂ ಮುಕ್ತಿಯನ್ನೂ ಕೊಡುತ್ತದೆ. ಸ್ವರ್ಣಾಕ್ಷವೆಂಬುದು ಉತ್ತಮತೀರ್ಥ. ನಂದಿ ತೀರ್ಥವು ಮುಕ್ತಿಯನ್ನು ಕೊಡುತ್ತದೆ,

ಕೋಟಿತೀರ್ಥ ಯಾತ್ರೆಯ ಫಲವನ್ನೂ ನೀಡುತ್ತದೆ. ನಾಸಿಕ್ಯ, ಗೋವರ್ಧನ, ಕೃಷ್ಣವೇಣಿ, ಭೀಮರೇಖಾ, ಗಂಡಕೀ, ಇರಾವತೀ, ವಿಷ್ಣುವಿನ ಪಾದದ ನೀರಿನಿಂದ (ಗಂಗೆಯಿಂದ) ತುಂಬಿದ ಬಿಂದು ಸರೋವರ, ಹರಿಯ ತೀರ್ಥವಾದ ಶ್ರೀರಂಗ, ತಾಪೀ, ಮಹಾನದೀ, ಸಪ್ತಗೋದಾವರ (ಗೋದಾವರಿಯ ಏಳು ಹೊಳೆಗಳು), ಕೋಣಗಿರಿ, ಮಹಾಲಕ್ಷ್ಮಿಗೆ ಇಷ್ಟವಾದ ಪರಮಾನದೀ; ಇಂದ್ರಾದಿ, ದೇವತೆಗಳ ಒಡತಿಯಾದ ದೇವಿಯು ಸಹ್ಯಾದ್ರಿಯಲ್ಲಿ ವಾಸಿಸುತ್ತಾಳೆ. ಗಂಗಾದ್ವಾರ, ಕುಶಾವರ್ತ, ವಿಂಧ್ಯಕ, ನೀಲಪರ್ವತ ಮತ್ತು ಕನಖಲಗಳಲ್ಲಿ ಸ್ನಾನ ಮಾಡಿದವನು ಮತ್ತೆ ಈ ಪ್ರಪಂಚಕ್ಕೆ ಬರುವುದಿಲ್ಲ (ಅವನು ಮುಕ್ತನಾಗುತ್ತಾನೆ).

೨೭. ವಿ.ಎ. ಸ್ಮಿತ್ ಅವರ *A History of Fine Arts in India* ಎಂಬ ಗ್ರಂಥದ ಮುನ್ನುಡಿಯನ್ನು ನೋಡಿರಿ.

೨೮. ಮ್ಯಾಕ್ಸ್‌ಮುಲ್ಲರ್ *India; what can it teach us?* ಪುಟ ೧೬೮, ೧೭೪

೨೯. ಆರ್.ಜಿ. ಭಂಡಾರ್ಕರ್, *Early History of the Deccan.*

೩೦. ಬಿಹಾರ ರಾಜ್ಯದ ಶಹಾಬಾದ್ ಜಿಲ್ಲೆಯ ಪೂರ್ವಭಾಗ.

೩೧. ದಕ್ಷಿಣಾಪಥ, ಅಕ್ಷರಶಃ ಇದರ ಅರ್ಥ ದಕ್ಷಿಣದ ದಾರಿ. ದಕ್ಷಿಣಾಪಥ ಎಂಬುದು ದಕ್ಷಿಣ ಭಾರತಕ್ಕೆ ಪಾರಿಭಾಷಿಕ ನಾಮಧೇಯ. ಉತ್ತರಭಾರತಕ್ಕೆ ಇಂಥದೇ ಹೆಸರು ಉತ್ತರಾಪಥ, ಅಕ್ಷರಶಃ ಉತ್ತರದ ದಾರಿ. ಈ ಪದವು ಸತತವಾಗಿ ಬಳಕೆಯಲ್ಲಿತ್ತು. ಕನೂಜಿನ ಹರ್ಷವರ್ಧನನಿಗೆ "ಸಮರಸಂಸಕ್ತ ಸಕಲೋತ್ತರ ಪಥೇಶ್ವರ ಶ್ರೀಹರ್ಷವರ್ಧನ" ಎಂಬ ವಿಶೇಷಣವಿತ್ತು.

೩೨. ಹೈಮವತೋ ದಕ್ಷಿಣಾಪಥಾಚ್ಛ್ರೇಯಾನ್ ಹಸ್ತ್ಯಶ್ವಗಂಧದಂತಾಜಿನರೂಪ್ಯ ಸುವರ್ಣಪಣ್ಯಾಸ್ಸಾರವತ್ತರಾ ಇತ್ಯಾಚಾರ್ಯಾಃ।
ನೇತಿ ಕೌಟಿಲ್ಯಃ। ಕಂಬಲಾಜಿನಾಶ್ವಪಣ್ಯವರ್ಜಾಃ ಶಂಖವಜ್ರಮಣಿಮುಕ್ತಾನಾಃ ಸುವರ್ಣಪಣ್ಯಾಶ್ಚ ಪ್ರಭೂತತರಾ ದಕ್ಷಿಣಾಪಥೇ ದಕ್ಷಿಣಾಪಥೇऽऽಪಿ ಬಹುಖನಿಃ
ಕೌಟಿಲ್ಯನ ಅರ್ಥಶಾಸ್ತ್ರ ಅಧ್ಯಾಯ ಭಾ. VII. ೧೨

೩೩. *ಅರ್ಥಶಾಸ್ತ್ರ*, ಮೈಸೂರು ಆವೃತ್ತಿ ಪುಟ ೫೦, ೭೫–೮೧

೩೪. ಅಸ್ತಿ ಚ ಲೋಕೇ ಸರಸೀಶಬ್ದಸ್ಯ ಪ್ರವೃತ್ತಿಃ।
ದಕ್ಷಿಣಾಪಥೇ ಹಿ ಮಹಾಂತಿ ಸರಾಂಸಿ ಸರಸ್ಯ ಇತ್ಯುಚ್ಯತೇ

೩೫. ಅರ್ಥಶಾಸ್ತ್ರವು ರಾಮಾಯಣ ಮತ್ತು ಮಹಾಭಾರತಗಳ ಕಥೆಗಳನ್ನು ಹೀಗೆ ಸೂಚಿಸುತ್ತದೆ:

ಮಾನಾದ್ ರಾವಣಃ ಪರದಾರಾನ್ ಅಪ್ರಯಚ್ಛನ್
ದುರ್ಯೋಧನೋ ರಾಜ್ಯಾದಂಶಂ ಚ।

ಮೈಸೂರು ಆವೃತ್ತಿ, ಪುಟ ೧೧.

೩೬. ಸಾಮ್ರಾಜ್ಯಾಯ ತಸ್ಮಾದೇತಸ್ಯಾಂ ಪ್ರಾಚ್ಯಾಂ ದಿಶಿಯೇ ಕೇ ಚ ಪ್ರಾಚ್ಯಾನಾಂ ರಾಜಾನಃ ಸಾಮ್ರಾಜ್ಯಾಯೈವ ತೇऽಭಿಷಿಚ್ಯಂತೇ।

ತಸ್ಮಾದೇತಸ್ಯಾಂ ದಿಶಿ ದಕ್ಷಿಣಸ್ಯಾಂ ದಿಶಿ ಯೇ ಕೇ ಚ
ಸಚ್ಯಾತಾಂ ರಾಜಾನೋ ಭೌಜ್ಯಾಯೈವ ತೇऽ ಅಭಿಷಿಚ್ಯಂತೇ।
ತಸ್ಮಾದೇತಸ್ಯಾಂ ಪ್ರತೀಚ್ಯಾಂ ದಿಶಿ ಯೇ ಕೇ ಚ ನೀಚ್ಯಾನಾಂ
ರಾಜಾನೋ ಯೇऽಪಾಚ್ಯಾನಾಂ ಸ್ವಾರಾಜ್ಯಾಯವ ತೇऽಭಿಷಿಚ್ಯಂತೇ।
ತಸ್ಮಾದೇತಸ್ಯಾಮುದೀಚ್ಯಾಂ ದಿಶಿ ಯೇ ಕೇ ಚ ಪರೇಣ
ಹಿಮವಂತಂ ಜನಪದಾ ಉತ್ತರಾಂ ಕುರವ ಉತ್ತರಮದ್ರಾ
ಇತಿ ವೈರಾಜ್ಯಾಯೈವ ತೇऽಭಿಷಿಚ್ಯಂತೇ।
ತಸ್ಮಾದಸ್ಯಾಂ ಧ್ರುವಾಯಾಂ ಮಧ್ಯಮಾಯಾಂ ಪ್ರತಿಷ್ಠಾಯಾಂ
ದಿಶಿ ಯೇ ಕೇ ಚ ಕುರುಪಾಂಚಾಲಾನಾಂ ರಾಜಾನಃ ಸವಶೋ–
ಶೀನರಾಣಾಂ ರಾಜ್ಯಾಯೈವ ತೇऽಭಿಷಿಚ್ಯಂತೇ
ರಾಜೇತ್ಯೇನಾನ್ ಅಭಿಷಿಕ್ತಾನ್ ಆಚಕ್ಷತೇ।

೩೭. "...ಏಕರಾಜಸ್ಯ ಭುವನಸ್ಯ ರಾಜಸಿ ಶಚೀಪತಿ ಇಂದ್ರ ವಿಶ್ವಾಭಿರೂತಿಭಿಃ।"

೩೮. "...ಪೃಥಿವ್ಯೈ ಸಮುದ್ರಪರ್ಯಂತಾಯಾ ಏಕರಾಡಿತಿ।

೩೯. "ಆ ತ್ವಾಗನ್ ರಾಷ್ಟ್ರಂ ಸಹ ವರ್ಚಸೇದಿಹಿ ಪ್ರಾಙ್ ವಿಶಾಂಪತಿರೇಕರಾಟ್ತ್ವಂ ವಿರಾಜ।" ಇದನ್ನು ಸಾಯಣನು ಹೀಗೆ ವಿವರಿಸಿದ್ದಾನೆ. "ಹೇ ರಾಜನ್ ತ್ವಾಂ ರಾಷ್ಟ್ರಂ ಶತ್ರುಭಿರಾಕ್ರಾಂತಂ ಸ್ವಕೀಯಂ ರಾಜ್ಯಂ ಪುನರಾಗಮತ ತತಸ್ತ್ವಂ ವರ್ಚಸಾಬಲೇನ ಸಹ ಉದೀಹಿ ಉದಿತಃ ಪ್ರಖ್ಯಾತೋ ಭವ। ಅನಂತರಂ ಪ್ರಾಕ್ ಪೂರ್ವಂ ವಿಶಾಂ ಪ್ರಜಾನಾಂ ಸರ್ವಾಸಾಂ ಪತಿಃ ಪಾಲಕಃ ಸನ್ ಏಕರಾಟ್ ನಿಃಸಪತ್ನೋ ಮುಖ್ಯೋ ರಾಜಾ ಭೂತ್ವಾ ತ್ವಂ ವಿರಾಜ ವಿಶೇಷಣ ದೀಪ್ಯಸ್ವ।"

೪೦. ಸ್ವಾರಾಜ್ಯ ಎಂಬ ಪದವು ಗಣರಾಜ್ಯಗಳೆಂಬ ಸ್ವತಂತ್ರ ದೇಶದೊಳಗೆ ಅನ್ವಯಿಸುತ್ತಿರಬಹುದೆ? ಉದಾಹರಣೆಗೆ ಲಿಚ್ಛವಿ, ಶಾಕ್ಯ, ಕುಶೀನರ ಮಲ್ಲ ಇತ್ಯಾದಿ. ಅವುಗಳನ್ನೂ ರಾಜ್ಯಗಳೆಂದೇ ಕರೆಯುತ್ತಿದ್ದರು. ಅವುಗಳ ನಾಯಕರನ್ನು ಅಥವಾ ಅಧ್ಯಕ್ಷರನ್ನು ರಾಜ ಎಂದು ಕರೆಯುತ್ತಿದ್ದರೆ? *ಅರ್ಥಶಾಸ್ತ್ರ*ದ ಪ್ರಕಾರ XI.i,೧೬೦–೧೬೧) ಲಿಚ್ಛವಿಕ, ವೃಜಿಕ, ಮಲ್ಲಕ, ಮದ್ರಕ, ಕುಕುರ, ಕುರು, ಪಾಂಚಾಲ ಮುಂತಾದ ಪ್ರಾಂತಗಳ ನಾಯಕರಿಗೂ ರಾಜಶಬ್ದವನ್ನು ಬಳಸಲಾಗುತ್ತಿತ್ತು. ("ಲಿಚ್ಛವಿಕ–ವೃಜಿಕ–ಮಲ್ಲಕ–ಮದ್ರಕ–ಕುಕುರ–ಕುರು–ಪಾಂಚಾಲಾದಯೋ ರಾಜಶಬ್ದೋಪಜೀವಿನಃ)"

ಈ ಒಂದು ಊಹೆಗೆ ಬಲವನ್ನು ಕೊಡುವುದು ಐತರೇಯ ಬ್ರಾಹ್ಮಣದಲ್ಲಿರುವ ಉಲ್ಲೇಖ – ಪಶ್ಚಿಮದ ರಾಷ್ಟ್ರಗಳ ರಾಜರಿಗೆ ಸ್ವರಾಟ್ ಎಂಬ ಶಬ್ದ, ಆದರೆ ಪೂರ್ವದ ರಾಜರಿಗೆ ಸಮ್ರಾಟ್ ಎಂಬ ಶಬ್ದ.
ಪ್ರಾಚೀನ ಇಂಡಿಯಾ ದೇಶದಲ್ಲಿದ್ದ ಸ್ವತಂತ್ರ ರಾಜ್ಯಗಳ ಮತ್ತು ಪ್ರಾಚೀನ ಇಂಡಿಯಾ ದೇಶದಲ್ಲಿದ್ದ ಸ್ವತಂತ್ರ ರಾಜ್ಯಗಳ ಮತ್ತು ಜನಾಂಗಗಳ ಬಗೆಗೆ ತಿಳಿಯಲು Rhys David ಅವರ *Buddhist India* ಎಂಬ ಪುಸ್ತಕವನ್ನು ನೋಡಿರಿ. ಪು.೧೭೪.

೪೧. ಪರಮಾಧಿಕಾರವನ್ನು ಸೂಚಿಸಲು ಸಂಸ್ಕೃತಸಾಹಿತ್ಯದಲ್ಲಿ ಬಳಸಲಾಗಿರುವ ಮತ್ತು ರಕ್ಷಿತವಾಗಿರುವ ಕೆಲವು ಶಬ್ದಗಳಿವು: ಸಾರ್ವಭೌಮ, ರಾಜರಾಜ, ವಿಶ್ವಾರಾಟ್, ಚಕ್ರವರ್ತೀ.

೪೨. "Rituals at Hindu Coronation: Its Constitutional Aspects" ಎಂಬ ಆಸಕ್ತಿಜನಕವೂ ಮಾಹಿತಿ ಕೊಡುವುದೂ ಆದ ಲೇಖನವನ್ನು ಶ್ರೀ ಕಾಶೀಪ್ರಸಾದ ಜಯಸ್ವಾಲ್ ಬಿ.ಎ. (Oxon), Bar-at-Law ಅವರು ಜನವರಿ, ೧೯೧೨ರ ಮಾಡರ್ನ್ ರಿವ್ಯೂ ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

೪೩. **ರಾಜಾ ವೈ ರಾಜಸೂಯೇನೇಷ್ಟ್ವಾ ಭವತಿ।**
ಸಮ್ರಾಡ್ ವಾಜಪೇಯಾನಾವರಂ ಹಿ ರಾಜ್ಯಂ ಪರಂ
ಸಾಮ್ರಾಜ್ಯಂ ಕಾಮಯೇತ ವೈ। ರಾಜಾ ಸಮ್ರಾಡ್
ಭವಿತುಮ್। ಅವರಂ ಹಿ ರಾಜ್ಯಂ, ಪರಂ ಸಾಮ್ರಾಜ್ಯಮ್॥

೪೪. **ಯಂ ಬ್ರಾಹ್ಮಣಾ ರಾಜಾನಶ್ಚ ಪುರಸ್ಕುರ್ವೀರನ್ ಸ ವಾಜಪೇಯೇನ ಯಜೇತ।**

೪೫. **ಸಮ್ರಾಡಯಮಸೌ ಸಾಮ್ರಾಡಯಮಸಾವಿತಿ ನಿವೇದಿತಮೇವೈನಮೇತತ್ ಸಂತಮ್।**

೪೬. **"ಇಯಂ ತೇ ರಾಡಿತಿ ರಾಜ್ಯಮೇವಾಸ್ಮಿನ್ನೇತದ್ ದಧಾತ್ಯಥೈನಮಾಸಾದಯತಿ ಯಂತಾಸಿ ಯಮನ ಇತಿ ಯಂತಾರಮೇವೈನಮೇತದ್ ಯಮನ ಮಾಸಾಂ ಪ್ರಜಾನಾಂ ಕರೋತಿ। ಧ್ರುವೋಽಸಿ ಧರುಣ ಇತೋ ಧ್ರುವಮೇವೈನಮೇತದ್ ಧರುಣಮಸ್ಮಿಂಲ್ಲೋಕೇ ಕರೋತಿ। ಕೃಷ್ಯೈ ತ್ವಾ ಕ್ಷೇಮಾಯ ತ್ವಾ ರಯ್ಯೈ ತ್ವಾ ಪಿಷಯಾ ತ್ವೇತಿ ಸಾಧವೇ ತ್ವೇತ್ಯೇವೈತದಾಹ"**

೪೭. ರಥಕಾರ(ರಥಗಳನ್ನು ಮಾಡುವವ)ನನ್ನು ರಾಜನ ಪ್ರಜೆಗಳಲ್ಲಿ ಒಬ್ಬನೆಂದು *ಅಥರ್ವವೇದ*(iii.೫, ೬)ದಲ್ಲಿ ಹೆಸರಿಸಿದ್ದಾರೆ. ಸಾಮಾನ್ಯವಾಗಿ ಅವನನ್ನು ಕೈಗಾರಿಕೆಗಳನ್ನು ಅವಲಂಬಿಸಿದ್ದ ಜನರ ಪ್ರತಿನಿಧಿ ಎಂದು ಪರಿಗಣಿಸಲಾಗಿತ್ತು. *ಯಜುರ್ವೇದದ* ಸಂಹಿತೆಗಳಲ್ಲೂ (ಕಾಠಕ xvii.೧೩; ಮೈತ್ರಾಯಣೀ ii.೯.೫; *ವಾಜಸನೇಯೀ* xvi.೧೭; xxx.೬) ಮತ್ತು *ಬ್ರಾಹ್ಮಣ*ಗಳಲ್ಲೂ (*ತೈತ್ತಿರೀಯ* i.೧.೪.೮; iii.೪.೨.೧; *ಶತಪಥ* xvi.೪.೨.೧೭) ರಥಕಾರನನ್ನು ಉಲ್ಲೇಖಿಸಲಾಗಿದೆ. ಎಲ್ಲ ಸ್ಥಳಗಳಲ್ಲೂ ಅವನು ಒಂದು ರಚಿತ ಜಾತಿಗೆ ಸೇರಿದವನಂತೆ ಕಾಣುತ್ತಾನೆ.

೪೮. ಹೋಲಿಸಿ: ಅಥರ್ವವೇದ (iii.೧.೪.೨)– "ತ್ವಾ ವಿಶೋ ವೃಣತಾಂ ರಾಜ್ಯಾಯ" ಜನರು ನಿನ್ನ್ನು ಆಳುವುದಕ್ಕಾಗಿ ಆರಿಸುತ್ತಾರೆ. ತೈತ್ತಿರೀಯ ಸಂಹಿತೆಯಲ್ಲಿ "ವಿಶ್" ಎಂದರೆ ಜನರು ಎಂಬ ಅರ್ಥ ಸ್ಪಷ್ಟವಾಗಿದೆ.

೪೯. **ಅಸಪತ್ನಂ ಸುಬದ್ಧಮಿತೀಮಂ ದೇವಾ ಅಭ್ರಾತೃವ್ಯಂ ಸುವದ್ಧಮ್**
ಇತ್ಯೇವೈತದಾಹ ಮಹತೇ ಕ್ಷತ್ರಾಯ ಮಹತೇ ಜ್ಯೈಷ್ಠ್ಯಾಯೇತಿ ನಾತ್ರ
ತಿರೋಹಿತಮೇವಾಸ್ತಿ ಮಹತೇ ಜಾನರಾಜ್ಯಾಯೇತಿ ಮಹತೇ ಜನಾನಾಂ
ರಾಜ್ಯಾಯೇತ್ಯೇವೈತದಾಹೇಂದ್ರಿಯಸ್ಯೇಂದ್ರಾಯೇತಿ। ವೀರ್ಯಾಯೇತ್ಯೇ
ವೈತದಾಹ ಯದಾ ಹೇಂದ್ರಸ್ಯೇಂದ್ರಿಯಾಯೇತಿ [ಶತಪಥ V.೪.೨.೩]

೫೦. **ಅಹಂ ಸರ್ವೇಷಾಂ ರಾಜ್ಞಾಂ ಶ್ರೈಷ್ಠ್ಯಮತಿಷ್ಠಾಂ**
ಪರಮತಾಂ ಗಚ್ಛಯೇಂ ಸಾಮ್ರಾಜ್ಯಂ ಭೌಜ್ಯಂ ಸ್ವಾರಾಜ್ಯಂ
ವೈರಾಜ್ಯಂ ಪಾರಮೇಷ್ಠ್ಯಂ ರಾಜ್ಯಂ ಮಹಾರಾಜ್ಯಮ್
ಆಧಿಪತ್ಯಮಹಮೆ ಸಮಂತಪರ್ಯಾಯೀಸ್ಯಾಂ ಸಾರ್ವಭೌಮಃ
ಸಾರ್ವಾಯುಷ ಆಂತಾದಾಪರಾರ್ದ್ಧಾತ್ ಪೃಥಿವ್ಯೈ ಸಮುದ್ರ ಪರ್ಯಂತಾಯಾ
ಏಕರಾಡಿತಿ।

೫೧. ವಾಜಪೇಯ, ರಾಜಸೂಯ ಮತ್ತು ಅಶ್ವಮೇಧಗಳೆಂಬ ಯಜ್ಞಗಳ ಜೊತೆಗೆ ದಿಗ್ವಿಜಯ ಎಂಬ ವಿಚಾರವನ್ನೂ ಗಮನಿಸಬೇಕು. ಹಿಂದೂ ಜನರ ಮನಸ್ಸಿನಲ್ಲಿ ದಿಗ್ವಿಜಯವು ಪರಮೈಶ್ವರ್ಯದ ಪರಿಕಲ್ಪನೆಯಿಂದ ಬೇರ್ಪಡಿಸಲು ಅಸಾಧ್ಯವಾಗಿತ್ತು. ಐತಿಹಾಸಿಕ, ಪೌರಾಣಿಕ ಮತ್ತು ಅಭಿಜಾತ ಸಂಸ್ಕೃತ ಸಾಹಿತ್ಯದಲ್ಲಿ ದಿಗ್ವಿಜಯದ ವರ್ಣನೆಗಳು ತುಂಬಿವೆ. ಇವುಗಳಲ್ಲಿ ಪ್ರಮುಖವಾದ ಉದಾಹರಣೆಗಳು ಶತ್ರುಘ್ನ, ಅರ್ಜುನ (*ಜೈಮಿನಿ ಭಾರತ*ವನ್ನು ನೋಡಿರಿ), ರಘು (ಕಾಳಿದಾಸನ *ರಘುವಂಶ*), ಪುಷ್ಯಮಿತ್ರ ಅಥವಾ ಪುಷ್ಪಮಿತ್ರ (*ಮಾಲವಿಕಾಗ್ನಿಮಿತ್ರ*), ಸಮುದ್ರಗುಪ್ತ, ಹರ್ಷವರ್ಧನ, ಗೌತಮೀಪುತ್ರ ಶಾತಕರ್ಣಿ, ಎರಡನೆಯ ಪುಲಿಕೇಶಿ, ಕಾಶ್ಮೀರದ ಲಲಿತಾದಿತ್ಯ (*ರಾಜ ತರಂಗಿಣಿ*ಯನ್ನು ನೋಡಿರಿ), ಇತ್ಯಾದಿ.

೫೨. ಇದೇ ಭಾವನೆಗಾಗಿ, ಸೋದರಿ ನಿವೇದಿತಾ ಅವರ *The Web of Indiian Life,* ಪುಟ ೧೪೩ ನೋಡಿರಿ.

೫೩. ಸಂಸ್ಕೃತ ಸಾಹಿತ್ಯದಲ್ಲಿ ಲಭ್ಯವಾಗಿರುವ ಇಂಥ ಪಟ್ಟಿಗಳ ತೌಲನಿಕ ಅಧ್ಯಯನವು ಚಂದ್ರಗುಪ್ತ ಮೌರ್ಯನಿಗಿಂತಲೂ ಪ್ರಾಚೀನರಾದ ಭಾರತೀಯ ಮಹಾರಾಜರ ಐತಿಹಾಸಿಕತ್ವವನ್ನು ಸಾಧಿಸಿ ತೋರಿಸುತ್ತದೆ. ಚಂದ್ರಗುಪ್ತ ಮೌರ್ಯನು ತಥಾಕಥಿತ

ಪ್ರಥಮ ಭಾರತ ಚಕ್ರವರ್ತಿ. ಇಂಥ ಅಧ್ಯಯನವು ಅತಿ ಫಲಭರಿತ ಅನ್ವೇಷಣೆಯಾಗಬಹುದು.

೫೪. **ರಾಜಾ ಸಾರ್ವಭೌಮೋಽಶ್ವಮೇಧೇನ ಯಜೇತ।**
ಅಶ್ವಮೇಧ ಯಾಗವನ್ನು ಈ ರೀತಿ ಆಚರಿಸುತ್ತಿದ್ದರು. ನಿಶ್ಚಿತ ಬಣ್ಣಗಳ ಒಂದು ಕುದುರೆಯನ್ನು ವಿವಿಧ ಪೂಜೆಗಳನ್ನು ಮಾಡಿ ಪವಿತ್ರಗೊಳಿಸುತ್ತಿದ್ದರು. ಅನಂತರ ಒಂದು ವರ್ಷದವರೆಗೆ ಅದನ್ನು ಸಂಚಾರಕ್ಕಾಗಿ ಬಿಡುತ್ತಿದ್ದರು. ರಾಜನು, ಅಥವಾ ಅವನ ಪ್ರತಿನಿಧಿಯು ಸೈನ್ಯದೊಡನೆ ಕುದುರೆಯನ್ನು ಹಿಂಬಾಲಿಸುತ್ತಿದ್ದರು. ಕುದುರೆ ಬೇರೆ ದೇಶವನ್ನು ಪ್ರವೇಶಿಸಿದಾಗ ದೇಶದ ರಾಜನು ಶರಣಾಗತನಾಗಬೇಕಾಗಿತ್ತು, ಅಥವಾ ಯಜ್ಞವನ್ನು ಮಾಡುತ್ತಿದ್ದ ರಾಜನ ಸೈನ್ಯದೊಡನೆ ಯುದ್ಧವನ್ನು ಮಾಡಬೇಕಾಗಿತ್ತು. ಹೀಗೆ ಬೇರೆ ದೇಶಗಳ ರಾಜರನ್ನೆಲ್ಲ ಸೋಲಿಸಿ ಕುದುರೆಯನ್ನು ವಿಮೋಚಿತಗೊಳಿಸಿ ಯಾಜ್ಞಿಕ ರಾಜನು ವಿಜಯಿಯಾಗಿ ಪರಾಜಿತರಾದ ಎಲ್ಲ ರಾಜರೊಡನೆ ಮತ್ತು ಕುದುರೆಯೊಡನೆ ರಾಜಧಾನಿಗೆ ಹಿಂದಿರುಗುತ್ತಾನೆ. ಅವನು ಸೋತು ಹೋದರೆ ಅವಮಾನಕ್ಕೆ ಈಡಾಗುತ್ತಿದ್ದನು. ಹಾಸ್ಯಕ್ಕೂ ಪಾತ್ರನಾಗುತ್ತಿದ್ದನು. ಸಫಲನಾಗಿ ಅವನು ಹಿಂದಿರುಗಿದ ಮೇಲೆ ದೊಡ್ಡ ಯಾಗವನ್ನು ಮಾಡಿ ಅಶ್ವವನ್ನು ದೇವತೆಗಳಿಗೆ ಅರ್ಪಿಸಲಾಗಿತ್ತು. [Dwson, *Classical Dictionary*]. ಯುಧಿಷ್ಠಿರನ ಅಶ್ವಮೇಧದಲ್ಲಿ ಅಶ್ವವನ್ನು ಅದು ವರ್ಷದವರೆಗೆ ಸಂಚರಿಸುತ್ತಿದ್ದಾಗ ಅರ್ಜುನನು ಕಾಪಾಡಿದನು. ಮೊದಲು ಪೂರ್ವದಿಕ್ಕಿಗೆ ಸಮುದ್ರದವರೆಗೂ ಹೋಗಿ ಅನಂತರ ದಕ್ಷಿಣಕ್ಕೆ ತಿರುಗಿ ಪೂರ್ವತೀರದಲ್ಲಿ ಸಂಚರಿಸಿ ಪ್ರಸ್ಥಭೂಮಿಯ ತುದಿಯವರೆಗೂ ತೆರಳಿ ಉತ್ತರಕ್ಕೆ ತಿರುಗುತ್ತಾನೆ. ಪಶ್ಚಿಮ ಕರಾವಳಿಯ ಮೇಲೆ ಸಂಚರಿಸುತ್ತಾ ತನ್ನ ಊರಿಗೆ ಬರುತ್ತಾನೆ.

ಅಶ್ವಮೇಧಗಳನ್ನು ಮಾಡಿದ ಐತಿಹಾಸಿಕ ರಾಜರ ಪಟ್ಟಿಯು ಈ ಹೆಸರುಗಳನ್ನು ಒಳಗೊಳ್ಳುತ್ತದೆ: (೧) ಪುಷ್ಯಮಿತ್ರ [ಮಾಲವಿಕಾಗ್ನಿ ಮಿತ್ರ ನಾಟಕದ ಐದನೆಯ ಅಂಕವನ್ನು ನೋಡಿರಿ.], (೨) ಸಮುದ್ರಗುಪ್ತ [ಚಂದ್ರಗುಪ್ತನ ಉದಯಗಿರಿ ಗುಹಾಶಾಸನಗಳನ್ನು ನೋಡಿರಿ. ಐದನೆಯ ಸಾಲು. ಕುಮಾರಗುಪ್ತನ ಬಿಲ್ಸಾದ್ ಶಿಲಾಶಾಸನವನ್ನೂ ನೋಡಿರಿ. ಎರಡನೆಯ ಸಾಲು.], (೩) ಮೊದಲನೆಯ ಕುಮಾರಗುಪ್ತ, (೪) ಆದಿತ್ಯ ಸೇನ [ವಿ.ಎ. ಸ್ಮಿಥ್ ಅವರ *Early History of India*, ಪುಟ ೨೯೫]. ಸಮುದ್ರಗುಪ್ತನವೆಂದು ಹೇಳಲಾಗಿರುವ ಕೆಲವು ಚಿನ್ನದ ನಾಣ್ಯಗಳ ಮೇಲೆ 'ಅಶ್ವಮೇಧ ಪರಾಕ್ರಮಃ' ಎಂಬ ಲಿಖಿತವಿದೆ. [*J.A.S.B.* Volume LIII, Part I, p.175 ff ಮತ್ತು Pt II, No. 9; *Archaeological Survey of Western India*, Vol. II, p.37 f. ಮತ್ತು Pl.vii No.4]. ಚಾಲುಕ್ಯ ರಾಜ ಮೊದಲನೆಯ ಪುಲಿಕೇಶಿಯೂ ದೊಡ್ಡ ಅಶ್ವಮೇಧವನ್ನು ಮಾಡಿದ್ದನೆಂದು ಹೇಳುತ್ತಾರೆ. [ಭಂಡಾರಕರ್ ಅವರ *Early History of the Deccan*, ಪುಟ ೩೭ ನೋಡಿರಿ].

೫೫. X.೯
೫೬. X.೧೩
೫೭. XII.೧೮
೫೮. XIII.೧೭೪
೫೯. LXIX.೧, ೨, ೩
೬೦. CXI.೧೩
೬೧. CXXXII.೩, ೪
೬೨ XXIV.೩೪, ೩೫
೬೩. ಅದೇ ೬೫, ೬೬
೬೪. LX.೧.೨೧
೬೫. LXVI
೬೬. LXVIII
೬೭. LXBIII
೬೮. ಅದೇ.
೬೯. ಪ್ರವಾಸಖಂಡ XX:೧೧, ೧೨
೭೦. IX.vi.೩೪
೭೧. ಅದೇ ೪
೭೨. xli.೧೪
೭೩. II.೩೯
೭೪. III. iv. ೧೭
೭೫. VI.iv.೬
೭೬. XIX.iv.೨
೭೭. XXIV.iv.೫
೭೮. XXIV.iv.೭
೭೯. LXXXVIII.೧೪೪
೮೦. XCIV.೯
೮೧. XCV.೨೩
೮೨. XXIV II

೮೩. XXXIV.೨೫

೮೪. **ಯ ಇಮಾಂ ಪೃಥಿವೀಂ ಸರ್ವಾಂ ಚರ್ಮವತ್ ಸರ್ಮವೇಷ್ಟಯತ್।
ಮಹತಾ ರಥಘೋಷೇಣ ಪೃಥಿವೀಮನುನಾದಯನ್॥
ಏಕಚ್ಛತ್ರಾಂ ಮಹೀಂ ಚಕ್ರೇ ಜೈತ್ರೇಣೈಕರಥೇನ ಯಃ॥**

೮೫. **ಯೋ ಬದ್ಧ್ವಾ ತ್ರಿಶತಂ ಚಾಶ್ವಾನ್ ದೇವೇಭ್ಯೋ ಯಮುನಾಮನು।
ಸರಸ್ವತೀಂ ವಿಂಶತಿಂ ಚಕ ಗಂಗಾಮನು ಚತುರ್ದಶ॥**

೮೬. **ತಮಿಮಂ ಪೃಥವೀ ಸರ್ವಾ ಏಕಾಹ್ನಾ ಸಮಪದ್ಯತ।
ಯಶ್ಚಾಂಗಾರಸ್ತು ನೃಪತಿಂ ಮರುತ್ತಮಸಿತಂ ತ್ವಯಮ್॥
ಅಂಗಂ ಬೃಹದ್ರಥಂ ಚೈವ ಮಾಂಧಾತಾ ಸಮರೇಽಜಯತ್।
ಯತ್ರ ಸೂರ್ಯ ಉದೇತಿಸ್ಮ ಯತ್ರ ಚ ಪ್ರತಿತಿಷ್ಠತಿ।
ಸರ್ವಂ ತದ್ ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರಮುಚ್ಯತೇ॥**
[೮೭, ೮೮, ೯೦]

೮೭. **ಯ ಇಮಾಂ ಪೃಥಿವೀಂ ಕೃತ್ಸ್ನಾಂ ವಿಜಾತ್ಯ ಸಹ ಸಾಗರಾಮ್।
ವ್ಯಭಜತ್ ಪೃಥಿವೀಂ ಕೃತ್ಸ್ನಾಂ ಯಯಾತಿರ್ನಹುಷಾತ್ಮಜಃ॥**

೮೮. **ಯಃ ಸಹಸ್ರಂ ಸಹಸ್ರಾಣಾಂ ರಾಜ್ಞಾಮಯುತಯಾಜಿನಾಮ್।
ಶತಂ ರಾಜಸಹಸ್ರಾಣಿ ಶತಂ ರಾಜಶತಾನಿ ಚ।
ಸರ್ವೇಽಶ್ವಮೇಧೈರೀಜಾನಾಸ್ತೇಽನ್ವಯುರ್ದಕ್ಷಿಣಾಯನಮ್**

೮೯. **ಏಕಚ್ಛತ್ರಾ ಮಹಿ ಯಸ್ಯ ಪ್ರತಾಪಾದಭವತ್‌ಪುರಾ।**

೯೦. **ಗೃಹೇಗೃಹೇ ಹಿ ರಾಜಾನಃ ಸ್ವಸ್ಯ ಸ್ವಸ್ಯ ಪ್ರಿಯಂಕರಾಃ।
ನ ಚ ಸಾಮ್ರಾಜ್ಯಮಾಪ್ತಾಸ್ತೇ ಸಮ್ರಾಟ್‌ಶಬ್ದೋಹಿ ಕೃಚ್ಛ್ರಭಾಕ್॥**

೯೧. *ಮಹಾಸುದಸ್ಸನಸುತ್ತ,* *S.B.E.*, Vol XI, p. ೨೪೮.

೯೨. ಹೋಲಿಸಿರಿ: ಋಗ್ವೇದ (Vii.೩೨.೩೦) "ಉತ್ತಮವಾದ ಮರದಿಂದ ಮಾಡಿದ ಚಕ್ರದ ಅಂಚನ್ನು ರಥಕಾರನು ಬಗ್ಗಿಸುವಂತೆ ಈ ಹಾಡಿನ ಮೂಲಕ ನಾನು ಪ್ರಶಂಸೆಗೊಳಗಾದ ಇಂದ್ರನನ್ನು ಒಲಿಸಿಕೊಳ್ಳುತ್ತೇನೆ." ಮತ್ತು (I.೩೨.೩೯)ರಲ್ಲೂ "ಚಕ್ರದ ಅಂಚು ಎಲ್ಲ ಅರಗಳನ್ನೂ ಮುಟ್ಟಿ ಹಿಡಿದಿರುವಂತೆ ಅವನು ತನ್ನ ಕೈಯಲ್ಲಿ ಹಿಡಿದಿರುವ ವಜ್ರಾಯುಧದಿಂದ ಎಲ್ಲ ಜನರನ್ನು ಆಳುತ್ತಾನೆ." ಸುತ್ತದಲ್ಲಿ ಚಕ್ರವು ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರಗಳಲ್ಲಿ ಉರುಳಿತು, ಚಕ್ರವರ್ತಿಯು ಅದರ ಹಿಂದೆ ಹೋಗುತ್ತಿದ್ದನು. "ಎಲ್ಲ ವಿರೋಧಿ ರಾಜರೂ ಅವನಿಗೆ ವಶರಾದರು" ಎಂದು ಹೇಳಿದೆ.

೯೩. ಹೋಲಿಸಿರಿ: ಸುತ್ತನಿಪಾತದಲ್ಲಿರುವ ಸೇಲಸುತ್ತ (III.೭.೭) "ಸೇಲ, ನಾನು ರಾಜ, ಧರ್ಮದ ಪರಮೋಚ್ಚರಾಜ. ಧರ್ಮದ ರಾಜರಥದ ಚಕ್ರವನ್ನು ತಿರುಗಿಸಿದ್ದೇನೆ. ಈ ಚಕ್ರವು ಮುಂದೆ ಮುಂದೆ ಉರುಳುತ್ತದೆ. ಅದನ್ನು ಯಾರೂ ಹಿಂದಕ್ಕೆ ತಿರುಗಿಸಲಾರರು."

೯೪. ರೈಸ್ ಡೇವಿಡ್ಸ್ ಅವರ Hibbert Lecture, ಪುಟ ೧೨೯ ಮತ್ತು ೪, Buddhism, ಪುಟ ೪೫, ೪೬, ೨೨೦ ಮತ್ತು Sacred Books of the East, Vol XI ನೋಡಿರಿ.

೯೫. ಕಾಮಂದಕೀಯ III.೨.೪.
**ರಥೀ ವಿರಾಜಿತೇ ರಾಜಾ ವಿಶುದ್ಧೇ ಮಂಡಲೇ ಚರನ್।
ರೋಚತೇ ಸರ್ವಭೂತೇಭ್ಯಃ ಶಶೀವಾಖಂಡಮಂಡಲಃ॥**

೯೬. ಸರ್ವಲೋಕಪ್ರತೀತಂ ತು ಸ್ಫುಟಂ ದ್ವಾದಶರಾಜಕಮ್। (ಅದೇ ೪೧)

೯೭. ವಿಜಿಗೀಷುಮಿತ್ರಂ ಮಿತ್ರಮಿತ್ರಂ ವಾಸಽಪ್ರಕೃತಯಸ್ತ್ರಿಸ್ರಃ।
[*ಅರ್ಥಶಾಸ್ತ್ರ* vi.ii. ೧೭]

೯೮. ಕಾಮಂದಕೀಯ viii.೨೦

೯೯. ಅದೇ ೭೧.

೧೦೦. ಅದೇ ೨೬.

೧೦೧. ಅದೇ ೨೮

೧೦೨. ಅದೇ ೨೧: **"ಆಕೀರ್ಣಂ ಮಂಡಲಂ ಸರ್ವಂ ಮಿತ್ರೈರರಿಮಿರೇವ ಚ।"**

೧೦೩. ಅರ್ಥಶಾಸ್ತ್ರ V, vi ೧೪, ೧೫, ಪರಮೈಶ್ವರ್ಯದ ಅಂಶಗಳು– **"ಸ್ವಾಮ್ಯಮಾತ್ಯ ಜನಪದದುರ್ಗಕೋಶದಂಡಮಿತ್ರಾಣಿ"** ಎಂದರೆ ರಾಜ, ಮಂತ್ರಿ, ದೇಶ (ಇದಕ್ಕೆ ಕೇಂದ್ರದಲ್ಲೂ ರಾಜ್ಯದ ಅಂಚುಗಳಲ್ಲೂ ರಾಜಧಾನಿಗಳಿರಬೇಕು. **"ಮಧ್ಯೇ ಚಾಂತೇ ಚ ಸ್ಥಾನವಾನ್"**), ದುರ್ಗ (ಕೋಟೆ), ಕೋಶ, ದಂಡ (ಸೈನ್ಯ) ಮತ್ತು ಮಿತ್ರ.

೧೦೪. ಹೋಲಿಸಿರಿ. *ಕಾಮಂದಕೀ* viii.೮೩
**ಇತಿ ಸ್ಮ ರಾಜಾ ನಯವರ್ತ್ಮನಾ ವ್ರಜನ್
ಸಮುದ್ಯಮೀ ಮಂಡಲ ಶುದ್ಧಿಮಾಚರನ್।
ವಿರಾಜತೇ ಸಾಧು ವಿಶುದ್ಧ ಮಂಡಲಃ
ಶರಚ್ಛಶೀವ ಪ್ರತಿನಂದಯನ್ ಪ್ರಜಾಃ॥**
*ಅರ್ಥಶಾಸ್ತ್ರ*ದಲ್ಲೂ VI.i.೧೭
**ಆತ್ಮವಾನ್ ಸ್ವಲ್ಪದೇಶೋಽಪಿ ಯುಕ್ತಃ ಪ್ರಕೃತಿಸಂಪದಾ।
ನಯಜ್ಞಃ ಪೃಥಿವೀಂ ಕೃತ್ಸ್ನಾಂ ಜಯತ್ಯೇವ ನ ಹೀಯತೇ॥**
ಮತ್ತೆ VI.ii.೧೭.

ನೇಮಿಮೇಕಾಂತರಾನ್ ರಾಜ್ಞಃ ಕೃತ್ವಾ ಚಾನಂತರಾನ್ ಅರಾನ್
ನಾಭಿಮಾತ್ಮಾಸನಮಾಯಚ್ಛೇತ್ ನೇತಾ ಪ್ರಕೃತಿಮಂಡಲೇ॥
[ಹಲವು ರಾಜ್ಯಗಳ ಒಕ್ಕೂಟದನಾಯಕನು ತನ್ನನ್ನು ಚಕ್ರದ ನಾಭಿಯನ್ನಾಗಿಯೂ ಸುತ್ತುವರಿದಿರುವ ಮಿತ್ರರಾಜರನ್ನು ಚಕ್ರದ ಸುತ್ತಲೂ ಇರುವ ಪಟ್ಟಿಯನ್ನಾಗಿಯೂ, ಅನಂತರದಲ್ಲಿರುವ ರಾಜರನ್ನು ಅರಗಳನ್ನಾಗಿಯೂ ಮಾಡಿಕೊಂಡು ಒಕ್ಕೂಟದ ವ್ಯವಸ್ಥೆಯನ್ನು ನಿಯಂತ್ರಿಸಬೇಕು.]

೧೦೫. *Archeological Surrey of India*, Vol III. p.31
P1. XXX, No4; p.32, Pl XIV, No.9; p.34,
P1. XV No.18.

೧೦೬. *ASI.* Vol III, p.33 Pl.XIV., No.12; p.35, Pl XV. No.18.

೧೦೭. Gardner and Poole's *Catalogue of Coins of the Greek and Scythic Kings of Bactria and India*, p.124ff

೧೦೮. ಅದೇ ಪು.೭೩ff

೧೦೯. ಅದೇ ಪುಟ ೬೮ff Nos. ೪, ೫, ೯, ೧೧ ಮತ್ತು ೧೭

೧೧೦. ಅದೇ ಪುಟ ೮೫ff Nos. ೧೩೮, ೧೪೦ಮತ್ತು ೧೫೭

೧೧೧. A.S.I. Vol. III, p. 33, No.12 and Pl. XIV

೧೧೨. A.S.I. Vol. III, p. 35, No.18 and Pl. XV

೧೧೩. **"ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತ ಪುತ್ರಸ್ಯ**
ಮಹಾದೇವ್ಯಾಂ ಕುಮಾರ ದೇವ್ಯಾಂ ಉತ್ಪನ್ನಸ್ಯ
ಮಹಾರಾಜಾಧಿರಾಜ ಶ್ರೀ ಸಮುದ್ರಗುಪ್ತಸ್ಯ ಸರ್ವಪೃಥಿವೀ ವಿಜಯ
ಜನಿತೋದಯ ವ್ಯಾಪ್ತ ನಿಖಿಲಾವನೀತಲಂ..."
ಮಹಾದೇವೀ, ಪರಮಭಟ್ಟಾರಿಕಾ ಮತ್ತು ರಾಜ್ಞೀ ಎಂಬವು ಸಾರ್ವಭೌಮ ಚಕ್ರವರ್ತಿಗಳ ಪತ್ನಿಯರ ವಿಶಿಷ್ಟ ಬಿರುದುಗಳು. (ಹೋಲಿಸಿ: ಆದಿತ್ಯಸೇನನ ಮಂದೌರ್ ಶಾಸನ ಸಂಖ್ಯೆ ೪೪ ಮತ್ತು ೪೫. ಹಾಗೂ ದೇವ ಬರನಾರಕ್‌ನಲ್ಲಿರುವ ದ್ವಿತೀಯ ಜೀವಿತಗುಪ್ತನ ಶಾಸನ, ಸಂಖ್ಯೆ ೪೬. *Corpus Inscriptions of India*, Vol.III]

೧೧೪. ಶಾಸನದ ೩೩ನೆಯ ಸಾಲು

೧೧೫. ಎಂಟನೆಯ ಸಾಲು **'ನೃಪತಯಃ ಪೃಥು ರಾಘವಾದಾಃ'**

೧೧೬. ಹನ್ನೊಂದನೆಯ ಸಾಲು **'ಪಾರ್ಥಿವಗಣಃ ಸಕಲಃ ಪೃಥಿವ್ಯಾಂ'**

೧೧೭. ಸಾಲು ೧, ೨. ಸರ್ವರಾಜೋಚ್ಛೇತುಃ ಪೃಥಿವ್ಯಾಮಪ್ರತಿರಥಸ್ಯ ಚತುರು **ದಧಿಸಲಿಲಾಸ್ವಾದಿತಯಶಸೋ...; ಸಾಲು ೫. ಅಶ್ವಮೇಧಾಹರ್ತುಂ...**
ಸಾಲು. ಅಶ್ವಮೇಧಾಹರ್ತುಃ

೧೧೮. ಸಾಲು ೪: **"...ಅನೇಕ ಸಮರಾವಾಪ್ತ ವಿಜಯಯಶಃ ಪತಾಕಾ..."**

೧೧೯. ಸಾಲು ೨: **"ವಿಕ್ರಮಾವಕ್ರಯಕ್ರೀಡಾದಾಸ್ಯನ್ಯಕೂಭೂತ ಪಾರ್ಥಿವಾ..."**

೧೨೦. ಸಾಲುಗಳು ೧ ಮತ್ತು ೧೦.

೧೨೧. ಎರಡು ಶಾಸನಗಳಲ್ಲೂ ಮೊದಲನೆಯ ಸಾಲು.

೧೨೨. ಐದನೆಯ ಸಲು.

೧೨೩. ಆರನೆಯ ಸಾಲು.

೧೨೪. ನಾಲ್ಕನೆಯ ಸಾಲು.

೧೨೫. ಎರಡನೆಯ ಸಾಲು ಅಶ್ವಮೇಧಾಹರ್ತುಃ

೧೨೬. **ಪೃಥಿವೀಂ ಪ್ರಶಾಸತಿ...** ಸಾಲು ೧೩.

೧೨೭. ಇಪ್ಪತ್ತೆರಡನೆಯ ಸಾಲು.

೧೨೮. ಏಳನೆಯ ಸಾಲು **"ಗುಪ್ತವಂಶೈಕವೀರಃ..."**

೧೨೯. ಹದಿನಾಲ್ಕನೆಯ ಸಾಲು **"ಯೋ ಬಾಹುಭ್ಯಾಮವಣೇಂಜಿತ್ಯ"**

೧೩೦. ಎರಡನೆಯ ಸಾಲು: **"ಚತುರುದಧಿಜಲಾಂತಂ ಸ್ಫೀತಪರ್ಯಂತದೇಶಂ ಅವನಿಮವನತಾರಿರ್ಯಃ..."**

೧೩೧. ಆರನೆಯ ಸಾಲು:
"ಏವಂ ಸ ಜಿತ್ವಾ ಪೃಥಿವೀಂ ಸಮಗ್ರಾಂ ಭಗ್ನಾಗ್ರದರ್ಪಾನ್ ದ್ವಿಷತಶ್ಚ ಕೃತ್ವಾ ಸರ್ವೇಷು ದೇಶೇಷು ವಿಧಾಯ ಗೋಪ್ತ್ರನ್..."

೧೩೨. ಇಪ್ಪತ್ತನಾಲ್ಕನೆಯ ಸಾಲು:
"ದೃಪ್ತಾರಿದರ್ಪಪ್ರಣುದಃ ಪೃಥುಶ್ರಿಯಃ ಸ್ವವಂಶಕೇತೋಃ ಸಕಲಾವನೀಪತೇಃ ರಾಜಾಧಿರಾಜ್ಯಾದ್ಭುತಪುಣ್ಯಕರ್ಮಣಃ..."

೧೩೩. ಒಂದನೆಯ ಸಾಲು:
"ಯಸ್ಯೋಪಸ್ಥಾನಭೂಮಿರ್ನೃಪತಿಶತಶಿರಃ ಪಾತವಾತಾವಧೂತ..."
ಮೂರನೆಯ ಸಾಲು: **"ಕ್ಷಿತಿಪಶತಪತೇಃ...."**

೧೩೪. ಮೂರನೆಯ ಸಾಲು:
ಪರಮಭಟ್ಟಾರಕ ಮಹಾರಾಜಾಧಿರಾಜ ಶ್ರೀಸ್ಕಂದಗುಪ್ತಸ್ಯ ಅಭಿವರ್ಧಮಾಣವಿಜಯರಾಜ್ಯ..."

೧೩೫. ಎರಡನೆಯ ಸಾಲು:

"ತೀರ್ತ್ವಾ ಸಪ್ತಮುಖಾನಿ ಯೇನ ಸಮರೇ ಸಿಂಧೋರ್ಜಿತಾಬಾಹ್ಲಿಕಾ
ಯಸ್ಯಾದ್ಯಾಪ್ಯಧಿವಾಸ್ಯತೇ ಜಲನಿಧಿರ್ವೀರ್ಯಾನಿಲೈರ್ದಕ್ಷಿಣಃ।"
ಐದನೆಯ ಸಾಲು: **"ಐಕ್ಯಾಧಿರಾಜ್ಯಂ ಕ್ಷಿತೌ"**

೧೩೬. ಮೂರನೆಯ ಸಾಲು:
"ಸ ಶ್ರೇಯೋ ಧಾಮ್ನೀ ಸಮ್ರಾಡಿತಿ ಮನುಭರತಾಲರ್ಕಮಾಂಧಾತೃಕಲ್ಪೇ
ಕಲ್ಯಾಣೇ ಹೇಮ್ನಿ ಭಾಸ್ವಾನ್ ಮಣಿರಿವ ಸುತರಾಂ ಭ್ರಾಜತೇ ಯತ್ರ ಶಬ್ದಃ।"

೧೩೭. ಆರನೆಯ ಸಾಲು:
ಪ್ರಾಚೋ ನೃಪಾನ್ ಸುಬೃಹತಶ್ಚಬಹೂನುದೀಚ್ಯಾನ್
ಸಾಮ್ನಾ ಯುಧಾ ಚ ವಶಗಾನ್ ಪ್ರವಿಧಾಯ ಯೇನ।
ನಾಮಾಪರಂ ಜಗತಿ ಕಾಂತಮದೋ ದುರಾಪಂ
ರಾಜಾಧಿರಾಜಪರಮೇಶ್ವರ ಇತ್ಯುದಂಡಮ್॥

೧೩೮. *Archaeological Survey of Western India*, No.26.

೧೩೯. *Archaeological Survey of India*, Vol III, Pp 114, 120, 122 ಪರಮೈಶ್ವರ್ಯ ಚಕ್ರಾಧಿಪತ್ಯಕ್ಕೆ ಉಲ್ಲೇಖಗಳನ್ನು ಹೊಂದಿರುವ ಅಥವಾ ಅತ್ಯುನ್ನತ ರಾಜನಿಗೆ ಸಲ್ಲುವ ಬಿರುದುಗಳನ್ನು ಹೇಳುವ ಹಲವಾರು ಬೇರೆ 'ಪಾಲ' ಶಾಸನಗಳೂ ಇವೆ. ಅವುಗಳನ್ನೆಲ್ಲ ಉಲ್ಲೇಖಿಸುವುದು ನಮ್ಮ ಉದ್ದೇಶಕ್ಕೆ ಆವಶ್ಯಕವಲ್ಲ.

೧೪೦. V.A. ಸ್ಮಿಥ್ ಅವರ *A History of Fine Art*. ಪುಟ ೨೫೯.

೧೪೧. ಅಶೋಕನ ಪ್ರಸಿದ್ಧವಾದ ಶಾಸನಗಳು ಅಹಿಂಸಾತತ್ತ್ವವನ್ನು ಪ್ರತಿಪಾದಿಸುತ್ತವೆ, ವಿಶಾಲವಾದ ಧರ್ಮವನ್ನೂ ನಿರೂಪಿಸುತ್ತವೆ. ಅವನ ದೊಡ್ಡ ಸಾಮ್ರಾಜ್ಯದ ಆಳ್ವಿಕೆ ಅವುಗಳನ್ನು ಅವಲಂಬಿಸಿತ್ತು.

೧೪೨. ಈ ಭಾಗವನ್ನು ಲಂಡನ್ನಿನಲ್ಲಿ ನಡೆದ First Universal Races Congress ಅನ್ನು ಉದ್ದೇಶಿಸಿ ಡಾ. ಬ್ರಜೇಂದ್ರನಾಥ ಸೀಲ್ ಅವರು ಮಾಡಿದ ಭಾಷಣದಿಂದ ಆರಿಸಿಕೊಳ್ಳಲಾಗಿದೆ.

* * * *